ವಿಶ್ವವಾಣಿ
ವಿಶ್ವಾಸವೇ ವಿಶ್ವ

ನಿಕಿತಾ ಫೆಮಿನಾ ಮಿಸ್ ಇಂಡಿಯಾ

2024ರ ಫೆಮಿನಾ ಮಿಸ್ ಇಂಡಿಯಾ ಕಿರೀಟವನ್ನು ಮಧ್ಯಪ್ರದೇಶದ 19 ವರ್ಷದ ನಿಕಿತಾ ಪೋರ್ವಾಲ್ ಅವರು ಮುಡಿಗೇರಿಸಿಕೊಂಡಿದ್ದಾರೆ. ಮಿಸ್ ಇಂಡಿಯಾ-2023ರ ವಿಜೇತೆ ನಂದಿನಿ ಗುಪ್ತಾ ಅವರು ನಿಕಿತಾ ಅವರಿಗೆ ಕಿರೀಟ ತೊಡಿಸಿದರು. ಮಿಸ್ ವರ್ಲ್ಡ್ ಸ್ಪರ್ಧೆಯ ಮುಂದಿನ ಆವೃತ್ತಿಯಲ್ಲಿ ನಿಕಿತಾ ಅವರು ಭಾರತವನ್ನು ಪ್ರತಿನಿಧಿಸಲಿದ್ದಾರೆ. ದಾದ್ರಾ ಮತ್ತು ನಗರ ಹವೇಲಿಯ ರೇಖಾ ಪಾಂಡೆ ಮತ್ತು ಗುಜರಾತ್‌ನ ಆಯುಷಿ ಧೋಲಾಕಿಯಾ ಅವರು ಕ್ರಮವಾಗಿ ಮೊದಲ ಮತ್ತು ಎರಡನೇ ರನ್ನರ್ ಅಪ್ ಆಗಿದ್ದಾರೆ. ಮಿಸ್ ಇಂಡಿಯಾ 2024ರ ಅಂತಿಮ ಸುತ್ತಿನ ಸ್ಪರ್ಧೆಯು ಮುಂಬೈನಲ್ಲಿ ನಡೆದಿದೆ.

ಪುಟ ತೆರೆದಂತೆ...

ಭೂಗತರ ಸುರಂಗ- ಸುಲಭದಲ್ಲಾಗದು ಬಹಿರಂಗ!
ಶಿಶಿರಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ಮುಳ್ಳು ಸೌತೆಯಲ್ಲಿ ಮುಳ್ಳು ಇರುತ್ತದಾ?
ಶತಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

ಮಾತಂಡ್ರೆ ಮಾತು

ಪಕ್ಷದ ಕೆಲಸಕ್ಕೆ ಮಹಿಳಾ ಕಾಂಗ್ರೆಸಿಗರನ್ನು ಬಳಸಿಕೊಳ್ಳುವ ನಾಯಕರು ಅಧಿಕಾರ ನೀಡುವ ವಿಷಯದಲ್ಲಿ ಪರಿಗಣನೆಗೆ ಪಡೆಯುವುದಿಲ್ಲ. ನಮ್ಮನ್ನು ಒಂದು ರೀತಿಯಲ್ಲಿ ಊಟಕ್ಕೆ ಬಳಸುವ 'ಕರಿಬೇವಿನ' ರೀತಿ ಬಳಸಿಕೊಂಡು ಬಿಸಾಡುತ್ತಾರೆ.

ಮೋಟಮ್ಮ
ಮಾಜಿ ಸಚಿವೆ

ನೆಟ್ ಫಲಿತಾಂಶ ಪ್ರಕಟ

ದೆಹಲಿ: ಯುಜಿಸಿ ನೆಟ್ ಜೂನ್ 2024ರ ಪರೀಕ್ಷೆಯ ಫಲಿತಾಂಶವನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಪ್ರಕಟಿಸಿದೆ. ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ ugcnet.nta.ac.in ನಿಂದ ತಮ್ಮ ಫಲಿತಾಂಶ ಪರಿಶೀಲಿಸಿಕೊಳ್ಳಬಹುದು ಎಂದು ತಿಳಿಸಿದೆ.

ದಾರಿದೀಪೋಕ್ತಿ

ನೀವು ಬಯಸಿದ್ದೆಲ್ಲವನ್ನೂ ಪಡೆಯುವುದೇ ಸಂತೋಷವಲ್ಲ. ಈಗ ನಿಮ್ಮಲ್ಲಿ ಏನಿದೆಯೋ ಅದರಲ್ಲಿ ಖುಷಿ, ನೆಮ್ಮದಿ ಕಾಣುವುದು ನಿಜವಾದ ಸಂತೋಷ. ಬಯಸಿದ್ದನ್ನೆಲ್ಲ ಪಡೆಯುತ್ತಾ ಹೋದರೆ ಮತ್ತಷ್ಟು ಪಡೆಯಬೇಕೆನ್ನುವ ದಾಹ ಹೆಚ್ಚಾಗಬಹುದು. ಇದ್ದುದರಲ್ಲಿಯೇ ನೆಮ್ಮದಿ ಕಾಣುವುದು ನಿರಂತರ ಸಂತಸಕ್ಕೆ ಮೂಲವಾಗಬಹುದು.

ವಕ್ರತುಂಡೋಕ್ತಿ

ಮುಳುಗುವವನನ್ನು ಬದುಕಿಸಬೇಕೋ, ಆ ದೃಶ್ಯದ ಫೋಟೋ ತೆಗೆಯಬೇಕೋ ಎನ್ನುವುದು ನಿಮ್ಮಲ್ಲಿ ಯಾವ ಕೆಮರಾ ಇದೆ ಎಂಬುದನ್ನು ಅವಲಂಬಿಸಿರುತ್ತದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

'ಅನಿಮಲ್' ಅತ್ಯುತ್ತಮ ಸಿನಿಮಾ- ಪ್ರಶಸ್ತಿ ಸಮಾರಂಭ
ಸುದ್ದಿ



ಮೂರೂ ಪಕ್ಷಗಳಲ್ಲಿ ಗೊಂದಲ, ಬಿಜೆಪಿಯಲ್ಲಿ ಸ್ಪರ್ಧೆಗೆ ಮುಖಂಡರ ಹಿಂದೇಟು

ಉಪಸಮರಕ್ಕೆ ಬಲಿಷ್ಠರ ಕೊರತೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಮನಗರ ಜಿಲ್ಲೆಯ ಚನ್ನಪಟ್ಟಣ, ಹಾವೇರಿ ಜಿಲ್ಲೆಯ ಶಿಗ್ಗಾಂವಿ, ಬಳ್ಳಾರಿ ಜಿಲ್ಲೆಯ ಸಂಡೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ದಿನಾಂಕ ನಿಗದಿಯಾಗುತ್ತಿದ್ದಂತೆ ರಾಜ್ಯದಲ್ಲಿ ರಾಜಕೀಯ ಚಟುವಟಿಕೆಗಳು ಗರಿಗೆದರಿದ್ದು, ಕಾಂಗ್ರೆಸ್ ಮತ್ತು ಮೈತ್ರಿ ಪಕ್ಷದ ಅಭ್ಯರ್ಥಿಗಳು ಟಿಕೆಟ್‌ಗಾಗಿ ಬಿರುಸಿನ ಲಾಬಿ ಶುರು ಮಾಡಿದ್ದಾರೆ. ಆದರೆ ಚನ್ನಪಟ್ಟಣ ಹೊರತುಪಡಿಸಿ ಉಳಿದ ಎರಡು ಕ್ಷೇತ್ರಗಳಲ್ಲಿ ಘಟಾನುಘಟಿ ನಾಯಕರ ಹೆಸರು ಟಿಕೆಟ್ ರೇಸ್‌ನಲ್ಲಿ ಕೇಳಿಬರುತ್ತಿಲ್ಲ. ಹೀಗಾಗಿ ಮೂರೂ ಪಕ್ಷಗಳು ಸಮರ್ಥ ಅಭ್ಯರ್ಥಿಗಳ ಕೊರತೆ ಅನುಭವಿಸುತ್ತಿವೆ.

ಚನ್ನಪಟ್ಟಣ ಪ್ರತಿಷ್ಠೆಯ ಕಣ: ಕೇಂದ್ರ ಸಚಿವರಾಗಿರುವ ಎಚ್.ಡಿ.ಕುಮಾರಸ್ವಾಮಿ ಅವರಿಂದ ತೆರವಾಗಿರುವ ಚನ್ನಪಟ್ಟಣ ಕ್ಷೇತ್ರವು ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಸೇರಿ ಮೂರೂ ಪಕ್ಷಗಳ ಮೂವರು ನಾಯಕರಾದ ಡಿ.ಕೆ.ಶಿವಕುಮಾರ್, ಸಿ.ಪಿ.ಯೋಗೇಶ್ವರ್ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಪ್ರತಿಷ್ಠೆಯ ಕಣವಾಗಿದೆ. ಕ್ಷೇತ್ರವನ್ನು ಸತತ ಎರಡು ಸಲ ಪ್ರತಿನಿಧಿಸಿರುವ ಕುಮಾರಸ್ವಾಮಿ, ಕ್ಷೇತ್ರದಲ್ಲಿ ಮತ್ತೆ ಜೆಡಿಎಸ್ ಗೆಲ್ಲಿಸಿ ಪಕ್ಷದ ಅಸ್ತಿತ್ವ ಉಳಿಸಿಕೊಳ್ಳುವ ತವಕದಲ್ಲಿದ್ದಾರೆ. ಎಚ್‌ಡಿಕೆ ಎದುರು ಸತತ ಎರಡು ಸೋಲು ಕಂಡು ಸದ್ಯ ವಿಧಾನ ಪರಿಷತ್ ಸದಸ್ಯರಾಗಿರುವ ಸಿ.ಪಿ. ಯೋಗೇಶ್ವರ್‌ಗೆ ಈ ಚುನಾವಣೆ ತಮ್ಮ ರಾಜಕಾರಣದ ಅಳಿವು-ಉಳಿವಿನ ಪ್ರಶ್ನೆಯಾಗಿದೆ. ಲೋಕಸಭಾ ಚುನಾವಣೆಯಲ್ಲಿ ಸಹೋದರ ಡಿ.ಕೆ.ಸುರೇಶ್ ಸೋಲಿನಿಂದ ಕಂಗೆಟ್ಟಿರುವ ಡಿ.ಕೆ.ಶಿವಕುಮಾರ್ ಕ್ಷೇತ್ರದಲ್ಲಿ ಕಾಂಗ್ರೆಸ್ ಪತಾಕೆ ಹಾರಿಸುವ ಉತ್ಸಾಹದಲ್ಲಿದ್ದಾರೆ. ಹೀಗಾಗಿ ಮೂವರಿಗೂ ಈ ಬಾರಿಯ ಗೆಲುವು ಅನಿವಾರ್ಯವಾಗಿದೆ.

ಯೋಗೇಶ್ವರ್ ಮೇಲೆ ಕಣ್ಣು

ಬಿಜೆಪಿಯು ಚನ್ನಪಟ್ಟಣದ ಟಿಕೆಟ್ ಬಿಟ್ಟುಕೊಡುವ ಅನಿವಾರ್ಯತೆಯಲ್ಲಿರುವುದರಿಂದ ಯೋಗೇಶ್ವರ ಅವರಿಗೆ ಟಿಕೆಟ್ ಸಿಗುವುದು ಬಹುತೇಕ ಡೌಟು ಎನ್ನಲಾಗಿದೆ. ಇನ್ನೊಂದೆಡೆ ನಿಖಿಲ್ ಕುಮಾರಸ್ವಾಮಿ ಅವರ ಹೆಸರು ಬಹುತೇಕ ಅಂತಿಮವಾಗಿವೆ.

→ 4



ರೇಸ್‌ನಲ್ಲಿ ತೇಜಸ್ವಿನಿ ಗೌಡ

ಕನಕಪುರದ ಮಾಜಿ ಸಂಸದೆ ತೇಜಸ್ವಿನಿ ಗೌಡ ಚನ್ನಪಟ್ಟಣದ ಟಿಕೆಟ್ ತಮಗೆ ನೀಡುವಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. 2004ರಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ಸೋಲಿಸುವ ಮೂಲಕ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿದ್ದರು. ಇದೇ ವಿಷಯವನ್ನು ಪತ್ರದಲ್ಲಿಯೂ ಪ್ರಸ್ತಾಪಿಸಿರುವ ತೇಜಸ್ವಿನಿ ಗೌಡ, ತಮಗೆ ಟಿಕೆಟ್ ನೀಡಿದರೆ ಗೆದ್ದುಬರುವೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಎನ್‌ಡಿಎ ಕೂಟವೇ ನನ್ನ ಕುಟುಂಬ, ಮೈತ್ರಿಕೂಟದಿಂದಲೇ ಒಬ್ಬರು ಅಭ್ಯರ್ಥಿಯಾಗುತ್ತಾರೆ. ಮೈತ್ರಿ ವೇದಿಕೆಯಲ್ಲಿ ಚರ್ಚಿಸಿ, ನಿರ್ಧಾರ ಮಾಡುತ್ತೇವೆ. ಬಿಜೆಪಿ-ಜೆಡಿಎಸ್ ಎಲ್ಲ ನನ್ನ ಕುಟುಂಬವೇ. ಎನ್‌ಡಿಎ ಅಭ್ಯರ್ಥಿ ಗೆಲ್ಲಬೇಕಷ್ಟೇ, ಇದು ನನ್ನ ಸ್ಪಷ್ಟ ಅಭಿಪ್ರಾಯ.
- ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಶಿಗ್ಗಾವಿ ಕ್ಷೇತ್ರಕ್ಕೆ ನನ್ನ ಹೆಸರು ಕೇಳಿ ಬರುತ್ತಿದೆ. ಮತ್ತೊಂದು ಜಿಲ್ಲೆಗೆ ಹೋಗಿ ಸ್ಪರ್ಧಿಸುವುದು ಸರಿಯಲ್ಲ. ಅಲ್ಲೂ ಪಂಚಮಸಾಲಿ ಸಮಾಜದವರಿದ್ದಾರೆ. ಪಕ್ಷಕ್ಕಾಗಿ ದುಡಿದ ವರಿದ್ದು, ಅವರಿಗೆ ಟಿಕೆಟ್ ನೀಡಬೇಕು.
- ಮುರುಗೇಶ್ ನಿರಾಣಿ
ಮಾಜಿ ಸಚಿವ

ಬಿಎಸ್‌ವೈ-ಬೊಮ್ಮಾಯಿ ಸಭೆ

ಮೂರು ಕ್ಷೇತ್ರಗಳ ಉಪಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರನ್ನು ಸಂಸದ ಬಸವರಾಜ ಬೊಮ್ಮಾಯಿ ಭೇಟಿ ಮಾಡಿ ಚರ್ಚೆ ನಡೆಸಿದರು. ಈ ವೇಳೆ ಶಿಗ್ಗಾವಿ ಕ್ಷೇತ್ರಕ್ಕೆ ಯಾರಿಗೆ ಟಿಕೆಟ್ ನೀಡುವುದು ಸೂಕ್ತ ಎನ್ನುವ ಚರ್ಚೆಗಳು ನಡೆದಿವೆ ಎನ್ನಲಾಗಿದೆ. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬೊಮ್ಮಾಯಿ, ಶಿಗ್ಗಾವಿ ಕ್ಷೇತ್ರದ ಬಗ್ಗೆ ಚರ್ಚೆ ನಡೆಯಿತು. ಅಭ್ಯರ್ಥಿ ಆಯ್ಕೆ ಬಗ್ಗೆಯೂ ಚರ್ಚೆ ಆಗಿದೆ. ಅಂತಿಮವಾಗಿ ಯಾರಿಗೇ ಟಿಕೆಟ್ ಕೊಟ್ಟರೂ ಗೆಲ್ಲಿಸಬೇಕು. ಚನ್ನಪಟ್ಟಣ ಟಿಕೆಟ್ ಯಾರಿಗೆ ಎನ್ನುವ ಬಗ್ಗೆ ಪಕ್ಷದ ವರಿಷ್ಠರು, ಎಚ್.ಡಿ.ಕುಮಾರಸ್ವಾಮಿ ಜತೆ ಚರ್ಚಿಸಿ ತೀರ್ಮಾನಿಸಲಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಶ್ರೀ ವಾಲ್ಮೀಕಿ ಜಯಂತಿ ಪ್ರಯುಕ್ತ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಅವರು ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ರಾಯಚೂರು ವಿವಿಗೆ ವಾಲ್ಮೀಕಿ ಹೆಸರು ನಾಮಕರಣ

ಎಸ್‌ಟಿ ಶಾಲೆಗಳಿಗೆ ವಾಲ್ಮೀಕಿ ಹೆಸರು

ಬೆಂಗಳೂರು: ರಾಜ್ಯದಲ್ಲಿರುವ ಎಲ್ಲ ಪರಿಶಿಷ್ಟ ಪಂಗಡದ ಶಾಲೆಗಳಿಗೆ ಹಾಗೂ ರಾಯಚೂರು ವಿಶ್ವವಿದ್ಯಾಲಯಕ್ಕೆ ಮಹರ್ಷಿ ವಾಲ್ಮೀಕಿ ಹೆಸರಿಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು. ಶ್ರೀ ವಾಲ್ಮೀಕಿ ಜಯಂತಿ ಪ್ರಯುಕ್ತ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಳ ಸಮುದಾಯಗಳಿಗೆ ವಸತಿ ಶಾಲೆಗಳನ್ನು ಮೊದಲು ಆರಂಭಿಸಿದ್ದು ನಾನು. ಪ್ರತೀ ಹೋಬಳಿಗೆ ಒಂದು ವಸತಿ ಶಾಲೆ ಮಾಡಿಯೇ ಮಾಡುತ್ತೇನೆ. ಪರಿಶಿಷ್ಟ ಪಂಗಡದ ವಸತಿ ಶಾಲೆಗಳಿಗೆ ವಾಲ್ಮೀಕಿ ಅವರ ಹೆಸರನ್ನು ಇಡಲಾಗುವುದು ಎಂದರು.

ನಾನು ಹೇಳಿದ್ದೀನಿ ಎನ್ನುವ ಕಾರಣಕ್ಕೆ ನೀವು ಇದನ್ನೆಲ್ಲಾ ನಂಬಬೇಡಿ. ಸತ್ಯ, ಸುಳ್ಳನ್ನು ಪರಾಮರ್ಶಿಸಿ, ವಿವೇಚಿಸಿ. ಸತ್ಯವನ್ನು ಬಹಿರಂಗವಾಗಿ ಮಾತಾಡುವ ಧೈರ್ಯವನ್ನು ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳು ಬೆಳೆಸಿಕೊಳ್ಳಬೇಕು. ಇದೇ ಮಹರ್ಷಿ ವಾಲ್ಮೀಕಿ ಅವರಿಗೆ ನಾವು-ನೀವು ಸಲ್ಲಿಸುವ ಗೌರವ.
-ಸಿದ್ದರಾಮಯ್ಯ ಮುಖ್ಯಮಂತ್ರಿ

46ಕ್ಕೆ ಆಲ್‌ಔಟ್
ಟೀಮ್ ಇಂಡಿಯಾಗೆ ಮುಖಭಂಗ

ಬೆಂಗಳೂರು: ಪ್ರವಾಸಿ ನ್ಯೂಜಿಲೆಂಡ್ ವಿರುದ್ಧ ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪ್ರಥಮ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಟೀಮ್ ಇಂಡಿಯಾ ಕೇವಲ 46 ರನ್‌ಗಳಿಗೆ ಆಲೌಟ್ ಆಗಿದೆ.

ಇದು ಟೆಸ್ಟ್ ಕ್ರಿಕೆಟ್‌ನಲ್ಲಿ ಟೀಮ್ ಇಂಡಿಯಾದಿಂದ ದಾಖಲಾದ ಮೂರನೇ ಕನಿಷ್ಠ ಮೊತ್ತವಾಗಿದೆ. 2020ರ ಅಡಿಲೇಡ್ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ 36 ರನ್ನಿಗೆ ಆಲೌಟ್ ಆಗಿರುವುದು ಭಾರತದ ಕನಿಷ್ಠ ಮೊತ್ತವಾಗಿದೆ. ಅಡಿಲೇಡ್ ಟೆಸ್ಟ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ ನಾಯಕತ್ವದಲ್ಲಿ ಭಾರತ 36 ರನ್ನಿಗೆ ಆಲೌಟ್ ಆಗಿದ್ದರೆ ಈಗ ರೋಹಿತ್ ಶರ್ಮಾ ನಾಯಕತ್ವದಲ್ಲಿ 46 ರನ್ನಿಗೆ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು. ಭಾರತ ನೆಲದಲ್ಲಿ ದಾಖಲಾದ ಅತಿ ಕನಿಷ್ಠ ಮೊತ್ತ ಇದಾಗಿದೆ.

ಐವರು ಬ್ಯಾಟರ್‌ಗಳು ಶೂನ್ಯ

ಬೆಂಗಳೂರು ಟೆಸ್ಟ್ ಪಂದ್ಯದ ಮೊದಲ ದಿನದಾಟ ಮಳೆಯಿಂದಾಗಿ ರದ್ದಾಗಿತ್ತು. ಎರಡನೇ ದಿನದಾಟದಲ್ಲಿ ನ್ಯೂಜಿಲೆಂಡ್ ಬೌಲರ್‌ಗಳು ಮೆರೆದಾಡಿದರು. ಭಾರತ 31.2 ಓವರ್‌ಗಳಲ್ಲಿ 46 ರನ್ನಿಗೆ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು. ಭಾರತದ ಐವರು ಬ್ಯಾಟರ್‌ಗಳು ಶೂನ್ಯಕ್ಕೆ ಔಟ್ ಆದರು. ನ್ಯೂಜಿಲೆಂಡ್ ಪರ ಮ್ಯಾಟ್ ಹೆನ್ರಿ ಐದು (15/5) ಮತ್ತು ವಿಲಿಯಂ ಒ ರೂರ್ಕೆ (22/4) ನಾಲ್ಕು ವಿಕೆಟ್ ಸಾಧನೆ ಮಾಡಿದರು.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷರಾಗಿ ಸೌಮ್ಯಾರೆಡ್ಡಿ ಗುರುವಾರ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು. ಈ ವೇಳೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಅಲ್ಕಾಲಂಬಾ ಸೇರಿ ಹಲವರಿದ್ದರು.

ಅ.21ರವರೆಗೆ 8 ಜಿಲ್ಲೆಗಳಲ್ಲಿ ಮತ್ತೆ ಮಳೆ ಎಚ್ಚರಿಕೆ

ಬಿಡುವು ಕೊಟ್ಟ ಮಳೆ, ಜನ ನಿರಾಳ

ಬೆಂಗಳೂರು: ಕಳೆದ ಎರಡು ಮೂರು ದಿನಗಳಿಂದ ಭಾರೀ ಮಳೆಯಿಂದ ತತ್ತರಿಸಿ ಹೋಗಿದ್ದ ಬೆಂಗಳೂರು ಸಹಜ ಸ್ಥಿತಿಯತ್ತ ಮರಳುತ್ತಿದ್ದಂತೆಯೇ ಮತ್ತೆ ಅ.21ರವರೆಗೆ ಮಳೆಯ ಮುನ್ನೆಚ್ಚರಿಕೆಯನ್ನು ಹವಾಮಾನ ಇಲಾಖೆ ನೀಡಿದೆ.

ರಾಜ್ಯದಲ್ಲಿ ಮತ್ತೆ ಮಳೆಯಾಗಲಿದ್ದು, ಏಳು ಜಿಲ್ಲೆಗಳಿಗೆ ಯಲ್ಲೋ ಅಲರ್ಟ್ ಘೋಷಿಸಲಾಗಿದೆ. ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡಿನಲ್ಲಿ ಅ.21ರವರೆಗೆ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಬೆಳಗಾವಿ, ಹಾವೇರಿ, ಧಾರವಾಡ ಗದಗ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಹೀಗಾಗಿ ಈ 7 ಜಿಲ್ಲೆಗಳಲ್ಲಿ ಯಲ್ಲೋ ಅಲರ್ಟ್ ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಜ್ಞ ಸಿ.ಎಸ್. ಪಾಟೀಲ್ ಹೇಳಿದ್ದಾರೆ.

ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಅ.19ರವರೆಗೆ ಯಲ್ಲೋ ಅಲರ್ಟ್ ಘೋಷಣೆ ಮಾಡಲಾಗಿದೆ. ಇನ್ನು ಕರಾವಳಿ, ಉತ್ತರ, ದಕ್ಷಿಣ ಒಳನಾಡಿನಲ್ಲಿ ವ್ಯಾಪಕ ಮಳೆಯಾಗಿದೆ. ಮಂಗಳೂರು, ಹಾವೇರಿ, ತುಮಕೂರಿನಲ್ಲಿ 7 ಸೆಂ.ಮೀ ಮಳೆಯಾಗಿದೆ. ದಾವಣಗೆರೆಯಲ್ಲಿ 9 ಸೆಂ.ಮೀ ಮಳೆಯಾಗಿದೆ. ಬುಧವಾರ ಇದ್ದ ವಾಯುಭಾರ ಕುಸಿತ ದುರ್ಬಲವಾಗಿದ್ದು, ಗಾಳಿಯ ಪರಿಚಲನೆ ಆಂಧ್ರದ ಕರಾವಳಿಯಲ್ಲಿ 5.8 ಕಿ.ಮೀ ಎತ್ತರದಲ್ಲಿದೆ ಎಂದು ತಿಳಿಸಿದ್ದಾರೆ.

ಹುಸಿ ಕರೆ: ದಿಕ್ಕುತಪ್ಪಿದ ವಿಮಾನಯಾನ

ಬೆಂಗಳೂರು: ದೇಶೀಯ ಮತ್ತು ಅಂತಾರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳಿಗೆ ಗುರುವಾರವೂ ಬಾಂಬ್ ಬೆದರಿಕೆ ಬಂದ ಹಿನ್ನೆಲೆಯಲ್ಲಿ ಸಂಚಾರ ವ್ಯತ್ಯಯವಾಗಿದೆ. ಗುರುವಾರ ಒಂಬತ್ತು ವಿಮಾನಗಳಿಗೆ ಬೆದರಿಕೆ ಕರೆ ಬಂದಿದ್ದು, ನಾಲ್ಕು ದಿನಗಳಲ್ಲಿ ಕನಿಷ್ಠ 20 ವಿಮಾನಗಳಿಗೆ ಬೆದರಿಕೆಗಳು ಬಂದಿವೆ. ಗುರುವಾರ ಏರ್ ಇಂಡಿಯಾ ವಿಮಾನ ಲಂಡನ್‌ನಲ್ಲಿ ತುರ್ತು ಭೂಸ್ಪರ್ಶ ಮಾಡಿತು.

ಎಚ್‌ಎಂಟಿ ಬಗ್ಗೆ ಖಂಡ್ರೆ ಅಪಪ್ರಚಾರ: ಎಚ್‌ಡಿಕೆ

ಬೆಂಗಳೂರು: ಎಚ್‌ಎಂಟಿ ಹಾಗೂ ಕಬ್ಬಿಣ ಮತ್ತು ಅದಿರು ಸಂಸ್ಥೆ ವಿಷಯದಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ಹಸಿ ಸುಳ್ಳುಗಳನ್ನು ಹಬ್ಬಿಸುತ್ತಿದ್ದು, ಈ ಬಗ್ಗೆ ನಾನು ದಾಖಲೆಗಳ ಸಮೇತ ರಾಜ್ಯ ಸರಕಾರದೊಂದಿಗೆ ಚರ್ಚೆಗೆ ತಯಾರಿದ್ದೇನೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಐಒಸಿಎಲ್ ಬಗ್ಗೆ ರಾಜ್ಯ ಸರಕಾರ ರಾಜಕಾರಣ ಮಾಡಬಾರದು. ಸಮಸ್ಯೆಯಿದ್ದರೆ ಕೂತು ಸರಿಪಡಿಸಿಕೊಳ್ಳಬೇಕು. ರಾಜ್ಯದಲ್ಲಿರುವ ಸಾರ್ವಜನಿಕ ಸ್ವಾಮ್ಯದ ಕೈಗಾರಿಕೆಗಳನ್ನು ಉಳಿಸುವ ಬಗ್ಗೆ ನಾನು ಕೆಲಸ ಮಾಡುತ್ತಿದ್ದೇನೆ. ಈ ಬಗ್ಗೆ ನಾನು ಮುಖ್ಯಮಂತ್ರಿಗಳು ಹಾಗೂ ಅರಣ್ಯ ಸಚಿವರಿಗೆ ಪತ್ರ ಬರೆಯುತ್ತೇನೆ. ಒಂದು ಸಭೆ ಮಾಡಲಿ. ಅಲ್ಲಿ ದಾಖಲೆಗಳ ಸಮೇತ ನಾನು ಮಾತನಾಡುತ್ತೇನೆ. ಒಂದು ವೇಳೆ ಕೆಐಒಸಿಎಲ್ ತಪ್ಪುಗಳಿದ್ದರೆ ಅದಕ್ಕೆ ಆ ಇಲಾಖೆಯ ಸಚಿವನಾಗಿ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ. ಅದರ ಹೊರತಾಗಿ ರಾಜ್ಯದ ಹಿತಾಸಕ್ತಿಯ ಬಗ್ಗೆ ರಾಜಕಾರಣ ಮಾಡುವುದು ಸರಿಯಲ್ಲ ಎಂದು ಟೀಕಿಸಿದರು.

ರೈಲ್ವೆ ಟಿಕೆಟ್ ಬುಕಿಂಗ್ 60 ದಿನಗಳಿಗೆ ಇಳಿಕೆ

ದೆಹಲಿ: 120 ದಿನಗಳಿಗೂ ಮುನ್ನವೇ ಮುಂಗಡವಾಗಿ ಸೀಟು ಕಾಯ್ದಿರಿಸಲು ಈಗ ಇರುವ ಅವಕಾಶವನ್ನು ನವೆಂಬರ್ 1ರಿಂದ 60 ದಿನಕ್ಕೆ ಇಳಿಸಲು ನಿರ್ಧರಿಸಲಾಗಿದೆ ಎಂದು ರೈಲ್ವೆ ಮಂಡಳಿ ಪ್ರಕಟಿಸಿದೆ. ಮುಂಗಡ ಟಿಕೆಟ್ ಕಾಯ್ದಿರಿಸುವಿಕೆ ಅವಧಿ (ಎಆರ್‌ಪಿ) ನಿಯಮದಂತೆ ಅ.31ರ ವರೆಗೆ ಕಾಯ್ದಿರಿಸುವ ಎಲ್ಲ ಟಿಕೆಟ್‌ಗಳಿಗೆ 120 ದಿನಗಳ ಅವಕಾಶವಿರುತ್ತದೆ. ವಿದೇಶಿ ಪ್ರವಾಸಿಗರಿಗೆ ಕಲ್ಪಿಸಲಾಗಿರುವ 365 ದಿನಗಳ ಅವಕಾಶದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಖಚಿತಪಡಿಸಿದೆ. ರೈಲ್ವೆ ಇಲಾಖೆಯು, ಎಆರ್‌ಪಿ ಮಿತಿಯನ್ನು 2015ರ ಮಾರ್ಚ್ 25ರಂದು 60 ದಿನಗಳಿಂದ 120 ದಿನಗಳಿಗೆ ಹೆಚ್ಚಿಸಿತ್ತು.

ಸೈನಿ 2ನೇ ಅವಧಿಗೆ ಹರಿಯಾಣ ಸಿಎಂ

ಚಂಡೀಗಢ: ಹರಿಯಾಣದ ನೂತನ ಮುಖ್ಯಮಂತ್ರಿಯಾಗಿ ನಯಾಬ್ ಸಿಂಗ್ ಸೈನಿ ಅವರು ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು. ಆ ಮೂಲಕ ಅವರು ಸತತ 2ನೇ ಬಾರಿಗೆ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿದ್ದಾರೆ. ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಜ್ಯಗಳ ಮುಖ್ಯಮಂತ್ರಿಗಳಲ್ಲದೇ ಮಿತ್ರ ಪಕ್ಷ ಟಿಡಿಪಿಯ ಚಂದ್ರಬಾಬು ನಾಯ್ಡು ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪಂಚಕುಲದ ದಸರಾ ಮೈದಾನದಲ್ಲಿ ಪ್ರಮಾಣ ಸ್ವೀಕಾರ ಕಾರ್ಯಕ್ರಮ ನಡೆಯಿತು. ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಸೈನಿಯವರಿಗೆ ಪ್ರಮಾಣ ವಚನ ಬೋಧಿಸಿದರು.

ಅರುಣ್ ಶಬರಿಮಲೆ ಮುಖ್ಯ ಅರ್ಚಕ

ಪತ್ತನಂತಿಟ್ಟ: ಅರುಣ ಕುಮಾರ ನಂಬೂದಿರಿ ಅವರು ಕೇರಳದ ಶಬರಿಮಲೆ ಅಯ್ಯಪ್ಪ ದೇವಸ್ಥಾನದ ಮುಖ್ಯ ಅರ್ಚಕರಾಗಿ ನೇಮಕವಾಗಿದ್ದಾರೆ. ಅರ್ಚಕರ ನೇಮಕಕ್ಕಾಗಿ ಉಷಾ ಪೂಜೆಯ ನಂತರ, ಬೆಳಗ್ಗೆ 7.30ರ ಸುಮಾರಿಗೆ ಡ್ರಾ ನಡೆಯಿತು. ಪಂದಲಂ ಅರಮನೆಯ ಪ್ರತಿನಿಧಿಗಳಾದ ರಿಷಿಕೇಶ್ ವರ್ಮಾ ಮತ್ತು ವೈಷ್ಣವಿ ಸದಸ್ಯರನ್ನು ಆಯ್ಕೆ ಮಾಡಲು ಡ್ರಾ ಪ್ರಕ್ರಿಯೆಯನ್ನು ನಿರ್ವಹಿಸಿದರು. ನ.15ಕ್ಕೆ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಅಪಘಾತ: ನಾಲ್ವರು ಸಾವು

ಕಲಬುರಗಿ: ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಜೇವರ್ಗಿ ರಸ್ತೆಯಲ್ಲಿನ ಸಮೀಪದ ಹಸನಾಪುರ ಬಳಿ ಬುಧವಾರ ರಾತ್ರಿ ಸಂಭವಿಸಿದ ಸರಣಿ ಅಪಘಾತದಲ್ಲಿ ಒಂದೇ ಕುಟುಂಬದ ಮೂವರು ಸೇರಿ ನಾಲ್ವರು ಮೃತ ಪಟ್ಟಿದ್ದಾರೆ. ರಾಘವೇಂದ್ರ (35), ಮುಜಾಹಿದ್ (30), ಹುಸೇನ್ (45) ಮತ್ತು ಮೌಲಾಬಿ (50) ಮೃತಪಟ್ಟವರು.

₹25 ಲಕ್ಷ ನಗದು, ಪಾಕ್‌ನಿಂದ ಎಕೆ-47 ಖರೀದಿ

ಸಲ್ಮಾನ್ ಕೊಲೆಗೆ ಸುಪಾರಿ

ಮುಂಬೈ: ಬಾಲಿವುಡ್ ನಟ ಸಲ್ಮಾನ್ ಖಾನ್ ಅವರನ್ನು ಮಹಾರಾಷ್ಟ್ರದ ಪನ್ವೇಲ್‌ನಲ್ಲಿರುವ ಅವರ ತೋಟದ ಬಳಿ ಕೊಲೆ ಮಾಡಲು ವ್ಯಕ್ತಿಯೊಬ್ಬನಿಗೆ ₹25 ಲಕ್ಷ ನಗದು ಹಾಗೂ ಪಾಕಿಸ್ತಾನದಿಂದ ಎ.ಕೆ. 47 ಬಂದೂಕು ತರಿಸಿ ಕೊಡಲಾಗಿತ್ತು ಎಂಬ ಅಂಶವನ್ನು ನವಿ ಮುಂಬೈ ಪೊಲೀಸರು ಆರೋಪ ಪಟ್ಟಿಯಲ್ಲಿ ಹೇಳಿದ್ದಾರೆ. ಆರೋಪ ಪಟ್ಟಿಯಲ್ಲಿ ಒಟ್ಟು ಐವರನ್ನು ಪೊಲೀಸರು ಹೆಸರಿಸಿದ್ದಾರೆ. ಸದ್ಯ ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ ನೇತೃತ್ವದ ಗುಂಪು ಈ ಸುಪಾರಿ ನೀಡಿತ್ತು. ಇವರು ಪಾಕಿಸ್ತಾನದಿಂದ ಎ.ಕೆ. 47, ಎ.ಕೆ. 92 ಹಾಗೂ ಎಂ 16 ಬಂದೂಕುಗಳನ್ನು ಹಾಗೂ ಟರ್ಕಿಯ ಝಿಂಗಾನಾ ಪಿಸ್ತೂಲ್ ಅನ್ನು ಖರೀದಿಸಲು ಸಿದ್ಧತೆ ನಡೆಸಿದ್ದರು. ಇದೇ ಮಾದರಿಯ ಪಿಸ್ತೂಲ್ ಪಂಜಾಬ್‌ನ ಗಾಯಕ ಸಿಧು ಮೂಸೆವಾಲಾ ಹತ್ಯೆಯಲ್ಲಿ ಬಳಸಲಾಗಿತ್ತು. ಸಲ್ಮಾನ್ ಖಾನ್ ಹತ್ಯೆ ಮಾಡುವುದಕ್ಕಾಗಿಯೇ 18 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಬಾಲಕರನ್ನು ಆರೋಪಿಗಳು ಸಜ್ಜುಗೊಳಿಸಿದ್ದರು. ಇವರೆಲ್ಲರೂ ಪುಣೆ, ರಾಯಗಡ, ನವಿ ಮುಂಬೈ, ಠಾಣೆ ಹಾಗೂ ಗುಜರಾತ್‌ನಲ್ಲಿ ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಸಲ್ಮಾನ್ ಖಾನ್ ಅವರ ಚಲನವಲನದ ಮೇಲೆ ನಿಗಾ ಇಡಲು ಬಹುತೇಕರನ್ನು ಈ ತಂಡ ನಿಯೋಜಿಸಿತ್ತು ಎಂದು ಆರೋಪಪಟ್ಟಿಯಲ್ಲಿ ಹೇಳಲಾಗಿದೆ.

ಸಿಜೆಐ ಹುದ್ದೆಗೆ ಖನ್ನಾ ಹೆಸರು

ಬೆಂಗಳೂರು: ನಿವೃತ್ತಿ ಹೊಸ್ತಿಲಲ್ಲಿರುವ ಸಿಜೆಐ ಡಿ.ವೈ. ಚಂದ್ರಚೂಡ್ ಅವರು ತಮ್ಮ ಉತ್ತರಾಧಿಕಾರಿಯಾಗಿ ನ್ಯಾ. ಸಂಜೀವ್ ಖನ್ನಾ ಅವರ ಹೆಸರನ್ನು ಶಿಫಾರಸು ಮಾಡಿ, ಕೇಂದ್ರ ಸರಕಾರಕ್ಕೆ ಪತ್ರ ಬರೆದಿದ್ದಾರೆ. ಸದ್ಯ ಚಂದ್ರಚೂಡ್ ಅವರ ಬಳಿಕ ಸಂಜೀವ್ ಖನ್ನಾ ಅವರೇ ಹಿರಿಯ ನ್ಯಾಯಮೂರ್ತಿಯಾಗಿದ್ದಾರೆ. ಚಂದ್ರಚೂಡ್ ಅವರು ನವೆಂಬರ್ 10ರಂದು ನಿವೃತ್ತಿ ಯಾಗಲಿದ್ದಾರೆ. ಸಂಜೀವ್ ಖನ್ನಾ ಅವರ ಸೇವಾವಧಿ 2025ರ ಮೇ 13ರ ವರೆಗೆ ಇರಲಿದೆ. ಒಂದು ವೇಳೆ ಸಿಜೆಐ ಆಗಿ ಆಯ್ಕೆಯಾದರೆ ಅವರು 6 ತಿಂಗಳು ಆ ಸ್ಥಾನದಲ್ಲಿ ಇರಲಿದ್ದಾರೆ.

ಶೇಖ್ ಹಸೀನಾಗೆ ವಾರಂಟ್

ಢಾಕಾ: ದೇಶದಲ್ಲಿ ನಡೆದ ಹಿಂಸಾಚಾರಯುಕ್ತ ಪ್ರತಿಭಟನೆಯಲ್ಲಿ ಸಾಮೂಹಿಕ ಹತ್ಯೆ ನಡೆಸಿರುವ ಆರೋಪದಡಿ ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಬಂಧನಕ್ಕೆ ದೇಶದ ಅಂತಾರಾಷ್ಟ್ರೀಯ ಅಪರಾಧ ಪ್ರಕರಣಗಳ ನ್ಯಾಯಮಂಡಳಿಯು ಗುರುವಾರ ಆದೇಶ ಹೊರಡಿಸಿದೆ. ನ್ಯಾ.ಗುಲಾಮ್ ಮೊರ್ತುಜಾ ಮಜುಂದಾರ್ ಅವರ ಅಧ್ಯಕ್ಷತೆಯ ನ್ಯಾಯಮಂಡಳಿಯು ಶೇಖ್ ಹಸೀನಾ ಅವರನ್ನು ಒಳಗೊಂಡು 50 ಜನರ ವಿರುದ್ಧ ಬಂಧನ ವಾರಂಟ್ ಹೊರಡಿಸಿದೆ.

ತಲಕಾವೇರಿಯಲ್ಲಿ ಪವಿತ್ರ ತೀರ್ಥೋದ್ಭವ ನಿಮಿತ್ತ ಸಂಪ್ರದಾಯದಂತೆ ಕಾವೇರಿ ಮಾತೆಗೆ ಪೂಜಾ ವಿಧಿವಿಧಾನಗಳು ನಡೆದವು.

ಸಾವಿರಾರು ಭಕ್ತರಿಂದ ಮೊಳಗಿದ ಜಯಘೋಷ

ತಲಕಾವೇರಿಯಲ್ಲಿ ತೀರ್ಥೋದ್ಭವ

ಮಡಿಕೇರಿ: ನಾಡಿನ ಜೀವನದಿ, ಕಾವೇರಿ ಉಗಮಸ್ಥಾನ ತಲಕಾವೇರಿಯಲ್ಲಿ ಪವಿತ್ರ ತೀರ್ಥೋದ್ಭವವು ಗುರುವಾರ ಬೆಳಗ್ಗೆ 7 ಗಂಟೆ 40 ನಿಮಿಷಕ್ಕೆ ಸಲ್ಲುವ ತುಲಾ ಲಗ್ನದಲ್ಲಿ ಮೂಲ ಕಾವೇರಿ ತೀರ್ಥೋದ್ಭವ ಪುಣ್ಯಕಾಲದಲ್ಲಿ ಸಂಭವಿಸಿತು. ಸಂಪ್ರದಾಯದಂತೆ ಕಾವೇರಿ ಮಾತೆಗೆ ಪೂಜಾ ವಿಧಿ ವಿಧಾನಗಳು ನಡೆದವು. ಪವಿತ್ರ ತೀರ್ಥೋದ್ಭವಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು.

ಭಕ್ತಾಧಿಗಳು ಜೈ ಜೈ ಮಾತಾ, ಕಾವೇರಿ ಮಾತಾ, ಮತ್ತಿತರ ಘೋಷಣೆಗಳು ಭಕ್ತಾದಿಗಳಿಂದ ಮೊಳಗಿದವು. ಸಾಂಪ್ರದಾಯಿಕ ಉಡುಪಿನೊಂದಿಗೆ ಆರತಿ ತಟ್ಟೆಯೊಂದಿಗೆ ತಾಯಿ ಕಾವೇರಿ ಮಾತೆಗೆ ಭಕ್ತರು ನಮಿಸಿದರು. ಮುಖ್ಯಮಂತ್ರಿ ಕಾನೂನು ಸಲಹೆಗಾರ, ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ಒಳಗೊಂಡಂತೆ ಭಕ್ತರು ಭಾಗಮಂಡಲದಿಂದ ತಲಕಾವೇರಿವರೆಗೆ ಪಾದಯಾತ್ರೆ ಮೂಲಕ ಆಗಮಿಸಿದರು.

ತೀರ್ಥೋದ್ಭವದ ಪೂಜಾ ವಿಧಿವಿಧಾನಗಳನ್ನು ಅರ್ಚಕರಾದ ಪ್ರಶಾಂತ್ ಆಚಾರ್, ಗುರುರಾಜ್, ರವಿರಾಜ್, ವಿಠಲ ಆಚಾರ್, ಸುಧೀರ್ ಆಚಾರ್ ನೆರವೇರಿಸಿದರು. ಕನ್ನಡಸಿರಿ ಸ್ನೇಹಬಳಗ ವತಿಯಿಂದ ಕಸಾಪ ಜಿಲ್ಲಾ ಘಟಕದ ನಿಕಟಪೂರ್ವ ಅಧ್ಯಕ್ಷ ಲೋಕೇಶ್ ಸಾಗರ್ ನೇತೃತ್ವದಲ್ಲಿ ಭಕ್ತಿಗೀತೆ ಗಾಯನ ನಡೆಯಿತು. ಎಂ.ಬಿ.ದೇವಯ್ಯ ಅವರ ನೇತೃತ್ವದ ತಂಡದವರು ದುಡಿ ನುಡಿಸಿದರು. ಕೊಡಗು ಏಕೀಕರಣ ರಂಗದಿಂದ ಹಾಗೂ ಚೆಟ್ಟಿನಾಡು ವಾಲ್ನೂರು ಎಸ್ಟೇಟ್‌ನ ಅಣ್ಣಾಮಲೈ ಚೆಟ್ಟಿಯಾನ್‌ರಿಂದ ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಿತು. ಶಾಸಕರಾದ ಎ.ಎಸ್.ಪೊನ್ನಣ್ಣ ಹಾಗೂ ಡಾ.ಮಂತರ್‌ಗೌಡರು ಮಾತನಾಡಿ, ತಾಯಿ ಕಾವೇರಿ ಮಾತೆ ಎಲ್ಲರಿಗೂ ಒಳಿತು ಮಾಡಲಿ. ಕಾವೇರಿ ನದಿ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಈ ಬಾರಿ ನಾಡಿನಲ್ಲಿ ಉತ್ತಮ ಮಳೆಯಾಗಿದ್ದು, ಸಮೃದ್ಧಿ ಹಾಗೂ ಸಂತಸ ತಂದಿದೆ. ತಾಯಿ ಕಾವೇರಿ ಮಾತೆ ಸದಾಕಾಲ ಎಲ್ಲರಿಗೂ ಒಳಿತು ಮಾಡಲಿ ಎಂದು ಪ್ರಾರ್ಥಿಸಲಾಗಿದೆ.
-ಎನ್.ಎಸ್.ಬೋಸರಾಜು,
ಕೊಡಗು ಜಿಲ್ಲಾ ಉಸ್ತುವಾರಿ ಸಚಿವ

ಮಹರ್ಷಿ ವಾಲ್ಮೀಕಿ ಬದುಕು ಸಮಾಜಕ್ಕೆ ಪ್ರೇರಣೆ

ಜಿಲ್ಲಾಡಳಿತದಿಂದ ವಾಲ್ಮೀಕಿ ಜಯಂತಿ | ತಳ ಸಮುದಾಯ ಮುಖ್ಯವಾಹಿನಿಗೆ ಬರಲಿ:ಸಚಿವ ಡಾ. ಎಂ.ಸಿ. ಸುಧಾಕರ್

ಚಿಕ್ಕಬಳ್ಳಾಪುರ: ಮಹರ್ಷಿ ವಾಲ್ಮೀಕಿ ಬದುಕು, ಬರಹ, ಸಮುದಾಯ ಮತ್ತು ಸಮಾಜಕ್ಕೆ ಪ್ರೇರಣೆ ಆಗಬೇಕಿದೆ. ಜೀವನದಲ್ಲಿ ಮನ ಪರಿವರ್ತನೆ ಆಗಿ ಮಹರ್ಷಿ ಆದಂತೆ ಸಮುದಾಯದ ಜನತೆ ಎಲ್ಲಾ ಕ್ಷೇತ್ರಗಳಲ್ಲೂ ಬದಲಾಗಬೇಕು. ತಳ ಸಮುದಾಯ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಕರೆ ನೀಡಿದರು.

ನಗರದ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಭಾರತ ಮತ್ತು ಶ್ರೀಲಂಕಾ ನಡುವೆ ಸಂಪರ್ಕ ಕಲ್ಪಿಸಲು ರಾಮಸೇತುವನ್ನುಶ್ರೀರಾಮಸೇನೆ ನಿರ್ಮಿಸಿದ್ದು ಸತ್ಯ ಎಂಬುದು ಈಗ ಗೊತ್ತಾಗಿದೆ. ಹೀಗಾಗಿ ವಾಲ್ಮೀಕಿ ಬರೆದ ರಾಮಾಯಣ ಸತ್ಯಕತೆಯಾಗಿದೆ. ಇದನ್ನು ಅಧ್ಯಯನ ಮಾಡುವ ಮೂಲಕ ಹಿರಿಯರನ್ನು ಗೌರವಿಸುವ ಗುಣವನ್ನು ಮಕ್ಕಳಿಗೆ ಕಲಿಸಬೇಕು. ತಂದೆ ಮಕ್ಕಳ ಸಂಬಂಧ,ಸಹೋದರ ವಾತ್ಸಲ್ಯ,ಸತಿ ಪತಿ ಧರ್ಮ,ತಾಯಿಮಕ್ಕಳ ಸಂಬಂಧ,ಉತ್ತಮ ರಾಜನೀತಿ ಮಾರ್ಗವೇ ರಾಮಾಯಣದಲ್ಲಿದೆ ಎಂದರು.

ಚಿಕ್ಕಬಳ್ಳಾಪುರದಲ್ಲಿ ನಡೆದ ಜಿಲ್ಲಾಮಟ್ಟದ ವಾಲ್ಮೀಕಿ ಜಯಂತಿಯನ್ನು ಉದ್ದೇಶಿಸಿ ಜಿಲ್ಲಾ ಉಸ್ತುವಾರಿ ಸಚಿವ ಎಂ.ಸಿ.ಸುಧಾಕರ್ ಮಾತನಾಡಿದರು.

ವಾಲ್ಮೀಕಿ ಸಮುದಾಯ ಕೂಡ ಈಗ ಜಾಗೃತವಾಗಿದೆ. ಈ ನಾಡಿಗೆ ಸುರಪುರ ದೊರೆಗಳು, ಚಿತ್ರದುರ್ಗ ನಾಯಕರ ಕೊಡುಗೆ ಸದಾ ಸ್ಮರಣೀಯ. ಜಿಲ್ಲಾ ಕೇಂದ್ರದಲ್ಲಿ ವಾಲ್ಮೀಕಿ ಭವನಕ್ಕೆ ನೀಡಿರುವ 30ಕುಂಟೆ ಜಾಗ ಗೊಂದಲದಲ್ಲಿದೆ. ಇದರ ಪರಿಹಾರಕ್ಕೆ ಜಿಲ್ಲಾಡಳಿತ ನಿರಂತರ ಪ್ರಯತ್ನ ಮಾಡುತ್ತಿದೆ. 2ತಿಂಗಳ ಒಳಗೆ ಕನ್ನಡ ಭವನ ಲೋಕಾರ್ಪಣೆ ಆಗಲಿದ್ದು ಮುಂದಿನ ವರ್ಷದ ಕಾರ್ಯಕ್ರಮ ಕನ್ನಡ ಭವನದಲ್ಲಿ ನಡೆಸಲಾಗುವುದು ಎಂದು ಹೇಳಿದರು.

ವಾಲ್ಮೀಕಿ ಭವನಕ್ಕೆ 4 ಕೋಟಿ ಅನುದಾನ

ಶಾಸಕ ಪ್ರದೀಪ್ ಈಶ್ವರ್ ಮಾತನಾಡಿ, ಮಹರ್ಷಿ ವಾಲ್ಮೀಕಿ ರಾಮಾಯಣ ನಮ್ಮೆಲ್ಲರಿಗೂ ಆದರ್ಶ, ಸಮುದಾಯದ ವಿದ್ಯಾರ್ಥಿಗಳು ಕಷ್ಟ ಪಟ್ಟು ಚೆನ್ನಾಗಿ ಓದಿ ತಂದೆ ತಾಯಿಗೆ ಒಳ್ಳೆಯ ಹೆಸರು ತರಬೇಕು. ವಾಲ್ಮೀಕಿ ಭವನದ ನಿರ್ಮಾಣ ನನ್ನ ಜವಾಬ್ದಾರಿ. ವಾಲ್ಮೀಕಿ ಭವನಕ್ಕೆ 4 ಕೋಟಿ ಅನುದಾನ ತಂದು ನಿರ್ಮಿಸಲಾಗುವುದು.ಇದರಲ್ಲಿ ಯಾವುದೇ ಅನುಮಾನ ಬೇಡ ಎಂದು ಭರವಸೆ ನೀಡಿದರು.

ಉಪನ್ಯಾಸಕ ಚಂದ್ರಶೇಖರ ಮಾತನಾಡಿ, ರಾಮಾಯಣ ಕೃತಿಯ ಮೂಲಕ ವಿಶ್ವ ಸಾಹಿತ್ಯಕ್ಕೆ ಬಹುದೊಡ್ಡ ಕೊಡುಗೆ ಕೊಟ್ಟವರು ವಾಲ್ಮೀಕಿ. ರಾಮಾಯಣ ಆದಿ ಕಾವ್ಯವಾಗಿದ್ದು ಇದರ ನಂತರ ಸುಮಾರು 3 ಸಾವಿರ ರಾಮಾಯಣಗಳು ರಚನೆ ಆಗಿವೆ. ತಳಸಮುದಾಯದ ಮೊದಲ ಸಾಕ್ಷರ ವ್ಯಕ್ತಿ ವಾಲ್ಮೀಕಿ. ವಾಲ್ಮೀಕಿ ಹುಟ್ಟಲಿಲ್ಲ ಎಂದಿದ್ದರೆ ನಾಯಕ ಸಮುದಾಯ ಬೇಡವಾದ ಸಮುದಾಯ ಆಗುತ್ತಿತ್ತು. ಈಗ ರಾಮಾಯಣದಿಂದಾಗಿ ಬೇಕಾದ ಸಮುದಾಯವಾಗಿದೆ ಎಂದರು.

ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡಲಾಯಿತು.ಸಮುದಾಯದ ಸಾಧಕರನ್ನು ಗೌರವಿಸಿ ಸತ್ಕರಿಸಲಾಯಿತು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ವಾಲ್ಮೀಕಿ ಭಾವಚಿತ್ರ ಮತ್ತು ವಿವಿಧ ಇಲಾಖೆಗಳ ಸ್ತಬ್ಧಚಿತ್ರಗಳ ಮೆರವಣಿಗೆ ನಡೆಯಿತು. ತಮಟೆ ದೊಳ್ಳು ಇತರೆ ಜಾನಪದ ಕಲಾತಂಡಗಳ ಕುಣಿತಕ್ಕೆ ಶಾಲಾಕಾಲೇಜು ವಿದ್ಯಾರ್ಥಿಗಳು ಹುಚ್ಚೆದ್ದು ಕುಣಿದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೇಶವರೆಡ್ಡಿ,ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ,ಎಸ್ಪಿ ಕುಶಾಲ್ ಚೌಕ್ಸೆ, ಹೆಚ್ಚುವರಿ ಎಸ್ಪಿ ಐ.ಆರ್. ಖಾಸಿಂ,ಹೆಚ್ಚುವರಿ ಜಿಲ್ಲಾಧಿಕಾರಿ ಭಾಸ್ಕರ್, ಜಿಲ್ಲಾ ಉಪವಿಭಾಗಾಧಿಕಾರಿ ಅಶ್ವಿನ್,ನಗರಸಭಾ ಸದಸ್ಯ ಮಟಮಪ್ಪ, ತಹಸೀಲ್ದಾರ್ ಅನಿಲ್, ನಗರಸಭೆ ಅಧ್ಯಕ್ಷ ಗಜೇಂದ್ರ, ಉಪಾಧ್ಯಕ್ಷ ನಾಗರಾಜ ಇದ್ದರು.

ಸಮಾಚಾರ ಸಣ್ಣದಲ್ಲ

ಸ್ಕ್ಯಾವೆಂಜಿಂಗ್‌ಗಳಿಗೆ ಅರ್ಜಿ ಆಹ್ವಾನ

ಚಿಕ್ಕಬಳ್ಳಾಪುರ: ಗೌರಿಬಿದನೂರು ನಗರವ್ಯಾಪ್ತಿಯಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಗಳ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗಿದೆ. ಆದ್ದರಿಂದ ನಗರವ್ಯಾಪ್ತಿಯಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕೆಲಸ ಮಾಡುತ್ತಿರುವವರು ಅ. 24 ರೊಳಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಆರೋಗ್ಯ ಶಾಖೆಯಲ್ಲಿ ಸಂಪರ್ಕಿಸಬಹುದು ಎಂದು ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.

ಪವಿತ್ರಾರೋಹಣ ಪೂಜಾ ಮೆರುಗು



ಕೋಲಾರ: ಮುಳಬಾಗಲು ತಾಲೂಕಿನ ದೊಡ್ಡಗುರ್ಕಿ ಗ್ರಾಮದ ವೆಂಕಟರವಣಸ್ವಾಮಿ ದೇವಾಲಯದಲ್ಲಿ ಗುರುವಾರ ಪವಿತ್ರಾರೋಹಣ ಧಾರ್ಮಿಕ ಕಾರ್ಯಕ್ರಮ ನಡೆಯಿತು. ಮುಳಬಾಗಲಿನ ನೀಲಾಸೋಮಶೇಖರ್ ಸಾರಥ್ಯದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಉತ್ಸವ ಮೂರ್ತಿ ಪಲ್ಲಕ್ಕಿ ಮೆರವಣಿಗೆ ನಡೆಯಿತು. ಮುಂದೆ ಭಜನೆ ಮಂಡಳಿ ಸದಸ್ಯನಿಯರು ಕೋಲಾಟ, ಭಜನೆ ಮೂಲಕ ಗೋವಿಂದ ಸ್ಮರಣೆ ಮಾಡಿದರು. ಈ ಸಂದರ್ಭದಲ್ಲಿ ದೇಗುಲದಲ್ಲಿ ವಿಶೇಷ ಹೋಮಹವನಗಳಾದವು.ವಿಶೇಷ ಅಲಂಕಾರ, ಪೂಜೆ ನಂತರ ಮಹಾ ಮಂಗಳಾರತಿಯಾಗಿ ಪ್ರಸಾದ, ಅನ್ನದಾನ ನಡೆಯಿತು. ತಿರುಪತಿ ತಿಮ್ಮಪ್ಪನ ದರ್ಶನವನ್ನು ನೆನಪಿಸುವಂತಿದೆ ಎಂದು ಭಕ್ತರು ಕೊಂಡಾಡಿ ದೇವರನ್ನು ಕಣ್ತುಂಬಿಸಿಕೊಂಡರು.

ಜೀವನದ ಮೌಲ್ಯ ತಿಳಿಸುವ ಕೃತಿ

ಗುಬ್ಬಿ: ಕೃತಿ ಮತ್ತು ಕಾವ್ಯಗಳ ಮೂಲಕ ಜೀವನದ ಮೌಲ್ಯಗಳನ್ನು ಅರಿಯಲು ಸಮಾಜಕ್ಕೆ ಉತ್ತಮ ಸಂದೇಶ ನೀಡಿದ ಜಗತ್ತಿನ ಶ್ರೇಷ್ಠ ಗ್ರಂಥ ವಾಲ್ಮೀಕಿ ರಾಮಾಯಣ ಎಂದು ಶಾಸಕ ಶ್ರೀನಿವಾಸ್ ತಿಳಿಸಿದರು.

ಪಟ್ಟಣದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯಲ್ಲಿ ಮಾತನಾಡಿ, ಮಹನೀಯರ ಜಯಂತಿ ಗಳು ಕೇವಲ ಆಚರಣೆಗೆ ಮಾತ್ರ ಸೀಮಿ ತವಾಗಬಾರದು. ಅವರ ಆದರ್ಶ ಗಳ ನ್ನು ಬಳಸಿಕೊಂಡು ಉತ್ತಮ ಸಮಾಜ ವನ್ನು ನಿರ್ಮಾಣವಾಗಬೇಕು ಎಂದರು.

ಉಪನ್ಯಾಸಕ ಲೋಕೇಶ್ ಮಾತನಾಡಿ, ಈ ಜಗತ್ತಿನಲ್ಲಿ ಯಾವುದು ಧರ್ಮ ಯಾವುದು ಅಧರ್ಮ ಎಂದು ತಿಳಿಸುವ ಉದ್ದೇಶದಿಂದ ರಾಮಾಯಣ ರಚನೆ ಮಾಡಿದ್ದಾರೆ. ನದಿ, ಸರೋವರ, ಪ್ರಕೃತಿ ಸೌಂದರ್ಯ ವರ್ಣನೆ ಸವಿಯಬಹುದು. ಭಕ್ತಿ ಭಾವ ಸಂಬಂಧಗಳ ಬೆಸುಗೆ ಕಾಣಬಹುದು. ಮೌಲ್ಯಯುತ ಸಾಹಿತ್ಯದ ಸೃಷ್ಟಿಗೆ



ಪ್ರೇರಣೆಯಾಗಿದೆ ಅನೇಕ ಕಥೆ ಕಾದಂಬರಿಗಳು ರಚನೆಯಾಗಿವೆ ಎಂದು ತಿಳಿಸಿದರು.

ತಾಪಂ ಇಒ ಶಿವಪ್ರಕಾಶ್, ಸಮಾಜ ಕಲ್ಯಾಣ ಅಧಿಕಾರಿ ವೀಣಾ, ವೈದ್ಯಾಧಿಕಾರಿ ಬಿಂದು ಮಾಧವ್, ಪ ಪಂ ಮುಖ್ಯಾಧಿಕಾರಿ ಮಂಜುಳಾ ದೇವಿ, ಪ ಪಂ ಅಧ್ಯಕ್ಷೆ ಮಂಗಳಮ್ಮ, ಉಪಾಧ್ಯಕ್ಷೆ ಮಮತಾ, ಸದಸ್ಯರಾದ ಜಿಎನ್ ಅಣ್ಣಪ್ಪ ಸ್ವಾಮಿ, ಶಿವಕುಮಾರ್, ಮಹಮ್ಮದ್ ಸಾಧಿಕ್, ಶಶಿಕುಮಾರ್, ವಾಲ್ಮೀಕಿ ನಾಯಕ ಸಮಾಜದ ಗೌರವಾಧ್ಯಕ್ಷ ನರಸಿಂಹಮೂರ್ತಿ, ಅಧ್ಯಕ್ಷ ಅಡವೀಶಯ್ಯ, ಕಾರ್ಯದರ್ಶಿ ರಾಮಚಂದ್ರಪ್ಪ, ಸಣ್ಣ ರಂಗಯ್ಯ, ಸೌಭಾಗ್ಯಮ್ಮ, ಚೇಳೂರು ಶಿವನಂಜಪ್ಪ ಇದ್ದರು.

ಪರಿಶಿಷ್ಟ ಪಂಗಡಗಳಿಗೆ 11,447 ಕೋಟಿ ಮೀಸಲು

ತುಮಕೂರು: ನಮ್ಮ ಸರಕಾರ ಆಯವ್ಯಯದಲ್ಲಿ ಪರಿಶಿಷ್ಟ ಪಂಗಡ ಸಮುದಾಯಗಳ ಕಲ್ಯಾಣಕ್ಕಾಗಿ 11,447 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ ಎಂದು ಸಚಿವ ಡಾ: ಜಿ. ಪರಮೇಶ್ವರ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಮಹಾ ನಗರ ಪಾಲಿಕೆ ಸಹಯೋಗದಲ್ಲಿ ನಗರದ ಬಾಲ ಭವನ ಸಭಾಂಗಣದಲ್ಲಿ ಗುರುವಾರ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಚಾಲನೆ ನೀಡಿ ಮಾತನಾಡಿದರು.

ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಯೋಜನೆಗಳನ್ನು ರೂಪಿಸಿದ್ದು, ಜಾತಿ ಗಣತಿ ಆಧಾರದ ಮೇಲೆ ಶೇಕಡಾ 3ರಷ್ಟಿದ್ದ ಮೀಸಲಾತಿಯನ್ನು ಶೇ. 7.5ಕ್ಕೆ ಹೆಚ್ಚಿಸಲಾಗಿದೆ. ಉದ್ಯೋಗ ಮತ್ತು ಶಿಕ್ಷಣಕ್ಕೆ ಮಾತ್ರ ಈ ಮೀಸಲಾತಿ ಅನ್ವಯವಾಗಲಿದೆ. ಪರಿಶಿಷ್ಟ ಪಂಗಡಕ್ಕೆ ಸೇರಿದ 12 ಬುಡಕಟ್ಟು ಸಮುದಾಯದ 48,000 ಕುಟುಂಬಗಳಿಗೆ ಪೌಷ್ಟಿಕ ಆಹಾರ ಒದಗಿಸಲು ಸುಮಾರು 140 ಕೋಟಿ ರೂ. ಹಣವನ್ನು ವೆಚ್ಚ ಮಾಡಲಾಗಿದೆ. ಪರಿಶಿಷ್ಟ

ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ವರ್ಗದ ವಿದ್ಯಾರ್ಥಿಗಳ ವಿದೇಶಿ ವ್ಯಾಸಂಗಕ್ಕೆ ಪ್ರಬುದ್ಧ ಯೋಜನೆ ಜಾರಿಗೊಳಿಸಲಾಗಿದೆ ಎಂದರು. ತುಮಕೂರು ವಿಶ್ವ ವಿದ್ಯಾನಿಲಯದಲ್ಲಿ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪಿಸುವಂತೆ ಸರಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ನಗರ ಶಾಸಕ ಜ್ಯೋತಿ ಗಣೇಶ್ ಮಾತನಾಡಿ, ಸಮಾಜದಲ್ಲಿನ ದ್ವೇಷ, ಅಸೂಯೆ, ಕರುಣೆ, ಪ್ರೀತಿಯ ಪಾತ್ರಗಳನ್ನು ರಾಮಾಯಣದಲ್ಲಿ ತೋರಿಸುವ ಮೂಲಕ ಜೀವನದ ವಿಸ್ತಾರವನ್ನು ವಿಸ್ತೃತವಾಗಿ ತಿಳಿಸಿದ್ದಾರೆ. ಇಂಥ ಆದರ್ಶ ವ್ಯಕ್ತಿಗಳನ್ನು ಕೇವಲ ಆಚರಣೆಗಳಿಗೆ ಸೀಮಿತಗೊಳಿಸದೆ ಅವರ ಕಾವ್ಯದ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಮಾತನಾಡಿದರು. ಜಿಲ್ಲಾ ನಾಯಕ ಮಹಿಳಾ ಸಮಾಜದ ಅಧ್ಯಕ್ಷೆ ಶಾಂತಲಾ ರಾಜಣ್ಣ ಮಾತನಾಡಿ, ಹಿಂದುಳಿದ ಸಮುದಾಯಗಳ ಮಕ್ಕಳನ್ನು ಶಿಕ್ಷಣವಂತರನ್ನಾಗಿ ಮಾಡಬೇಕು. ಅಧಿಕಾರಿಗಳು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಹ ಸೌಲಭ್ಯಗಳನ್ನು ತಲುಪಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು. ಅತಿ ಹೆಚ್ಚು ಅಂಕ ಗಳಿಸಿದ ಎನ್.ಎಸ್.ಧನುಷ್, ವೈ. ಕಾವ್ಯ, ಚರಣ್‌ರಾಜ್, ಸಾನ್ವಿ, ಬಿಂದು, ಡಿ.ಎ.ಪುನೀತ್, ಓ. ಭಾರ್ಗವಿ, ಸಿ.ಎಲ್. ಚೇತನ, ಭಾನುಪ್ರಕಾಶ್, ಪುಷ್ಪಲತಾ, ಎಂ.ಸೃಷ್ಟಿಗೆ ಪುರಸ್ಕಾರ ನೀಡಲಾಯಿತು.

ಆರ್‌ಟಿಒಗೆ ರೇವಣ್ಣ ತರಾಟೆ

ಹಾಸನ: ನಗರದ ಆರ್‌ಟಿಒ ಕಚೇರಿಗೆ ಮಾಜಿ ಸಚಿವ ಎಚ್.ಡಿ. ರೇವಣ್ಣ ನಿನ್ನೆ ಸಂಜೆ ದಿಢೀರ್ ಭೇಟಿ ನೀಡಿ ಆರ್‌ಟಿಒ ರಾಜ್‌ಕುಮಾರ್ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಅರ್ಜಿ ಸಲ್ಲಿಸಿದ ಎಲ್ಲಾ ಕಡತಗಳನ್ನು ಬಾಕಿ ಉಳಿಸಿಕೊಂಡು ಸಾರ್ವ ಜನಿಕರಿಂದ ಹಣ ವಸೂಲಿ ಮಾಡುತ್ತಿದ್ದಾರೆ ಎಂಬ ಆರೋಪ ಹಿನ್ನೆಲೆ, ಕಡತಗಳನ್ನು ಹೊರ ತೆಗೆಸಿ ಪರಿಶೀಲಿಸಿ ಅಧಿಕಾರಿ ಕಾರ್ಯವೈಖರಿಗೆ ಕಿಡಿ ಕಾರಿದರು. ನಂತರ ಕಚೇರಿಯಲ್ಲೇ ಸಾರಿಗೆ ಸಚಿವರಿಗೆ ಕರೆ ಮಾಡಿ, ಇಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ತಿಳಿಸಿದರು. ಕೂಡಲೇ ಎಲ್ಲ ಅಕ್ರಮಗಳಿಗೆ ಕಡಿವಾಣ ಹಾಕಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಸಾರಿಗೆ ಸಚಿವರು ಸ್ಥಳಕ್ಕೆ ಬರುವವರೆಗೂ ಧರಣಿ ನಡೆಸುವುದಾಗಿ ಎಚ್ಚರಿಸಿದರು. ಇದೇ ವೇಳೆ ಪೆಂಡಿಂಗ್ ಕಡತಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಬೇಕು. ಇಲ್ಲವಾದರೆ ಸ್ಥಳೀಯ ಶಾಸಕರು ಹಾಗೂ ತನ್ನ ನೇತೃತ್ವದಲ್ಲಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು. ಈ ವೇಳೆ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ನಗರಸಭೆ ಎಂ.ಚಂದ್ರೇಗೌಡ ಮೊದಲಾದವರಿದ್ದರು.

ಮಳೆ ಹಾವಳಿ: ತುರ್ತು ಸಭೆ

ಬಾಗೇಪಲ್ಲಿ: ವಾಯುಭಾರ ಕುಸಿತದಿಂದ ತಾಲೂಕಿನಲ್ಲಿ ಸತತ ಎರಡು ದಿನಗಳಿಂದ ಮಳೆ ಸುರಿಯುತ್ತಿದ್ದು ಬಾಗೇಪಲ್ಲಿ ಶಾಸಕ ಎಸ್. ಎನ್. ಸುಬ್ಬಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಮಳೆ ಹಾವಳಿ ನಿರ್ವಹಣೆ ಕುರಿತು ಅಧಿಕಾರಿಗಳ ತುರ್ತುಸಭೆ ಪಟ್ಟಣದ ತಾ.ಪಂ. ಸಭಾಭವನದಲ್ಲಿ ನಡೆಯಿತು.

ನಂತರ ಮಾತನಾಡಿ, ಮಳೆಯ ತುರ್ತು ಪರಿಸ್ಥಿತಿ ಎದುರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಮನ್ವಯತೆಯಿಂದ ಕಾರ್ಯ ನಿರ್ವಹಿಸಲು ಇಲಾಖೆಗಳು, ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅಧಿಕಾರಿ, ಸಿಬ್ಬಂದಿ ಕೇಂದ್ರ ಸ್ಥಾನದಲ್ಲೇ? ಇದ್ದು ಪರಿಸ್ಥಿತಿ ನಿಭಾಯಿ ಸಯವಂತೆಯೂ ಆದೇಶಿಸಿದ್ದೇವೆ. ಎಲ್ಲರೀತಿಯ ಮುನ್ನಚ್ಚರಿಕೆ ಕ್ರಮ ವಹಿಸಿದ್ದೇವೆ ಎಂದು ಹೇಳಿದರು.

ಮಳೆ ಪರಿಸ್ಥಿತಿಯನ್ನು ನಿಭಾಯಿಸುವ ಮತ್ತು ಮಳೆಯಿಂದ ಉಂಟಾಗಿರುವ ಸಮಸ್ಯೆ ಸರಿಪಡಿಸುವ ಶಕ್ತಿ ಅಧಿಕಾರಿಗಳಿಗೆ ಇದೆ. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ಇದ್ದು ಮಳೆಯ ಹಿನ್ನೆಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆಗಳನ್ನು

ತೆಗೆದುಕೊಳ್ಳುವಂತೆ ಸಲಹೆ ನೀಡಿದರು.

ತಹಸೀಲ್ದಾರ್ ಮನೀಶಾ ಮಹೇಶ್ ಪತ್ರಿ ಮಾತನಾಡಿ, ದಿನದ 24 ಗಂಟೆಗಳ ಕಾಲ ಕಂಟ್ರೋಲ್ ರೂಮ್ ಸಹಾಯ ವಾಣಿ ಸ್ಥಾಪನೆ ಮಾಡಿ ಎಲ್ಲಾ ಅಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಕೇಂದ್ರ ಸ್ಥಾನದಲ್ಲಿ ಇದ್ದು ಸೂಕ್ತ ಕ್ರಮ ಗಳನ್ನು ನಿರ್ವಹಿಸಲು ಸಲಹೆ ನೀಡಿದರು. ತಹಶಿಲ್ದಾರ್ ಮನೀಶಾ ಮಹೇಶ್ ಪತ್ರಿ, ರಮೇಶ್, ಬಿಇಓ ಎನ್.ವೆಂಕಟೇಶಪ್ಪ,ಕೃಷಿ ಇಲಾ ಖೆ ಸಹಾಯಕ ನಿರ್ದೇಶಕಿ ಲಕ್ಷ್ಮಿ, ಪಶುವೈದ್ಯ ನಿರ್ದೇಶಕ ಡಾ. ಕೃಷ್ಣಮೂರ್ತಿ, ಟಿಎಚ್‌ಒ ಡಾ.ಸತ್ಯನಾರಾಯಣ ರೆಡ್ಡಿ, ಯೋಜ ನಾಧಿಕಾರಿ ರಾಮಚಂದ್ರಪ್ಪ, ಸಾಕ್ಷರತೆ ಅಧಿಕಾರಿ ಶಿವಪ್ಪ ಇದ್ದರು.

ಒತ್ತುವರಿ ತೆರವು ಸ್ಥಳಕ್ಕೆ ಸಂಸದರ ಭೇಟಿ

ಹಾಸನ: ನಗರದ ತಣ್ಣೀರು ಹಳ್ಳ ಭಾಗದಲ್ಲಿ ನೆನ್ನೆ ಫುಟ್‌ಪಾತ್ ಒತ್ತುವರಿ ತೆರವು ಮಾಡಿದ್ದ ಸ್ಥಳಕ್ಕೆ ಸಂಸದ ಶ್ರೇಯಸ್ ಪಟೇಲ್ ಭೇಟಿ ನೀಡಿ ಪರಿಶೀಲನೆ ನಡೆಸಿ ಅಂಗಡಿ ಮಾಲೀಕರ ಸಮಸ್ಯೆ ಆಲಿಸಿದರು. ಈ ವೇಳೆ ಯಾವುದೇ ಮುನ್ಸೂಚನೆ ಅಥವಾ ನೋಟಿಸ್ ನೀಡದೆ ನಗರಸಭೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಏಕಾಏಕಿ ಬಂದು ಅಂಗಡಿ-ಮುಂಗಟ್ಟುಗಳನ್ನು ತೆರವು ಮಾಡಿದ್ದಾರೆ, ಕೆಲ ಮನೆಗಳ ಮುಂಭಾಗ ಒಡೆದಿದ್ದಾರೆ. ಇದರಿಂದ ಸಣ್ಣಪುಟ್ಟ ವ್ಯಾಪಾರಿಗಳು, ನಿವಾಸಿಗಳಿಗೆ ತುಂಬಾ ತೊಂದರೆ ಹಾಗೂ ನಷ್ಟವಾಗಿದೆ ಎಂದು ತಮ್ಮ ಅಳಲು ತೋಡಿಕೊಂಡರು. ನೋಟಿಸ್ ನೀಡಿ ಸ್ವಲ್ಪ ಕಾಲಾ ವಕಾಶ ನೀಡಿದ್ದರೆ ನಾವೇ ತೆರವು ಮಾಡಿಕೊಳ್ಳುತ್ತಿದ್ದೆವು. ಆದರೆ ಏಕಾಏಕಿ ಬಂದು ಅಂಗಡಿಗಳನ್ನು ಒಡೆದು ಹಾಕಿದರು. ಅಂಗಡಿ ಗಳನ್ನೇ ನಂಬಿಕೊಂಡು ಬದುಕುತ್ತಿದ್ದ ಅನೇಕರಿಗೆ ತುಂಬಾ ತೊಂದರೆ ಯಾಗಿದೆ ಎಂದು ನೋವು ಹಂಚಿಕೊಂಡರು. ಬಳಿಕ ಸುದ್ದಿಗಾರರೊಂ ದಿಗೆ ಶ್ರೇಯಸ್ ಪಟೇಲ್, ನೋಟಿಸ್ ನೀಡದೆ ಏಕಾಏಕಿ ತೆರವು ಕಾರ್ಯಾಚರಣೆ ಮಾಡಿರುವುದು ತಪ್ಪು ನಿರ್ಧಾರ, ಯಾರು ಈ ರೀತಿ ಮಾಡಿದ್ದಾರೆ ಎಂಬ ಬಗ್ಗೆ ಜಿಲ್ಲಾಧಿಕಾರಿ ಅವರ ಗಮನಕ್ಕೆ ತಂದು ಅಂಥವರ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಈ ಬಗ್ಗೆ ಅತೀ ಶೀಘ್ರವಾಗಿ ಸಭೆ ನಡೆಸಿ ಅಧಿಕಾರಿಗಳ ಜೊತೆ ಚರ್ಚಿ ಸಲಾಗುವುದು. ಅಲ್ಲಿಯವರೆಗೂ ಒತ್ತುವರಿ ತೆರವು ಕಾರ್ಯಾಚರಣೆ ಸ್ಥಗಿತ ಗೊಳಿಸ ಲಾಗುವುದು ಎಂದರು. ಇದೇ ವೇಳೆ ಕಣ್ಣೀರಿಟ್ಟ ಬಡ ಬೀದಿಬದಿ ವ್ಯಾಪಾರಸ್ಥ ಮಹಿಳೆಗೆ ಸಂಸದರು ಆರ್ಥಿಕ ಸಹಾಯ ಮಾಡಿದರು.

ಹೆಚ್ಚು ಪುನರ್ ವ್ಯಾಖ್ಯಾನಗೊಂಡ ರಾಮಾಯಣ

ವಾಲ್ಮೀಕಿ ಜಯಂತಿ | ರಾಮ ಆದರ್ಶ ಪುರುಷ, ರಾವಣ ಆದರ್ಶ ರಾಕ್ಷಸ

ಹಾಸನ: ರಾಮಾಯಣ- ಮಹಾಭಾರತ ಗಳಂತೆ ಜಗತ್ತಿನ ಮತ್ಯಾವ ಮಹಾಕಾ ವ್ಯವೂ ಪುನರ್‌ಸೃಷ್ಟಿ ಮತ್ತು ಪುನರ್ ವ್ಯಾಖ್ಯಾನಕ್ಕೆ ಒಳಗಾಗುತ್ತಿಲ್ಲ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಚ್.ಎಲ್.ಮಲ್ಲೇಶಗೌಡ ಅಭಿಪ್ರಾಯಪಟ್ಟರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಗತ್ತಿನಲ್ಲಿ ಮಹಾ ಕಾವ್ಯಗಳ ಸಂಖ್ಯೆ ಬೆರಳೆಣಿಕೆಯಷ್ಟು. ವಾಲ್ಮೀಕಿ ರಚಿಸಿದ ರಾಮಾಯಣ ಮತ್ತು ವ್ಯಾಸ ರಚಿಸಿದ ಮಹಾಭಾರತ ಎರಡೂ ಜೀವನದ ವಾಸ್ತವ, ಕನಸು, ಕಲ್ಪನೆ, ಆದರ್ಶ ಎಲ್ಲವನ್ನೂ ಕಟ್ಟಿ ಕೊಟ್ಟಿವೆ ಎಂದರು.

ರಾಮ ಆದರ್ಶ ಪುರುಷ, ರಾವಣ ಆದರ್ಶ ರಾಕ್ಷಸ, ಹೀಗೆ ವಾಲ್ಮೀಕಿ ರಾಮಾಯಣದಲ್ಲಿ ಕಟ್ಟಿಕೊಟ್ಟಿರುವುದು ಆದರ್ಶದ ಮಾದರಿ ಪಾತ್ರಗಳನ್ನು

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ವಾಲ್ಮೀಕಿ ಜಯಂತಿ ಯನ್ನು ಡಾ.ಹೆಚ್.ಎಲ್.ಮಲ್ಲೇಶಗೌಡ ಉದ್ಘಾಟಿಸಿದರು.

ವ್ಯಾಸ, ಮಹಾ ಭಾರತದಲ್ಲಿ ಕಟ್ಟಿಕೊಟ್ಟಿರುವುದು ವಾಸ್ತವದ ಪಾತ್ರಗಳನ್ನು. ವಾಲ್ಮೀಕಿ ರಕ್ಕಸರೊಳಗೆ ಮಾನವರನ್ನು ಹುಡುಕಿದರೆ, ವ್ಯಾಸ ಮಾನವರೊಳಗೆ ರಕ್ಕಸರನ್ನು ಹುಡುಕುವ ಪ್ರಯತ್ನ ಕಾವ್ಯದಲ್ಲಿ ಮಾಡಿದ್ದಾರೆ ಎಂದರು. ವಾಲ್ಮೀಕಿಯ ಬದುಕಿನಲ್ಲಾದ ಪರಿವರ್ತನೆ ಇಂದಿಗೂ ಸಾಧ್ಯ ಎಂದು ನಿರೂಪಿಸಿದ ಮಾದರಿ ನಟ ಪುನೀತ್ ರಾಜ್‌ಕುಮಾರ್ ಅವರದ್ದು ಎಂದು ಹೇಳಿದರು. ರಾಮಾಯಣ ಮತ್ತು ಮಹಾಭಾರತಕ್ಕೆ ಮಹಾಕವಿಗಳನ್ನು ಹುಟ್ಟು ಹಾಕುವ ಸಾಮರ್ಥ್ಯವಿದೆ. ಇದಕ್ಕೆ ರಾಮಾಯಣ ದರ್ಶನಂ ಬರೆದ ಕುವೆಂಪು ಅವರೇ ನಿದರ್ಶನ ಎಂದರು.

ಪ್ರಾಂಶುಪಾಲ ಡಾ.ಎ.ಜೆ.ಕೃಷ್ಣಯ್ಯ, ನಿರ್ದೇಶಕ ಡಾ.ಎಸ್.ಪ್ರದೀಪ್ ಇದ್ದರು.

ವಾಲ್ಮೀಕಿ ಆದರ್ಶ ಸಮಾಜಕ್ಕೆ ಮಾರ್ಗದರ್ಶಿ

ಕೋಲಾರ: ಮಹರ್ಷಿ ವಾಲ್ಮೀಕಿ ಯಾವುದೇ ಒಂದು ವರ್ಗಕ್ಕೆ ಸೀಮಿತವಾಗಿಲ್ಲ ಬದಲಿಗೆ ಎಲ್ಲಾ ಸಮುದಾಯಗಳು ಪೂಜಿಸಲ್ಪಡುವ ಮಹಾನ್ ಚೇತನ. ಅವರ 'ರಾಮಾಯಣ' ಕಾವ್ಯ ಇಡೀ ದೇಶಕ್ಕೆ ದೊಡ್ಡ ಕೊಡುಗೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಹೇಳಿದರು.

ನಗರದ ಮಹರ್ಷಿ ವಾಲ್ಮೀಕಿ ಸಮುದಾಯ ಭವನದಲ್ಲಿ ಜಿಲ್ಲಾಡಳಿತದಿಂದ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಾಲ್ಮೀಕಿ ಬರೆದ ರಾಮಾಯಣ ಮತ್ತು ಅಂಬೇಡ್ಕರ್ ಅವರ ಸಂವಿಧಾನ ಅಣ್ಣತಮ್ಮಂದಿರ ರೀತಿ ಒಗ್ಗಟ್ಟಿನಿಂದ ಬದುಕುವಂತೆ ಮಾಡಿವೆ ಎಂದರು. ದೇಶವನ್ನು ಒಡೆದು ಆಳುವ ಸರಕಾರದ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಜಾತಿ ಜಾತಿಗಳ ಮಧ್ಯೆ ಜಗಳ ತಂದು ರಾಜಕಾರಣ ಮಾಡುವವರನ್ನು ದೂರವಿಡಬೇಕು. ಬಡವರ ಪರವಾದ ನಮ್ಮ ಸರಕಾರ ಎಸ್ಸಿ ಎಸ್ಟಿ ಸಮುದಾಯದ ಅಭಿವೃದ್ಧಿಗೆ 36 ಸಾವಿರ ಕೋಟಿ

ಕೋಲಾರ ಜಿಲ್ಲಾಡಳಿತದ ವಾಲ್ಮೀಕಿ ಜಯಂತಿಯನ್ನು ಉಸ್ತುವಾರಿ ಸಚಿವ ಬ್ಯೆರತಿ ಸುರೇಶ್ ಉದ್ಘಾಟಿಸಿದರು.

ಅನುದಾನ ಮೀಸಲಿಟ್ಟಿದೆ. ವಿರೋಧ ಪಕ್ಷಗಳು ಆಡಳಿತ ಪಕ್ಷದ ವೈಖರಿಯನ್ನು ಸಹಿಸಿಕೊಳ್ಳದೇ ವಿನಾಕಾರಣ ಆರೋಪಗಳನ್ನು ಮಾಡಲು ಹೊರಟಿದ್ದು ಇದಕ್ಕೆ ಕಿವಿ ಕೊಡಬಾರದು ಬಲಹೀನ ಸಮುದಾಯಗಳ ಅಭಿವೃದ್ಧಿಗೆ ಕಾಂಗ್ರೆಸ್ ಸರಕಾರ ಬದ್ಧವಾಗಿದೆ ಎಂದು ನುಡಿದರು. ಸಿಎಂ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಶಾಸಕ ಕೊತ್ತೂರು ಜಿ. ಮಂಜುನಾಥ್ ಮಾತನಾಡಿದರು. ಜಿಲ್ಲಾಧಿಕಾರಿ ಅಕ್ರಂ ಪಾಷ, ಎಸ್ಪಿ ಬಿ.ನಿಖಿಲ್, ನಗರಸಭೆ ಅಧ್ಯಕ್ಷೆ ಲಕ್ಷ್ಮೀದೇವಮ್ಮ, ಉಪಾಧ್ಯಕ್ಷೆ ಸಂಗೀತ, ಜಂಟಿ ನಿರ್ದೇಶಕ ಶ್ರೀನಿವಾಸನ್, ವಾಲ್ಮೀಕಿ ಸಮಾಜದ ಮುಖಂಡರಾದ ಎನ್.ಅಂಬರೀಷ್, ಡಿಪಿಎಸ್ ಡಾ.ಮುನಿರಾಜು ಇದ್ದರು.

ಹಿಂದೂ ಸಂಸ್ಕೃತಿ ಕೃತಿ

ಕುಣಿಗಲ್: ವಾಲ್ಮೀಕಿ ಹಿಂದೂ ಸಂಸ್ಕೃತಿಗೆ ರಾಮಾಯಣ ಕೃತಿಯನ್ನು ನೀಡಿದ ಮಹಾ ಜ್ಞಾನಿಯಾಗಿದ್ದಾರೆ. ಇವರ ತತ್ವ ಆದರ್ಶ

ನೀತಿಗಳನ್ನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದು ಶಾಸಕ ಡಾಕ್ಟರ್ ಎಚ್ ಡಿ ರಂಗನಾಥ್ ಕರೆ ನೀಡಿದರು. ತಾಲೂಕು ಆಡಳಿತ ಆಯೋಜಿಸಿದ ವಾಲ್ಮೀಕಿ ಜಯಂತಿ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಮಾಯಣ ಹಾಗೂ ಮಹಾಭಾರತ ಜನರ ಜೀವನದ ನಡೆಯಲ್ಲಿ ಅನುಕರುಣೀಯ. ಎಸ್ಸಿ ಸಮುದಾಯ ಸರಕಾರ ನೀಡುವ ಎಲ್ಲಾ ಸೌಲಭ್ಯ ಪಡೆಯುವ ಮೂಲಕ ಮಕ್ಕಳನ್ನು ಶಕ್ತಿವಂತರನ್ನಾಗಿ ಮಾಡಬೇಕು ಎಂದು ತಿಳಿಸಿದರು. ತಹಸಿಲ್ದಾರ್ ರಶ್ಮಿ ಮಾತನಾಡಿ, ರಾಮಾಯಣ ಜನಸಾಮಾನ್ಯರಿಗೆ ತಲುಪುವಂತಹ ಕೃತಿ ಆಗಿದ್ದು, ರಾಮ ಸೀತೆ ಆಂಜನೇಯ ಇರುವ ರಾಮಾಯಣಗಳ ಕಥೆ ಹಳ್ಳಿಯ ಜನಕ್ಕೆ ಈಗಲೂ ಒಳ್ಳೆಯ ಆದರ್ಶ ಕತೆ ಎಂದು ಸ್ಮರಿಸಿದರು. ಚಿಂತಕ ಹೋರಾಟಗಾರ ಜಿಕೆ ನಾಗಣ್ಣ ಮಾತನಾಡಿದರು. ಎಡಿ ಶಿವಣ್ಣ, ತಿಮ್ಮರಾಜು ಇದ್ದರು.

IN THE COURT OF THE CIVIL JUDGE & JMFC AT KORATAGERE
C.MIS.No. 332/2024

Petitioners:- 1. K.G.Mariyappa S/o Late Gangappa A/a 48 years 2. Siddagangappa S/o Late Gangappa, A/a 67 years 3. Narayanappa S/o Late Gangappa, A/a 57 years, 4.Rajanna S/o Late Gangappa,a/a 67 years All are r/o Karechikkanahalli, B.D.Pura Post, Holavanahalli Hobli, Koratagere taluk.

V/S

Respondent:- The Tahasildar The Registrar of Birth and Death, Koratagere.

PUBLIC NOTIFICATION

Whereas the petitioners have filed the above petition to obtain the death certificate of the 1st to 4th petitioner's Grand-father by name Doddanarasimhaiah S/o Late Narasappa died on 10-06-1969 and father by name Gangappa S/o Doddanarasimhaiah died on 10-08-1979 at Koratagere taluk, Holavanahalli Hobli, Karechikkanahalli. It is hereby notify that whoever has interest or objection to obtain the death certificate of the 1st to 4th petitioner Grand-father and father may appear in person or through your advocate on:-23/11/2024 in the above case. Failing which the matter will be heard written mined in your absence.

By order of the Court
Shirastedar,
Civil Judge and J.M.F.C Court
at Koratagere.
Advocate for petitioner,
M.C.Mallikarjunaiah, Koratagere.

IN THE COURT OF THE CIVIL JUDGE AND J.M.F.C AT KORATAGERE
C.Mis No.333/2024

PETITIONER : Rangadhamaiah.R. S/o Late Rangaiah @ Rangappa Aged about 50 years, R/o Budamaranahalli Village, Holavanahalli Hobli, Koratagere Taluk, Tumakuru Dist, Now R/at No.39, 1st Main, 1st Cross, Lakshmana Nagara, Hegganahalli Cross, Bangalore-91.

V/S

RESPONDENTS: 1. The Deputy Tahsildar, Registrar of Birth and Death, Nadakacheri, Holavanahalli Hobli, Koratagere Taluk. 2. Basavarajua. R. S/o Late Rangaiah @ Rangappa Aged bout 48 years, R/o Budamaranahalli Village, Holavanahalli Hobli, Koratagere Taluk, Tumakuru Dist. No.2 R/at Durgamma Temple Road, Gowdanapalya, Bangalore-61. 3. Anjinamma W/o Late Rangaiah @ Rangappa Aged about 75 years, R/o Budamaranahalli Village, Holavanahalli Hobli, Koratagere Taluk, Tumkur Dist. 4. Ramesha. B.R. S/o Late Rangaiah @ Rangappa Aged about 50 years, R/o Budamaranahalli Village, Holavanahalli Hobli, Koratagere Taluk, Tumkur Dist.Now R/at No. 42/A. 1st Cross, D-Group Layout, Lingadeeranahalli, Andrahalli Main Road, Bangalore North.

PUBLIC NOTICE

Where as the petitioner has filed the above petition Under Section 13(3) of Registration of Birth & Death Act to obtain the Death Certificate of the mother of the petitioner and 2nd respondent, 2nd respondent sister and 4th respondent Anty by name "Ramakka W/o Rangaiah @ Rangappa" was died on 10-01-1982 at Budamaranahalli Village, Holavanahalli Hobli, Koratagere Taluk, Tumkur Dist. If anybody has any objection or right with respect to the above said fact and petition may filed objection in the above said case by personally or by counsel. The case is posted on 23/11/2024 at 11-00 a.m. Otherwise the said matter will be disposed accordance with law. Given under my hand and the seal of the court on this 7 day of 10 2024 at Tumkur.

By order of the Court
Shirastedar,
Civil Judge and J.M.F.C Court
at Koratagere.
Advocate for petitioner,
H. Nagendrappa , Koratagere.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಮಧುಗಿರಿ.
ಸಿ ಮಿಸ್ ಸಂಖ್ಯೆ-381/2024

ಅರ್ಜಿದಾರರು- 1. ಪುಟ್ಟಲಿಂಗಮ್ಮ ಬಿನ್ ಲೇಟ್ ನರಸಪ್ಪ-58 ವರ್ಷ, 2. ವೀರೇಶ್ ಎಸ್ ಬಿನ್ ಲೇಟ್ ನರಸಿಂಹಯ್ಯ-39 ವರ್ಷ, 3. ರೂಪ ಬಿನ್ ಲೇಟ್ ನರಸಿಂಹಯ್ಯ-31 ವರ್ಷ, 4. ಕಾವ್ಯ ಬಿನ್ ಲೇಟ್ ನರಸಿಂಹಯ್ಯ-26 ವರ್ಷ, 5. ಚಂದ್ರಕಲಾ ಬಿನ್ ಲೇಟ್ ನರಸಿಂಹಯ್ಯ-24 ವರ್ಷ, 6. ಸುಚಿತ್ರ ಬಿನ್ ವೀರೇಶ್ 15 ವರ್ಷ, 7. ನರಸಿಂಹಮೂರ್ತಿ ಬಿನ್ ವೀರೇಶ್-13 ವರ್ಷ, 8. ಪ್ರಭಾಸ್ ಬಿನ್ ವೀರೇಶ್ 11 ವರ್ಷ, 6,7 ಮತ್ತು 8ನೇ ಅರ್ಜಿದಾರರು ಮೈನರ್ ಆಗಿದ್ದು ಅವರನ್ನು ಅವರ ನೈಸರ್ಗಿಕ ಪೋಷಕರಾದ ತಂದೆ ಅಂದರೆ ಎರಡನೆಯ ಅರ್ಜಿದಾರರು ಪ್ರತಿನಿಧಿಸುತ್ತಾರೆ. ಎಲ್ಲರ ವಾಸ- ದೊಡ್ಡೇರಿ ಗ್ರಾಮ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲೂಕು.

ವಿರುದ್ಧ

ಎದುರುದಾರರು: ಉಪ - ತಹಶೀಲ್ದಾರ್, ನಾಡಕಚೇರಿ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲೂಕು.

ಪ್ರಕಟಣೆ

ಮೇಲ್ಕಂಡ 1ನೇ ಅರ್ಜಿದಾರರ ತಾಯಿ, 2ರಿಂದ 5ನೇ ಅರ್ಜಿದಾರರ ಅಜ್ಜಿ, 6 ರಿಂದ 8ನೇ ಅರ್ಜಿದಾರರ ಮುತ್ತಜ್ಜಿಯಾದ ಮುದ್ದಿರಮ್ಮ ಕೋಂ.ಲೇಟ್ ನರಸಪ್ಪರವರು ದಿನಾಂಕ:15-05-1996 ರಂದು ಮಧುಗಿರಿ ತಾಲ್ಲೂಕು, ದೊಡ್ಡೇರಿ ಹೋಬಳಿ, ದೊಡ್ಡೇರಿ ಗ್ರಾಮದ ತಮ್ಮ ವಾಸದ ಮನೆಯಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿರವರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ:-23/11/2024 ರಂದು ಬೆಳಗ್ಗೆ 11-00 ಗಂಟೆಗೆ ಖುದ್ದು ತಾವಾಗಲಿ ಅಥವಾ ತಮ್ಮ ವಕೀಲರ ಮೂಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ, 2024ನೇ ವರ್ಷದ ಅಕ್ಟೋಬರ್ ತಿಂಗಳ 15ನೇ ದಿನ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಮಧುಗಿರಿ.
ಅರ್ಜಿದಾರರ ಪರ ವಕೀಲರು,
ಡಿ. ಶಿವಶಂಕರ, ವಕೀಲರು, ಮಧುಗಿರಿ.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಧುಗಿರಿ.
ಸಿ ಮಿಸ್ ಸಂಖ್ಯೆ-380/2024

ಅರ್ಜಿದಾರರು- 1. ಪುಟ್ಟಲಿಂಗಮ್ಮ ಬಿನ್ ಲೇಟ್ ನರಸಪ್ಪ-58 ವರ್ಷ,2. ವೀರೇಶ್ ಎಸ್ ಬಿನ್ ಲೇಟ್ ನರಸಿಂಹಯ್ಯ-39 ವರ್ಷ, 3. ರೂಪ ಬಿನ್ ಲೇಟ್ ನರಸಿಂಹಯ್ಯ-31 ವರ್ಷ, 4. ಕಾವ್ಯ ಬಿನ್ ಲೇಟ್ ನರಸಿಂಹಯ್ಯ-26 ವರ್ಷ, 5. ಚಂದ್ರಕಲಾ ಬಿನ್ ಲೇಟ್ ನರಸಿಂಹಯ್ಯ-24 ವರ್ಷ, 6. ಸುಚಿತ್ರ ಬಿನ್ ವೀರೇಶ್ 15 ವರ್ಷ, 7. ನರಸಿಂಹಮೂರ್ತಿ ಬಿನ್ ವೀರೇಶ್-13 ವರ್ಷ, 8. ಪ್ರಭಾಸ್ ಬಿನ್ ವೀರೇಶ್ 11 ವರ್ಷ, 6,7 ಮತ್ತು 8ನೇ ಅರ್ಜಿದಾರರು ಮೈನರ್ ಆಗಿದ್ದು ಅವರನ್ನು ಅವರ ನೈಸರ್ಗಿಕ ಪೋಷಕರಾದ ತಂದೆ ಅಂದರೆ ಎರಡನೆಯ ಅರ್ಜಿದಾರರು ಪ್ರತಿನಿಧಿಸುತ್ತಾರೆ. ಎಲ್ಲರ ವಾಸ- ದೊಡ್ಡೇರಿ ಗ್ರಾಮ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲೂಕು.

ವಿರುದ್ಧ

ಎದುರುದಾರರು: ಉಪ - ತಹಶೀಲ್ದಾರ್, ನಾಡಕಚೇರಿ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲೂಕು.

ಪ್ರಕಟಣೆ

ಮೇಲ್ಕಂಡ 1ನೇ ಅರ್ಜಿದಾರರ ತಂದೆ, 2ರಿಂದ 5ನೇ ಅರ್ಜಿದಾರರ ತಾತ, 6 ರಿಂದ 8ನೇ ಅರ್ಜಿದಾರರ ಮುತ್ತಾತನಾದ ನರಸಪ್ಪ ಬಿನ್ ಲೇಟ್ ಪುಲ್ಲಕ್ಕಿ ಕದುರಪ್ಪ ರವರು ದಿನಾಂಕ:30-12-1992 ರಂದು ಮಧುಗಿರಿ ತಾಲ್ಲೂಕು, ದೊಡ್ಡೇರಿ ಹೋಬಳಿ, ದೊಡ್ಡೇರಿ ಗ್ರಾಮದ ತಮ್ಮ ವಾಸದ ಮನೆಯಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿರವರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ:-23/11/2024 ರಂದು ಬೆಳಗ್ಗೆ 11-00 ಗಂಟೆಗೆ ಖುದ್ದು ತಾವಾಗಲಿ ಅಥವಾ ತಮ್ಮ ವಕೀಲರ ಮೂಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ, 2024ನೇ ವರ್ಷದ ಅಕ್ಟೋಬರ್ ತಿಂಗಳ 15ನೇ ದಿನ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಮಧುಗಿರಿ.
ಅರ್ಜಿದಾರರ ಪರ ವಕೀಲರು,
ಡಿ.ಶಿವಶಂಕರ, ವಕೀಲರು, ಮಧುಗಿರಿ.

IN THE COURT OF THE CIVIL JUDGE & JMFC AT KORATAGERE
C.MIS.No.338/2024

Petitioners:- 1. Manjunatha S/o Late Ranganna A/a 31 years 2. Honnappa S/o Late Ranganna A/a 28 years 3.Rajanna S/o Late Ranganna A/a 26 years, 4.Joganna S/o Late Ranganna,a/a 60 years, 5.Kambakka S/o Late Dasappa,a/a 58 years, 6.Honnappa S/o Late Rangaiah, A/a 75 years, All are R/o Bukkapatana majare Gollarahatti, C.N.Durga Hobli, Koratagere taluk.

V/S

Respondent:- The Deputy-Tahsildar The Registrar of Birth and Death,Thovinakere, C.N.Durga Hobli, Koratagere taluk.

PUBLIC NOTIFICATION

Whereas the petitioners have filed the above petition to obtain the death certificate of the 1st petitioner's Grand-father by name Rangaiah S/o Dasanna died on 01-05-1980 and Grand-mother by name Kariyamma W/o Rangaiah died on 01-04-1984 at Koratagere taluk, C.N.Durga Hobli, Bukkapatana majare Gollarahatti It is hereby notify that whoever has interest or objection to obtain the death certificate of the 1st petitioner Grand-father and Grand-mother may appear in person or through your advocate on:- 3011-2024 in the above case. Failing which the matter will be heard written mined in your absence.

By order of the Court
Shirastedar,
Civil Judge and J.M.F.C Court
at Koratagere.
Advocate for petitioner,
M.C.Mallikarjunaiah, Koratagere.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಧುಗಿರಿ.
ಸಿಮಿಸ್ ನಂ.384/2024

ಅರ್ಜಿದಾರರು- 1. ತಿಮ್ಮರಾಜು ಬಿನ್ ಲೇಟ್ ರಂಗಶಾಮಯ್ಯ-56 ವರ್ಷ, 2. ಭೂಲಕ್ಷ್ಮಿ ಕೋಂ. ತಿಮ್ಮರಾಜು-45 ವರ್ಷ, 3. ಮಧುಶ್ರೀ ಬಿನ್ ತಿಮ್ಮರಾಜು-11 ವರ್ಷ, ಮೈನರ್ ಗಾರ್ಡಿಯನ್ನಾಗಿ ತಂದೆ ತಿಮ್ಮರಾಜು ಅಂದರೆ 1ನೇ ಅರ್ಜಿದಾರರು ಪ್ರತಿನಿಧಿಸುವರು. 4. ಶಾರದಮ್ಮ ಬಿನ್ ಲೇಟ್ ರಂಗಶಾಮಯ್ಯ- 45 ವರ್ಷ, ವಾಸ- ಮುಳಬಾಗಿಲು ಗ್ರಾಮ, ಪುರವರ ಹೋಬಳಿ, ಮಧುಗಿರಿ ತಾಲೂಕು, 5. ಅಕ್ಕಮ್ಮ ಕೋಂ ಕ್ಯಾಷ್ಯಾಕಪ್ಪ-75 ವರ್ಷ, 6. ಸಣ್ಣತಿಮ್ಮಯ್ಯ ಬಿನ್ ಲೇಟ್ ಚಿಕ್ಕಗೋವಿಂದಪ್ಪ-80 ವರ್ಷ, ಅರ್ಜಿದಾರರಾದ 1 ರಿಂದ 3, 5 ಹಾಗೂ 6 ರವರ ವಾಸ ಬ್ರಹ್ಮದೇವರಹಳ್ಳಿ ಗ್ರಾಮ, ಮಿಡಿಗೇಶಿ ಹೋಬಳಿ, ಮಧುಗಿರಿ ತಾಲ್ಲೂಕು.

ವಿರುದ್ಧ

ಎದುರುದಾರರು: ಡೆಪ್ಯೂಟಿ ತಹಶೀಲ್ದಾರ್, ನಾಡಕಛೇರಿ, ಮಿಡಿಗೇಶಿ, ಮಿಡಿಗೇಶಿ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ಕೇಸಿನಲ್ಲಿ 1 ಮತ್ತು 4ನೇ ಅರ್ಜಿದಾರರ ತಂದೆಯಾದ, 3ನೇ ಅರ್ಜಿದಾರರ ತಾತನಾದ, 2ನೇ ಅರ್ಜಿದಾರರ ಮಾವನಾದ, 5ನೇ ಅರ್ಜಿದಾರರ ಮೈದನಾದ, ಹಾಗೂ 6ನೇ ಅರ್ಜಿದಾರರ ತಮ್ಮನಾದ ರಂಗಶಾಮಯ್ಯ ಬಿನ್ ಗೋವಿಂದಪ್ಪರವರು ದಿನಾಂಕ-15/03/2011 ರಂದು ಮಧುಗಿರಿ ತಾಲೂಕು, ಮಿಡಿಗೇಶಿ ಹೋಬಳಿ, ಬ್ರಹ್ಮದೇವರಹಳ್ಳಿ ಗ್ರಾಮದಲ್ಲಿ ಮರಣ ಹೊಂದಿದ್ದು ಅವರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಅರ್ಜಿದಾರರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಯಾರಾದರೂ ವಾರಸುದಾರರು ಇದ್ದಲ್ಲಿ ತಾವುಗಳು ದಿನಾಂಕ-23/11/2024 ರಂದು ಬೆಳಿಗ್ಗೆ 11 ಘಂಟೆಗೆ ಹಾಜರಾಗಿ ತಕರಾರು ಏನಾದರೂ ಇದ್ದರೆ ಸಲ್ಲಿಸಬಹುದು. ಆದರೆ ತಾವು ಗೈರು ಹಾಜರಾದರೆ ನಿಮ್ಮ ವಿರುದ್ಧ ಏಕಪಕ್ಷೀಯ ಗೈರು ಹಾಜರು ಎಂದು ತೆಗೆದುಕೊಳ್ಳಲಾಗುವುದು. ಮೊಹರಿನೊಂದಿಗೆ ಮೇರೆಗೆ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಮಧುಗಿರಿ.
ಅರ್ಜಿದಾರರ ಪರ ವಕೀಲರು,
ಹನುಮಂತರಾಯ (ಕೆ.ಎಸ್ .ಹೆಚ್)
ಮಧುಗಿರಿ.

ಸಮಾಚಾರ ಸಣ್ಣದಲ್ಲ

ಪ್ರಾಣ ಪಣಕ್ಕಿಟ್ಟು ಗಡಿ ಕಾಯುವ ಸೈನಿಕರು

ಪಿರಿಯಾಪಟ್ಟಣ: ದೇಶದ ಗಡಿಯಲ್ಲಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ರಾಷ್ಟ ಸೇವೆ ಮಾಡುತ್ತಿರುವ ಸೈನಿಕರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವೆಂದು ಶಿವು ಸೈನಿಕ್ ಅಕಾಡೆಮಿಯ ಅಧ್ಯಕ್ಷ ಶಿವು ತಿಳಿಸಿದರು ಪಟ್ಟಣದ ಹರವೆ ಮಲ್ಲರಾಜಪಟ್ಟಣದ ಶಿವು ಸೈನಿಕ ಅಕಾಡೆಮಿಯಲ್ಲಿ ನಡೆದ ನಿವೃತ್ತ ಸೈನಿಕರಿಗೆ ಸನ್ಮಾನ ಹಾಗೂ ಸಂಸ್ಥೆಯಲ್ಲಿ ತರಬೇತಿ ಪಡೆದು ಪೊಲೀಸರಾಗಿ, ಸೈನಿಕರಾಗಿ ಆಯ್ಕೆಯಾದವರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ಸೈನಿಕರು ಕೇವಲ ಗಡಿ ಕಾಯುವುದಿಲ್ಲ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿಯೂ ನಿಸ್ವಾರ್ಥ ಸೇವೆ ಸಲ್ಲಿಸುತ್ತಾರೆ. ಅವರಿಗೆ ಸಮಾಜದ ಪ್ರತಿಯೊಬ್ಬ ನಾಗರಿಕರು ಸದಾ ಋಣಿಯಾಗಿರಬೇಕು. ರೈತ ಇಡೀ ದೇಶಕ್ಕೆ ಅನ್ನ ನೀಡಿದರೆ ಸೈನಿಕ ದೇಶದ ಗಡಿಯಲ್ಲಿ ಶತ್ರುಗಳನ್ನು ಕಾಯುವ ಮೂಲಕ ಈ ದೇಶ ರಕ್ಷಣೆ ನೋಡಿಕೊಳ್ಳುತ್ತಾನೆ ಎಂದರು. ನಮ್ಮ ಅಕಾಡೆಮಿ ವತಿಯಿಂದ ದೇಶ ಸೇವೆ ಬಯಸುವ ವಿದ್ಯಾರ್ಥಿಗಳಿಗೆ ಉಚಿತವಾಗಿ ತರಬೇತಿ ನೀಡುತ್ತಿದ್ದೇವೆ. ಯುವಕರು ನಮ್ಮ ಅಕಾಡೆಮಿಯಲ್ಲಿ ತರಬೇತಿ ಪಡೆದು ಮಿಲಿಟರಿ , ಪೊಲೀಸ್ ಸೇವೆಗೆ ಸೇರುತ್ತಿದಾರೆ.ಇದು ನಮ್ಮ ಸಂಸ್ಥೆಗೆ ಹೆಮ್ಮೆ ಎಂದರು. ಶಿವು ಸೈನಿಕ್ ಅಕಾಡಮಿಯ ಸದಸ್ಯರಾದ ಹೇಮಂತ್, ಮಹದೇವ, ಹೇಮಂತ್ ಕುಮಾರ್, ನಿವೃತ್ತ ಸೈನಿಕರಾದ ಮಂಜುನಾಥ ಸಿಂಗ್, ನಾಗರಾಜು, ವಿದ್ಯಾರ್ಥಿಗಳು ಹಾಜರಿದ್ದರು.

ಕನ್ನಡ ಹಬ್ಬದ ಸಂಭ್ರವ ಅರ್ಜಿ ಆಹ್ವಾನ

ಮಂಡ್ಯ : ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂಸ್, ಇವರ ಸಂಯುಕ್ತಾಶ್ರಯದಲ್ಲಿ ಕನ್ನಡಹಬ್ಬ ಸಂಭ್ರಮ ನವೆಂಬರ್ 17 ರಂದು ಮಂಡ್ಯ ನಗರ ಗಾಂಧಿಭವನದಲ್ಲಿ 9ನೇ ಕನ್ನಡ ಅಕ್ಷರ ಜಾತ್ರೆ ಆಯೋಜಿಸಿದ್ದು, ಆಸಕ್ತರಿಂದ ಕವಿಗೋಷ್ಠಿಗೆ ಕವನ ಹಾಗೂ ಸಾಧಕರಿಂದ ವಿವಿಧ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು 20 ಸಾಲಿನ ಎರಡು ಕವನಗಳು, ಕಿರು ಪರಿಚಯ, ಪೋಟೋ, ಮೊಬೈಲ್‌ಸಂಖ್ಯೆ ಹಾಗೂ ವಿಳಾಸವನ್ನು ಅ.25ರೊಳಗೆ ವ್ಯಾಟ್ಸಪ್ ಮೂಲಕ ಕಳುಹಿಸಬಹುದು. ಆಯ್ಕೆಯಾದ ಕವಿತೆಗಳ ಪುಸ್ತಕ ಹೊರತರಲಾಗುವುದು. ಐವತ್ತು ಕವಿಗಳಗೆ ಕವಿಗೋಷ್ಠಿಯಲ್ಲಿ ಅವಕಾಶ. ಇಪ್ಪತ್ತು ಉತ್ತಮ ಕವನಗಳಿಗೆ 'ಕಾವ್ಯಶ್ರೀ, ಇಪ್ಪತ್ತು ಮಂದಿ ಸಾಧಕರಿಗೆ 'ಕನ್ನಡರತ್ನ, ಐದು ಮಂದಿಗೆ ಕರ್ನಾಟಕ ಸೇವಾರತ್ನ ರಾಜ್ಯ ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಎಸ್. ಕೃಷ್ಣಸ್ವರ್ಣಸಂದ್ರ ಮೊ.9448424380ಗೆ ಕಳಹಿಸುವುದು.

ನ್ಯಾ.ಸದಾಶಿವ ವರದಿ ಜಾರಿಗಾಗಿ ಒತ್ತಾಯ

ಮಂಡ್ಯ: ಎ.ಜೆ.ಸದಾಶಿವ ಆಯೋಗದ ವರದಿ ಹಾಗೂ ಜಾತಿ ಜನಗಣತಿ, ಹೆಚ್.ಕಾಂತರಾಜ್ ಆಯೋಗದ ವರದಿಗಳನ್ನು ಜಾರಿ ಮಾಡುವಂತೆ ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ರಾಜ್ಯ ಉಪಾಧ್ಯಕ್ಷ ವೆಂಕಟಗಿರಿಯಯ್ಯ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ಜಾರಿ ಮಾಡುವಂತೆ ಸುಪ್ರೀಂ ನ್ಯಾಯಾಲಯ ಆದೇಶ ನೀಡಿದ್ದರೂ ರಾಜ್ಯ ಸರಕಾರ ಜಾರಿಗೆ ಮುಂದಾಗದೇ ಇರುವುದು ಸರಿಯಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹೆಚ್.ಕಾಂತರಾಜು ಆಯೋಗ ರಚಿಸಿ ಜಾತಿ ಗಣತಿ ನಡೆಸಿದ್ದು ಈ ವರದಿಗಳ ಬಗ್ಗೆ ಸಚಿವ ಸಂಪುಟ ಹಾಗೂ ವಿಧಾನಸಭೆಯಲ್ಲಿ ಚರ್ಚಿಸಿ ಜವಾಬ್ದಾರಿ ಮೆರೆಯುವಂತೆ ಆಗ್ರಹಿಸಿದರು. ಡಿ.6ರಂದು ಅಂಬೇಡ್ಕರ್ 62ನೇ ಪರಿನಿಬ್ಬಾಣದ ಒಳಗಾಗಿ ಸುಪ್ರೀಂ ಕೋರ್ಟ್ ಆದೇಶದಂತೆ ಒಳ ಮೀಸಲು ಜಾರಿ ಮಾಡದಿದ್ದರೆ ರಾಜ್ಯಾದ್ಯಂತ ಜನಾಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಕೆರಗೋಡು, ಉಪಾಧ್ಯಕ್ಷ ಬಿ.ಆನಂದ್, ಪುಟ್ಟಸ್ವಾಮಿ, ಮುತ್ತುರಾಜ್ ಇದ್ದರು.

ಜಾತಿಗಣತಿ ವರದಿ ಕೈಬಿಡಲು ಒತ್ತಾಯ

ಮದ್ದೂರು: ಅವೈಜ್ಞಾನಿಕವಾಗಿರುವ ಜಾತಿ ಗಣತಿ ಜಾರಿಗೆ ಮುಂದಾಗಿರುವ ರಾಜ್ಯ ಸರಕಾರದ ಕ್ರಮ ಖಂಡಿಸಿ ನಾಡಪ್ರಭು ಕೆಂಪೇಗೌಡ ಒಕ್ಕಲಿಗರ ಸಂಘದ ತಾಲೂಕು ಸಂಘಟನೆ ವತಿಯಿಂದ ಹೆದ್ದಾರಿ ತಡೆ ನಡೆಸಿ ಪ್ರತಿಭಟನೆ ನಡೆಸಿದರು. ಜಾತಿಗಣತಿಯ ಜಾರಿ ಕೈಬಿಡು ವಂತೆ ಒತ್ತಾಯಿಸಿದರು. ಸಂಘಟನೆಯ ಗೌರವಾಧ್ಯಕ್ಷ ಡಾ.ಬಿ.ಕೃಷ್ಣ, ತಾ.ಅಧ್ಯಕ್ಷ ಬಿ.ಪಿ.ಶಿವಪ್ಪ, ಉಪಾಧ್ಯಕ್ಷ ಸಿ.ಎಸ್. ಶಂಕರಯ್ಯ, ಜಿ.ಸಿ.ಮಹೇಶ್, ಚಂದ್ರಶೇಖರ್, ವಿ.ಟಿ.ರವಿಕುಮಾರ್, ಅಂಬರೀಶ್, ಸಿ.ಎಚ್.ರವಿ, ಸುನೀಲ್‌ಕುಮಾರ್, ಸಿದ್ದರಾಮು ಮತ್ತಿತರರಿದ್ದರು.

{ ಬೈರತಿ ಸುರೇಶ್ } ನಗರಾಭಿವೃದ್ಧಿ ಸಚಿವ

ದೇಶವನ್ನು ಒಡೆದು ಆಳುವ ಸರಕಾರದ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಜಾತಿ ಜಾತಿಗಳ ಮಧ್ಯೆ ಜಗಳ ತಂದು ರಾಜಕಾರಣ ಮಾಡುವವರನ್ನು ದೂರವಿಡಬೇಕು. ಬಡವರ ಪರವಾದ ನಮ್ಮ ಕಾಂಗ್ರೆಸ್ ಸರಕಾರ ಎಸ್ಸಿ ಎಸ್ಟಿ ಸಮುದಾಯದ ಅಭಿವೃದ್ಧಿಗೆ 36 ಸಾವಿರ ಕೋಟಿ ಅನುದಾನ ಮೀಸಲಿಟ್ಟಿದೆ.

ರಾಮಾಯಣ ಬದುಕಿನ ಪರಿವರ್ತನೆಗೆ ದಾರಿ

ವಾಲ್ಮೀಕಿ ಪುತ್ಥಳಿಗೆ ಸಚಿವರಿಂದ ಶಂಕುಸ್ಥಾಪನೆ

ಮೈಸೂರು: ಒಂದೂವರೆ ಕೋಟಿ ರೂ.ವೆಚ್ಚದಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಗುರುವಾರ ಸಿದ್ಧಾರ್ಥನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಶಂಕು ಸ್ಥಾಪನೆ ನೆರವೇರಿಸಿದರು.

ಬಳಿಕ ವಾತನಾಡಿದ ಸಚಿವ ಮಹದೇವಪ್ಪ, ಕಳೆದ ವರ್ಷ ವಾಲ್ಮೀಕಿ ಪ್ರತಿಮೆಯನ್ನು ತಾಲೂಕು ಕಚೇರಿ ಎದುರು ನಿರ್ಮಿಸುವಂತೆ ಒತ್ತಡ ಹೇರಿದಾಗ ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಸಾಧ್ಯವಿಲ್ಲ ಅಂತ ಹೇಳಿ ಬೇರೆ ಜಾಗ ಹುಡುಕಲು ಹೇಳಲಾಗಿತ್ತು. ಅದರಂತೆ ಜಿಲ್ಲಾಧಿಕಾರಿಗಳು ಪ್ರಸ್ತಾಪ ಮಾಡಿದ ಜಾಗವನ್ನು ಸಮುದಾಯದವರು ಒಪ್ಪಿಕೊಂಡ ಕಾರಣಕ್ಕಾಗಿ ಶಂಕುಸ್ಥಾಪನೆ ವಾಡಲಾಗಿದೆ ಎಂದು ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುತ್ಥಳಿ ನಿರ್ವಾಣಕ್ಕೆ ಅಗತ್ಯ ಇರುವ ಒಂದೂವರೆ ಕೋಟಿ ರೂ.ಬಿಡುಗಡೆ ಮಾಡಿದ್ದಾರೆ. ಮತ್ತಷ್ಟು ಅನುದಾನ ಬೇಕಾದರೆ ಕೊಡುವ ಭರವಸೆ ಕೊಟ್ಟಿದ್ದಾರೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರಿಗೆ ದಲಿತರು, ಹಿಂದುಳಿದ ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ಅಪಾರ ಕಾಳಜಿ ಇದೆ. ಪ್ರತಿ ವರ್ಷ ಜಯಂತಿ ಆಚರಣೆ ಮಾಡುವಾಗ ವಾಲ್ಮೀಕಿ ಪ್ರತಿಮೆ ವಿಚಾರ ಪ್ರಸ್ತಾಪಗೊಂಡು ಬೇಸರವಾಗುತ್ತಿದ್ದರು. ಈಗ ಅದರ ಕೊರತೆಯನ್ನು ನೀಗಿಸಿದ್ದೇವೆ ಎಂದರು. ವಾಲ್ಮೀಕಿ ಒಂದು ಸಮಾಜಕ್ಕೆ ಸೀಮಿತವಾದವರಲ್ಲ. ಇಡೀ ಮಾನವ ಕುಲಕ್ಕೆ ಆದರ್ಶಪ್ರಾಯವಾದ ಮಹಾಪುರುಷರು. ಅವರ ಚಿಂತನೆ, ಆದರ್ಶಗಳನ್ನು ಇಂದಿನ ಯುವಜನರು ಪಾಲಿಸಬೇಕು ಎಂದು ಸಲಹೆ ನೀಡಿದರು.

ತತ್ವಸಿದ್ಧಾಂತ ಮತ್ತು ಮೌಲ್ಯದ ನಡುವೆ ನಾವೆಲ್ಲರೂ ಸಾಗಬೇಕು ಎನ್ನುವುದನ್ನು ತಮ್ಮಕಾವ್ಯದಲ್ಲಿ ಅರ್ಥಪೂರ್ಣವಾಗಿ ಹೇಳಿದ್ದಾರೆ. 4 ಲಕ್ಷದ 8,200 ಪುಟಗಳ ಎಂಟು ಅಧ್ಯಾಯ ಇರುವ ರಾಮಾಯಣ ಮಹಾಗ್ರಂಥ ಜಗತ್ತಿನಲ್ಲೇ ದೊಡ್ಡ ಗ್ರಂಥ. ರಾಮಾಯಣ ಪೂಜೆ ಮಾಡುವ ವಸ್ತುವಲ್ಲ. ಅದೊಂದು ಬದುಕಿನ ವಿಕಾಸ ಮತ್ತು ಬದಲಾವಣೆಗೆ ದಾರಿಯಾಗಿದೆ ಎಂದು ತಿಳಿಸಿದರು.

ಒಂದು ವರ್ಗಕ್ಕೆ ಸೀಮಿತವಲ್ಲ

ಬುದ್ದ, ಬಸವಣ್ಣ, ವಾಲ್ಮೀಕಿ, ಅಂಬೇಡ್ಕರ್ ಒಂದು ವರ್ಗಕ್ಕೆ ಸೀಮಿತವಾಗಿ ನೋಡ ಬಾರದು. ಇವರೆಲ್ಲರೂ ಸಮಾಜ ಪರಿವರ್ತನೆಗೆ ಮಹಾ ಪುರುಷರಾಗಿದ್ದಾರೆ ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

ಮೈಸೂರು ದಸರಾ ಮಹೋತ್ಸವ ಅತ್ಯಂತ ಯಶಸ್ವಿಯಾಗಿ ನಡೆದಿದೆ. ಮೈಸೂರಿನ ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿ ಹಿಡಿಯಲಾಗಿದೆ. ಈ ಬಾರಿ ಎಲ್ಲ ಜನರೂ ಪಾಲ್ಗೊಂಡಿದ್ದಾರೆ ಎಂದು ಹೇಳಿದರು. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್ ಚಿಕ್ಕಮಾದು, ಕೆ.ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಯೋಜನಾಧಿಕಾರಿ ಮಲ್ಲೇಶ್, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಶಿವಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್ ಮತ್ತಿತರರು ಇದ್ದರು.

ಜನ ಜೀವನ ಬಿಂಬಿಸುವ ಮಹಾ ಕಾವ್ಯ: ಸಚಿವ

ಮೈಸೂರು: ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ಎಲ್ಲಾ ಕಾಲಘಟ್ಟ, ಪೀಳಿಗೆಗೆ ಅನ್ವಯವಾಗಿದ್ದು, ಅವು ಭಾರತೀಯರ ಜೀವನಚರಿತ್ರೆಯನ್ನು ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಮಹಾಕಾವ್ಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಹೇಳಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಮೈಸೂರು ನಗರ ಮತ್ತು ನಾಯಕ ಸಮಾಜದಿಂದ ಕರ್ನಾಟಕ ಕಲಾಮಂದಿರದಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಈ ಬಾರಿ ಮೈಸೂರಿನಲ್ಲಿ ವಾಲ್ಮೀಕಿ ಪ್ರತಿಮೆ ನಿರ್ಮಿಸಲು ಶಂಕುಸ್ಥಾಪನೆ ನೆರವೇರಿಸಿರುವುದು ಸಂತಸವಾಗಿದೆ. ಇಂದಿಗೂ ಸಹ ರಾಮಾಯಣ ಮಹಾಕಾವ್ಯ ಜಗತ್ತಿನಲ್ಲಿ ಮೌಲ್ಯಯುತವಾದ ಸಾಹಿತ್ಯ ಸೃಷ್ಟಿಗೆ ಪ್ರೇರಣೆಯಾಗಿದೆ ಎಂದರು. ಗ್ರೀಕ್, ರೋಮ್ ಬಿಟ್ಟರೆ ನಮ್ಮ ದೇಶದಲ್ಲಿ ಮಾತ್ರ ಮಹಾಕಾವ್ಯಗಳು ಕಾಣಿಸಿಕೊಳ್ಳಲು ಸಾಧ್ಯ. ರಾಮಾಯಣ, ಮಹಾಭಾರತ ಕಾವ್ಯಗಳು ಕಟ್ಟಿಕೊಡುವ ದೃಷ್ಟಿಕೋನಗಳೇ ಬೇರೆ. ಈ ಮಹಾಕಾವ್ಯಗಳು ಸಾರ್ವಕಾಲಿಕ ಮೌಲ್ಯಗಳನ್ನು ಪ್ರತಿನಿಧಿಸುವ ಕೃತಿಗಳಾಗಿವೆ. ರಾಮಾಯಣದ ಪಾತ್ರಗಳು, ದೃಶ್ಯಗಳು ಇವತ್ತಿಗೂ ನಮ್ಮನ್ನು ಕಾಡುತ್ತವೆ ಎಂದರು.

ಡಾ.ಅಂಬೇಡ್ಕರ್ ಹೇಳಿರುವಂತೆ ನಮ್ಮ ಸಮಸ್ಯೆಗಳ ಬೀಗದ ಕೈ ಇರುವುದು ರಾಜಕೀಯದಲ್ಲಿ ಎಂಬಂತೆ ಸಮಸ್ಯೆಗಳನ್ನು ಬಗೆಹರಿಸಲು 9 ಸಾವಿರ ಕೋಟಿಯನ್ನು ವಾಲ್ಮೀಕಿ ಸಮುದಾಯದ ಅಭಿವೃದ್ಧಿಗಾಗಿ ಮೀಸಲಿಡಲಾಗಿದೆ. ಶೋಷಿತ ಸಮಾಜವನ್ನು ಸಮಾಜದ ಮುಖ್ಯ ವಾಹಿನಿಗೆ ತರಲಾಗುತ್ತಿದೆ ಎಂದರು. ಎಸ್.ಎಸ್.ಎಲ್.ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಾಲ್ಮೀಕಿ ಸಮಾಜದ ಕು. ಲಾವಣ್ಯಗೆ ಒಂದು ಲಕ್ಷ ರು. ಪ್ರೋತ್ಸಾಹಧನದ ಚೆಕ್ ವಿತರಿಸಲಾಯಿತು.ಕಾರ್ಯಕ್ರಮದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಕೆ. ಹರೀಶ್ ಗೌಡ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಸಿಇಒ ಕೆ. ಎಂ. ಗಾಯತ್ರಿ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಅರುಣ್ ಕುಮಾರ್ ಇದ್ದರು.

ಜನರ ಸಮಸ್ಯೆ ಶೀಘ್ರ ಪರಿಹರಿಸಬೇಕು

ಸರಗೂರು: ಸರಕಾರಿ ಸೇವೆಯಲ್ಲಿರುವ ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆ ಆಲಿಸಿ, ಶೀಘ್ರದಲ್ಲೆ ಪರಿಹರಿಸಲು ಮುಂದಾಗಬೇಕು ಎಂದು ಕರ್ನಾಟಕ ಲೋಕಾಯುಕ್ತ ಮೈಸೂರಿನ ಅಶೋಕ್ ಕುಮಾರ್ ಎಚ್ಚರಿಕೆ ನೀಡಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಲೋಕಾಯುಕ್ತ ಮೈಸೂರು ವತಿಯಿಂದ ನಡೆದ ಸಾರ್ವಜನಿಕರ ಕುಂದು, ಕೊರತೆ ದೂರು ಸ್ವೀಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಾರ್ವಜನಿಕರ ಸೇವೆಗಾಗಿ ನೇಮಕಗೊಂಡ ಇಲಾಖಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ದೂರುಗಳನ್ನು ಶೀಘ್ರದಲ್ಲೇ ಪರಿಹರಿಸಲು ಕ್ರಮವಹಿಸಬೇಕು. ಕಚೇರಿಗೆ ಸಮಯಕ್ಕೆ ಸರಿಯಾಗಿ ಹಾಜರಾಗಬೇಕು. ಸಾರ್ವಜನಿಕರ ಸಮಸ್ಯೆ ಪರಿಹರಿಸಲು ಮೀನಾಮೇಷ ಎಣಿಸಿದರೆ ಸೂಕ್ತ ಕ್ರಮ ವಹಿಸಲಾಗುವುದು. ಇದಕ್ಕೆ ಆಸ್ಪದ ನೀಡದೆ ಸಾರ್ವಜನಿಕರ ಸೇವೆಗೆ ಅಣಿಯಾಗಿ ಎಂದು ಹೇಳಿದರು.

ತಾಲೂಕು ಆಡಳಿತ ಅಧಿಕಾರಿಗಳು ದೂರಿನ ಕಡೆಗೆ ಹೆಚ್ಚು ಒತ್ತು ನೀಡಿ ಸಾರ್ವಜನಿಕರಿಗೆ ಮೂಲ ಸೌಲಭ್ಯ ಒದಗಿಸಲು ಮುಂದಾಗಬೇಕು. ದೂರುಗಳ ಅರ್ಜಿ ಪರಿಶೀಲಿಸಿದ ನಂತರ ದೂರುದಾರರಿಗೆ ಅಂಚೆ ಮೂಲಕ ಕಳಿಸಲಾಗುವುದು ಮುಂದಿನ ಸಭೆಯಲ್ಲಿ ಅಧಿಕಾರಿಗಳು ತಮ್ಮ ಇಲಾಖೆಯಲ್ಲಿನ ಬಾಕಿ ಇರುವ ಅರ್ಜಿಗಳನ್ನು ತರಬೇಕು. ಅಧಿಕಾರಿಗಳು ತಪ್ಪದೇ ಅರ್ಜಿ ಸ್ವೀಕಾರ ಕಾರ್ಯಕ್ರಮಕ್ಕೆ ಹಾಜರಾಗಬೇಕು. ಅದರಲ್ಲೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಪ್ಪದೇ ಹಾಜರಾಗಬೇಕು ಎಂದು ಎಚ್ಚರಿಕೆ ನೀಡಿದರು. ಮನೆ ಮಂಜೂರು, ನಿವೇಶನ ಹಂಚಿಕೆ ವಿವಾದ, ಸಾಗುವಳಿ ಪತ್ರ ವಿತರಣೆ, ಜಮೀನು ಆಳತೆ ಸೇರಿದಂತೆ ವಿವಿಧ ಇಲಾಖೆಗಳಿಗೆ ಸಾರ್ವಜನಿಕರಿಂದ 29 ಅರ್ಜಿಗಳು ಸಲ್ಲಿಕೆಯಾದವು. ಕಂದಾಯ ಇಲಾಖೆಗೆ 16 ತಾಪಂ ಕಚೇರಿಗೆ 4, ಸರ್ವೆ ಇಲಾಖೆಗೆ 5, ಪಟ್ಟಣ ಪಂಚಾಯಿತಿಗೆ 2, ಅರಣ್ಯ ಇಲಾಖೆಗೆ 1, ಗ್ರಾಮ ಪಂಚಾಯಿತಿಗೆ 1, ಅರ್ಜಿ ದೂರು ನೀಡಲಾಯಿತು. ತಹಸೀಲ್ದಾರ್ ರುಕಿಯಾಬೇಗಂ, ಲೋಕಾಯುಕ್ತ ಇನ್ಸ್‌ಪೆಕ್ಟರ್ ರೂಪಶ್ರೀ, ಸಿಬ್ಬಂದಿಗಳಾದ ವೀಣಾ,ಗೋಪಿ, ಮೋಹನ್ ಗೌಡ, ತ್ರಿವೇಣಿ, ಲೋಕೇಶ್‌ರಾಜ್‌ಅರಸ್, ನೇತ್ರಾವತಿ, ಪರಶುರಾಮ ಇದ್ದರು.

ಯುವಪೀಳಿಗೆ ರಾಮಾಯಣ ಕಾವ್ಯ ಓದಲಿ

ಸರಗೂರು: ಮಹರ್ಷಿ ವಾಲ್ಮೀಕಿ ಒಬ್ಬ ವ್ಯಕ್ತಿ ರೂಪವಾದರೂ ದೈವ ಪುರಷರಾಗಿದ್ದರು ಎಂದು ತಹಸೀಲ್ದಾರ್ ರುಕಿಯಾ ಬೇಗಂ ಹೇಳಿದರು.

ಪಟ್ಟಣದ ತಾಲೂಕು ಆಡಳಿತದ ವತಿಯಿಂದ ತಾಲೂಕು ಕಚೇರಿಯಲ್ಲಿ ಆಯೋಜನೆ ಮಾಡಲಾಗಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಾಲ್ಮೀಕಿ ಬರೆದಿರುವ ರಾಮಾಯಣ ಕಾವ್ಯವನ್ನು ಅಧ್ಯಯನದ ಮೂಲಕ ಬದುಕನ್ನು ಕಟ್ಟಿಕೊಳ್ಳಬೇಕು. ಇಂದಿನ ಯುವಪೀಳಿಗೆ ಸಮಾಜದಲ್ಲಿ ಉನ್ನತ ಮಟ್ಟದ ವಿದ್ಯಾಬ್ಯಾಸ ಮಾಡಿ ಸಮಾಜಮುಖಿಯಾಗಿ ಆದರ್ಶ ಪುರುಷರಾಗಿ ಬದುಕಬೇಕು. ಋಷಿ ಮಗನಾಗಿ ಹುಟ್ಟಿದ ರತ್ನಾಕರ ಕಾಡಲ್ಲಿ ತಪ್ಪಿಸಿಕೊಂಡು ಬೇಡರ ಕುಟುಂಬದ ಜೊತೆ ಬೆಳದ ತನ್ನ ಕುಟುಂಬ ನಿರ್ವಹಣೆಗೆ ದರೋಡೆ ಮಾಡಲು ಮುಂದಾಗುತ್ತಾರೆ, ಇಂತಹ ಸನ್ನಿವೇಶದಲ್ಲಿ ನಾರದ ಮನಿಗಳ ಪ್ರಭಾವಕ್ಕೆ ಮಣಿದು ಉತ್ತಮನಾಗಿ ಕಠೋರ ತಪಸ್ಸನ್ನು ಮಾಡುವಾಗ ಹುತ್ತ ಬೆಳೆದು ವಾಲ್ಮೀಕಿಯಾಗಿ ರಾಮಾಯಣದಂಥ ಗ್ರಂಥ ನೀಡಿದ್ದಾರೆ ಎಂದರು. ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಉಪಾದ್ಯಕ್ಷ ಶಿವಕುಮಾರ್, ಸದಸ್ಯರಾದ ನೂರಾಳಸ್ವಾಮಿ, ಚಲುವಕೃಷ್ಣ, ನಾಯಕ ಸಮಾಜದ

ಯಜಮಾನರಾದ ವೆಂಕಟೇಶ್‌ನಾಯಕ, ನವೀನ್ ಕುಮಾರ್, ಮಾಜಿ ಯಜಮಾನರಾದ ಚನ್ನಪ್ಪನಾಯಕ, ಬಸವನಾಯಕ, ತ್ರಿಮತಸ್ಥ ಬ್ರಾಹ್ಮಣ ಸಂಘದ ಗೌರವಾಧ್ಯಕ್ಷ ಎಸ್.ಎ.ಸಾಂಬವಮೂರ್ತಿ, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಮುಖಂಡರಾದ ಎಸ್.ಎ.ನಾಗೇಂದ್ರ, ಹೆಚ್.ಎಸ್.ರಮೇಶ್ ಚಂಡು, ಎಸ್.ಕೆ.ಕುಮಾರ್, ಸುರೇಶ್ ನಾಯಕ, ಎಂ.ನಾಗರಾಜು, ವೆಂಕಟಾಚಲ ನಾಯಕ, ಬಜರಂಗದಳ ರಾಮು ಇದ್ದರು.

ತಾಲೂಕು ಆಡಳಿತದ ವತಿ ಯಿಂದ ತಾಲೂಕು ಕಚೇರಿಯಲ್ಲಿ ಗುರುವಾರ ವಾಲ್ಮೀಕಿ ಜಯಂತಿ ಕಾರ್ಯಕ್ರಮ ನಡೆಯಿತು.

ಒಳ ಮೀಸಲು ವರದಿ ಜಾರಿ ವಿಳಂಬವಾದರೆ ಹೋರಾಟ

ಒಳಮೀಸಲಿ ಜಾರಿಗೆ ಒತ್ತಾಯಿಸಿ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ: ಒಳ ಮೀಸಲು ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ಜಿಲ್ಲಾ ಸಮಿತಿ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರ ಮೂಲಕ ಮುಖ್ಯಮಂತ್ರಿ, ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಸುಪ್ರಿಂಕೋರ್ಟ್ ಪೂರ್ಣ ಪೀಠ ಮೀಸಲಾತಿ ಉಪವರ್ಗೀಕರಿಸಲು ಆಯಾ ರಾಜ್ಯ ಸರಕಾರಕ್ಕೆ ಅಧಿಕಾರವಿದೆ ಎಂದು ತೀರ್ಪು ನೀಡಿದೆ. ಒಳಮೀಸಲಾತಿ ಜಾರಿಗೊಳಿಸಲು 2023 ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ 6 ನೇ ಗ್ಯಾರಂಟಿ ಘೋಷಿಸಿದಂತೆ ಒಳಮೀಸಲಾತಿ ಜಾರಿಗೊಳಿಸಬೇಕು. ಒಳಮೀಸಲಿಗಾಗಿ ಮೂರು ದಶಕಗಳಿಂದ ಹೋರಾಟಗಳು ನಡೆದಿದೆ. ಹೊಲೆಯ ಮತ್ತು ಮಾದಿಗ ಜನಸಂಖ್ಯೆ ಬಹುತೇಕ ಸಮಾನವಾಗಿದೆ. ಆದರೆ ನ್ಯಾ.ಸದಾಶಿವ ಆಯೋಗ ಉಲ್ಲೇಖಿಸುವಂತೆ ಮಾದಿಗ ಉಪಜಾತಿಗಳು ಹೆಚ್ಚು ಸಂತ್ರಸ್ತ ಸಮುದಾಯವೆನಿಸಿದೆ. 2011 ರ ಜನಗಣತಿಯ ಸಂಖ್ಯಾಧಾರಗಳೊಂದಿಗೆ ಪುನರ್ ಪರಿಶೀಲಿಸಿ ವರದಿ ಕೊಡಲು ರಚಿಸಿದ ಸಚಿವ ಸಂಪುಟ ಉಪ ಸಮಿತಿಯ ಅಧ್ಯಕ್ಷರಾದ ಜೆ ಸಿ ಮಾಧು ಸ್ವಾಮಿ, ಗೋವಿಂದ ಕಾರಜೋಳ, ಪ್ರಭು ಚವ್ಹಾನ್, ಎಸ್ ಅಂಗಾರ, ಡಾ ಸುಧಾಕರ್ ಸಮಿತಿಯು ಅತ್ಯಂತ ವೈಜ್ಞಾನಿಕವಾಗಿ ನ್ಯಾಯಬದ್ಧವಾಗಿ ಕಾನೂನು ರೀತಿಯಲ್ಲಿ ವರದಿ ಕೊಟ್ಟಿರುವದನ್ನು ಪ್ರಸ್ತುತ ಸರಕಾರ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಚಾ.ಗು.ನಾಗರಾಜ್, ವಕೀಲ ರಾಜೇಂದ್ರ, ಮೂಡಹಳ್ಳಿ ಮೂರ್ತಿ, ಶಿವು ರಾಮಸಮುದ್ರ, ಪುಟ್ಟಸ್ವಾಮಿ ಅಮಚವಾಡಿ, ಮಳವಳ್ಳಿ ಮಹದೇವಯ್ಯ, ಗುರುಲಿಂಗಯ್ಯ, ಚನ್ನಬಸವಯ್ಯ,ಯ. ಮಹದೇವಯ್ಯ, ಲಿಂಗರಾಜು, ಶಿವಕುಮಾರ್, ಚಿನ್ನಸ್ವಾಮಿ, ದೇವರಾಜು, ಅರಕಲವಾಡಿ ಮಹದೇವಯ್ಯ ಇತರರು ಹಾಜರಿದ್ದರು.

ಸಾವಯವ ಕೇಂದ್ರಕ್ಕೆ ಚಾಲನೆ

ಮಡಿಕೇರಿ: ಜಿಲ್ಲಾ ಹಾಪ್‌ಕಾಮ್ಸ್‌ನಲ್ಲಿ ಸಾವಯವ ಉತ್ಪನ್ನಗಳ ಮಾರಾಟ ಕೇಂದ್ರವನ್ನು ಹಾಪ್ ಕಾಮ್ಸ್ ಅಧ್ಯಕ್ಷ ಬಿದ್ದಾಟಂಡ ರಮೇಶ್ ಚಂಗಪ್ಪ ಉದ್ಘಾಟಿಸಿದರು.

ನಗರದ ಅಂಚೆಕಚೇರಿ ಎದುರಿನ ಹಾಪ್‌ಕಾಮ್ ಕಟ್ಟಡದಲ್ಲಿ ಜಿಲ್ಲೆಯ ಸಾವಯವ ಬೆಳೆಗಾರರಿಗೆ ಮಾರುಕಟ್ಟೆ ಒದಗಿಸಲು ಮಳಿಗೆ ಆರಂಭಿಸಲಾಗಿದ್ದು, ಕೈಗೆಟಕುವ ದರದಲ್ಲಿ ಉತ್ಪನ್ನ ದೊರೆಯಲಿದ್ದು ಸ್ಥಳೀಯ ರೈತರಿಗೆ ಮಾರುಕಟ್ಟೆಯೂ ತೆರೆದುಕೊಂಡಂತಾಗಿದೆ ಎಂದರು. ಹಾಪ್ ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ, ಸಹಾಯಕ ನಿರ್ದೇಶಕ ಬೊಟ್ಟೋಳಂಡ ಉತ್ತಪ್ಪ ಮಾತನಾಡಿ, ಕೊಡಗಿನಲ್ಲಿ ಬೆಳೆಯುವ ತರಕಾರಿ, ಹಣ್ಣು- ಹಂಪಲು ಹಾಗೂ ಸಾವಯವ ಆಹಾರ ಉತ್ಪನ್ನಗಳನ್ನು ಮಾರಾಟಕ್ಕೆ ನೀಡಲಾಗಿದೆ ಎಂದರು.

ಸಾವಯವ ಕೃಷಿಕ ಪೊನ್ನಪ್ಪ ಮಾತನಾಡಿ, ಕಳೆದ 3 ವರ್ಷಗಳಿಂದ ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆ ಬೆಳೆಯುತ್ತಿದ್ದ, ಇದಕ್ಕೆ ಪೂರಕವಾಗಿ ಹಾಪ್‌ಕಾಮ್ಸ್ ಮಾರುಕಟ್ಟೆ ಒದಗಿಸಿ ಸಹಾಯ ಮಾಡಿದೆ ಎಂದು ಹೇಳಿದರು.

ಹಾಪ್‌ಕಾಮ್ಸ್ ಉಪಾಧ್ಯಕ್ಷ ಮಲ್ಲಂಡ ಮಧುದೇವಯ್ಯ, ನಿರ್ದೇಶಕರುಗಳಾದ ಎಸ್.ಪಿ. ಪೊನ್ನಪ್ಪ, ನಾಗೇಶ್ ಕುಂದಲ್ಪಾಡಿ, ಚೊಟ್ಟೆಯಂಡಮಾಡ ಲೀಲಾ ಮೇದಪ್ಪ, ಕೋಣೇರಿರ ಮನೋಹರ್, ಪಾಡಿಯಮ್ಮಂಡ ಮನು ಮಹೇಶ್, ಕಾಂಗೀರ ಸತೀಶ್, ಸಿಇಒ ರೇಷ್ಮ ಗಿರೀಶ್ ಇದ್ದರು.

ವಾಲ್ಮೀಕಿ ಸಾಧನೆ ಪ್ರೇರಣೆ

ಗುಂಡ್ಲುಪೇಟೆ: ಪಟ್ಟಣದ ಆರಕ್ಷಕ ಠಾಣೆ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ನಡೆಯಿತು. ವಾಲ್ಮೀಕಿಯ ಭಾವಚಿತ್ರಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಪರಶಿವಮೂರ್ತಿ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, ಪ್ರತಿಭೆ ಹುಟ್ಟಿನ ಉಡುಗೊರೆ ಅಲ್ಲ, ಸಾಧನೆಯ ಗಳಿಕೆ ಎನ್ನುವುದನ್ನು ರಾಮಾಯಣ ಮಹಾಕಾವ್ಯ ಬರೆದು ತೋರಿಸಿದ ಆದಿ ಕವಿ ವಾಲ್ಮೀಕಿಯವರ ಬದುಕು ಮತ್ತು ಸಾಧನೆ ನಮಗೆಲ್ಲ ಪ್ರೇರಣೆಯಾಗಲಿ ಎಂದು ತಿಳಿಸಿದರು. ಇನ್ಸ್‌ಪೆಕ್ಟರ್ ಸಾಹೇಬ್ ಗೌಡ, ಗಂಗಾಧರ್, ಬಂಟಪ್ಪ ಮತ್ತು ಪೊಲೀಸ್ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು. ಸಾರ್ವಜನಿಕರಿಗೂ ಕೂಡ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

ಜಗತ್ತಿನ ಮನಸ್ಸು ಗೆದ್ದ ಮಹಾಕವಿ ವಾಲ್ಮೀಕಿ

ತಿ.ನರಸೀಪುರ: ಸಪ್ತ ಋಷಿಗಳಿಂದ ಮನ ಪರಿವರ್ತನೆಗೊಂಡು ಮಹಾ ಜ್ಞಾನಿಯಾಗಿ ಆದಿ ಕವಿಯಾಗಿ ರಾಮಾಯಣ ಎಂಬ ಮಹಾಕಾವ್ಯ ರಚಿಸಿ ಜಗತ್ತಿನ ಮನಸ್ಸು ಗೆದ್ದ ಮಹಾಋಷಿ ವಾಲ್ಮೀಕಿ ಎಂದು ಸಂಸದ ಸುನಿಲ್ ಬೋಸ್ ತಿಳಿಸಿದರು.

ತಾಲೂಕು ಆಡಳಿತ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ತಾಲೂಕು ನಾಯಕರ ಸಂಘದಿಂದ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮೈಸೂರು ಜಿಲ್ಲಾ ಕೇಂದ್ರದಲ್ಲಿ ಬಹುದಿನದ ಬೇಡಿಕೆಯಾಗಿದ್ದ ವಾಲ್ಮೀಕಿ ಪುತ್ತಳಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಮನಸ್ಸು ಮಾಡಿದ್ದರಿಂದ ಇಂದು ವಾಲ್ಮೀಕಿ ಪುತ್ಥಳಿ ಸಾಧ್ಯವಾಯಿತು ಎಂದು ತಿಳಿಸಿದರು.

ಪ್ರತಿಯೊಬ್ಬ ಮಹನೀಯರ ಜಯಂತಿಯನ್ನು ಎಲ್ಲರೂ ಸೇರಿ ಆಚರಿಸಬೇಕು. ಏಕೆಂದರೆ ಅವರೆಲ್ಲರೂ ಎಲ್ಲಾ ಜಾತಿಯ ಧರ್ಮದ ಜನಾಂಗದ ಏಳಿಗೆಗೆ ಶ್ರಮಿಸಿದ್ದಾರೆ ಎಂದರು. ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ತಳವಾರ ಸಮುದಾಯವನ್ನು ವಾಲ್ಮೀಕಿ ಪಂಗಡಕ್ಕೆ ಸೇರಿಸುವಂತೆ ಬಿಜೆಪಿ ಸರಕಾರಕ್ಕೆ ಮನವಿ ಮಾಡಲಾಗಿತ್ತು. ಆದರೆ ಬಿಜೆಪಿ ಸರಕಾರ ಜಾಣ ನಡೆಯಿಂದ ತಪ್ಪಿಸಿಕೊಂಡರು. ಆದರೆ ನಮ್ಮ ಕಾಂಗ್ರೆಸ್ ಸರಕಾರ ನಿಮ್ಮಗಳ ಬೇಡಿಕೆಯಂತೆ ಎಸ್ಟಿಗೆ ಸೇರಿಸಿದೆ ಎಂದು ತಿಳಿಸಿದರು. ತಹಸೀಲ್ದಾರ್ ಸುರೇಶಾಚಾರ್, ಎಸ್ಟಿ ಕಲ್ಯಾಣ ಇಲಾಖೆ ಅಧಿಕಾರಿ ಎಂ. ಎನ್. ಕೋಮಲ, ತಾಪಂ ಇಒ ಅನಂತ ರಾಜ್, ಬಿಇಒ ಶಿವಮೂರ್ತಿ, ಪುರಸಭೆ ಮುಖ್ಯ ಅಧಿಕಾರಿ ಹೇಮಂತ್ ರಾಜು ಇದ್ದರು.

ಹುಣಸೂರು ಅಭಿವೃದ್ಧಿ ನನಗೆ ಮುಖ್ಯ:ಶಾಸಕ

ಹುಣಸೂರು: ನಗರದ ಸಮಗ್ರ ಅಭಿವೃದ್ಧಿ ನನಗೆ ಮುಖ್ಯವಾಗಿದ್ದು. ಅನುದಾನದಲ್ಲಿ ನಾನೆಂದೂ ರಾಜಕೀಯ ಮಾಡಲ್ಲವೆಂದು ಶಾಸಕ ಜಿ.ಡಿ ಹರೀಶ್ ಗೌಡ ತಿಳಿಸಿದರು.

ನಗರದ ಹೊಸಮಾರುತಿ ಬಡಾವಣೆಯಲ್ಲಿ ಹಣಕಾಸು ಯೋಜನೆಯ ಹಾಗೂ ಎಸ್ ಎಫ್ ಸಿ ಯೋಜನೆಯಡಿ ಒಟ್ಟು 144.30 ಲಕ್ಷ ರು.' ಕಾಮಗಾರಿ ಹಾಗೂ ಕಾವೇರಿ ನೀರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ನನಗೆ ಪಕ್ಷ ಬೇಧವಿಲ್ಲ 31 ನಗರಸಭೆ ಸದಸ್ಯರು ಒಂದೆಯಾಗಿದ್ದು ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡುವುದಿಲ್ಲ. ನಗರದ ಸಮಗ್ರ ಅಭಿವೃದ್ಧಿ ನಗರದೆಲ್ಲಡೆ ಯುಜಿಡಿ, ಡ್ರೈನೇಜ್, ರಸ್ತೆಗೆ ಸುಮಾರು 78 ಕೋಟಿ ಹಣದ ಅವಶ್ಯಕತೆ ಇದೆ. ಆದರೆ ಸರಕಾರದಲ್ಲಿ ಗ್ಯಾರಂಟಿ ಯೋಜನೆಗೆ ವರ್ಷಕ್ಕೆ 55 ಸಾವಿರ ಕೋಟಿ ಹಣ ನೀಡಿದ್ದರಿಂದ ಅಭಿವೃದ್ಧಿ ಕಾಣುತ್ತಿಲ್ಲ. ಎಂದರು.

ನಗರಸಭೆ ಅಧ್ಯಕ್ಷ ಶರವಣ ಮಾತನಾಡಿ, ನಗರಾಭಿವೃದ್ಧಿ 15 ವರುಷಗಳಿಂದ ಆಗದ ಕೆಲಸವನ್ನು ಒಂದು ವರ್ಷದಲ್ಲಿ ಮಾಡಿಸುವ ಪ್ರಯತ್ನವಾಗಿದೆ. ಶಾಸಕ ಜಿ.ಡಿ.ಹರೀಶ್ ಗೌಡ ಎಲ್ಲ ನಗರಸಭೆ ಸದಸ್ಯರಿಗೂ ಆದ್ಯತೆ ನೀಡಿ ಅಭಿವೃದ್ಧಿಗೆ ಮುಂದಾಗಿದ್ದಾರೆ ಎಂದರು. ನಗರಸಭೆ ಉಪಾಧ್ಯಕ್ಷೆ ಆಶಾ ಕೃಷ್ಣ ನಾಯ್ಕ, ನಗರ ಸಭೆ ಸದಸ್ಯರಾದ ರಾಧ, ಸತೀಶ್ ಕುಮಾರ್, ಕೃಷ್ಣ ಗುಪ್ತ, ಗಣೇಶ್ ಕುಮಾರ ಸ್ವಾಮಿ, ಶ್ರೀನಾಥ್, ದೇವರಾಜ್, ಸಿರಾಜ್, ಮಲ್ಲಿಕ್ ಪಾಷ, ರಾಣಿ ಪೆರಿಮಳ್, ನಗರ ಪೌರಾಯುಕ್ತೆ ಮಾನಸ, ಇಂಜಿನಿಯರ್ ಗಳಾದ ಶರ್ಮಿಳಾ, ಸಮಂತ್, ಶಶಿಕಲಾ ಬಸವಲಿಂಗಯ್ಯ, ದಲಿತ ಬಸವಲಿಂಗಯ್ಯ, ಕಿರಂಗೂರು ಬಸವರಾಜ್, ಅಮ್ಮರ್ ಅಬ್ದುಲ್ ಇದ್ದರು.

ಕಾಮಗಾರಿಗಳಿಗೆ ಶಾಸಕ ಜಿ.ಡಿ ಹರೀಶ್ ಗೌಡರು ಗುದ್ದಲಿ ಪೂಜೆ ನೆರವೇರಿಸಿದರು.

ವಾಲ್ಮೀಕಿ ಮನಃ ಪರಿವರ್ತನೆ ನಮಗೆ ಆದರ್ಶ



ನಾಗಮಂಗಲ: ಜೀವನದಲ್ಲಿ ವಾಲ್ಮೀಕಿ ಮನಃ ಪರಿವರ್ತನೆಗೊಂಡು ಮಹಾಕಾವ್ಯವನ್ನೇ ರಚಿಸಿದ್ದಾರೆ. ಅವರ ಬದುಕನ್ನು ಇಂದಿನ ಸಮಾಜ ಆದರ್ಶವಾಗಿಟ್ಟುಕೊಳ್ಳಬೇಕಿದೆ ಎಂದು ತಹಶೀಲ್ದಾರ್ ಆದರ್ಶ್ ತಿಳಿಸಿದರು.

ಪಟ್ಟಣದ ಮಿನಿವಿಧಾನ ಸೌಧದ ಆವರಣದಲ್ಲಿ ತಾಲ್ಲೂಕು ಆಡಳಿತ, ತಾಪಂ, ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಪುರಸಭೆ ಮತ್ತು ಬೆಳ್ಳೂರು ಪಪಂ ವತಿಯಿಂದ ಆಯೋಜಿಸಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸರಕಾರ ವಾಲ್ಮೀಕಿ ಸಮುದಾಯದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ನೀಡುತ್ತಾ ಬಂದಿದೆ. ಅವುಗಳ ಸೌಲಭ್ಯ ಪಡೆದು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಹೆಚ್ಚಿನ ಆದ್ಯತೆ ನೀಡಿ ಎಂದರು. ಶಿಕ್ಷಕ ನಂದನ್ ಮಾತನಾಡಿ, ಜಗತ್ತಿಗೆ ಮೊಟ್ಟಮೊದಲು ಸಂಸ್ಕೃತದಲ್ಲಿ ಶ್ರೇಷ್ಠ ರಾಮಾಯಣ ಗ್ರಂಥವನ್ನು ನೀಡಿದ ದಾರ್ಶನಿಕ ಮಹರ್ಷಿ ವಾಲ್ಮೀಕಿ. ಕನ್ನಡ ಸಾಹಿತ್ಯದಲ್ಲಿ ಪಂಪನನ್ನು ಆದಿಕವಿ ಎಂದು ಕರೆದರೂ ಸಹ ವಾಲ್ಮೀಕಿ ಸಹ ಆದಿಕವಿ ಎಂದರು.

ವಾಲ್ಮೀಕಿ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು. ಸಾಧಕರನ್ನು ಹಾಗೂ ಹೆಚ್ಚು ಅಂಕ ಗಳಿಸಿದವರನ್ನು ಸನ್ಮಾನಿಸಲಾಯಿತು.

ಪುರಸಭೆ ಅಧ್ಯಕ್ಷ ಅಲಿ ಅನ್ಸರ್ ಪಾಷ, ಕ್ಷೇತ್ರ ಶಿಕ್ಷಣಾಧಿಕಾರಿ ಯೋಗೇಶ್, ತಾ.ಪಂ ಇಒ ಬಿ.ಎಸ್.ಸತೀಶ್, ಬೆಳ್ಳೂ ಪ.ಪಂ ಮುಖ್ಯಾಧಿಕಾರಿ ಡಿ.ಲಕ್ಷ್ಮಣ್ ಕುಮಾರ್, ಪಿಎಸ್ ಐ ಅನ್ನಪೂರ್ಣ, ಸಿಡಿಪಿಒ ಕೃಷ್ಣಮೂರ್ತಿ, ಕನ್ನಡ ಸಂಘದ ನಟರಾಜ್, ಸಮಾಜ ಕಲ್ಯಾಣ ರಾಜೇಶ್, ಕೃಷಿ ಇಲಾಖೆ ಹರೀಶ್, ಮುಖಂಡರಾದ ಮೂರ್ತಿ, ಚಂದ್ರಶೇಖರ್, ಮಹದೇವ್, ಮುತ್ತಣ್ಣ, ರಮೇಶ್, ಬಗರ ಹುಕುಂ ಸದಸ್ಯ ನಾಗರಾಜ್, ತಾಕಸಾಪ ಅಧ್ಯಕ್ಷ ಚಂದ್ರಶೇಖರ್, ಸುನಂದಾ ಭಾಗವಹಿಸಿದ್ದರು.

ಸಮಾಚಾರ ಸಣ್ಣದಲ್ಲ

ಹಾಲಿನ ದರ ಹೆಚ್ಚಳ ಸಂಭವ: ಸಚಿವ



ಚಾಮರಾಜನಗರ: ಹಾಲಿನ ದರ ಪ್ರತಿ ಲೀ. ಗೆ 5 ರೂ. ಹೆಚ್ಚಾಗುವ ಸಾಧ್ಯತೆ ಇದೆ ಎಂದು ಸಚಿವ ಕೆ. ವೆಂಕಟೇಶ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರೈತರು ಹಾಲಿಗೆ ಪ್ರೋತ್ಸಾಹ ಧನ ಹೆಚ್ಚು ಮಾಡುವಂತೆ ಮನವಿ ಮಾಡಿಕೊಂಡಿದ್ದಾರೆ. ಅದರಂತೆ, ಸರಕಾರ ದರ ಪರಿಷ್ಕರಿಸಿ ರೈತರಿಗೆ ಪ್ರೋತ್ಸಾಹ ಧನ ನೀಡಲಿದೆ ಎಂದು ತಿಳಿಸಿದರು. ಪ್ರತಿ ಲೀ. ಹಾಲಿಗೆ 5 ರು. ತನಕ ದರ ಹೆಚ್ಚಾಗಬಹುದು ಎಂದು ಹೇಳುವ ಮೂಲಕ ಗ್ರಾಹಕರಿಗೆ ಶಾಕ್ ಕೊಟ್ಟಿದ್ದಾರೆ.

ಬೈಕ್ ಸಮೇತ ನದಿಗೆ ಬಿದ್ದ ದಂಪತಿ ಸಾವು

ಹುಕ್ಕೇರಿ: ದ್ವಿಚಕ್ರ ವಾಹನ ಆಯತಪ್ಪಿ ನದಿಗೆ ಬಿದ್ದು ದಂಪತಿ ಸಾವನ್ನಪ್ಪಿರುವ ಘಟನೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ನೊಗಣಿಹಾಳ ಗ್ರಾಮದಲ್ಲಿ ನಡೆದಿದೆ. ಬುಧ ವಾರ ತಡರಾತ್ರಿ ನೊಗಣಿಹಾಳ



ಬಳಿ ಇರುವ ಘಟಪ್ರಭಾ ನದಿಗೆ ಕಟ್ಟಲಾದ ಸೇತುವೆ ದಾಟುವ ಸಂದರ್ಭದಲ್ಲಿ ದ್ವಿಚಕ್ರ ವಾಹನ ಆಯತಪ್ಪಿ ನದಿಗೆ ಬಿದ್ದಿದೆ. ಘಟನೆಯಲ್ಲಿ ಸುರೇಶ ಬಡಿಗೇರ (53), ಜಯಶ್ರೀ ಬಡಿಗೇರ (45)ಮೃತ ದಂಪತಿ. ಗುರುವಾರ ಮೃತ ದಂಪತಿಗಳ ಶವ ಹಡುಕಾಟ ನಡೆಸಿದ ಅಗ್ನಿಶಾಮಕ ಸಿಬ್ಬಂದಿಯವರಿಗೆ ಜಯಶ್ರೀ ಬಡಿಗೇರ ಮೃತದೇಹ ಪತ್ತೆಯಾಗಿದ್ದು ,ಮೃತ ವ್ಯಕ್ತಿಗಾಗಿ ಶೋಧಕಾರ್ಯ ಮುಂದುವರಿದಿದೆ. ಘಟನಾ ಸ್ಥಳಕ್ಕೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶೃತಿ ಎನ್.ಎಸ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಹುಕ್ಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೋನಿಗೆ ಬಿದ್ದ ಚಿರತೆ

ಚಾಮರಾಜನಗರ: ಕಳೆದ 3 ತಿಂಗಳಿಂದ ರೈತರಿಗೆ ಉಪಟಳ ಕೊಡುತ್ತಿದ್ದ 5 ವರ್ಷದ ಗಂಡು ಚಿರತೆ ಕೊನೆಗೂ ಬೋನಿಗೆ ಸೆರೆಯಾಗಿರುವ ಘಟನೆ ಚಾಮರಾಜನಗರ ತಾಲೂಕಿನ ಕುಲಗಾಣ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಬಾಬು ಅಯ್ಯಂಗಾರ್ ಎಂಬವನ ಜಮೀನಿನಲ್ಲಿ ನಾಯಿ ಕಟ್ಟಿ ಬೋನನ್ನು ಇರಿಸಲಾಗಿತ್ತು. ಬಿಳಿಗಿರಿರಂಗನಾಥ ಸ್ವಾಮಿ ದೇವಾಲಯ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಆಹಾರ ಅರಸಿ ಬಂದ ಚಿರತೆಯು ನಾಯಿ ಆಸೆಗೆ ಬೋನಿನಲ್ಲಿ ಸೆರೆಯಾಗಿದೆ.

ವಾಲ್ಮೀಕಿ ಜಯಂತಿಗೆ ಎಲ್ಲಿದೆ ನೈತಿಕತೆ?

ಶಿವಮೊಗ್ಗ: ವಾಲ್ಮೀಕಿ ನಿಗಮದಲ್ಲೇ ಹಗರಣ ನಡೆದಿದ್ದು, ಸರಕಾರ ಯಾವ ನೈತಿಕತೆಯ ಆಧಾರದಲ್ಲಿ ವಾಲ್ಮೀಕಿ ಜಯಂತಿ ಈ ಬಾರಿ

ಅದ್ದೂರಿಯಾಗಿ ಆಚರಿಸುತ್ತಿದೆ ಎಂದು ಮಾಜಿ ಗೃಹಮಂತ್ರಿ ಆರಗ ಜ್ಞಾನೇಂದ್ರ ಪ್ರಶ್ನಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಲ್ಮೀಕಿ ನಿಗಮದ ಲೆಕ್ಕಾಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡ ನಂತರ ಅವ್ಯವಹಾರ ಬೆಳಕಿಗೆ ಬಂದಿದೆ. ಆದ್ದರಿಂದ ಸರಕಾರ ಮೊದಲು ರಾಜ್ಯದ ಜನರ ಕ್ಷಮೆ ಕೇಳಿ ಬಳಿಕ ವಾಲ್ಮೀಕಿ ಜಯಂತಿ ಆಚರಿಸಬೇಕಿತ್ತು ಎಂದರು.

ರಾಜ್ಯದಲ್ಲಿ ನಿಲ್ಲದ ವರುಣನ ಆರ್ಭಟ

ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಎಚ್ಚರಿಕೆ | ಮಳೆಗೆ ಇಬ್ಬರು ಸಾವು | ನಾನಾ ಬೆಳೆ ಜಲಾವೃತ | ಮನೆಗಳಿಗೆ ನುಗ್ಗಿದ ನೀರು

1. ಪಾವಗಡ –ಕಲ್ಯಾಣದುರ್ಗ ಮುಖ್ಯರಸ್ತೆಯಿಂದ ಕೆಂಚಗಾನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಜಲಾವೃತಗೊಂಡಿರುವುದು. 2. ಬಾಗಲಕೋಟೆ ಸಮೀಪದ ಶಿಕ್ಕೇರಿಯಲ್ಲಿ ಕಿತ್ತಿಟ್ಟಿರುವ ಈರುಳ್ಳಿ ಮಳೆಗೆ ಹಾಳಾಗಿರುವುದು. ಧಾರವಾಡದಲ್ಲಿ ಧಾರಾಕಾರ ಮಳೆಗೆ ಮನೆಗೆ ನುಗ್ಗಿದ ನೀರನ್ನು ಹೊರಹಾಕುತ್ತಿರುವ ಮಹಿಳೆ. 4. ರಾಯಚೂರಿನಲ್ಲಿ ಮಳೆಗೆ ಹತ್ತಿ ಬೆಳೆ ನಾಶವಾಗಿರುವುದು.

ಬೆಂಗಳೂರು: ರಾಜ್ಯಾದ್ಯಂತ ಸತತ ನಾಲ್ಕನೇ ದಿನವೂ ಮಳೆ ಪರಿಸ್ಥಿತಿ ಮುಂದುವರಿದಿದೆ. ಕಾವೇರಿ ಉಗಮ ಸ್ಥಾನವಾದ ಕೊಡಗಿನಲ್ಲಿ ಮಳೆ ಬೀಳುತ್ತಿದ್ದು, ಕರಾವಳಿ, ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕದಲ್ಲಿ ತುಂತುರು ಮಳೆಯಾಗುತ್ತಿದೆ. ಅಲ್ಲದೆ ಚಿಕ್ಕಮಗಳೂರು, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಮೋಡಕವಿದ ವಾತಾವರಣ ಉಂಟಾಗಿದೆ. ಹಾವೇರಿಯಲ್ಲಿ ಬುಧವಾರ ಧಾರಾಕಾರ ಮಳೆಯಿಂದಾಗಿ ಬಾಲಕನೊಬ್ಬ ಚರಂಡಿಯಲ್ಲಿ ಕೊಚ್ಚಿಕೊಂಡು ಹೋಗಿದ್ದರೆ, ದಾವಣಗೆರೆಯಲ್ಲಿ ಮನೆಗೋಡೆಯ ಇಟ್ಟಿಗೆ ಬಿದ್ದು ಮತ್ತೊಬ್ಬ ಬಾಲಕ ತೀವ್ರವಾಗಿ ಗಾಯಗೊಂಡಿದ್ದಾನೆ. ಹಿಂಗಾರು ಮಳೆ ಚುರುಕಾದ ಹಿನ್ನೆಲೆಯಲ್ಲಿ ರಾಜ್ಯದ ಜಲಾಶಯಗಳಿಗೆ ಒಳಹರಿವು ಹೆಚ್ಚಾಗುತ್ತಿದೆ. ಈ ಮಧ್ಯೆ, ವಾಯುಭಾರ ಕುಸಿತದಿಂದಾಗಿ ಅಲೆಗಳ ಅಬ್ಬರ ಹೆಚ್ಚಾಗುವ ಸಾಧ್ಯತೆಯಿದ್ದು, ಅ. 19 ರವರೆಗೂ ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ವಿಪತ್ತು ನಿರ್ವಹಣಾ ಪ್ರಾಧಿಕಾರ ಎಚ್ಚರಿಕೆ ಕೊಟ್ಟಿದೆ.

ಮನೆಗಳಿಗೆ ನುಗ್ಗಿದ ನೀರು: ದಾವಣಗೆರೆ ನಗರದಲ್ಲಿ ಕಳೆದ ರಾತ್ರಿ ಸುರಿದ ಭಾರೀ ಮಳೆಗೆ ಪಿಸಾಳೆ ಕಾಂಪೌಂಡ್‌ನ ಹತ್ತಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದೆ. ಅಲ್ಲಿನ ನಿವಾಸಿಗಳು ಇಡೀ ರಾತ್ರಿ ನಿದ್ರೆಯಿಲ್ಲದೆ ಸುರಕ್ಷಿತ ಸ್ಥಳಕ್ಕೆ ತೆರಳಲು ಪರದಾಡಿದ್ದಾರೆ.

ನಗರದ ಹಳೇ ಪಿಬಿ ರಸ್ತೆಯ ಪಕ್ಕದಲ್ಲೇ ಇರುವ ಪಿಸಾಳೆ ಕಾಂಪೌಂಡ್, ತಗ್ಗು ಪ್ರದೇಶದಲ್ಲಿರುವ ಕಾರಣ ಮಳೆ ನೀರು ನುಗ್ಗಿದೆ. ಪರಿಣಾಮ ಮನೆಯಲ್ಲಿರುವ ಸಾಮಗ್ರಿಗಳು ನೀರುಪಾಲಾಗಿವೆ. ಅಲ್ಲದೇ ಬೈಕ್‌ಗಳು ಕೂಡ ಮುಳುಗಡೆಯಾಗಿವೆ. ಪಾಲಿಕೆ ಸಿಬ್ಬಂದಿ ಸ್ಥಳದಲ್ಲಿದ್ದ ನೀರನ್ನು ಹೊರಹಾಕುವ ಕೆಲಸ ಮಾಡುತ್ತಿದ್ದಾರೆ. ದಾವಣಗೆರೆ ಗಡಿಭಾಗದ ಜಗಳೂರು ಸೇರಿದಂತೆ ಕೆಲವು ಹಳ್ಳಿಗಳ ಜಮೀನಿಗೆ ನೀರು ನುಗ್ಗುತ್ತಿದೆ. ಕೆರೆ ಏರಿ ಒಡೆದಿರುವುದರಿಂದ ಇನ್ನೂ ಹೆಚ್ಚಿನ ಪ್ರಮಾಣದ ನೀರು ಬರುವ ಸಾಧ್ಯತೆ ಇದೆ. ಇದರಿಂದಾಗಿ ಗಡಿಭಾಗದ ರೈತರು ಜಮೀನಿನ ಕಡೆ ಹೋಗದಂತೆ ಸೂಚನೆ ನೀಡಲಾಗಿದೆ.

ಸಾವಿರಾರು ಎಕರೆ ಹತ್ತಿ ಬೆಳೆ ನಷ್ಟ: ರಾಯಚೂರು ಜಿಲ್ಲೆಯಲ್ಲಿ ಕಳೆದ ಎರಡು, ಮೂರು ದಿನಗಳಿಂದ ಸುರಿದ ಮಳೆಯು ಹತ್ತಿ ಬೆಳೆಗಾರರ ಪಾಲಿಗೆ ಶಾಪವಾಗಿ ಪರಿಣಮಿಸಿದೆ. ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಅತಿಯಾದ ಮಳೆ ರೈತರ ಎಲ್ಲಾ ಕನಸುಗಳನ್ನು ನುಚ್ಚುನೂರು ಮಾಡುತ್ತಿದೆ. ರೈತರ ಆಸೆಗೆ ತಣ್ಣೀರು ಎರಚಿದೆ. ಜಿಲ್ಲೆಯ ಮಮದಾಪುರ, ನೆಲಹಾಳ, ಕಲ್ಲೂರು ಸೇರಿ ಹಲವೆಡೆ ಅತಿಯಾದ ಮಳೆಯಿಂದ ಭಾರೀ ನಷ್ಟವಾಗಿದೆ. ರೈತರು ಇನ್ನೇನು ಕೆಲವೇ ದಿನಗಳಲ್ಲಿ ಹತ್ತಿಯನ್ನು ಬಿಡಿಸಿ, ಮಾರುಕಟ್ಟೆಗೆ ಸಾಗಿಸುವ ಸಿದ್ಧತೆಯಲ್ಲಿದ್ದರು. ಆದರೆ ಮಳೆಯಿಂದಾಗಿ ಹತ್ತಿ ಸಂಪೂರ್ಣ ಒದ್ದೆಯಾಗಿದೆ. ಗಿಡದಲ್ಲೇ ಹತ್ತಿ ಕಾಳುಗಳು ಸಸಿ ಒಡೆಯುತ್ತಿವೆ. ಹತ್ತಿ ಕೆಂಪು ಬಣ್ಣಕ್ಕೆ ತಿರುಗುತ್ತಿದ್ದು, ನಷ್ಟದ ಹಾದಿ ಹಿಡಿದಿದೆ. ಹತ್ತಿಯ ಗುಣಮಟ್ಟ ಹಾಳಾಗಿದ್ದು, ಸಿಕ್ಕಷ್ಟು ಸಿಗಲಿ ಎಂದು ಮಾರುಕಟ್ಟೆಗೆ ತೆಗೆದುಕೊಂಡು ಹೋದರೂ ಉತ್ತಮ ಬೆಲೆ ಸಿಗುವ ಯಾವ ಲಕ್ಷಣಗಳೂ ಇಲ್ಲ. ಇದರಿಂದ ರೈತರು ಕಂಗಾಲಾಗಿದ್ದಾರೆ.

ರೈಲ್ವೆ ಸೇತುವೆ ಕೆಳಗೆ ನುಗ್ಗಿದ ನೀರು: ಪಾವಗಡ ತಾಲೂಕಿನಾದ್ಯಂತ ಕಳೆದ ಎರಡು ದಿನಗಳಿಂದ ಸುರಿದ ಜಡಿ ಮಳೆಗೆ ಗ್ರಾಮಗಳಲ್ಲಿ ಮನೆಗಳು ಬಿದ್ದಿವೆ. ಕೆಂಚಗಾನಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿರುವ ರೈಲ್ವೆ ಸೇತುವೆ ಕೆಳಗೆ ನೀರು ನಿಂತಿದೆ. ಗ್ರಾಮಕ್ಕೆ ಹೋಗಲು ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿದೆ. ಹಲವು ತಿಂಗಳುಗಳಿಂದ ಚರಂಡಿ ನಿರ್ಮಿಸಿ ರಸ್ತೆ ಸರಿಪಡಿಸುವಂತೆ ಮನವಿ ಮಾಡಿದರೂ ಅಧಿಕಾರಿಗಳು ಬೇಜವಾಬ್ದಾರಿ ತೋರಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ತಾಲೂಕಿನ ಗಂಗಸಾಗರ, ಸಿಂಗರೆಡ್ಡಿಹಳ್ಳಿ, ಸಸಾಲಕುಂಟೆ, ಗಂಗಸಾಗರ, ಗುಜ್ಜನಡು, ಕ್ಯಾತಗನಕೆರೆಯಲ್ಲಿ ಮನೆಗಳು ಉರುಳು ಬಿದ್ದಿವೆ. ವದನಕಲು ಗ್ರಾಮದ ಸಣ್ಣೀರಪ್ಪ ಎಂಬುವರಿಗೆ ಸೇರಿದ ಮೂರು ಮೇಕೆಗಳು ಮಳೆಯಿಂದ ಸಾವನ್ನಪ್ಪಿವೆ.

ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದ ಬಾಲಕ ಸಾವು

ಹಾವೇರಿ ಜಿಲ್ಲೆಯಲ್ಲಿ ಮಳೆ ನೀರಿನಲ್ಲಿ 12 ವರ್ಷದ ಬಾಲಕನೋರ್ವ ಕೊಚ್ಚಿಕೊಂಡು ಹೋಗಿ ಬಳಿಕ ಪತ್ತೆಯಾಗಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿರುವ ದಾರುಣ ಘಟನೆ ವರದಿಯಾಗಿದೆ. ಹಾವೇರಿ ಜಿಲ್ಲೆಯ ಹಳೇ ಪಿ.ಬಿ.ರಸ್ತೆಗೆ ಹೊಂದಿಕೊಂಡಿರುವ ಶಿವಾಜಿನಗರದ 3ನೇ ಕ್ರಾಸ್‌ನಲ್ಲಿರುವ

ಕಾಲುವೆಯಲ್ಲಿ ಬಾಲಕ ನಿವೇದನ್ ಬಸವರಾಜ ಗುಡಿಗೇರಿ ಎಂಬ ಬಾಲಕ ಕೊಚ್ಚಿಕೊಂಡು ಹೋಗಿದ್ದು, ವಿಚಾರ ತಿಳಿದ ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಈ ವೇಳೆ ಬಾಲಕ ಮೆಡಿಕಲ್ ಶಾಪ್ ಮುಂಭಾಗದಲ್ಲಿದ್ದ ಸ್ಲ್ಯಾಬ್‌ನಲ್ಲಿ ಪತ್ತೆಯಾಗಿದ್ದ. ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ, ಹೆಚ್ಚುವರಿ ಎಸ್ಪಿ ಶಿರಕೋಳ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪತ್ತೆಯಾದ ಬಾಲಕನನ್ನು ಅಗ್ನಿಶಾಮಕ ಸಿಬ್ಬಂದಿ ಹಾಗೂ ಸಾರ್ವಜನಿಕರು ತಕ್ಷಣವೇ ಜಿಲ್ಲಾಸ್ಪತ್ರೆಗೆ ಹೊತ್ತು ಸಾಗಿಸಿದ್ದಾರೆ. ಆ್ಯಂಬುಲೆನ್ಸ್ ನಲ್ಲಿ ಕೃತಕ ಆಕ್ಸಿಜನ್ ಹಾಕಿ ಆಸ್ಪತ್ರೆಗೆ ರವಾನಿಸಲಾಗಿದೆ. ಈ ವೇಳೆ ಬಾಲಕ ಬದುಕಿದ್ದಾನೆಂದು ಸಿಬ್ಬಂದಿಗಳು ಕೂಗಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ವೇದು ಸತ್ತಿಲ್ಲ ಭಯಬೇಡಬೇಡಿ ಎಂದು ಕೂಗಿದ್ದಾರೆ. ಕೂಡಲೇ ಆತನನ್ನು ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಆತ ಸಾವನ್ನಪ್ಪಿದ್ದಾನೆ ಎಂದು ತಿಳಿದುಬಂದಿದೆ.

ಮನೆಗೋಡೆ ಕುಸಿದು ವೃದ್ಧೆ ಸಾವು

ತುಂತುರು ಮಳೆಗೆ ನೆನೆದಿದ್ದ ಮನೆಗೋಡೆ ಕುಸಿದು ವೃದ್ಧೆ ಸಾವನ್ನಪ್ಪಿರುವ ಘಟನೆ ಚಿತ್ರದುರ್ಗ ತಾಲೂಕಿನ ಈಚಲ

ನಾಗೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ರಂಗಮ್ಮ(75) ಮೃತ ವೃದ್ಧೆ. ಮನೆ ಹಳೆಯದಾಗಿದ್ದು, ನಿರಂತರ ಮಳೆಗೆ ನೆನೆದು ಗೋಡೆ ಕುಸಿದಿದೆ. ಈ ವೇಳೆ ಮನೆಯೊಳಗಿದ್ದ ವೃದ್ಧೆ ಸಾವನ್ನಪ್ಪಿದ್ದಾರೆ. ಘಟನಾ ಸ್ಥಳಕ್ಕೆ ಚಿತ್ರದುರ್ಗ ಶಾಸಕ ಕೆಸಿ ವೀರೇಂದ್ರ ಪಪ್ಪಿ ಭೇಟಿ ನೀಡಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ವೃದ್ಧೆ ಕುಟುಂಬಕ್ಕೆ ಕೇಂದ್ರ ಸರಕಾರದ ಎಸ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಪ್ರಕೃತಿ ವಿಕೋಪ ನಿಧಿಯಿಂದ 4 ಲಕ್ಷ ರು. ಮತ್ತು ಹೆಚ್ಚುವರಿಯಾಗಿ 1 ಲಕ್ಷ ರು. ಸೇರಿ 5 ಲಕ್ಷ ರು. ಪರಿಹಾರವನ್ನು ವಾರಸುದಾರರಿಗೆ ವಿತರಿಸಿದರು.

ಮಗು ತಲೆ ಮೇಲೆ ಬಿದ್ದ ಗೋಡೆ ಇಟ್ಟಿಗೆ

ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ನಿರಂತರ ಮಳೆಯಿಂದಾಗಿ ಗುರುವಾರ ಬೆಳಗ್ಗೆ ಮನೆಯ ಗೋಡೆ ಕುಸಿದು ಬಿದ್ದು, ನಾಲ್ಕು ವರ್ಷದ ಮಗುವಿಗೆ ಗಂಭೀರ ಗಾಯವಾಗಿದೆ. ಆಸ್ಪತ್ರೆಯಲ್ಲಿ ಮಗು ಸಾವು-ಬದುಕಿನ ನಡುವೆ ಹೋರಾಡುತ್ತಿದೆ. ಆದರೆ ಅದೃಷ್ಟವಶಾತ್ ಪ್ರಾಣಾಪಾಯದಿಂದ ಇಡೀ ಕುಟುಂಬ ಪಾರಾಗಿದೆ.

ಮೂರನೇ ಬಾರಿಗೆ ಕೆಆರ್‌ಎಸ್ ಭರ್ತಿ

ಮಂಡ್ಯ: ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಹಿಂಗಾರು ಮಳೆಯಾಗುತ್ತಿದೆ. ಇದರಿಂದ ಕೆಆರ್‌ಎಸ್ ಡ್ಯಾಂಗೆ ಒಳಹರಿವು ಮತ್ತೆ ಹೆಚ್ಚಾಗಿದೆ. ಡ್ಯಾಂಗೆ 8,547 ಕ್ಯುಸೆಕ್ ಒಳಹರಿವು ಬರುತ್ತಿದೆ. ಒಳಹರಿವಿನ ಪ್ರಮಾಣ ಹೆಚ್ಚಾದ ಬೆನ್ನಲ್ಲೇ ಕೆಆರ್‌ಎಸ್ ಜಲಾಶಯ ವರ್ಷದಲ್ಲಿ 3ನೇ ಬಾರಿಗೆ ಡ್ಯಾಮ್ ಭರ್ತಿಯಾಗಿದೆ. ನೀರಿನ ಮಟ್ಟ 124.80 ಅಡಿ ತಲುಪಿದೆ. ಕಳೆದ ಜು.27ರಂದು ಡ್ಯಾಂ ಭರ್ತಿಯಾಗಿತ್ತು. ಇದೀಗ ಮತ್ತೆ ಸಂಪೂರ್ಣ ಭರ್ತಿಯಾಗಿ ಕಣ್ಮನ ಸೆಳೆಯುತ್ತಿದೆ. ಸಂಪೂರ್ಣ ಭರ್ತಿಯಾಗಿರುವುದರಿಂದ 8,287 ಕ್ಯುಸೆಕ್ ನೀರನ್ನು ಡ್ಯಾಂನಿಂದ ಬಿಡುಗಡೆ ಮಾಡಲಾಗಿದೆ.

2 ಕೋಟಿ ರು. ಬೆಳೆಗಳಿಗೆ ಹಾನಿ

ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ಸುರಿಯುತ್ತಿರುವ ಮಳೆಗೆ ತೋಟಗಾರಿಕಾ ಬೆಳೆಗಳಿಗೆ ಅಪಾರ ಹಾನಿಯಾಗಿದೆ. ಮೂರ್ನಾಲ್ಕು ದಿನಗಳಿಂದ ಸುರಿದ ಧಾರಾಕಾರ ಮಳೆಗೆ ಈರುಳ್ಳಿ, ಬಾಳೆ, ಚವಳೆಕಾಯಿ, ಪಪ್ಪಾಯ ಸೇರಿದಂತೆ ಅನೇಕ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದ್ದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂದು ರೈತರು ಚಿಂತೆಗೀಡಾಗಿದ್ದಾರೆ. ಜಿಲ್ಲೆಯಲ್ಲಿ 131.80 ಹೆಕ್ಟೇರ್ ಬೆಳೆಗಳಿಗೆ ಹಾನಿಯಾಗಿದೆ. ಇದರಿಂದ 225 ರೈತರಿಗೆ 2.06 ಕೋಟಿ ರು. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಈರುಳ್ಳಿ ಲಾಭದಲ್ಲಿ ರೈತರಿಗೆ ಸತತ ಮಳೆ ಹಾನಿಮಾಡಿದ್ದು, ಸದ್ಯ ಭೂಮಿಯಲ್ಲೇ ಬಿಟ್ಟಿರುವ ಈರುಳ್ಳಿಯಾದರೂ ಕೈ ಹಿಡಿಯಬಹುದು ಎಂಬ ನಿರೀಕ್ಷೆಯಲ್ಲಿ ರೈತರಿದ್ದಾರೆ.

ಉದ್ಯಮಿ ಕೊಲೆ: ಮೂವರ ಬಂಧನ

ಪತ್ನಿ, ಇಬ್ಬರು ಫೇಸ್‌ಬುಕ್ ಗೆಳೆಯರು ಪೊಲೀಸ್ ಬಲೆಗೆ

ಬೆಳಗಾವಿ: ಉದ್ಯಮಿ ಸಂತೋಷ್ ಪದ್ಮಣ್ಣವರ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ನಿ ಉಮಾ ಹಾಗೂ ಆಕೆಯ ಫೇಸ್‌ಬುಕ್ ಸ್ನೇಹಿತರಾದ ಮಂಗಳೂರು ಮೂಲದ ಶೋಭೇಶ್‌ಗೌಡ ಹಾಗೂ ಪವನ್‌ರನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅ. 9 ರಂದು ಸಂಭವಿಸಿದ ಉದ್ಯಮಿ ಸಂತೋಷ್ ಪದ್ಮಣ್ಣವರ್ ಅವರ ಸಾವಿನ ಹಿಂದೆ ಕಾಣದ ಕೈಗಳ ಕೈವಾಡ ಇದ್ದು ತನಿಖೆ ನಡೆಸಬೇಕೆಂದು ಆಗ್ರಹಿಸಿ ಪುತ್ರಿ ಸಂಜನಾ ಬೆಳಗಾವಿಯ ಮಾಳಮಾರುತಿ ಪೊಲೀಸ್ ಠಾಣೆಯಲ್ಲಿ ಬುಧವಾರ ದೂರು ದಾಖಲಿಸಿದ್ದರು.

ತನಿಖೆ ಕೈಗೊಂಡಿದ್ದ ಪೊಲೀಸರು ಮೃತ ಉದ್ಯಮಿ ಸಂತೋಷ್ ಪದ್ಮಣ್ಣವರ್ ಪತ್ನಿ ಉಮಾ ಹಾಗೂ ಆಕೆಯ ಫೇಸ್‌ಬುಕ್ ಗೆಳೆಯರಾದ ಶೋಭೇಶ್‌ಗೌಡ ಹಾಗೂ ಪವನ್‌ರನ್ನು ವಶಕ್ಕೆ ಪಡೆದು ತನಿಖೆ ನಡೆಸಿದಾಗ ಉದ್ಯಮಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ.

ಸಂತೋಷ್ ಪತ್ನಿ ಉಮಾ ಸೇರಿ ಮೂವರನ್ನೂ ನ್ಯಾಯಾಧೀಶರ ಮುಂದೆ ಪೊಲೀಸರು ಹಾಜರುಪಡಿಸಿದ್ದರು. ಆರೋಪಿಗಳನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ನೀಡಿದ ಹಿನ್ನೆಲೆಯಲ್ಲಿ ಹಿಂಡಲಗಾ ಜೈಲಿಗೆ ಆರೋಪಿಗಳನ್ನು ಸ್ಥಳಾಂತರಿಸಲಾಗಿದೆ.

ಪ್ರಕರಣ ದಾಖಲಿಸಿದ ಒಂದೇ ದಿನದಲ್ಲಿ ಕೊಲೆ ರಹಸ್ಯ ಭೇದಿಸಿದ ಮಾಳಮಾರುತಿ ಠಾಣೆ ಸಿಬ್ಬಂದಿ ಕಾರ್ಯಕ್ಕೆ ಬೆಳಗಾವಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಶ್ಲಾಘಿಸಿದ್ದಾರೆ.

ಕೇರಳ ಮೂಲದ ಆರೋಪಿಗಳ ವಿರುದ್ಧ ಕ್ರಮಕ್ಕೆ ಅರುಣ್ ಪುತ್ತಿಲ ಆಗ್ರಹ

ಹಿಂದೂ ಮುಖಂಡನಿಗೆ ಹಲ್ಲೆ ಖಂಡಿಸಿ ಮುತ್ತಿಗೆ

ಉಳ್ಳಾಲ: ಎರಡು ಕಾರುಗಳ ನಡುವಣ ಅಪಘಾತ ಪ್ರಕರಣಕ್ಕೆ ಸಂಬಂಧ ಪೊಲೀಸ್ ಠಾಣೆಯಲ್ಲಿ ಮಾತುಕತೆ ನಡೆಯುತ್ತಿದ್ದಾಗ ಇನ್ಸ್‌ಪೆಕ್ಟರ್ ಕೊಠಡಿಯಲ್ಲೇ ಹಿಂದೂ ಸಂಘಟನೆಯ ಮುಖಂಡನೊಬ್ಬನಿಗೆ ಕೇರಳ ಮೂಲದ ಯುವಕ ಹಲ್ಲೆ ನಡೆಸಿದ ಘಟನೆ ವರದಿಯಾಗಿದೆ. ಇದನ್ನು ಖಂಡಿಸಿ ಹಿಂದೂ ಸಂಘಟನೆಯ ಕಾರ್ಯಕರ್ತರು ನಡುರಾತ್ರಿಯೇ ಠಾಣೆಗೆ ಮುತ್ತಿಗೆ ಹಾಕಿದ್ದು, ಹಲ್ಲೆ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಬಜರಂಗದಳದ ಉಳ್ಳಾಲ ನಗರ, ಪ್ರಖಂಡ ಸಂಯೋಜಕ ಅರ್ಜುನ್ ಮಾಡೂರು ಹಲ್ಲೆಗೊಳಗಾದ ಮುಖಂಡ. ಕಾಸರಗೋಡು ಜಿಲ್ಲೆಯ ಹೊಸಂಗಡಿ ಮಹಮ್ಮದ್ ಆಸಿಫ್ ಆರೋಪಿ.

ಘಟನೆಯ ವಿವರ: ತೊಕ್ಕೊಟ್ಟುವಿನ ಮೇಲ್ಸೇತುವೆಯಲ್ಲಿ ಬುಧವಾರ ರಾತ್ರಿ ಕುಂಪಲದ ಶರತ್ ಮತ್ತು ಕೇರಳದ ಇಬ್ರಾಹಿಂ ಖಲೀಲ್ ಅವರ ಕಾರುಗಳ ಮಧ್ಯೆ ಸಣ್ಣ ಅಪಘಾತ ನಡೆದಿದೆ. ಈ ವಿಚಾರದಲ್ಲಿ ಖಲೀಲ್ ಮತ್ತು ಆತನ ಸಹೋದರ ಅಸಿಫ್, ಶರತ್ ಮೇಲೆ ಹಲ್ಲೆ ನಡೆಸಿದ್ದು, ಉಳ್ಳಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಹಲ್ಲೆ ವಿಚಾರದಲ್ಲಿ ಶರತ್‌ರ ಸ್ನೇಹಿತ ಅರ್ಜುನ್ ಮಾಡೂರು ಠಾಣೆಗೆ ಆಗಮಿಸಿದ್ದು, ಘಟನೆಗೆ ಬಗ್ಗೆ ಮಾತುಕತೆ ನಡೆಸುತ್ತಿದ್ದ ವೇಳೆ ಏಕಾಏಕಿ ನುಗ್ಗಿದ ಆಸಿಫ್, ಅರ್ಜುನ್ ಮಾಡೂರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದಾನೆ. ಇನ್ಸ್‌ಪೆಕ್ಟರ್ ಹೊರಗಡೆ ತೆರಳಿದ್ದ ವೇಳೆ ಹಲ್ಲೆ ನಡೆದಿದ್ದು, ಅರ್ಜುನ್ ಸ್ನೇಹಿತರು ಆಸಿಫ್ ನನ್ನು ತಡೆದಿದ್ದಾರೆ. ಪೊಲೀಸರು ಕೂಡಲೇ ಆತನನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಘಟನೆಯ ದೃಶ್ಯಗಳು ಇನ್ಸ್‌ಪೆಕ್ಟರ್ ಕೊಠಡಿಯ ಸಿಸಿಟಿವಿಯಲ್ಲಿ ದಾಖಲಾಗಿದೆ. ಹಲ್ಲೆಗೊಳಗಾದ ಅರ್ಜುನ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಆಸಿಫ್ ವಿರುದ್ಧ ಉಳ್ಳಾಲ ಠಾಣೆಯಲ್ಲಿ ದೂರು ದಾಖಲಾಗಿದೆ, ಇವರ ವಿರುದ್ಧ ಕಠಿಣ ಕ್ರಮಕ್ಕೆ ಜರುಗಿಸಲು ಬಿಜೆಪಿ ಮುಖಂಡ ಅರುಣ್ ಪುತ್ತಿಲ ಆಗ್ರಹಿಸಿದ್ದಾರೆ.

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ,
ದೂರವಾಣಿ : 08354–235042, ಇ–ಮೇಲ್ : bgkeezpe@yahoo.com
ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿ.ಜಿ.ಕೆ./ಪಿಬಿ–2,3/ಟೆಂಡರ್/2024–25/2635
ದಿನಾಂಕ : 14–10–2024

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಏಕ-ಲಕೋಟೆ) (ಕೆ.ಡಬ್ಲ್ಯೂ- 1 & 2 ಬಿಡ್ ಡಾಕ್ಯೂಮೆಂಟ್)

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2024–25 ನೇ ಸಾಲಿನ ಜಿಲ್ಲಾ ಪಂಚಾಯತ ಕಾರ್ಯಕ್ರಮದಡಿ (ಲಿಂಕ್ ಡಾಕ್ಯೂಮೆಂಟ್) ಅನುದಾನದಡಿ ಮಂಜೂರಾದ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ, ಬೀಳಗಿ, ಮುಧೋಳ, ಜಮಖಂಡಿ, ಹಾಗೂ ಹುನಗುಂದ ಉಪವಿಭಾಗ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 1 & 2 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000 ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ ಏಕ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಯ ಇಂಡೆಂಟ್ ನಂ. : 9615, 9604, 9603, 9687, 9708, 9625, 9587, 9705, 9622, 9613, ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಯ ಇಂಡೆಂಟ್ ನಂ. : 9601, 9605, 9588, 9710, ಹಾಗೂ ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಯ ಇಂಡೆಂಟ್ ನಂ. : 9690 ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ. 5.25 ರಿಂದ 37.00 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್ – ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 23–10–2024 ರ ಸಂಜೆ 5.30 ಗಂಟೆವರೆಗೆ,
2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ಸಾಧ್ಯವಾದಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : 25–10–2024 ರ ಬೆಳಿಗ್ಗೆ 11.00 ಗಂಟೆಯ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ : https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ,
ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/290/ಮಣಿಪಾಲ್/2024–25

ಸೇತುವೆ ಅವಶೇಷ ತೆರವಿಗೆ ಎರಡು ಬಾರ್ಜ್

ಅ.21ರಿಂದ ಕಾರ್ಯಾಚರಣೆ ಆರಂಭ | ಐಆರ್‌ಬಿ ಕಂಪನಿಯ ಎಂಜಿನಿಯರ್

ಬಂದರು ಜಲಸಾರಿಗೆ ಮಂಡಳಿಯ ನಿರ್ದೇಶಕ ಕಾರವಾರದ ಕೋಡಿಬಾಗದ ಕಾಳಿ ಸೇತುವೆ ಬಳಿ ಬಂದಿರುವ ಬಾರ್ಜ್ ಮತ್ತು ಟಗ್ ಬೋಟ್

ಕಾರವಾರ: ಇಲ್ಲಿನ ಕೋಡಿಬಾಗದಲ್ಲಿ ಆ.7ರಂದು ಬಿದ್ದ ಕಾಳಿ ನದಿಯ ಹಳೆ ಸೇತುವೆಯ ಅವಶೇಷ ತೆರವುಗೊಳಿಸುವ ಎರಡನೇ ಹಂತದ ಕಾರ್ಯಾಚರಣೆಗೆ ಎರಡು ಬಾರ್ಜ್ ಸಿದ್ಧವಾಗಿವೆ.

ಸೇತುವೆಯ ಕಾಂಕ್ರೀಟ್ ಅವಶೇಷಗಳನ್ನು ಒಡೆಯುವುದರ ಜೊತೆಗೆ ನದಿಯಿಂದ ಅವುಗಳನ್ನು ಮೇಲೆತ್ತಲು ಕ್ರೇನ್, ಇನ್ನಿತರ ಯಂತ್ರ ಒಳಗೊಂಡ ಬಾರ್ಜ್ ಬುಧವಾರ ಸೇತುವೆ ಸಮೀಪದ ಜೆಟ್ಟಿ ತಲುಪಿತ್ತು. ಗುರುವಾರ ಇನ್ನೊಂದು ಬಾರ್ಜ್ ಕೂಡ ಬಂದಿದೆ. ಇದು ನದಿಯಿಂದ ಮೇಲೆತ್ತಿದ ಅವಶೇಷಗಳನ್ನು ಹೊತ್ತು ದಡಕ್ಕೆ ತಂದು ದಾಸ್ತಾನು ಮಾಡಲಿದೆ. ಕಾರ್ಯಾಚರಣೆಗೆ ಅಗತ್ಯವಿರುವ ಎರಡು ಬಾರ್ಜ್ ಸದ್ಯ ಬಂದಿವೆ. ಇನ್ನೂ ಒಂದು ಬಾರ್ಜ್ ಮತ್ತು ಹಲವು ಯಂತ್ರೋಪಕರಣ ಮುಂಬೈನಿಂದ ಬರಬೇಕಿದೆ. ಒಂದೆರಡು ದಿನದಲ್ಲಿ ಅವು ಕಾರವಾರ ತಲುಪಬಹುದು. ಅ.21 ರಿಂದ ಕಾರ್ಯಾಚರಣೆ ಆರಂಭಗೊಳ್ಳಲಿದೆ ಎಂದು ಐಆರ್‌ಬಿ ಕಂಪನಿಯ ಎಂಜಿನಿಯರ್ ತಿಳಿಸಿದರು. ನದಿಯಲ್ಲಿ ಕಾರ್ಯಾಚರಣೆ ನಡೆಸಲು ಕ್ರಿಯಾಯೋಜನೆ ಸಲ್ಲಿಕೆ ಜೊತೆಗೆ ಪೂರ್ವಾನುಮತಿ ಪಡೆಯಬೇಕು. ಕಂಪನಿಯು ಈವರೆಗೆ ಕ್ರಿಯಾಯೋಜನೆ ಪಟ್ಟಿ ಸಲ್ಲಿಸಿಲ್ಲ. ಆದರೆ, ಅವರಿಗೆ ಅನುಕೂಲವಾಗಲೆಂದು ಜೆಟ್ಟಿಗೆ ಸ್ಥಳಾವಕಾಶ ಕಲ್ಪಿಸಲಾಗಿದೆ.

ಮುಡಾ ಮಾಜಿ ಆಯುಕ್ತರ ವಜಾಗೆ ಆಗ್ರಹ

ಮೈಸೂರು: ಮುಡಾ ಹಗರಣ ಕುರಿತಂತೆ ಈ ಹಿಂದಿನ ಇಬ್ಬರು ಆಯುಕ್ತರನ್ನು ಸರಕಾರ ವಜಾಗೊಳಿಸಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಡಾ 50–50 ನಿಯಮದಲ್ಲಿ ಪಡೆದ ಸೈಟ್‌ಗಳು ಪರಭಾರೆ ಆಗುತ್ತಿದ್ದು, 2020ರಿಂದ 2024ರವರೆಗಿನ ಎಲ್ಲ 50:50 ಅನುಪಾತದ ನಿವೇಶನ ರದ್ದು ಮಾಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದ್ದೇನೆ. ಯಾವುದೇ ಕಾರಣಕ್ಕೂ 50:50ರ ಅನುಪಾತದ ಸೈಟ್‌ಗಳು ಪರಭಾರೆ ಆಗಬಾರದು ಎಂದು ಒತ್ತಾಯಿಸಿದ್ದೇನೆ ಎಂದು ತಿಳಿಸಿದರು.

ನಿವೇಶನ ಹಂಚಿಕೆ ಕುರಿತ ತಾಂತ್ರಿಕ ಸಮಿತಿ ವರದಿ ಜಾರಿಗೊಳಿಸಿ, ಈ ಹಿಂದೆ ಮುಡಾ ಆಯುಕ್ತರಾಗಿದ್ದ ನಟೇಶ್ ಹಾಗೂ ದಿನೇಶ್ ಕುಮಾರ್ ಅವರ ವಜಾಗೆ ಆಗ್ರಹಿಸಿದ್ದೇನೆ. ನನ್ನ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಸಿಎಂ, ತನಿಖೆ ನಡೆಯುತ್ತಿದೆ, ಸೈಟ್ ಮಾರಾಟಕ್ಕೆ ಅವಕಾಶ ಕೊಡಲ್ಲ ಎಂದಿದ್ದಾರೆ ಎಂದು ಶ್ರೀವತ್ಸ ಹೇಳಿದರು.

ಬದಲಿ ನಿವೇಶನದಲ್ಲೂ ಅಕ್ರಮ: ನಮ್ಮ ಪ್ರಕಾರ 50–50 ನಿಯಮದಲ್ಲಿ 14,000ಕ್ಕೂ ಹೆಚ್ಚು ನಿವೇಶನಗಳ ನೀಡಲಾಗಿದ್ದು, ಎಲ್ಲ ವಾಪಸ್ ಪಡೆದು ಅರ್ಹರಿಗೆ ನೀಡಬೇಕಿದೆ. ಬದಲಿ ನಿವೇಶನದ ಹಂಚಿಕೆಯಲ್ಲೂ ಮುಡಾದಲ್ಲಿ ಅಕ್ರಮ ನಡೆದಿದೆ. ಈ ವಿಷಯದಲ್ಲಿ ಅನಗತ್ಯ ಹೆಸರುಗಳು ಹರಿದಾಡುತ್ತಿದ್ದು, ಬೇರೆ ರಾಜಕಾರಣಿಗಳ ಹೆಸರು ಬರುತ್ತಿದೆ. ಆದ್ದರಿಂದ ಮೊದಲು ತನಿಖೆ ನಡೆಸಿ, ತಪಿತಸ್ಥರಿಗೆ ಶಿಕ್ಷೆ ಆಗಬೇಕಿದೆ ಎಂದು ಶಾಸಕರು ಒತ್ತಾಯಿಸಿದರು.

...ಬಲಿಷ್ಠರ ಕೊರತೆ

← ಮೊದಲಪುಟದಿಂದ

ಹೀಗಾಗಿ 'ಪಕ್ಷ ಟಿಕೆಟ್ ನೀಡದಿದ್ದರೆ ಸ್ವತಂತ್ರ ಸ್ಪರ್ಧೆ ಸಿದ್ಧ' ಎಂಬ ಸಂದೇಶವನ್ನು ಸಿಪಿವೈ ರವಾನೆ ಮಾಡಿದ್ದು, ಯೋಗೇಶ್ವರ್ ನಡೆಯ ಮೇಲೆ ಇದೀಗ ಎಲ್ಲರ ಕಣ್ಣು ನೆಟ್ಟಿದೆ. ಯೋಗೇಶ್ವರ್ ಕೈಗೊಳ್ಳುವ ನಿರ್ಧಾರವು ಚುನಾವಣೆಯ ದಿಕ್ಕನ್ನು ನಿರ್ಧರಿಸಲಿದೆ.

ಶಿಗ್ಗಾವಿ ಬಿಜೆಪಿಯಲ್ಲಿ ಸಮರ್ಥರ ಕೊರತೆ: ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಬಿಜೆಪಿಯಲ್ಲಿ ಆಕಾಂಕ್ಷಿಗಳ ಪಟ್ಟಿ ಹನುಮನ ಬಾಲದಂತೆ ಬೆಳೆಯುತ್ತಿದ್ದರೂ ಪ್ರಬಲ ಅಭ್ಯರ್ಥಿ ಕೊರತೆ ಎದುರಾಗಿದೆ. ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ್ ಬೊಮ್ಮಾಯಿ ಹಾಗೂ ಮಾಜಿ ಸಚಿವ ಮುರುಗೇಶ್ ನಿರಾಣಿ ಅವರ ಹೆಸರು ಕೇಳಿಬರುತ್ತಿದೆ. ಆದರೆ ಪುತ್ರನನ್ನು ಕಣಕ್ಕಿಳಿಸುವುದಕ್ಕೆ ಬಸವರಾಜ ಬೊಮ್ಮಾಯಿ ಅವರೇ ಹಿಂದೇಟು ಹಾಕುತ್ತಿದ್ದಾರೆ. ಇನ್ನು ಬಾಗಲಕೋಟೆ ಜಿಲ್ಲೆಯವರಾದ ಮುರುಗೇಶ್ ನಿರಾಣಿ ಅವರು ಬೇರೆ ಜಿಲ್ಲೆಗೆ ಹೋಗಿ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದಾರೆ. ಹೀಗಾಗಿ ಬಿಜೆಪಿಗೆ ಈ ಕ್ಷೇತ್ರದಲ್ಲಿ ಪ್ರಬಲ ಅಭ್ಯರ್ಥಿಯನ್ನು ಹುಡುಕುವ ತಲೆಬಿಸಿ ಶುರುವಾಗಿದೆ.

ಕಾಂಗ್ರೆಸ್‌ನಲ್ಲಿ ಆಕಾಂಕ್ಷಿಗಳ ಪೈಪೋಟಿ: ಧಾರವಾಡ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಬಿಜೆಪಿಗಿಂತ 8,500 ಹೆಚ್ಚಿನ ಮತಗಳು ಲಭ್ಯವಾಗಿದ್ದರಿಂದ ಕಾಂಗ್ರೆಸ್ ಆಕಾಂಕ್ಷಿಗಳಿಗೆ ಉಪಚುನಾವಣೆಯಲ್ಲಿ ಗೆಲುವಿನ ಭರವಸೆ ಮೂಡಿದೆ. ಅದೇ ಕಾರಣಕ್ಕೆ ಕಾಂಗ್ರೆಸ್ ಪಕ್ಷದಲ್ಲಿ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿದೆ. ಆದರೆ ಸಮರ್ಥ ಅಭ್ಯರ್ಥಿಗಳಿಗಾಗಿ ಪಕ್ಷ ಹುಡುಕುತ್ತಿದ್ದು, ಬಿಜೆಪಿ ಅಭ್ಯರ್ಥಿ ಯಾರಾಗಲಿದ್ದಾರೆ ಎಂಬುದನ್ನು ನೋಡಿಕೊಂಡು ಕಾಂಗ್ರೆಸ್ ಟಿಕೆಟ್ ಅಂತಿಮಗೊಳಿಸಲಿದೆ ಎನ್ನಲಾಗಿದೆ.

ಸಂಡೂರಿನಲ್ಲೂ ಪ್ರಬಲ ಅಭ್ಯರ್ಥಿಗಾಗಿ ಹುಡುಕಾಟ: ಶಾಸಕರಾಗಿದ್ದ ಇ. ತುಕಾರಾಂ ಅವರು ಸಂಸದರಾದ ನಂತರ ತೆರವಾದ ಸಂಡೂರು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಎರಡೂ ಪಕ್ಷಗಳು ಕ್ಷೇತ್ರದಲ್ಲಿ ಬಿರುಸಿನ ತಯಾರಿ ನಡೆಸಿದ್ದರೂ ಚುನಾವಣೆಗೆ ಅಭ್ಯರ್ಥಿಗಳು ಯಾರಾಗ್ತಾರೆ ಎಂಬ ಕುತೂಹಲಕ್ಕೆ ಇನ್ನೂ ಉತ್ತರ ಸಿಕ್ಕಿಲ್ಲ. ಬಿಜೆಪಿಯಿಂದ ಎಸ್‌ಟಿ ಮೋರ್ಚಾದ ಅಧ್ಯಕ್ಷ ಬಂಗಾರು ಹನುಮಂತು, ಮಾಜಿ ಸಂಸದ ದೇವೇಂದ್ರಪ್ಪ ಪುತ್ರ ಅಣ್ಣಪ್ಪ, ಮಾಜಿ ಮೇಯರ್ ದಿವಾಕರ್ ಸೇರಿದಂತೆ ಹಲವರು ಟಿಕೆಟ್‌ಗಾಗಿ ಪೈಪೋಟಿ ನಡೆಸುತ್ತಿದ್ದರೂ, ಕಾಂಗ್ರೆಸ್‌ನ ಪ್ರಾಬಲ್ಯವಿರುವ ಸಂಡೂರಿನಲ್ಲಿ ಇವರು ಪ್ರಬಲ ಅಭ್ಯರ್ಥಿಯಾಗುವರೇ ಎನ್ನುವ ಪ್ರಶ್ನೆ ನಾಯಕರಲ್ಲಿದೆ. ಮಾಜಿ ಸಚಿವ ಶ್ರೀರಾಮುಲು ಅವರನ್ನು ಕಣಕ್ಕಿಳಿಸುವ ಮಾತುಗಳು ಕೇಳಿಬಂದಿವೆ. ಆದರೆ ರಾಮುಲು ಅವರು ಸತತವಾಗಿ ಎರಡು ಚುನಾವಣೆಗಳಲ್ಲಿ ಸೋತಿರುವುದರಿಂದ ಈ ಹಂತದಲ್ಲಿ ಮತ್ತೊಂದು 'ರಿಸ್ಕ್' ತೆಗೆದುಕೊಳ್ಳುವ ಮನಸ್ಥಿತಿಯಲ್ಲಿ ಅವರಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿವೆ. ಕಾಂಗ್ರೆಸ್‌ನಿಂದ ತುಮಟಿ ಲಕ್ಷ್ಮಣ, ಶಿವರಾಮ್ ಭೀಮಪ್ಪ ಸೇರಿ ಮೂರ್ನಾಲ್ಕು ಜನ ಅರ್ಜಿ ಸಲ್ಲಿಸಿದ್ದರು. ಆದರೆ ಸಂಸದ ಇ.ತುಕಾರಾಂ ಪುತ್ರಿ, ಸೌಪರ್ಣಿಕಾ ಹೆಸರು ಬಹುತೇಕ ಅಂತಿಮವಾಗಿದ್ದು, ಅಧಿಕೃತ ಘೋಷಣೆಯೊಂದೇ ಬಾಕಿ ಇದೆ.

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರತಿಭೆ ಹುಟ್ಟಿನ ಉಡುಗೊರೆ ಅಲ್ಲ, ಸಾಧನೆಯ ಗಳಿಕೆ ಎನ್ನುವುದನ್ನು ರಾಮಾಯಣ ಮಹಾಕಾವ್ಯ ಬರೆದು ತೋರಿಸಿದ ದಲಿತ ಪ್ರತಿಭೆ, ಆದಿಕವಿ ವಾಲ್ಮೀಕಿಯವರ ಬದುಕು ಮತ್ತು ಸಾಧನೆ ನಮಗೆಲ್ಲ ಪ್ರೇರಣೆಯಾಗಲಿ. ಕಟ್ಟುಕಥೆಗಳಿಂದ ಹುಟ್ಟಿಕೊಂಡಿರುವ ಪೂರ್ವಗ್ರಹಗಳನ್ನು ಪಕ್ಕಕ್ಕಿಟ್ಟು ಈ ಸಾಧಕನ ನಿಜ ಜೀವನಗಾಥೆಯ ಅಧ್ಯಯನ ತಳ ಸಮುದಾಯಗಳ ಕಪ್ರತಿಭೆಗಳಿಗೆ ಸ್ಫೂರ್ತಿ ಮತ್ತು ಆತ್ಮವಿಶ್ವಾಸ ಹುಟ್ಟಿಸಬಹುದು.

ಪ್ರಕಾಶ ಕಾಡಣ್ಣವರ್, ಬೆಂಗಳೂರು

ಈಗಲಾದರೂ ಅರ್ಥವಾಯಿತಲ್ಲ..! ಜ್ಞಾನವನ್ನು ಯಾರೂ ಬಚ್ಚಿಟ್ಟಿರಲಿಲ್ಲ.ಸಾಧಿಸುವ ಛಲ ಇರುವ ಸರ್ವರಿಗೂ ಜ್ಞಾನ ಬೆಳಕಿನ ರೂಪವಾಗಿತ್ತು.ಆದರೆ ಕೈಲಾಗದ ಮತಿಗೇಡಿಗಳು ಮೇಲು-ಕೀಳೆಂಬ ಭಾವನೆಗಳನ್ನು ಜನರ ಮನಸ್ಸಿನಲ್ಲಿ ಬಿತ್ತಿ ಧರ್ಮವನ್ನು ಒಡೆದು ಬೇಳೆ ಬೇಯಿಸಿಕೊಳ್ಳುವ ಕೆಲಸ ಮಾಡಿದ್ದರು.

ಸಮಾಚಾರ ಸಣ್ಣದಲ್ಲ

ವಿದ್ಯುತ್ ಸ್ಪರ್ಶದಿಂದ ಕಾಡಾನೆ ಸಾವು

ಹಾಸನ: ಆಹಾರ ಅರಸಿ ನಾಡಿಗೆ ಬಂದಿದ್ದ ಕಾಡಾನೆ ವಿದ್ಯುತ್ ತಂತಿ ಸ್ಪರ್ಶಿಸಿ ಸಾವನ್ನಪ್ಪಿದ ಘಟನೆ ಸಕಲೇಶಪುರ ತಾಲೂಕಿನ ಬನವಾಸೆ ಗ್ರಾಮದಲ್ಲಿ ನಡೆದಿದೆ. ಕಾಡಾನೆಗೆ 25 ವರ್ಷ ಎಂದು

ಅಂದಾಜಿಸಲಾಗಿದೆ. ಈ ಆನೆ ಆಹಾರ ಅರಸಿ ಬನವಾಸೆ ಗ್ರಾಮದ ಆಕಾಶವಾಣಿ ಟವರ್ ಬಳಿ ಬಂದಿದೆ. ಈ ವೇಳೆ ಅಲ್ಲೇ ಹಾದುಹೋಗಿರುವ ವಿದ್ಯುತ್ ತಂತಿ ಆನೆಗೆ ತಾಕಿದ್ದು, ಸ್ಥಳದಲ್ಲೇ ಸಾವನ್ನಪ್ಪಿದೆ. ಫಸಲಿಗೆ ಬಂದಿದ್ದ ಭತ್ತದ ಬೆಳೆಯನ್ನು ಆನೆಗಳ ಹಿಂಡು ನಾಶಪಡಿಸಿದ ಘಟನೆ ಸಕಲೇಶಪುರದ ಮಲಗಳ್ಳಿ ಗ್ರಾಮದಲ್ಲಿ ನಡೆದಿದೆ. ಮುಂಜಾನೆ ಭತ್ತದ ಗದ್ದೆಗೆ ಲಗ್ಗೆ ಇಟ್ಟ ಕಾಡಾನೆಗಳ ಹಿಂಡು ಭತ್ತದ ಗದ್ದೆಗಳನ್ನು ಸಂಪೂರ್ಣ ತುಳಿದು, ತಿಂದು ನಾಶಮಾಡಿವೆ. ಹೂವಣ್ಣ, ರುದ್ರಯ್ಯ, ಚಿನ್ನಪ್ಪ, ಹೇಮಂತ್ ಮತ್ತು ಉಮೇಶ್ ಎಂಬವರಿಗೆ ಸೇರಿದ ಭತ್ತದ ಗದ್ದೆಗಳು ಆನೆಗಳ ದಾಳಿಯಿಂದ ಹಾನಿಗೊಳಗಾಗಿವೆ. ಸಾಲ ಮಾಡಿ ನಾಟಿ ಮಾಡಿದ್ದ ರೈತರು, ಭತ್ತದ ಬೆಳೆನಾಶದಿಂದ ಕಣ್ಣೀರಿಟ್ಟಿದ್ದಾರೆ. ಬೆಳೆ ನಷ್ಟಕ್ಕೆ ಸೂಕ್ತ ಪರಿಹಾರ ನೀಡುವಂತೆ ರೈತರು ಆಗ್ರಹಿಸಿದ್ದಾರೆ.

ಚನ್ನಪಟ್ಟಣ ಕ್ಷೇತ್ರ ಯೋಗೇಶ್ವರ್‌ಗೆ ಕೊಡಿ

ಕೋಲಾರ: ಚನ್ನಪಟ್ಟಣದಲ್ಲಿ ಸಿ.ಪಿ ಯೋಗೇಶ್ವರ್‌ಗೆ ಟಿಕೆಟ್ ಕೊಡುವಂತೆ ಮಾಜಿ ಸಂಸದ ಮುನಿಸ್ವಾಮಿ ಮನವಿ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತ

ನಾಡಿದ ಅವರು, ನಾನು ಸಂಸದನಾಗಿದ್ದಾಗ ಕೋಲಾರ ಲೋಕಸಭಾ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟು ಕೊಟ್ಟಿದ್ದೆವೆ. ಈಗ ಕುಮಾರಸ್ವಾಮಿ ಸಹ ಮನಸು ಮಾಡಿ ಯೋಗೇಶ್ವರ್‌ಸೀಟು ಬಿಟ್ಟು ಕೊಡಬೇಕು ಎಂದರು. ಲೋಕಸಭಾ ಚುನಾವಣೆಯಲ್ಲಿ ಎಚ್‌ಡಿಕೆ ಪರವಾಗಿ ಯೋಗೇಶ್ವರ್ ಕೆಲಸ ಮಾಡಿದ್ದಾರೆ. ಬಿಜೆಪಿಯ ಬಹುತೇಕ ನಾಯಕರ ಅಭಿಪ್ರಾಯ ಇದೇ ಆಗಿದೆ. ಹಠಮಾಡದೆ ಎಚ್‌ಡಿಕೆ ಸೀಟು ಬಿಟ್ಟು ಕೊಡಬೇಕು. ಇಬ್ಬರು ಸೇರಿ ಕೆಲಸ ಮಾಡಿದರೆ ಗೆಲುವು ಖಚಿತ. ಯೋಗೇಶ್ವರ್ ಬಂಡಾಯ ಅಭ್ಯರ್ಥಿ ಆದರೆ ಅನುಕೂಲ ಆಗುವುದಿಲ್ಲ ಎಂದು ಮುನಿಸ್ವಾಮಿ ಎಚ್ಚರಿಕೆ ಕೊಟ್ಟರು.

ಅಹಿಂದ ಪರ ಕಾಂಗ್ರೆಸ್

ನಂಜನಗೂಡು: ಸರಕಾರ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ವರ್ಗಗಳ ಪರವಾಗಿದ್ದು, ಶೋಷಿತರಿಗೆ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು. ನಗರದ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ಗುರುವಾರ ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಭಾರತೀಯ ಸಂಸ್ಕೃತಿ, ಪರಂಪರೆ, ಮೌಲ್ಯ ಪ್ರತಿಪಾದಿಸುವ ರಾಮಾಯಣ ಮಹಾಕಾವ್ಯ ರಚಿಸಿದ ಮಹರ್ಷಿ ವಾಲ್ಮೀಕಿ ಸಂದೇಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ನಮ್ಮ ಸಂಸ್ಕೃತಿ ಉಳಿಯುತ್ತದೆ ಎಂದು ಹೇಳಿದರು.



ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷರಾಗಿ ಸೌಮ್ಯಾರೆಡ್ಡಿ ಪದಗ್ರಹಣ | ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಸೇರಿ ಅನೇಕರು ಭಾಗಿ

ಮಹಿಳೆಯರಿಗೆ ಆರ್ಥಿಕ ಶಕ್ತಿ ನೀಡಿದ್ದು ಕಾಂಗ್ರೆಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಜೆಪಿ ಮಹಿಳಾ ವಿರೋಧಿ ಪಕ್ಷ. ಬಿಜೆಪಿ ಪಕ್ಷವೇ ಬಹುಜನರ, ದುಡಿಯುವ ವರ್ಗಗಳ, ಶ್ರಮಿಕ ಸಂಸ್ಕೃತಿಯ ವಿರೋಧಿ. ಮುಖ್ಯವಾಗಿ ಬಿಜೆಪಿ ಮಹಿಳಾ ಮೀಸಲು ವಿರೋಧಿ, ಮಹಿಳಾ ಹಕ್ಕುಗಳ ವಿರೋಧಿ. ಇದನ್ನು ಸಮಸ್ತ ಮಹಿಳೆಯರಿಗೆ ಅರ್ಥ ಮಾಡಿಸುವ ಕೆಲಸವನ್ನು ಮಹಿಳಾ ಕಾಂಗ್ರೆಸ್ ಘಟಕ ಮಾಡಬೇಕಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ಸೂಚನೆ ನೀಡಿದರು.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಸೌಮ್ಯಾರೆಡ್ಡಿ ಅಧಿಕಾರ ಸ್ವೀಕರಿಸಿದ ಬಳಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, 2028ರಲ್ಲಿಯೂ ನಾವೇ ಅಧಿಕಾರಕ್ಕೆ ಬಂದು ಮಹಿಳೆಯರಿಗೆ ಆರ್ಥಿಕ ಶಕ್ತಿ ನೀಡುವ ಕಾರ್ಯಕ್ರಮ ಮುಂದುವರೆಸುತ್ತೇವೆ. ಮಹಿಳೆಯರು ಜಾತ್ಯತೀತತೆ ಮತ್ತು ಸಾಮಾಜಿಕ ನ್ಯಾಯದ ರಕ್ಷಣೆಗೆ ಮುಂದಾಗಬೇಕು ಎಂದು ಅಭಿಪ್ರಾಯಪಟ್ಟರು.

ಮಹಿಳಾ ಮೀಸಲು ಜಾರಿಗೆ ತಂದಿದ್ದು ಕಾಂಗ್ರೆಸ್ ಪಕ್ಷ. ಮಹಿಳೆಯರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ತುಂಬುವ ಕಾಳಜಿ ಇರುವುದು ಕಾಂಗ್ರೆಸ್ಸಿಗೆ ಮಾತ್ರ. ಹೀಗಾಗಿ ಎಲ್ಲಾ ಜಾತಿ, ಎಲ್ಲಾ ಧರ್ಮದ ಮಹಿಳೆಯರಿಗೆ ಆರ್ಥಿಕ ಶಕ್ತಿ ಕೊಡುವ ಗ್ಯಾರಂಟಿ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದ್ದು ನಾವು. ಇದನ್ನು ವಿರೋಧಿಸಿದ್ದು ಬಿಜೆಪಿ. ರಾಜ್ಯದ ಒಂದು ಕೋಟಿ 21 ಲಕ್ಷ ಕುಟುಂಬಗಳಿಗೆ ಪ್ರತಿ ತಿಂಗಳು ಆರ್ಥಿಕ ಶಕ್ತಿ ನೀಡುತ್ತಿರುವುದು ನಾವು. ಬಿಜೆಪಿಯವರು ಅತ್ತೆ ಸೊಸೆ ಜಗಳ ಆಡ್ತಾರೆ ಎನ್ನುವ ಸುಳ್ಳು ನೆಪ ಮುಂದಿಟ್ಟು ಮಹಿಳೆಯರ ಖಾತೆಗೆ ಹೋಗುವ ಹಣವನ್ನು ನಿಲ್ಲಿಸಲು ಷಡ್ಯಂತ್ರ ನಡೆಸಿತು ಎಂದು ಟೀಕಿಸಿದರು.

ಸಂವಿಧಾನ ಮಹಿಳೆಯರಿಗೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಶಕ್ತಿ ನೀಡಿದೆ. ಈ ಸಂವಿಧಾನವನ್ನು ಬಿಜೆಪಿ ವಿರೋಧಿಸುತ್ತದೆ. ಬಿಜೆಪಿಯವರ ಗುರೂಜಿ ಸಾವರ್ಕರ್ ಸಂವಿಧಾನ ವಿರೋಧಿಸಿದ್ದರು. ಈ ಇತಿಹಾಸವನ್ನು ರಾಜ್ಯದ

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಸೌಮ್ಯಾರೆಡ್ಡಿ ಗುರುವಾರ ಅಧಿಕಾರ ಸ್ವೀಕರಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸೇರಿದಂತೆ ಕಾಂಗ್ರೆಸ್ ನಾಯಕರು ಇದ್ದರು.

ಮಹಿಳೆಯರು, ಯುವತಿಯರಿಗೆ ಸರಿಯಾಗಿ ಮನದಟ್ಟು ಮಾಡಿಸಿ ಎಂದು ಹೇಳಿದರು.

ಪಕ್ಷದ ನಿಲುವನ್ನು ರಾಜ್ಯಾದ್ಯಂತ ತಲುಪಿಸಿ: ಡಿಕೆಶಿ

ಕಾರ್ಯಕ್ರಮದಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಸರಕಾರ ಮಹಿಳೆಯರಿಗೆ ಶಕ್ತಿ ತುಂಬಲು ಅನೇಕ ಕಾರ್ಯಕ್ರಮ ರೂಪಿಸಿದೆ. ಪಕ್ಷದ ಆಚಾರ ವಿಚಾರ ಹಾಗೂ ಯೋಜನೆಗಳನ್ನು ರಾಜ್ಯದ ಮೂಲೆ ಮೂಲೆಯಲ್ಲಿ ಪ್ರಚಾರ ಮಾಡಿ, ಆಗ 2028ರಲ್ಲೂ ನಮ್ಮ ಪಕ್ಷ ಅಧಿಕಾರಕ್ಕೆ ಬಂದೇ ಬರುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಪಕ್ಷ ಯಾವುದೇ ಕಾರ್ಯಕ್ರಮ ರೂಪಿಸಿದರು ಅದು ಮಹಿಳಾ ಕೇಂದ್ರಿತ ಕಾರ್ಯಕ್ರಮಗಳಾಗಿರುತ್ತವೆ. ಮಹಿಳೆಯರಿಗೆ ಶಕ್ತಿ ತುಂಬಲು ನಮ್ಮ ಸರಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದೆ. ಇದನ್ನು ಬಳಸಿಕೊಂಡು ಈ ಯೋಜನೆಗಳ ಫಲಾನುಭವಿಗಳಿಗೆ ಕಾಂಗ್ರೆಸ್ ಸರ್ಕಾರದ ಕೊಡುಗೆಗಳನ್ನು ಮನದಟ್ಟು ಮಾಡಿ. ಆಮೂಲಕ ತಳಮಟ್ಟದಲ್ಲಿ ಕಾಂಗ್ರೆಸ್ ಪಕ್ಷವನ್ನು ಸಂಘಟನೆ ಮಾಡಿ. ಆಗ ಬಿಜೆಪಿಯವರು

> ಮತ್ತೊಮ್ಮೆ ಅಧಿಕಾರಕ್ಕೆ ಬಂದು ಮಹಿಳೆಯರಿಗೆ ಆರ್ಥಿಕ ಶಕ್ತಿ ನೀಡುವ ಗ್ಯಾರಂಟಿ ಕಾರ್ಯಕ್ರಮಗಳನ್ನು ಮುಂದುವರಿಸುತ್ತೇವೆ. ನೀವು ನಮಗೆ ರಾಜಕೀಯ ಶಕ್ತಿ ಕೊಡಿ. ನಾವು ನಿಮಗೆ ಆರ್ಥಿಕ ಶಕ್ತಿ ನೀಡುವುದನ್ನು ಮುಂದುವರೆಸುತ್ತೇವೆ. ಬಿಜೆಪಿಯವರು ಅನ್ನಭಾಗ್ಯವನ್ನೂ ವಿರೋಧಿಸುತ್ತಾರೆ, ಗೃಹಲಕ್ಷ್ಮಿ ಯೋಜನೆ, ಗೃಹಜ್ಯೋತಿ ಯೋಜನೆಯನ್ನೂ ವಿರೋಧಿಸುತ್ತಿದೆ. ಇದಕ್ಕೆ ತಕ್ಕ ಉತ್ತರ ನೀವೇ ನೀಡಬೇಕು.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಏನೇ ತಿಪ್ಪರಲಾಗ ಹಾಕಿದರೂ 2028ಕ್ಕೆ ನಮ್ಮದೇ ಸರಕಾರ ಅಧಿಕಾರಕ್ಕೆ ಬರುತ್ತದೆ ಎಂದು ತಿಳಿಸಿದರು.

ಯಾವ ರೀತಿ ರಾಜಕಾರಣ ಮಾಡಬೇಕು, ಬಿಜೆಪಿ ಏನೇ ಚದುರಂಗ ಆಟವಾಡಿದರೂ ಹೇಗೆ ಚೆಕ್ ಮೇಟ್ ನೀಡಬೇಕು ಎಂದು ನನಗೆ ಗೊತ್ತಿದೆ. ರಾಜಕಾರಣ ಫುಟ್ಬಾಲ್ ಅಲ್ಲ, ಚದುರಂಗದಾಟ. ಆ ಆಟ ನನಗೆ ಗೊತ್ತಿದೆ. ನೀವು ಮಹಿಳೆಯರು ಪಂಚಾಯಿತಿ, ಬೂತ್ ಮಟ್ಟದಲ್ಲಿ ಮಹಿಳೆಯರನ್ನು ಸಂಘಟನೆ ಮಾಡಿ. ಮತ್ತೆ ನಾವು ರಾಜ್ಯದಲ್ಲಿ ಅಧಿಕಾರಕ್ಕೆ ಯಾಕೆ ಬರುವುದಿಲ್ಲ ನೋಡುತ್ತೇನೆ ಎಂದು ತಿಳಿಸಿದರು.

ಮಹಿಳೆಯರಿಗೆ ಆದ್ಯತೆ ನೀಡುವುದು ನಮ್ಮ ಸಂಸ್ಕೃತಿ: ನಾವು ಪ್ರತಿ ಹಳ್ಳಿಯಲ್ಲಿ ಗ್ರಾಮದೇವತೆಗಳಿಗೆ ನಾವು ಪೂಜೆ ಮಾಡುತ್ತೇವೆ. ನಾಡದೇವತೆ ಎಂದು ತಾಯಿ ಚಾಮುಂಡೇಶ್ವರಿ ದೇವಿಯನ್ನು ಪೂಜಿಸುತ್ತೇವೆ. ನಾವು ವೆಂಕಟೇಶ್ವರ ದೇವರನ್ನು ಲಕ್ಷ್ಮಿ ವೆಂಕಟೇಶ್ವರ ಎನ್ನುತ್ತೇವೆ. ಗಣೇಶನಿಗೆ ಗೌರಿ ಗಣೇಶ, ಶಿವನನ್ನು ಪಾರ್ವತಿ ಪರಮೇಶ್ವರ ಎಂದು ಕರೆಯುತ್ತೇವೆ. ಅಷ್ಟರ ಮಟ್ಟಿಗೆ ನಾವು ಮಹಿಳೆಯರಿಗೆ ಪ್ರಾತಿನಿಧ್ಯ, ಗೌರವ ನೀಡುತ್ತೇವೆ. ಇದು ನಮ್ಮ ಸಂಸ್ಕೃತಿ ಎಂದು ಅಭಿಪ್ರಾಯಪಟ್ಟರು.

> ನಿಮ್ಮ ಶ್ರಮ, ಹೋರಾಟಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ. ನೀವು ಕೂಡ ಬೇರೆ ಮಹಿಳೆಯರನ್ನು ಸೇರಿಸಿಕೊಂಡು ಸಂಘಟನೆ ಮಾಡಬೇಕು. ಪುರುಷರಿಗಿಂತ ಮಹಿಳೆಯರು ಧೈರ್ಯವಂತರು. ನಿಮಗೆ ಶಕ್ತಿ ತುಂಬಬೇಕು ಎಂಬ ಕಾರಣಕ್ಕೆ ನಮ್ಮ ಸರಕಾರ ಮಹಿಳೆಯನ್ನು ಗಮನದಲ್ಲಿಟ್ಟುಕೊಂಡು ಐದು ಗ್ಯಾರಂಟಿ ಘೋಷಣೆ ಮಾಡಿತು. ಐದು ಬೆರಳು ಸೇರಿ ಕೈ ಮುಷ್ಟಿಯಾಯಿತು, ಐದು ಗ್ಯಾರಂಟಿ ಸೇರಿ ಕೈ ಗಟ್ಟಿಯಾಯಿತು.
> -ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

> ಮಹಿಳೆಯರಿಗೆ ಆರ್ಥಿಕವಾಗಿ, ಸಾಮಾಜಿಕ ಹಾಗೂ ರಾಜಕೀಯವಾಗಿ ಸರಿಯಾದ ಅವಕಾಶ ಕಲ್ಪಿಸುವ ನಿಟ್ಟನಲ್ಲಿ ನಮ್ಮ ಹೋರಾಟ ಮುಂದುವರಿಯಲಿದೆ. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು 1984ರಲ್ಲಿ ಬೆಂಗಳೂರಿನಲ್ಲಿ ಮಹಿಳಾ ಕಾಂಗ್ರೆಸ್ ಸ್ಥಾಪನೆ ಮಾಡಿದರು. 40 ವರ್ಷಗಳ ನಂತರ ಈ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆಯಾಗಿ ಅಧಿಕಾರ ಸ್ವೀಕರಿಸುತ್ತಿರುವುದು ನನ್ನ ಸೌಭಾಗ್ಯ.
> - ಸೌಮ್ಯಾರೆಡ್ಡಿ, ಕೆಪಿಸಿಸಿ ಮಹಿಳಾ ಅಧ್ಯಕ್ಷೆ

ಮಹಿಳಾ ಘಟಕವನ್ನು ಸದೃಢಗೊಳಿಸಿ: ಅಲ್ಕಾಲಂಬಾ

ಕಾರ್ಯಕ್ರಮದಲ್ಲಿ ಎಐಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಅಲ್ಕಾಲಂಬಾ ಮಾತನಾಡಿ, ಮಹಿಳಾ ಕಾಂಗ್ರೆಸ್ ಸಂಸ್ಥಾಪನಾ ದಿನದಂದು ರಾಷ್ಟ್ರವ್ಯಾಪಿ ಮಹಿಳಾ ಕಾಂಗ್ರೆಸ್ ಸದಸ್ಯತ್ವ ಅಭಿಯಾನ ಆರಂಭಿಸಿದೆವು. ಈ ಅಭಿಯಾನದಲ್ಲಿ ಒಂದೇ ತಿಂಗಳಲ್ಲಿ 2.50 ಲಕ್ಷ ಮಹಿಳೆಯರು ಆನ್‌ಲೈನ್ ಮೂಲಕ ಸದಸ್ಯತ್ವ ಪಡೆದಿದ್ದಾರೆ. ತೆಲಂಗಾಣದಲ್ಲಿ 50 ಸಾವಿರ ಮಹಿಳೆಯರು ಸದಸ್ಯತ್ವ ಪಡೆದಿದ್ದು, ಕರ್ನಾಟಕದಲ್ಲಿ 30 ಸಾವಿರ ಮಹಿಳೆಯರು ಮಹಿಳಾ ಕಾಂಗ್ರೆಸ್ ಸದಸ್ಯತ್ವ ಪಡೆದಿದ್ದಾರೆ. ದೇಶದಲ್ಲಿ ಈ ವರ್ಷದೊಳಗೆ 10 ಲಕ್ಷ ಸದಸ್ಯತ್ವ ಸಾಧಿಸುವ ಗುರಿ ಹೊಂದಿದ್ದೇವೆ. ಆಮೂಲಕ ಮಹಿಳೆಯರು ರಾಜಕೀಯ ನ್ಯಾಯ ಪಡೆಯುವ ಹೋರಾಟದಲ್ಲಿ ಭಾಗಿಯಾಗುವಂತೆ ಮಾಡುತ್ತಿದ್ದೇವೆ ಎಂದರು.

ಸಾಮಾನ್ಯ ಮಹಿಳೆಯನ್ನು ಲೋಕಸಭೆ ಸದಸ್ಯೆಯನ್ನಾಗಿ ಮಾಡುವುದು ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷದ ಗುರಿಯಾಗಿದೆ. ಇದನ್ನು ಜಾರಿಗೊಳಿಸಲು ಸಂಪೂರ್ಣ ಪ್ರಯತ್ನ ಮಾಡಲಾಗುವುದು. ಇನ್ನು ಮಹಿಳೆಯರಿಗೆ ಆರ್ಥಿಕ ನ್ಯಾಯ ಒದಗಿಸಿ ಅವರನ್ನು ಆರ್ಥಿಕ ಸಬಲೀಕರಣ ಮಾಡುವ ಗುರಿ ಹೊಂದಿದ್ದೇವೆ. ರಾಜ್ಯ ಸರಕಾರ ಮಹಿಳೆಯರಿಗೆ ಪ್ರತಿ ತಿಂಗಳು 2 ಸಾವಿರ ಪ್ರೋತ್ಸಾಹ ಧನ ನೀಡುವ ಮೂಲಕ ಈ ನಿಟ್ಟಿನಲ್ಲಿ ಹೆಜ್ಜೆ ಇಡುತ್ತಿದ್ದಾರೆ. ಮಹಿಳಾ ಕಾಂಗ್ರೆಸ್ ಸದಸ್ಯತ್ವ ಶುಲ್ಕವಾಗಿ ಸಂಗ್ರಹಿಸುವ 100 ರು ಶುಲ್ಕದ ಮೊತ್ತವನ್ನು ನಾವು ಮಹಿಳಾ ಕಾಂಗ್ರೆಸ್ ಸದಸ್ಯರಿಗಾಗಿ ವೆಚ್ಚ ಮಾಡುತ್ತೇವೆ ಎಂದರು.

ಮೂರು ತಿಂಗಳ ಸೆರೆವಾಸದ ಬಳಿಕ ತವರು ಜಿಲ್ಲೆಗೆ ಆಗಮನ

ಬಳ್ಳಾರಿ: ನಾಗೇಂದ್ರಗೆ ಅದ್ದೂರಿ ಸ್ವಾಗತ

ಬಳ್ಳಾರಿ: ವಾಲ್ಮೀಕಿ ನಿಗಮದ ಹಗರಣದಲ್ಲಿ ಮೂರು ತಿಂಗಳು ಜೈಲುವಾಸ ಅನುಭವಿಸಿದ ಬಳಿಕ ಗುರುವಾರ ಬಳ್ಳಾರಿಗೆ ಆಗಮಿಸಿದ ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿಯಾಗಿ ಬರಮಾಡಿಕೊಂಡರು.

ಎಸ್‌ಪಿ ಸರ್ಕಲ್ ಬಳಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಬಳಿಕ ನಾಗೇಂದ್ರ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿ.ನಾಗೇಂದ್ರ, ಸಮುದಾ ಯದ ಮಗನಾಗಿ ವಾಲ್ಮೀಕಿ ಜಯಂತಿ ಯಂದು ವಾಲ್ಮೀಕಿ ಹಗರಣ ಎನ್ನುವ ಶಬ್ದ ಬಳಸಿ ಮಾತಾಡೋಕೆ ಬೇಸರವಾಗ್ತಿದೆ. ನಾವು ಯಾವುದೇ ಹಗರಣ ಮಾಡಿಲ್ಲ. ಇದೆಲ್ಲವೂ ಬಿಜೆಪಿ ಕುತಂತ್ರ. ಸಿಬಿಐ, ಇ.ಡಿ. ಬಳಸಿ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನದಿಂದ ನನ್ನನ್ನು ಗುರಿ ಮಾಡಿದ್ದಾರೆ. ಈ ಪ್ರಕರಣದಿಂದ ಶೀಘ್ರದಲ್ಲೇ ಆರೋಪ ಮುಕ್ತನಾಗುವೆ ಎಂದರು.

ಬಳ್ಳಾರಿಯಲ್ಲಿ ವಾಲ್ಮೀಕಿ ಜಯಂತಿಯಲ್ಲಿ ಪಾಲ್ಗೊಂಡ ಮಾಜಿ ಸಚಿವ ಬಿ.ನಾಗೇಂದ್ರ

ಜನಾರ್ದನ ರೆಡ್ಡಿ ವಿರುದ್ಧ ಕಿಡಿ: ಇದೇ ವೇಳೆ ಜನಾರ್ದನ ರೆಡ್ಡಿಗೆ ಎದುರೇಟು ನೀಡಿದ ನಾಗೇಂದ್ರ, ಜನಾರ್ದನ ರೆಡ್ಡಿ ಇ.ಡಿ., ಸಿಬಿಐ ಭಯದಿಂದ ಬಿಜೆಪಿ ಸೇರಿದ್ದಾರೆ. ಅವರು ಕೆಆರ್‌ಪಿಪಿ ಪಕ್ಷ ಕಟ್ಟಿದಾಗ ಬಿಜೆಪಿ ವಿರುದ್ಧ ಸಾಕಷ್ಟು ಆರೋಪ ಮಾಡಿದ್ದರು. ರೆಡ್ಡಿ ಸಂಡೂರಿನಲ್ಲಿ ಮನೆ ಅಲ್ಲ ಅರಮನೆ ಮಾಡಿದ್ರೂ ಕಾಂಗ್ರೆಸ್ ಗೆಲುವು ನಿಶ್ಚಿತ. ಅವರು ಬಳ್ಳಾರಿಗೆ ಬಂದಿರೋದು ಕಾಂಗ್ರೆಸ್ ಮೇಲೆ ಪರಿಣಾಮ ಬೀರಲ್ಲ ಎಂದು ಸ್ಪಷ್ಟಪಡಿಸಿದರು.

ಪಕ್ಷದ ಕೆಲಸಕ್ಕೆ ಕರೆಸಿಕೊಂಡು, ಸ್ಥಾನಮಾನದ ಸಮಯದಲ್ಲಿ ಏಕೆ ದೂರಕ್ಕೆ?: ಮೋಟಮ್ಮ

ಮಹಿಳೆಯರಿಗೂ ಸ್ಥಾನಮಾನ ನೀಡಿ

ಬೆಂಗಳೂರು: ಮಹಿಳಾಪರ ಹಲವು ಘೋಷಣೆಗಳೊಂದಿಗೆ ಅಧಿಕಾರದ ಗದ್ದುಗೆ

ಏರಿದ ಕಾಂಗ್ರೆಸ್ ವಿರುದ್ಧ ಪಕ್ಷದ ಹಿರಿಯ ನಾಯಕಿಯೇ ಸಂಘಟನಾ ವಿಷಯದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದು, ಮಹಿಳಾ ಕಾರ್ಯಕರ್ತರು ಅಧಿಕಾರವನ್ನು ಕಿತ್ತುಕೊಳ್ಳಬೇಕು ಎಂದು ಬಹಿರಂಗವಾಗಿಯೇ ಹೇಳಿದ್ದಾರೆ.

ಗುರುವಾರ ಕೆಪಿಸಿಸಿ ಕಚೇರಿಯಲ್ಲಿ ನಡೆದ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷ ಸೌಮ್ಯಾರೆಡ್ಡಿ ಅವರ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಸಚಿವೆ, ಕಾಂಗ್ರೆಸ್ ಹಿರಿಯ ನಾಯಕರಿ ಮೋಟಮ್ಮ ಅವರು, ಪಕ್ಷದ ಕೆಲಸಕ್ಕೆ ಮಹಿಳಾ ಕಾಂಗ್ರೆಸಿಗರನ್ನು ಬಳಸಿಕೊಳ್ಳುವ ನಾಯಕರು ಅಧಿಕಾರ ನೀಡುವ ವಿಷಯದಲ್ಲಿ ಪರಿಗಣನೆಗೆ ಪಡೆಯುವುದಿಲ್ಲ. ನಮ್ಮನ್ನು ಒಂದು ರೀತಿಯಲ್ಲಿ ಊಟಕ್ಕೆ ಬಳಸುವ 'ಕರಿಬೇವಿ' ರೀತಿ ಬಳಸಿಕೊಂಡು ಬಿಸಾಡುತ್ತಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ರಾಜಕೀಯದಲ್ಲಿ ಮಹಿಳಾ ನಾಯಕಿಯರನ್ನು ಉಪ್ಪಿನಕಾಯಿ ತರ ಬಳಸುವ ಬದಲು ಕರಿಬೇವಿನ ಸೊಪ್ಪಿನ ರೀತಿ ಬಳಸಿಕೊಳ್ಳುತ್ತಾರೆ. ನಾಯಕರುಗಳಿಗೆ ಮನವಿ ಮಾಡಿಕೊಂಡು ತಿರುಗಾಡಿದರೆ ಆಗುವುದಿಲ್ಲ. ಮಹಿಳಾ ಕಾಂಗ್ರೆಸ್ ಮುಂಚೂಣಿ ಘಟಕವಾಗಿ ಕಾರ್ಯನಿರ್ವಹಿಸಬೇಕು. ನೀವೆಲ್ಲ ಒಗ್ಗಟ್ಟಾಗಿ ಹೋರಾಡಿ, ನಮ್ಮ ಹಕ್ಕುಗಳನ್ನು ಕಿತ್ತುಕೊಳ್ಳಬೇಕು ಎಂದು ಬುದ್ಧಿ ಹೇಳಿದರು.

ಪಕ್ಷದಲ್ಲಿ ಯಾವುದೇ ಕಾರ್ಯವಿದ್ದರೂ ಕೆಲಸ ಮಾಡುವಂತೆ ನಮ್ಮನ್ನು ಕರೆಯುತ್ತಾರೆ. ಆದರೆ ಯಾವುದೇ ಸ್ಥಾನಮಾನ ಕೊಡಲ್ಲ. ಅಲ್ಕಾ ಲಂಬಾ ಮತ್ತು ಸೌಮ್ಯಾರೆಡ್ಡಿ ಅವರು ಮಹಿಳಾ ಘಟಕದ ಚುಕ್ಕಾಣಿ ಹಿಡಿದಿದ್ದು, ಮುಂದಿನ ಚುನಾವಣೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಸೀಟು ನೀಡುವಂತೆ ಕೋಡಿಕೊಳ್ಳುವಂತೆ ಹೇಳಿದರು.

- ಕೆಪಿಸಿಸಿ ಮಹಿಳಾ ಅಧ್ಯಕ್ಷೆ ಪದಗ್ರಹಣ ಕಾರ್ಯಕ್ರಮದಲ್ಲಿ ಅಸಮಾಧಾನ
- ಐವರು ಕಾರ್ಯಾಧ್ಯಕ್ಷರ ಪೈಕಿ ಮಹಿಳೆಯರಿಗೆ ಎಷ್ಟು ನೀಡಲಾಗಿದೆ?

ಕಾರ್ಯಾಧ್ಯಕ್ಷರು ಐವರಿದ್ದರೂ ಮಹಿಳೆಗಿಲ್ಲ ಅವಕಾಶ

ಪಕ್ಷ ಸಂಘಟನೆ ಹಾಗೂ ವಿವಿಧ ಕಾರಣಕ್ಕೆ ಕಳೆದ ವಿಧಾನಸಭಾ ಚುನಾವಣೆಯ ಬಳಿಕ ಕೆಪಿಸಿಸಿಗೆ ಐದು ಕಾರ್ಯಾಧ್ಯಕ್ಷರನ್ನು ಸೃಷ್ಟಿ ಮಾಡಲಾಯಿತು. ಆದರೆ ಈ ಐದರಲ್ಲಿ ಒಂದಾದರೂ ಮಹಿಳೆಯರಿಗೆ ನೀಡಬಹುದಾಗಿತ್ತು. ಆದರೆ ಒಂದಾದರೂ ಮಹಿಳೆಯರಿಗೆ ನೀಡಿದ್ದಾರಾ? ಚುನಾವಣೆಯಲ್ಲಿ ಸ್ಪರ್ಧಿಸುತ್ತೇವೆ ಟಿಕೆಟ್ ನೀಡಿ ಎಂದು ನಾಯಕರ ಮನೆಗೆ ಹೋದರೆ, ಹಣ ಇದ್ಯಾ? ನಿಮ್ಮ ಗಂಡಂದಿರು ದುಡ್ಡು ದುಡ್ಡು ಖರ್ಚು ಮಾಡುವರೇ ಎಂದು ಕೇಳುತ್ತಾರೆ. ನಮಗೂ ಪಕ್ಷ ಕಟ್ಟುವ ಸಮರ್ಥತೆಯಿದ್ದು, ನಮಗೆ ಏಕೆ ಸ್ಥಾನಮಾನ ಕೊಡಲ್ಲ. ಅದನ್ನ ನಾವು ಕೇಳೋಣ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈತ್ರಿ ಅಭ್ಯರ್ಥಿಯ ಬಗ್ಗೆ ಶಾಸಕ ತನ್ವೀರ್ ಸೇಠ್ ವ್ಯಂಗ್ಯ

ಚನ್ನಪಟ್ಟಣಕ್ಕೆ ಕಾಂಗ್ರೆಸ್ ಅಭ್ಯರ್ಥಿ ಹೆಸರು ಶೀಘ್ರವೇ ಘೋಷಣೆ

ಮೈಸೂರು: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗಾಗಿ ನಾಲ್ಕೈದು ದಿನದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಘೋಷಣೆಯಾಗಲಿದೆ ಎಂದು

ಶಾಸಕ ತನ್ವೀರ್ ಸೇಠ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಷ್ಟ್ರ ರಾಜಕಾರಣವೇ ಬೇರೆ, ಚನ್ನಪಟ್ಟಣ ಪರಿಸ್ಥಿತಿಯೇ ಬೇರೆ. ಉಪಚುನಾವಣೆ ಯಲ್ಲಿ ಚನ್ನಪಟ್ಟಣ ಬಹಳ ವಿಶೇಷವಾಗಿದೆ. ಶಿಗ್ಗಾವಿ, ಸಂಡೂರು ಒಂದಾದರೆ, ಚನ್ನಪಟ್ಟಣ ಅತ್ಯಂತ ಕುತೂಹಲ ಮೂಡಿಸಿದೆ. ಈಗಾಗಲೇ ಅಭ್ಯರ್ಥಿ ಆಕಾಂಕ್ಷಿಗಳಿಂದ ಅರ್ಜಿ ಆಹ್ವಾನ ಮಾಡಲಾಗಿದೆ. ಮೈತ್ರಿ ಅಭ್ಯರ್ಥಿ ಯಾರು? ಕಾಂಗ್ರೆಸ್‌ನಿಂದ ಯಾರು ಎಂಬುದು ಪ್ರಶ್ನೆ. ಡಿಸಿಎಂ ನಾನೇ ಅಭ್ಯರ್ಥಿ ಅಂತ ಹೇಳಿದ್ದಾರೆ. ಆದಾಗ್ಯೂ ಪರಿಸ್ಥಿತಿಗೆ ಅನುಗುಣವಾಗಿ ಕಾಂಗ್ರೆಸ್ ಅಭ್ಯರ್ಥಿ ಹಾಕುವ ಕೆಲಸ ಮಾಡುತ್ತದೆ. ನಾಲ್ಕೈದು ದಿನದಲ್ಲಿ ಚನ್ನಪಟ್ಟಣ ಕಾಂಗ್ರೆಸ್ ಅಭ್ಯರ್ಥಿ ಘೋಷಣೆ ಆಗುತ್ತದೆ ಎಂದರು.

ಡಿಕೆ ಸುರೇಶ್‌ಗೆ ಅವಕಾಶ?

ಡಿಕೆ ಸುರೇಶ್ ರಾಜಕೀಯವಾಗಿ ಮುಂದುವರಿಯಬೇಕಾದ ಅನಿವಾರ್ಯತೆ ಪಕ್ಷಕ್ಕೆ ಇದೆ. ಸಾಮಾಜಿಕ ನ್ಯಾಯದ ವಿಚಾರದಲ್ಲಿ ಶಿಗ್ಗಾವಿಯಲ್ಲಿ ಮುಸ್ಲಿಂ ಅಭ್ಯರ್ಥಿ ನಿಲ್ಲಿಸಿ ಅಂತ ನಾನೂ ಕೂಡ ಮನವಿ ಮಾಡಿದ್ದೇನೆ. ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಒಂದು ಸಮುದಾಯ ಗುರಿಯಾಗಿ ಇಟ್ಟುಕೊಂಡು ಅಮಾಯಕರ ಮೇಲೆ ಕೇಸ್ ಹಾಕಿತ್ತು. ಆ ಕೇಸ್ ಈಗ ವಾಪಸ್ ಪಡೆದಿದ್ದೇವೆ. ಇದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು.

ಅನಾರೋಗ್ಯದಿಂದ ಮರೀಗೌಡ ರಾಜೀನಾಮೆ

ಮೈಸೂರು: ರಕ್ತದೊತ್ತಡ, ಆರೋಗ್ಯದ ಕಾರಣಕ್ಕಾಗಿ ಕೆ.ಮರೀಗೌಡ ಅವರು ಮುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆಯೇ ಹೊರತು ರಾಜಕೀಯ ಒತ್ತಡಕ್ಕಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅವರಿಗೆ ರಕ್ತದೊತ್ತಡ ಮೊದಲಿನಿಂದಲೂ ಇದೆ. ಈಗ 300, 400ರಷ್ಟು ಒತ್ತಡ ಹೆಚ್ಚಾಗಿದೆ.

ರಕ್ತನಾಳಗಳಲ್ಲಿ ಉಂಟಾಗುವ ಒತ್ತಡವೇ ರಕ್ತದೊತ್ತಡ ಎಂದು ಹೇಳಿದರು. ಪ್ರಜಾಪ್ರಭುತ್ವದಲ್ಲಿ ಪರ- ವಿರೋಧ ಇದ್ದದ್ದೇ. ಎಲ್ಲವನ್ನು ಸರಿ ಮಾಡಿ ಮುಂದೆ ಹೋಗಲೇಬೇಕು. ಜಾತಿ ಜನಗಣತಿ ನಡೆಸುವುದಾಗಿ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿಯೇ ಹೇಳಿದೆ. ಅದನ್ನು ಅನುಷ್ಠಾನಗೊಳಿಸಲಿದೆ. ಜಾತಿ ಜನಗಣತಿ ನಡೆಸುವುದರಿಂದ ಸಮುದಾ ಯಗಳ ಜೀವನಮಟ್ಟ, ಆರ್ಥಿಕ ಸ್ಥಿತಿ, ಉದ್ಯೋಗ ಮೊದಲಾದ ಅಂಶಗಳು ಸರಕಾರಕ್ಕೆ ಗೊತ್ತಾಗುತ್ತವೆ. ದೇಶದ ವಾರ್ಷಿಕ ಬಜೆಟ್ 48 ಲಕ್ಷ ಕೋಟಿ ಇದ್ದು, ಅದನ್ನು ಸರಿಯಾಗಿ ವಿನಿಯೋಗಿಸಲು ಜನಗಣತಿ, ಜಾತಿಗಣತಿ ನೆರವಾಗುತ್ತವೆ' ಎಂದು ತಿಳಿಸಿದರು.

ಕೊಲ್ಲೂರು ಮಕಾಂಬಿಕೆ ಸನ್ನಿಧಿಯಲ್ಲಿ ಕುಟುಂಬ ಸಮೇತ ಪೂಜೆ

ಮಾಜಿ ಸಂಸದ ಸುರೇಶ್ ಪರವಾಗಿ ಎಂ.ಸಿ.ಅಶ್ವಥ್ ಚಂಡಿಕಾಯಾಗ

ರಾಮನಗರ: ಉಪ ಚುನಾವಣೆ ಘೋಷಣೆಯಾಗುತ್ತಿದ್ದಂತೆ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಚಟುವಟಿಕೆಗಳು ಗರಿಗೆದರಿವೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಂದ ತೆರವಾಗಿರುವ ಸ್ಥಾನಕ್ಕೆ ನಡೆಯಲಿರುವ ಚುನಾವಣೆಯು ಎಚ್‌ಡಿಕೆ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಅವರಿಗೆ ಪ್ರತಿಷ್ಠೆಯ ಕಣವಾಗಿದೆ.

ಲೋಕಸಭೆ ಚುನಾವಣೆಯಲ್ಲಿ ಸೋತ ಡಿ.ಕೆ. ಸುರೇಶ್ ಚನ್ನಪಟ್ಟಣದಲ್ಲಿ ಕಣಕ್ಕೆ ಇಳಿಯಲಿದ್ದಾರೆ ಎಂಬ ಮಾತುಗಳಿವೆ. ಅವರ ಪರವಾಗಿ ಹಲವರು ಬೆಂಬಲಕ್ಕೆ ನಿಂತಿದ್ದಾರೆ. ಇದೀಗ ಮಾಜಿ ಶಾಸಕ ಎಂ.ಸಿ.ಅಶ್ವಥ್ ಕೊಲ್ಲೂರು ಮೂಕಾಂಬಿಕೆ ಸನ್ನಿಧಿಯಲ್ಲಿ ಚಂಡಿಕಾಯಾಗ ನಡೆಸಿದ್ದಾರೆ. ಡಿ.ಕೆ.ಸುರೇಶ್ ಹೆಸರಿನಲ್ಲಿ ಕುಟುಂಬ ಸಮೇತವಾಗಿ ಅಶ್ವಥ್ ಪೂಜೆ ಸಲ್ಲಿಸಿ, ಚುನಾವಣೆಯಲ್ಲಿ ಗೆಲುವಾಗಲಿ ಎಂದು ಪ್ರಾರ್ಥನೆ ಮಾಡಿದ್ದಾರೆ.

ಮಾಜಿ ಶಾಸಕ ಎಂ.ಸಿ.ಅಶ್ವಥ್ ಅವರು ಕೊಲ್ಲೂರು ಮೂಕಾಂಬಿಕೆ ಸನ್ನಿಧಿಯಲ್ಲಿ ಡಿ.ಕೆ.ಸುರೇಶ್ ಹೆಸರಿನಲ್ಲಿ ಕುಟುಂಬ ಸಮೇತವಾಗಿ ಪೂಜೆ ಸಲ್ಲಿಸಿದ್ದಾರೆ.

ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿ ಇತರರೂ ಪ್ರಯತ್ನ ಪಡುತ್ತಿದ್ದಾರೆ. ರಘುನಂದನ್ ರಾಮಣ್ಣ ಅವರು ಹೆಸರೂ ಕೇಳಿಬರುತ್ತಿದೆ. ಮತ್ತೊಂದೆಡೆ ಮತ್ತೆ ಕಾಂಗ್ರೆಸ್ ಸೇರಿರುವ ತೇಜಸ್ವಿನಿ ಗೌಡ ಅವರು ಕೂಡಾ ಟಿಕೆಟ್‌ಗಾಗಿ ಪ್ರಯತ್ನ ಮಾಡುತ್ತಿದ್ದಾರೆ.

ಚನ್ನಪಟ್ಟಣ ಟಿಕೆಟ್ ವಿಚಾರದಲ್ಲಿ ಮೈತ್ರಿಯ ಹಿರಿಯರದೇ ತೀರ್ಮಾನ

ಅಭ್ಯರ್ಥಿ ಬಗ್ಗೆ ನಾಳೆ ತೀರ್ಮಾನ: ಕುಮಾರಸ್ವಾಮಿ

ರಾಮನಗರ: ಚನ್ನಪಟ್ಟಣ ಉಪ ಚುನಾವಣೆ ಟಿಕೆಟ್ ಕುರಿತು ಯಾರು ಏನು ಬೇಕಾದರೂ ಹೇಳಬಹುದು. ಕ್ಷೇತ್ರದಲ್ಲಿ ಎನ್‌ಡಿಎ

ಗೆಲ್ಲಬೇಕಷ್ಟೇ. ರಾಜಕೀಯ ವಾಸ್ತವಾಂಶಗಳ ಲೆಕ್ಕಾಚಾರ ಮಾಡಿ ಬಿಜೆಪಿ-ಜೆಡಿಎಸ್ ಮೈತ್ರಿಯ ಹಿರಿಯ ನಾಯಕರು ಅಭ್ಯರ್ಥಿಯನ್ನು ತೀರ್ಮಾನಿಸುತ್ತೇವೆ ಎಂದು ಕೇಂದ್ರ ಸಚಿವ ಎಚ್ .ಡಿ. ಕುಮಾರಸ್ವಾಮಿ ಸ್ಪಷ್ಟವಾಗಿ ಹೇಳಿದ್ದಾರೆ.

ಚನ್ನಪಟ್ಟಣ ಸೇರಿದಂತೆ ಉಪಚುನಾವಣೆ ಬಗ್ಗೆ ಬಿಡದಿಯ ಕೇತಗಾನಹಳ್ಳಿಯಲ್ಲಿ ಜೆಡಿಎಸ್‌ನ ಪ್ರಮುಖ ನಾಯಕರೊಂದಿಗೆ ಗುರುವಾರ ಎಚ್‌ಡಿಕೆ ಮಹತ್ವದ ಸಭೆ ನಡೆಸಿದರು. ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಅನುಸರಿಸಬೇಕಾದ ಕಾರ್ಯತಂತ್ರದ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

ನಂತರ ಕೇಂದ್ರ ಸಚಿವ ಕುಮಾರಸ್ವಾಮಿ ಮಾತನಾಡಿ, ನಾನೇ ಎನ್‌ಡಿಎ ಅಭ್ಯರ್ಥಿ ಎಂಬ ಬಿಜೆಪಿ ನಾಯಕ ಸಿ.ಪಿ. ಯೋಗೇಶ್ವರ್ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ಟಿಕೆಟ್ ಕುರಿತು ಬಿಜೆಪಿಯ ನಾಯಕರಾದ ಬಿ.ವೈ. ವಿಜಯೇಂದ್ರ ಹಾಗೂ ಅಶೋಕ್ ಜೊತೆ ಮಾತನಾಡಿದ್ದೇನೆ. ಪ್ರಮುಖರು ಸೇರಿ ಶನಿವಾರ ಚರ್ಚಿಸಿ ನಿರ್ಧರಿಸೋಣ ಎಂದಿದ್ದೇನೆ ಎಂದರು.

ಎನ್‌ಡಿಎ ಗೆಲುವು ಮುಖ್ಯ: ಮೂರೂ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಗೆಲ್ಲಬೇಕು ಎಂಬುದು ನಮ್ಮ ಉದ್ದೇಶ. ಹಾಗಾಗಿ, ನಮ್ಮ ಸಂಘಟನೆ ಹಾಗೂ ಪಾತ್ರ ಏನಿರಬೇಕು ಎಂಬುದರ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡುತ್ತೇವೆ. ಶಿಗ್ಗಾವಿ ಮತ್ತು ಸಂಡೂರಿನಲ್ಲಿ ನಮ್ಮ ಪಾತ್ರ ಕಡಿಮೆ ಇರಬಹುದು. ಆದರೆ, ಒಂದೊಂದು ಮತವೂ ಮುಖ್ಯವಾಗುತ್ತದೆ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

> ಸದ್ಯದ ಪರಿಸ್ಥಿತಿಯಲ್ಲಿ ಚುನಾವಣೆ ಬೇಡ, ಇನ್ನೂ ಮೂರು ವರ್ಷ ಪಕ್ಷ ಸಂಘಟನೆ ಮಾಡುತ್ತೇನೆ ಎಂದು ನಿಖಿಲ್ ಕುಮಾರಸ್ವಾಮಿ ನನ್ನ ಬಳಿ ಹೇಳಿಕೊಂಡಿದ್ದಾರೆ. ಚನ್ನಪಟ್ಟಣ ಎಚ್.ಡಿ.ಕುಮಾರಸ್ವಾಮಿ ಪ್ರತಿನಿಧಿಸುತ್ತಿದ್ದ ಕ್ಷೇತ್ರವಾಗಿದೆ. ಈಗ ಎನ್‌ಡಿಎ ಅಭ್ಯರ್ಥಿ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಬೇಕು. ಇವತ್ತು ಪೂರ್ವಭಾವಿಯಾಗಿ ಚರ್ಚೆ ಮಾಡಿದ್ದೇವೆ. ಅಭ್ಯರ್ಥಿ ಆಯ್ಕೆ ಬಗ್ಗೆ ಎರಡೂ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಮೂರು ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು ಗೆಲ್ಲಬೇಕು ಅಷ್ಟೇ.
> -ಸಾ.ರಾ. ಮಹೇಶ್, ಶಾಸಕ

ಜಿಟಿಡಿಗೆ ಒಂದೊಂದು ಸಲ ಹೀಗಾಗುತ್ತೆ

ಚುನಾವಣಾ ಚಟುವಟಿಕೆಗಳಿಂದ ಜೆಡಿಎಸ್ ಕೋರ್ ಸಮಿತಿಅಧ್ಯಕ್ಷ ಜಿ.ಟಿ. ದೇವೇಗೌಡ ಪಕ್ಷದ ಚಟುವಟಿಕೆಗಳಿಂದ ದೂರ ಉಳಿಯುತ್ತಿರುವ ಬಗ್ಗೆ ಉತ್ತರಿಸಿದ ಅವರು, ಆ ರೀತಿ ಏನಿಲ್ಲ. ನಾವಿನ್ನೂ ಸಮಿತಿ ಸಭೆಯನ್ನೇ ಕರೆದಿಲ್ಲ. ಅವರಿಗೆ ಒಂದೊಂದು ಸಲ ಹೀಗಾಗುತ್ತೆ. ಬಳಿಕ ಅವರೇ ತೀರ್ಮಾನಿಸಿಕೊಂಡು ಯಾವ ಸಮಯಕ್ಕೆ ಬರಬೇಕೊ ಬರುತ್ತಾರೆ ಎಂದು ಮಾರ್ಮಿಕವಾಗಿ ನುಡಿದರು.

ಪಕ್ಷ ಸೂಚಿಸಿದರೆ ಮಹಾರಾಷ್ಟ್ರದ ಚುನಾವಣಾ ಪ್ರಚಾರಕ್ಕೆ ಹೋಗುವೆ

ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ: ಸವದಿ

ಅಥಣಿ: ನೆರೆಯ ಮಹಾರಾಷ್ಟ್ರ ರಾಜ್ಯದ ವಿಧಾನಸಭಾ ಚುನಾವಣೆ ಪ್ರಚಾರಕ್ಕೆ ಕಾಂಗ್ರೆಸ್ ಪಕ್ಷದಿಂದ ಸೂಚನೆ ಬಂದರೆ ಹೋಗುತ್ತೇನೆ. ಪಕ್ಷದಿಂದ ಸೂಚನೆ ನೀಡಿದರೆ ಮಹಾರಾಷ್ಟ್ರದ ಯಾವುದೇ ಕ್ಷೇತ್ರದಲ್ಲಿ ನಮ್ಮ ಪಕ್ಷದ ಅಭ್ಯರ್ಥಿಯ ಪರವಾಗಿ ಪ್ರಚಾರ

ಮಾಡುತ್ತೇನೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ ರಾಜ್ಯದಲ್ಲಿ ಕೆಲವು ಮತಕ್ಷೇತ್ರಗಳಲ್ಲಿ ಉಪ ಚುನಾವಣೆ ಮತ್ತು ನೆರೆಯ ಮಹಾರಾಷ್ಟ್ರ ರಾಜ್ಯದ ವಿಧಾನಸಭಾ ಚುನಾವಣೆ ಸಿದ್ಧತೆ ನಡೆದಿದ್ದು, ಪಕ್ಷದ ಹೈಕಮಾಂಡ್ ಪ್ರಚಾರದ ಉಸ್ತುವಾರಿ ನೀಡಿದರೆ ಅಲ್ಲಿಗೆ ಹೋಗಿ ನಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡುತ್ತೇನೆ ಎಂದು ಹೇಳಿದರು.

ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ

ಸಿಎಂ ಬದಲಾವಣೆಯ ಊಹಾಪೋಹಗಳು ಹೆಚ್ಚಾಗುತ್ತಿದ್ದು, ಈ ಬಗ್ಗೆ ತಮ್ಮ ಪ್ರತಿಕ್ರಿಯೆ ಏನು ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಯಾವುದೇ ತಪ್ಪು ಮಾಡಿಲ್ಲ, ಅವರ ಮೇಲಿನ ಮುಡಾ ಹಗರಣದ ಆರೋಪ ನಿರಾಧಾರವಾಗಿದ್ದು, ಅವರು ರಾಜೀನಾಮೆ ಕೊಡುವ ಪ್ರಶ್ನೆ ಬರುವುದಿಲ್ಲ. ಅವರೇ ಮುಖ್ಯಮಂತ್ರಿಗಳಾಗಿ ಮುಂದುವರಿಯುತ್ತಾರೆ. ಸದ್ಯ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ, ಅದರ ಬಗ್ಗೆ ಚರ್ಚೆ ಮಾಡುವುದು ಸಮಂಜಸವಲ್ಲ ಎಂದು ಹೇಳಿದರು.

100 ಜನರಿಗೆ ವಿಶೇಷ ಪ್ರಶಸ್ತಿ: ತಂಗಡಗಿ

ಕೊಪ್ಪಳ: ಈ ಬಾರಿ 69 ಜನರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುವುದು. ಸುವರ್ಣ ಕರ್ನಾಟಕ ವರ್ಷಾಚರಣೆಯ ಕಾರಣ 100 ಪ್ರತಿಭಾನ್ವಿತರಿಗೆ ವಿಶೇಷ ಪ್ರಶಸ್ತಿ ಕೊಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು 'ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡುವಂತೆ ಅನೇಕ ಶಿಫಾರಸುಗಳು ಬಂದಿವೆಯಾದರೂ ಆಯ್ಕೆ ಸಮಿತಿಯಿದೆ. ಈ ಸಮಿತಿ ಅರ್ಹರನ್ನೇ ಆಯ್ಕೆ ಮಾಡುತ್ತದೆ. ವಿಶೇಷ ಪ್ರಶಸ್ತಿಯನ್ನು ತಲಾ 50 ಮಹಿಳೆಯರು ಹಾಗೂ ಪುರುಷರಿಗೆ ನೀಡಲಾಗುವುದು ಎಂದರು.

ಜಾತಿಗಣತಿ ವಿಚಾರದಲ್ಲಿ ಮುಖ್ಯಮಂತ್ರಿ ಹೇಳಿದಂತೆ ಅವರ ಆದೇಶ ಪಾಲನೆ ಮಾಡುವೆ ಎಂದು ಹೇಳಿದರು.

ವಿಶ್ವವಾಣಿ

ಸಂಪಾದಕೀಯ

ಅತಿವೃಷ್ಟಿ-ಅನಾವೃಷ್ಟಿಗಳ ಕುಣಿಕೆ

ಎರಡು ತೆರನಾದ ಅತಿರೇಕಗಳಿಗೆ ಸಾಕ್ಷಿಯಾಗಿ ನಿಂತಿದೆ ಕರ್ನಾಟಕ ರಾಜ್ಯ. ಋತುಮಾನಕ್ಕೆ ತಕ್ಕಂತೆ ನಿಗದಿತ ಪ್ರಮಾಣದಲ್ಲಿ ಮಳೆಯಾಗದೆ ಕಳೆದ ವರ್ಷ ರಾಜ್ಯದ ವಿವಿಧೆಡೆಯ ಜನರು, ನಿರ್ದಿಷ್ಟವಾಗಿ ಕೃಷಿಕರು ಅನುಭವಿಸಿದ ಸಂಕಟ-ಸಂಕಷ್ಟಗಳದ್ದು ಒಂದು ಕಥೆಯಾದರೆ, ಮೊನ್ನೆ ಭರ್ಜರಿ ಮಳೆಸುರಿತದಿಂದಾಗಿ ಅಕ್ಷರಶಃ 'ಮಳೆನಾಡಾಗಿ' ಮಾರ್ಪಾಡುಗೊಂಡ ಬೆಂಗಳೂರಿನದ್ದು ಮತ್ತೊಂದು ತೆರನಾದ ಬವಣೆ. ಸಾಯಿ ಲೇಔಟ್ ಸೇರಿದಂತೆ ಮಹಾನಗರಿಯ ಹಲವು ಬಡಾವಣೆಗಳಲ್ಲಿ ಮೊಣಕಾಲು ಮುಳುಗುವಷ್ಟರ ಮಟ್ಟದ ನೀರು ಜಮೆಯಾಗಿದ್ದು, ಪ್ರತಿಷ್ಠಿತ ಅಪಾರ್ಟ್‌ಮೆಂಟ್‌ಗಳ ಬೇಸ್‌ಮೆಂಟ್‌ಗಳಲ್ಲಿನ ವಾಹನಗಳ ಮುಳುಗಡೆಯಾಗಿದ್ದು, ರಸ್ತೆಗಳಲ್ಲಿ ಜನರ ಮತ್ತು ವಾಹನಗಳ ಸಂಚಾರ ದುಸ್ತರವಾಗಿದ್ದು ಹೀಗೆ ಹೇಳುತ್ತ ಹೋದರೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಮಿತಿಮೀರಿದ ಮಳೆಸುರಿತವು ಮನುಷ್ಯನ ನಿಯಂತ್ರಣದಲ್ಲಿ ಇಲ್ಲದ ಬಾಬತ್ತು; ಆದರೆ ಮುನ್ನೆಚ್ಚರಿಕಾ ಕ್ರಮಗಳ ಕಡೆಗಾದರೂ ಆತ ಗಮನ ಹರಿಸಬಹುದಲ್ಲವೇ? ಆದರೆ, 'ಗಡ್ಡಕ್ಕೆ ಬೆಂಕಿ ಬಿದ್ದಾಗ ಬೋರ್‌ವೆಲ್ ತೋಡಿಸಲು ಮುಂದಾಗುವ' ಪರಿಪಾಠ ನಮ್ಮ ವ್ಯವಸ್ಥೆಯಲ್ಲಿ ಇನ್ನೂ ಮನೆಮಾಡಿದೆ. ಹೀಗಾಗಿ ಸಮಸ್ಯೆಯೂ ನಿರಂತರವಾಗಿದೆ. ಬೆಂಗಳೂರಿನ ಮಡಿಲಲ್ಲಿದ್ದ ನೂರಾರು ಕೆರೆಗಳನ್ನು ಭೂಗಳ್ಳರು ಗುಳುಂ ಮಾಡಿ, ಅಪಾರ್ಟ್‌ಮೆಂಟುಗಳನ್ನು ಎಬ್ಬಿಸಿದಾಗಲೇ ಸಂಬಂಧಪಟ್ಟವರು ಅವರಿಗೆ ಚುರುಕು ಮುಟ್ಟಿಸಬೇಕಿತ್ತು. ಆದರೆ ಹಾಗಾಗಲಿಲ್ಲವೇ! ಸಾಲದೆಂಬಂತೆ, ಕಂಡಕಂಡ ನೆಲಕ್ಕೆಲ್ಲಾ ಕಾಂಕ್ರೀಟ್ ಮೆತ್ತಿಸಿಬಿಟ್ಟಿರುವ ಸ್ಥಿತಿ ನಮ್ಮಲ್ಲಿ ಸಾಕಷ್ಟು ಕಾಣಸಿಗುತ್ತದೆ. ಹೀಗಿರುವಾಗ, ಸುರಿದ ಮಳೆನೀರು ಮಣ್ಣಿನಲ್ಲಿ ಇಂಗುವುದಾದರೂ ಹೇಗೆ? ಇಲ್ಲದ ಕೆರೆ-ಕಟ್ಟೆಗಳನ್ನು ಅದು ಸೇರುವುದಾದರೂ ಹೇಗೆ? ಮಹಾನಗರಿಯಲ್ಲಿ ಅಂತರ್ಜಲದ ಮಟ್ಟ ತೀವ್ರವಾಗಿ ಕುಸಿದಿದೆ, ನೀರಿನಲ್ಲಿ ಅಪಾಯಕಾರಿ ಫ್ಲೋರೈಡ್ ಅಂಶವಿದೆ ಎಂದು ಅಬ್ಬರಿಸಿ ಬೊಬ್ಬಿರಿಯುವವರು ಈ ಕಹಿವಾಸ್ತವವನ್ನೇಕೆ ಗ್ರಹಿಸುವುದಿಲ್ಲ? 'ತಡೆಗಟ್ಟುವಿಕೆಯ ಚಿಕಿತ್ಸೆಗಿಂತ ಉತ್ತಮವಾದ ಕ್ರಮ' ಎಂಬುದೊಂದು ಮಾತಿದೆ. ಆದರೆ ಇಂಥ 'ಮುಂಜಾಗ್ರತೆಯ ಚಿತ್ತಸ್ಥಿತಿ' ನಮ್ಮವರಲ್ಲಿ ಮಂಗಮಾಯವಾಗಿರುವುದೇ, ಮಳೆಸುರಿತದಿಂದಾಗುವ ಅಸ್ತವ್ಯಸ್ತತೆಗಳಿಗೆ ಕಾರಣವಾಗಿಬಿಟ್ಟಿದೆ.

ಸೊಂಪಾದಕೀಯ

ಬಾರೋ ಬಾರೋ ಮಳೆರಾಯ

ಕಳೆದ ಎರಡು ದಿನಗಳಿಂದ ಬೆಂಗಳೂರು ಮಳೆನೀರಿನಿಂದ ತಡವರಿಸುತ್ತಿದೆ. ಬೆಂಗಳೂರಿನ ಹಲವು ಪ್ರತಿಷ್ಠಿತ ಬಡಾವಣೆಗಳು ಕೂಡ ಮಳೆರಾಯನ ಕಾಟಕ್ಕೆ ಸಿಕ್ಕು ಸ್ಲಮ್‌ಗಳಿಗಿಂತ ಕಡೆ ಎನ್ನುವಂತೆ ಆಗಿವೆ. ಅಪಾರ್ಟ್‌ಮೆಂಟುಗಳ ಬೇಸ್‌ಮೆಂಟ್‌ಗೆ ನೀರು ನುಗ್ಗಿ ಕೋಟಿಗಟ್ಟಲೆ ಬೆಲೆಬಾಳುವ ಮನೆಗಳನ್ನು ಆವರಿಸಿದೆ. ಹಾಗಾಗಿ ಬೆಂಗಳೂರಿನ ಬಹುತೇಕ ಜನ 'ಯಾತಕ್ಕೆ ಮಳೆ ಹೊಯ್ದವೋ' ಎಂದು ಹಾಡುತ್ತ ಕಂಗಾಲಾಗಿದ್ದರೆ ಕ್ರಿಕೆಟ್ ಪ್ರೇಮಿಗಳ ಪರಿಸ್ಥಿತಿ ಭಿನ್ನವಾಗಿದೆ. ಬೆಂಗಳೂರಿನಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಟೆಸ್ಟ್ ಪಂದ್ಯ ಶುರುವಾಗಿದೆ. ಮೊದಲ ದಿನ ಮಳೆಯ ಕಾಟದಿಂದ ಒಂದು ಬಾಲು ಕೂಡ ಬೌಲ್ ಮಾಡಲಾಗದೆ ಆಟ ರದ್ದಾಗಿತ್ತು. ಹವಾಮಾನ ಇಲಾಖೆಯ ಪ್ರಕಾರ ಇನ್ನೊಂದೆರಡು ದಿನ ಮಳೆಯ ಕಾಟ ಇರುವುದರಿಂದ ಈ ಟೆಸ್ಟ್‌ನ ಕಥೆ ಇಷ್ಟೇ ಎಂದು ಕ್ರಿಕೆಟ್ ಪ್ರೇಮಿಗಳು ಸುಮ್ಮನಾಗಿದ್ದರು. ಆದರೆ ಇದ್ದಕ್ಕಿದ್ದಂತೆ ನಿನ್ನೆ ಮಳೆ ನಿಂತುಹೋಗಿ ಆಟ ಶುರುವಾಗಿತ್ತು. ಆದರೆ ಈಗ 'ಯಾತಕ್ಕೆ ಮಳೆ ನಿಂತಿತೋ' ಎಂದು ಹಾಡುವಂಥ ಪರಿಸ್ಥಿತಿ ಕ್ರಿಕೆಟ್ ಪ್ರೇಮಿಗಳದ್ದಾಗಿದೆ. ಅದಕ್ಕೆ ಕಾರಣ ಭಾರತದ ಬ್ಯಾಟಿಂಗ್. ಮೊದಲು ಬ್ಯಾಟಿಂಗ್ ಮಾಡುವ ಹುಮ್ಮಸ್ಸಿನಲ್ಲಿ ಫೀಲ್ಡ್‌ಗೆ ಇಳಿದ ಭಾರತ ತಂಡ ಕೇವಲ 46 ರನ್ನುಗಳಿಗೆ ಆಲ್ ಔಟ್ ಆಗಿ ಕೆಟ್ಟ ದಾಖಲೆಯನ್ನು ಜಸ್ಟ್ ಮಿಸ್ ಮಾಡಿಕೊಂಡಿದೆ. ಘಟಾನುಘಟಿ ದಾಂಡಿಗರೆಲ್ಲ 'ಬಂದ್ಯಾ ಪುಟ್ಟ ಹೋದ್ಯಾ ಪುಟ್ಟ' ಎನ್ನುವಂತೆ ಬಂದು ಹೋಗುತ್ತಾ ಭಾರತದ ಕಳಪೆ ಪ್ರದರ್ಶನಕ್ಕೆ ಕಾರಣವಾಗಿದ್ದಾರೆ. ಇದಕ್ಕೆ ವಿರಾಟ್ ಕೊಹ್ಲಿ, ರೋಹಿತ್ ಶರ್ಮ ಕೂಡ ಹೊರತಾಗಿಲ್ಲ. ಹೋಗಲಿ ಎಂದರೆ, ಇದರ ನಂತರ ನ್ಯೂಜಿಲೆಂಡ್ ಬ್ಯಾಟಿಂಗ್‌ನಲ್ಲಿ ಆದರೂ ಭಾರತ ಬೌಲಿಂಗ್ ಕರಾಮತ್ತು ತೋರಿಸುತ್ತದೆ ಎಂದು ನಂಬಿಕೊಂಡವರಿಗೆ ನಿರಾಸೆಯಾಗಿದೆ. ನ್ಯೂಜಿಲೆಂಡ್ ದಾಂಡಿಗರು 180 ರನ್ನುಗಳಿಗೆ 3 ವಿಕೆಟ್ ಕಳೆದುಕೊಂಡು ಉತ್ತಮ ಮೊತ್ತ ಪೇರಿಸುವತ್ತ ಸಾಗುತ್ತಿದ್ದಾರೆ. ಜಸ್ಪ್ರೀತ್ ಬುಮ್ರಾ ಅವರಂಥ ಬೌಲರ್ ಕೂಡ 'ಡೆಸ್ಪರೇಟ್ ಬುಮ್ರಾ' ಎನ್ನುವಂತೆ ವಿಕೆಟ್ ಸಿಗದೆ ಕಂಗಾಲಾಗಿದ್ದಾರೆ. ಮೊನ್ನೆ ತಾನೇ ಬಾಂಗ್ಲಾದೇಶದ ಮೇಲೆ, ಸಿಕ್ಕ ಎರಡು ದಿನಗಳಲ್ಲಿ ಗೆಲುವು ಸಾಧಿಸಿದ್ದ ಭಾರತ ಈ ರೀತಿ ಪ್ರದರ್ಶನ ನೀಡಿರುವುದನ್ನು ನೋಡಿ ಕ್ರಿಕೆಟ್ ಅಭಿಮಾನಿಗಳಂತೂ ಕಂಗೆಟ್ಟು ಹೋಗಿದ್ದಾರೆ.

ಸಂಪಾದಕರ ಸದ್ಯಶೋಧನೆ

ಕೆಎಲ್‌ಎಂ ಏರ್‌ಲೈನ್ಸ್

ಕೆಎಲ್‌ಎಂ (Koninklijke Luchtvaart Maatschappij-KLM) ರಾಯಲ್ ಡಚ್ ಏರ್‌ಲೈನ್ಸ್ ನೆದರ್ಲ್ಯಾಂಡ್‌ನ ರಾಷ್ಟ್ರೀಯ ವಿಮಾನಯಾನ ಸಂಸ್ಥೆ ಮಾತ್ರವಲ್ಲ, ಇದು ವಾಸ್ತವವಾಗಿ ಇಂದಿಗೂ ಕಾರ್ಯನಿರ್ವಹಿಸುತ್ತಿರುವ ಅತ್ಯಂತ ಹಳೆಯ ವಿಮಾನಯಾನ ಸಂಸ್ಥೆಯಾಗಿದೆ. ಒಂದು ಶತಮಾನಕ್ಕೂ ಹೆಚ್ಚಿನ ಇತಿಹಾಸವನ್ನು ಹೊಂದಿದೆ. ಇತ್ತೀಚಿನ ವರ್ಷಗಳಲ್ಲಿ, ಕೆಎಲ್‌ಎಂ ವಿಮಾನಯಾನದಲ್ಲಿ ಜಾಗತಿಕವಾಗಿ ಗುರುತಿಸಿಕೊಂಡ ಬ್ರ್ಯಾಂಡ್ ಆಗಿ ಮಾರ್ಪಟ್ಟಿದೆ. ಪ್ರಸ್ತುತ 150ಕ್ಕೂ ಹೆಚ್ಚು ವಿಮಾನಗಳನ್ನು ಹೊಂದಿರುವ ಕೆಎಲ್‌ಎಂ, ಆಶ್ಚರ್ಯಕರ ಎಂಬಂತೆ, ಆಸ್ಟ್ರೇಲಿಯಾವನ್ನು ಹೊರತುಪಡಿಸಿ, ಪ್ರಪಂಚದಾದ್ಯಂತದ 160 ಸ್ಥಳಗಳಿಗೆ ಹಾರುತ್ತದೆ. ಅದರ ಶ್ರೀಮಂತ ಇತಿಹಾಸವು ಹತ್ತಾರು ಮೈಲಿಗಲ್ಲುಗಳು ಮತ್ತು ಆಕರ್ಷಕ ಕಥೆಗಳಿಂದ ತುಂಬಿದೆ. ಪಾರಂಪರಿಕ ವಿಮಾನಯಾನ ಸಂಸ್ಥೆಯಾಗಿ, ಕೆಎಲ್‌ಎಂ ಆಧುನಿಕ ವಾಯುಯಾನ ಉದ್ಯಮಕ್ಕಿಂತ ಹೆಚ್ಚು ಆಳದ ಬೇರುಗಳನ್ನು ಹೊಂದಿದೆ. ದಶಕಗಳಲ್ಲಿ ವಿಕಸನಗೊಳ್ಳಲು ಮತ್ತು ಪೈಪೋಟಿಯಲ್ಲಿ ಉಳಿಯಲು, ಪ್ರಪಂಚದ ನಿರಂತರ ಬದಲಾವಣೆಗಳಿಗೆ ಕೆಎಲ್‌ಎಂ ಹೊಂದಿಕೊಂಡಿದೆ. ವಿಶ್ವದ ಅತ್ಯಂತ ಹಳೆಯ ವಿಮಾನಯಾನ ಸಂಸ್ಥೆಯಾದ ಕೆಎಲ್‌ಎಂ ಅಕ್ಟೋಬರ್ 7, 1919ರಂದು ಸ್ಥಾಪನೆಯಾಯಿತು. ಇನ್ನೂ ಕಾರ್ಯನಿರ್ವಹಿಸುತ್ತಿರುವ ವಿಶ್ವದ ಅತ್ಯಂತ ಹಳೆಯ ವಿಮಾನಯಾನ ಸಂಸ್ಥೆ ಎಂಬ ಶೀರ್ಷಿಕೆಯನ್ನು ಹೊಂದಿರುವ ಕೆಎಲ್‌ಎಂ ಅನ್ನು, ಏರ್‌ಲೈನ್‌ನ ಮೊದಲ ಪೈಲಟ್ ಜೆರ್ರಿ ಶಾ, ಲಂಡನ್‌ನಿಂದ ಆಮ್‌ಸ್ಟರ್‌ಡ್ಯಾಮ್‌ಗೆ ತನ್ನ ಉದ್ಘಾಟನಾ ವಿಮಾನವಾಗಿ ಹಾರಿಸಿದ. ಇದು ವಾಯುಯಾನ ಇತಿಹಾಸವನ್ನು ದಾಖಲಿಸುವ ದೀರ್ಘ ಪ್ರಯಾಣದ ಪ್ರಾರಂಭವನ್ನು ಗುರುತಿಸುತ್ತದೆ. ಕೆಎಲ್‌ಎಂ ಆರಂಭವಾದನಿಂದ ಲೆಕ್ಕವಿಲ್ಲದಷ್ಟು ಇತರ ವಿಮಾನಯಾನ ಸಂಸ್ಥೆಗಳು ಬಂದು ಹೋಗಿವೆ. ಇದು ವಾಯು ಪ್ರಯಾಣದ ಏರಿಕೆ ಮತ್ತು ಕುಸಿತ, ಜೆಟ್ ಎಂಜಿನ್‌ಗಳ ಜನ್ಮವನ್ನು ನೋಡಿದೆ. ಅಷ್ಟೇ ಅಲ್ಲ, ಈಗ, ಇದು ಆಧುನಿಕ ವಾಣಿಜ್ಯ ವಾಯುಯಾನದ ಮುಂಚೂಣಿಯಲ್ಲಿರುವ ವಿಮಾನಯಾನ ಸಂಸ್ಥೆಯಾಗಿದೆ. ಕೆಎಲ್‌ಎಂ ಆರಂಭವಾಗುವುದಕ್ಕಿಂತ ಕೇವಲ 16 ವರ್ಷಗಳ ಹಿಂದೆ, 1903ರಲ್ಲಿ ರೈಟ್ ಬ್ರದರ್ಸ್ ತಮ್ಮ ವಿಮಾನವನ್ನು ಹಾರಿಸಿದ್ದರು. ಆಸ್ಟ್ರೇಲಿಯಾದಲ್ಲಿ, ಕ್ವಾಂಟಾಸ್ ಕೇವಲ ಒಂದು ವರ್ಷದ ನಂತರ, ನವೆಂಬರ್ 1920ರಲ್ಲಿ ಅಸ್ತಿತ್ವಕ್ಕೆ ಬಂತು. 1925ರಲ್ಲಿ ಅಮೆರಿಕದಲ್ಲಿ ಅಟ್ಲಾಂಟಿಕ್, ಡೆಲ್ಟಾ ಏರ್‌ಲೈನ್ಸ್ ಅಸ್ತಿತ್ವಕ್ಕೆ ಬಂದಿತು. ಅಂದರೆ ಕೆಎಲ್‌ಎಂ ಆರಂಭವಾಗುವ ಹಿಂದು-ಮುಂದಿನ ವರ್ಷಗಳಲ್ಲಿ ವಿಮಾನಯಾನಕ್ಕೆ ಸಂಬಂಧಿಸಿದ ಮಹತ್ವದ ವಿದ್ಯಮಾನಗಳು ಜರುಗಿದವು. ವಿಮಾನಯಾನ ಸಂಸ್ಥೆಯಾಗಿ ಕೆಎಲ್‌ಎಂ ಇತಿಹಾಸದಲ್ಲಿ ಮೂರು ಆಸಕ್ತಿದಾಯಕ 'ಮೊದಲುಗಳನ್ನು' ಆರಂಭಿಸಿದ ಅಗ್ಗಳಿಕೆಗೆ ಪಾತ್ರವಾಗಿದೆ. ಕೆಎಲ್‌ಎಂನ ಮೊದಲ ಹಾರಾಟವು ಡಿ ಹ್ಯಾವಿಲ್ಯಾಂಡ್ DH-16 ಅನ್ನು ಬಳಸಿಕೊಂಡು ಲಂಡನ್‌ನಿಂದ ಇಂಗ್ಲಿಷ್ ಚಾನೆಲ್ ಮೇಲೆ ಆಮ್‌ಸ್ಟರ್‌ಡ್ಯಾಮ್‌ಗೆ ಒಂದು ಸಣ್ಣ ಹಾರಾಟ ಆಗಿತ್ತು. ಕೆಎಲ್‌ಎಂ ಡೌಗ್ಲಾಸ್ DC-2 ವಿಮಾನವನ್ನು ನಿಯಮಿತ ಸೇವೆಗಾಗಿ ಬಳಸಿದ ಮೊದಲ ವಿಮಾನಯಾನ ಸಂಸ್ಥೆಯಾಗಿದ್ದು, 1930ರ ದಶಕದಲ್ಲಿ ವಾಣಿಜ್ಯ ವಿಮಾನಯಾನಕ್ಕೆ ಹೊಸ ಮಾನದಂಡಗಳನ್ನು ಸ್ಥಾಪಿಸಿತು. ಇತ್ತೀಚಿನ ಇತಿಹಾಸದಲ್ಲಿ, 24/7 ಕಾರ್ಯನಿರ್ವಹಿಸುವ ಸೋಷಿಯಲ್ ಮೀಡಿಯಾ ಸೇವಾ ತಂಡವನ್ನು ಪರಿಚಯಿಸಿದ ಮೊದಲ ವಿಮಾನಯಾನ ಸಂಸ್ಥೆಗಳಲ್ಲಿ ಕೆಎಲ್‌ಎಂ ಒಂದಾಗಿದೆ. ಈ ತಂಡವು 10 ವಿವಿಧ ಭಾಷೆಗಳಲ್ಲಿ ಗ್ರಾಹಕರ ವಿಚಾರಣೆಗಳಿಗೆ ಪ್ರತಿಕ್ರಿಯಿಸುತ್ತದೆ, ಪ್ರಯಾಣಿಕರೊಂದಿಗೆ ತಡೆರಹಿತ ಸಂವಹನವನ್ನು ಖಚಿತಪಡಿಸುತ್ತದೆ. ಆಮ್‌ಸ್ಟೆಲ್‌ವೀನ್‌ನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಕೆಎಲ್‌ಎಂ, ಆಮ್‌ಸ್ಟರ್‌ಡ್ಯಾಮ್ ಏರ್‌ಪೋರ್ಟ್ ಶಿಪೋಲ್‌ನಲ್ಲಿ ತನ್ನ ಕೇಂದ್ರ ಕಾರ್ಯಾಚರಣೆ (ಹಬ್)ಯನ್ನು ಹೊಂದಿದೆ. ಕೆಎಲ್‌ಎಂ ಏರ್‌ಫ್ರಾನ್ಸ್-ಕೆಎಲ್‌ಎಂ ಗುಂಪಿನ ಅಂಗಸಂಸ್ಥೆ ಮತ್ತು ಸ್ಕೈಟೀಮ್ ಏರ್‌ಲೈನ್ ಒಕ್ಕೂಟದ ಸದಸ್ಯ ಕೂಡ ಹೌದು. ಕೆಎಲ್‌ಎಂನ ವಿಮಾನಗಳು ತಮ್ಮ ಸಾಂಪ್ರದಾಯಿಕ ನೀಲಿ ಬಣ್ಣದಿಂದ ಸುಲಭವಾಗಿ ಗುರುತಿಸಲ್ಪಡುತ್ತವೆ, ಇದು ವಾಯುಯಾನ ಉದ್ಯಮದಲ್ಲಿ ಸೊಬಗು ಮತ್ತು ಉತ್ಕೃಷ್ಟತೆಯ ಸಂಕೇತವಾಗಿದೆ.

ಭೂಗತರ ಸುರಂಗ- ಸುಲಭದಲ್ಲಾಗದು ಬಹಿರಂಗ!

ಶಿಶಿರ ಕಾಲ

ಶಿಶಿರ್ ಹೆಗಡೆ

shishirh@gmail.com

"ಅತಳ, ವಿತಳ, ಸುತಳ, ತಳಾತಳ, ಮಹಾತಳ, ರಸಾತಳ, ಪಾತಾಳದಲ್ಲಿದ್ದರೂ ಹುಡುಕಿಕೊಂಡು ಬರುವೆ''- ಪೌರಾಣಿಕ ನಾಟಕಗಳಲ್ಲಿ, ಸಿನಿಮಾಗಳಲ್ಲಿ ಇದೊಂದು ಡೈಲಾಗ್ ಕೇಳಿರುತ್ತೀರಿ. ಭೂಲೋಕ, ಭುವರ್ಲೋಕ, ಮಹರ್ಲೋಕ, ಸತ್ಯಲೋಕ ಇತ್ಯಾದಿ ಮೇಲಿನ ಏಳು ಲೋಕಗಳಾದರೆ ಇವೆಲ್ಲ ಕೆಳಗಿನ ಲೋಕಗಳು. ಇಂಥ ಕೆಲವೊಂದಿಷ್ಟು ಪೌರಾಣಿಕ ಸಾಮ್ಯತೆಗಳು ಅಥವಾ ವೈರುಧ್ಯಗಳು ಅನ್ಯಪುರಾಣಗಳಲ್ಲಿಯೂ ಕಾಣಸಿಗುತ್ತವೆ. ಗ್ರೀಕ್, ರೋಮನ್ ಪುರಾಣಗಳಲ್ಲಿ ಅಂಡರ್‌ವರ್ಲ್ಡ್- ಅಧೋಲೋಕದ ಕಲ್ಪನೆಗಳಿವೆ. ಟಾರ್ಟರಸ್ ಎಂದರೆ ಅದು ಕೆಟ್ಟವರನ್ನು ಶಿಕ್ಷಿಸಲಿಕ್ಕಿರುವ ಗ್ರೀಕರ ಭೂಗತ ಹಿಂಸಾಲೋಕ. ಈಜಿಪ್ಟ್ ಪುರಾಣಗಳಲ್ಲಿ ಕೂಡ 'ದಾಉತ್' ಎಂದರೆ ಕತ್ತಲೆಯ, ದುಷ್ಟರನ್ನು ಶಿಕ್ಷಿಸುವ ಘನಘೋರ ಲೋಕ. ಇಂಕಾ ಪುರಾಣಗಳಲ್ಲಿಯೂ ಇದೇ ಕಥೆ. ಮೂರು ಲೋಕ. ದೇವರಿರುವ ಮೇಲಿನ ಲೋಕ, ಮನುಷ್ಯ ಲೋಕ ಮತ್ತು ನೆಲದೊಳಕ್ಕೆ ಮರಣೋತ್ತರ ಶಿಕ್ಷಿಸುವ ಲೋಕ. ಚೀನಾದ ಪುರಾಣಗಳಲ್ಲಿ 'ದಿಯು' ಎಂದರೆ ಹದಿನೆಂಟು ಸ್ತರಗಳಿರುವ ಅಂಥದ್ದೇ ನೆಲದೊಳಗಿನ ಲೋಕ. ಭಾರತೀಯ ಪುರಾಣಗಳನ್ನು ಹೊರತುಪಡಿಸಿ ಇನ್ನೆಲ್ಲ ಕಡೆ ನೆಲದೊಳಕ್ಕೆ ನರಕ ಸದೃಶ ಲೋಕದ ಇರುವಿಕೆಯ ನಂಬಿಕೆಯಿದೆ. ಅಲ್ಲೆಲ್ಲ ಭೂಗತ ಲೋಕದ ಆಳ್ವಿಕೆಗೆ ಯಮನಂಥ ರಾಜರುಗಳು ಇದ್ದಾರೆ. ಆದರೆ ಭಾರತೀಯ ಪುರಾಣಗಳಲ್ಲಿ ಬರುವ ಕೆಳಲೋಕಗಳು ಅಂಥವಲ್ಲ. ನಮ್ಮಲ್ಲಿನ ಕೆಳಲೋಕಗಳು ಸಮೃದ್ಧವಾದಂಥವು, ಶ್ರೀಮಂತವಾದಂಥವು, ಕೀಳಲ್ಲ. ಅರ್ಜುನನಿಗೇ ದಿವ್ಯಶಸ್ತ್ರವನ್ನು ಕೊಟ್ಟುಕಳುಹಿಸಿದ್ದಾರೆ ಎಂದರೆ ಅಲ್ಲಿನ ಶ್ರೀಮಂತಿಕೆಯನ್ನು ಅಂದಾಜಿಸಬೇಕು. ನಮ್ಮ ಈ ಲೋಕಗಳು ಭೌತಿಕವೋ, ಪಾರಮಾರ್ಥಿಕವೋ ಎಂಬ ಗೊಂದಲವನ್ನು ಪಾಶ್ಚಾತ್ಯರು ತಮ್ಮದರ ಜತೆ ಹೋಲಿಸಿಕೊಂಡು ಹುಟ್ಟುಹಾಕಿರುವುದಂತೂ ನಿಜ.

ಇರಲಿ. ನಾನಿಂದು ಹೇಳಲು ಹೊರಟಿರುವುದು ಭೂಗತ-ನೆಲದೊಳಗಿನ ಸುರಂಗಗಳ ಲೋಕದ ಬಗ್ಗೆ. ಮನುಷ್ಯಕೃತ ಭೂಗತ ಲೋಕದ ಬಗ್ಗೆ. ಸುರಂಗ ಎಂದ ತಕ್ಷಣಕ್ಕೆ ನೆನಪಾಗುವ ವ್ಯಕ್ತಿ ಹೂವಾಕಿನ್ ಗುಜ್ಮಾನ್ ಅಲಿಯಾಸ್ ಎಲ್-ಚಾಪೋ. ಮೆಕ್ಸಿಕೋದ ಸಿನಲೋವಾ ಪ್ರದೇಶದ ಡ್ರಗ್ ಲಾರ್ಡ್. ಮೆಕ್ಸಿಕೋ ಡ್ರಗ್ಸ್ ಮಾಫಿಯಾದ ಅನಭಿಷಿಕ್ತ ದೊರೆಯಾಗಿ ಬರೋಬ್ಬರಿ 40 ವರ್ಷ ಮೆರೆದ ವ್ಯಕ್ತಿ. ಇವನದು ಬಹುಕೋಟಿ ಡಾಲರ್‌ನ ವ್ಯವಸ್ಥಿತ ಡ್ರಗ್ಸ್ ವ್ಯವಹಾರ. ಅಮೆರಿಕದಿಂದ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾದವರೆಗೆ- ಸುಮಾರು 16 ದೇಶಗಳಿಗೆ ಇವನ ಮಾಫಿಯಾ ನೇರ ಡ್ರಗ್ಸ್ ಕಳ್ಳಸಾಗಾಣಿಕೆ ಮಾಡುತ್ತಿತ್ತು. ಅಂತಾರಾಷ್ಟ್ರೀಯ ಜಾಲ ಅವನದು. ಮೆಕ್ಸಿಕೋದಲ್ಲಿ ಇದ್ದಷ್ಟೂ ದಿನ ಇವನದು ಸಮಾನಾಂತರ ಸರಕಾರ. ಸುಮಾರು 35 ಸಾವಿರ ಜನರ ಸಾವಿಗೆ ಇವನು ಕಾರಣನಾಗಿದ್ದಾನೆ ಎಂದರೆ ಇವನ ಬರ್ಬರ ಇತಿಹಾಸವನ್ನು ಊಹಿಸಿಕೊಳ್ಳಬಹುದು. ಇಂಥವನನ್ನು ಮೆಕ್ಸಿಕೋ ಸರಕಾರ ಅದೇನೋ ಹರಸಾಹಸ ಮಾಡಿ 1993ರಲ್ಲಿ ಬಂಧಿಸಿ ಜೈಲಿಗೆ ಹಾಕಿತು. ಅಲ್ಲಿನ ಜೈಲಧಿಕಾರಿಗಳಿಗೆ ಹಣ ತಿನ್ನಿಸಿ, ತೊಳೆಯಲೊಯ್ಯುತ್ತಿದ್ದ ಬಟ್ಟೆಯ ರಾಶಿಯಲ್ಲಿ ಅವಿತು ಜೈಲಿಂದ ಪರಾರಿಯಾಗಿದ್ದ. 14 ವರ್ಷದ ನಂತರ 2014ರಲ್ಲಿ ಇವನನ್ನು ಮೆಕ್ಸಿಕೋದಲ್ಲಿ ಇನ್ನೊಮ್ಮೆ ಬಂಧಿಸಿ, ಅಲ್ಲಿನ ಅತಿಭದ್ರತೆಯ ಜೈಲಿನಲ್ಲಿರಿಸಲಾಯಿತು. ಅಂಥ ಜೈಲಿನಿಂದಲೇ ಎರಡನೇ ಬಾರಿ ಆತ ಎಸ್ಕೇಪ್ ಆಗಿದ್ದ.

ಅವನಿದ್ದದ್ದು ಒಂದು ಚಿಕ್ಕ ಸೆಲ್‌ನಲ್ಲಿ, ಅಲ್ಲಿದ್ದದ್ದು ಒಂದು ಹಾಸಿಗೆ ಹಾಕುವಷ್ಟು ಜಾಗ ಪಕ್ಕದಲ್ಲೊಂದು ಚಿಕ್ಕ, ನಾಲ್ಕು ಫೂಟಿನ ಅಡ್ಡ ಗೋಡೆ, ಅದರಾಚೆ ಒಂದು ಸ್ನಾನ-ಶೌಚಕ್ಕೆ ಜಾಗ. ಅವನು ಹಿಂದೊಮ್ಮೆ ಜೈಲಿನಿಂದ ತಪ್ಪಿಸಿಕೊಂಡದ್ದರಿಂದ ಅವನ ಮೇಲೆ 24 ಗಂಟೆ ನಿಗಾ ವಹಿಸಲೆಂದು ಜೈಲಿನ ಸೆಲ್‌ನೊಳಗೆ ಸಿಸಿ ಟಿವಿ ಕ್ಯಾಮರಾವನ್ನು ಅಳವಡಿಸಲಾಗಿತ್ತು. ಅವನ ಸೆಲ್ ಇದ್ದದ್ದು ಜೈಲಿನ ಮಧ್ಯಭಾಗದಲ್ಲಿ. ಅಂಥ ಜಾಗದಿಂದ ಆತ ಬಹಳ ರೋಚಕವಾಗಿ ತಪ್ಪಿಸಿಕೊಂಡಿದ್ದ. ಅವನಿದ್ದ ಜೈಲಿನ ಸುಮಾರು ಒಂದೂವರೆ ಕಿಲೋಮೀಟರ್ ದೂರದ ಖಾಲಿ ಜಾಗದಲ್ಲಿ ಮುರುಕು ಮನೆಯೊಂದಿತ್ತು. ಅಲ್ಲಿಂದ ಅವನ ಗ್ಯಾಂಗಿನವರು ಸುರಂಗವೊಂದನ್ನು ಕೊರೆದಿದ್ದರು. ಒಂದೂವರೆ ಕಿಲೋಮೀಟರ್ ಉದ್ದದ ಸುರಂಗ- ಅದು ಜೈಲಿನ ಅಕ್ಕಪಕ್ಕದಲ್ಲಿದ್ದ ಮನೆಗಳ ಅಡಿಯಲ್ಲಿ ಹಾದು ಹೋಗಿತ್ತು. ಅದೊಂದು ಅತ್ಯಾಧುನಿಕ ಸುರಂಗ. ಅದನ್ನು ತೋಡುವಾಗ ಒಳಗೆ ವಿದ್ಯುತ್ ಸಂಪರ್ಕ ಮಾಡಿಕೊಳ್ಳಲಾಗಿತ್ತು. ಆಮ್ಲಜನಕ ಪೂರೈಕೆಯ ವ್ಯವಸ್ಥೆಯೂ ಇತ್ತು. ರೈಲುಹಳಿಯ ರೀತಿಯ ಚಿಕ್ಕ ಹಳಿಯನ್ನು ಅಷ್ಟೂ ಉದ್ದಕ್ಕೆ ಹಾಕಲಾಗಿತ್ತು. ಮೋಟಾರ್ ಬೈಕಿನ ಚಕ್ರವನ್ನು ಆ ಹಳಿಗೆ ಅಳವಡಿಸಲಾಗಿತ್ತು. ಟಾಯ್ಲೆಟ್‌ನಿಂದ ಕೆಳಕ್ಕಿಳಿದ ಎಲ್ ಚಾಪೋ ಅಲ್ಲಿದ್ದ ಬೈಕನ್ನು ಏರಿ ಪರಾರಿಯಾಗಿದ್ದ. ಆ ಸುರಂಗ ಸುಮಾರು ಒಂದೂವರೆ ಕಿಲೋಮೀಟರ್ ಉದ್ದದಲ್ಲಿ- ಕೊನೆಯಲ್ಲಿ ಚಿಕ್ಕದಾಗಿ ತೆರೆದುಕೊಂಡದ್ದು ಎಲ್ ಚಾಪೋ ಇದ್ದ ಜೈಲಿನ ಪಾಯಿಖಾನೆಯಲ್ಲಿ. ಅದೇನು ಸುಲಭದ ಸುರಂಗದ ಕೆಲಸವಲ್ಲ, ಅಷ್ಟುದ್ದದ ಸುರಂಗ ಮಾರ್ಗ- ಕರಾರುವಾಕ್ಕಾಗಿ ಅವನಿದ್ದ ಸೆಲ್ಲಿನಲ್ಲಿಯೇ, ಪಾಯಿಖಾನೆಯಲ್ಲಿಯೇ ತೆರೆದುಕೊಳ್ಳಬೇಕು. ಒಂದೇ ಒಂದು ಇಂಚು ಆಚೀಚೆ ಆದರೆ ಇನ್ನೆಲ್ಲಿಯೋ ತೆರೆದುಕೊಂಡು- ಜೈಲಿನ ನೆಲ ಕುಸಿದು ಎಡವಟ್ಟಾಗಬಹುದು. ಅಷ್ಟೇ ಅಲ್ಲ, ಈ ಸುರಂಗ ನೆಲದೊಳಕ್ಕೆ ಸುಮಾರು 35 ಪೂಟು ಕೆಳಕ್ಕೆ. ಇದ್ಯಾವುದಕ್ಕೂ ಯಾವುದೇ ಭಾರಿ ಯಂತ್ರೋಪಕರಣ ಬಳಸುವಂತಿಲ್ಲ. ಶಬ್ದವಾದರೆ, ನೆಲ ಕಂಪಿಸಿದರೆ ಜೈಲಿನ ಅಲಾರಂಗಳು ಬೊಬ್ಬೆಹೊಯ್ದುಕೊಳ್ಳುತ್ತವೆ. ಬಹುಶಃ ಮನುಷ್ಯ ಇತಿಹಾಸದಲ್ಲಿನ ಅತ್ಯಂತ ರೋಚಕ,

ಕೆಲವೇ ಕೆಲವು ಗ್ರೇಟ್ ಎಸ್ಕೇಪ್‌ಗಳಲ್ಲಿ ಇದಕ್ಕೆ ಮೊದಲ ಸ್ಥಾನ. 2014ರಲ್ಲಿ ಅವನು ಈ ರೀತಿ ಸುರಂಗದ ಮೂಲಕ ತಪ್ಪಿಸಿಕೊಂಡಾಗ ಇಡೀ ಮೆಕ್ಸಿಕೋ ಸರಕಾರ ಅಮೆರಿಕ ಮತ್ತಿತರ ದೇಶಗಳ ಎದುರು ತಲೆತಗ್ಗಿಸಬೇಕಾಯಿತು. ಅಮೆರಿಕ ಅದೆಷ್ಟು ಗರಂ ಆಗಿತ್ತು ಎಂದರೆ ಮುಂದಿನ ಒಂದೇ ವರ್ಷದಲ್ಲಿ ಅವನನ್ನು ಪುನಃ ಬಂಧಿಸಿ ಅಮೆರಿಕಕ್ಕೆ ಗಡಿಪಾರು ಮಾಡಲಾಯಿತು. ಸದ್ಯ ಎಲ್-ಚಾಪೋನನ್ನು ಅಮೆರಿಕದ ಅತ್ಯಂತ ಸುರಕ್ಷಿತ ಜೈಲಾದ ಕೊಲರಾಡೋದ ವಿಶೇಷ ಜೈಲಿನಲ್ಲಿ ಇರಿಸಲಾಗಿದೆ. ಈಗ ಅವನದ್ದು ಏಕಾಂತವಾಸ- ಸಾಯುವಲ್ಲಿಯವರೆಗೆ. ಅವನನ್ನು ಈ ಜೈಲಿನಲ್ಲಿಡಲು ಕಾರಣವಿದೆ. ಇದು 'ಸುರಂಗ-ಪ್ರೂಫ್' ಜೈಲು. ಎಲ್-ಚಾಪೋ ಸುರಂಗದಲ್ಲಿ ತಪ್ಪಿಸಿಕೊಂಡದ್ದಕ್ಕಿಂತ ಪಲಾಯನಕ್ಕೆ ತಯಾರಾದ ಸುರಂಗ, ಅದರ ಆಧುನಿಕತೆ ಮತ್ತು ಕರಾರುವಾಕ್ಕುತನ ಜಗತ್ತಿನ ಸುದ್ದಿಮಾಧ್ಯಮಗಳಲ್ಲೆಲ್ಲ ಸಂಚಲನ ಮೂಡಿಸಿತ್ತು.

ಮೆಕ್ಸಿಕೋದ ಡ್ರಗ್ಸ್ ಮಾಫಿಯಾಗಳಿಗೆ ಸುರಂಗ ತೊಡುವುದು ಹೊಸತಲ್ಲ. ಅಮೆರಿಕದ ಮೆಕ್ಸಿಕೋ ಗಡಿಯ ಉದ್ದ ಸುಮಾರು 3 ಸಾವಿರ ಕಿಲೋಮೀಟರ್. ಇದು ಭಾರತ-ಪಾಕಿಸ್ತಾನದ ಭೂಗಡಿಗಿಂತ ಸುಮಾರು ಆರುನೂರು ಕಿಲೋಮೀಟರ್ ಜಾಸ್ತಿ. ಇಷ್ಟುದ್ದದ ಗಡಿಯನ್ನು ನಿರ್ವಹಿಸುವುದು ಅಮೆರಿಕಕ್ಕೆ ದೊಡ್ಡ ತಲೆನೋವು. ಅತ್ತಕಡೆ ಮೆಕ್ಸಿಕೋದ ಗಡಿಗುಂಟದ ಜಿಲ್ಲೆಗಳಲ್ಲಿ ನಡೆಯುವುದೇ ಡ್ರಗ್ಸ್ ಹಣ ಮತ್ತು ವ್ಯವಹಾರದಿಂದ. ಅಲ್ಲೆಲ್ಲ ಅಸಂಖ್ಯ ಸುರಂಗಗಳಿವೆ. ಆ ಸುರಂಗಗಳ ಮೂಲಕ ಅತ್ತಕಡೆಯಿಂದ ಡ್ರಗ್ಸ್ ಅಮೆರಿಕದ ಒಳಕ್ಕೆ ಬರುತ್ತದೆ; ಜತೆಯಲ್ಲೊಂದಿಷ್ಟು ಜನ ನುಸುಳುಕೋರರು ಅಮೆರಿಕವನ್ನು ಹೊಕ್ಕುವುದು ಕೂಡ ಈ ಸುರಂಗಗಳ ಮೂಲಕ. ಸುರಂಗಗಳ ಯಜಮಾನರಿಗೆ ಇಂತಿಷ್ಟು ಎಂದು ಕೊಟ್ಟರೆ ಅವನ್ನು ಬಳಸಬಹುದು. ಮೆಕ್ಸಿಕೋ-ಅಮೆರಿಕ ಗಡಿಯಲ್ಲಿ ಹಲವಾರು ಊರುಗಳಿವೆ. ಅಲ್ಲಿನ ಮನೆಗಳು ಗಡಿಗೋಡೆಯ ಪಕ್ಕದಲ್ಲಿಯೇ ಇವೆ. ಈ ಸುರಂಗಗಳು ಮೆಕ್ಸಿಕೋದ ಮನೆಯ ಕೋಣೆಯಿಂದ ಇನ್ನೊಂದು ಕಡೆ ಅಮೆರಿಕದ ನೆಲದಲ್ಲೆಲ್ಲೋ, ಯಾವುದೊ ಮನೆಯಲ್ಲಿ ಬಾಯಿ ತೆರೆದುಕೊಳ್ಳುತ್ತವೆ. ಅವುಗಳಲ್ಲಿ ಹೆಚ್ಚಿನವು ಒಂದರಿಂದ ಎರಡು, ಹೆಚ್ಚೆಂದರೆ ಮೂರರಿಂದ ನಾಲ್ಕು ಕಿಲೋಮೀಟರ್. ಆದರೆ ಅವೆಲ್ಲವೂ ಅಷ್ಟೇ ಉತ್ಕೃಷ್ಟ ಮಟ್ಟದವು. ಅಷ್ಟೇ ನಿಖರ, ಸಯ್ಯುಳತೆಯವು. ಈಗಾಗಲೇ ಅಮೆರಿಕ ಇಂಥ ಸುಮಾರು ನಾಲ್ಕು ನೂರು ಸುರಂಗಗಳನ್ನು ಕಂಡುಹಿಡಿದು ಧ್ವಂಸ ಮಾಡಿದೆ. ಒಂದು ಅಂದಾಜಿನ ಪ್ರಕಾರ ಇವತ್ತಿಗೂ ಸುಮಾರು ನೂರು ಸುರಂಗಗಳು ಅಲ್ಲಿವೆ, ಬಳಕೆಯಲ್ಲಿ. ಅಮೆರಿಕದ ಸುದ್ದಿವಾಹಿನಿಗಳು ವಾರಕ್ಕೊಮ್ಮೆಯಾದರೂ ಈ ಸುರಂಗಗಳ ಬಗ್ಗೆ ಸುದ್ದಿಮಾಡುತ್ತವೆ. ಅಮೆರಿಕಕ್ಕೆ ಇದೆಷ್ಟು ದೊಡ್ಡ ಸಮಸ್ಯೆಯೆಂದರೆ ಇದನ್ನು ನಿಲ್ಲಿಸಲು ಆಯಕಟ್ಟಿನ ಪ್ರದೇಶಗಳಲ್ಲಿ ರೇಡಾರ್ ಬಳಸಲಾಗುತ್ತದೆ. ಆದರೆ ಎಷ್ಟೆಂದು ಕಾಯುವುದು, ಎಷ್ಟೆಂದು ಹುಡುಕುವುದು!?

ಅಷ್ಟು ನೈಪುಣ್ಯದ ಟನಲ್ ತೊಡುವುದೆಂದರೆ ಅದು 'ಎಂಜಿನಿಯರಿಂಗ್ ಮಾರ್ವೆಲ್'. ನೆಲದೊಳಕ್ಕೆ ತೋಡುವ ವಿಶೇಷ ನೈಪುಣ್ಯವುಳ್ಳ ಕೆಲಸದವರು ಅದಕ್ಕೆ ಬೇಕು. ಎರಡು ಕಿಲೋಮೀಟರ್ ಉದ್ದದ ಸುರಂಗವು ಬೇಕಾದ ಒಂದು ಚದರಡಿಯ ಅಳತೆಯಲ್ಲಿ ಹೇಳಿದಲ್ಲಿ ತೆರೆದುಕೊಳ್ಳಬೇಕು ಎಂದರೆ ಆ ಇಡೀ ಜಾಗದ ಸರ್ವೆ, ಅಲ್ಲಿನ ಮಣ್ಣಿನ ಗುಣ, ಕಲ್ಲು ಇತ್ಯಾದಿಯೆಲ್ಲದರ ಅರಿವಿರಬೇಕು. ಬೆಂಗಳೂರಿನ ಮೆಟ್ರೋ ಸುರಂಗ ತೋಡಿದಂತೆ ಯಂತ್ರಗಳನ್ನು ಬಳಸುವಂತಿಲ್ಲ.

ಒಂದು ಕಿಲೋಮೀಟರ್ ಉದ್ದದ ಸುರಂಗ ಎಂದುಕೊಳ್ಳಿ, ಅದನ್ನು ತೋಡುವಾಗ ಅದೆಷ್ಟು ಸರಿಯಳತೆಯಿರಬೇಕು ಎಂದರೆ ಒಂದೇ ಒಂದು ಡಿಗ್ರಿ ಕೋನ ವ್ಯತ್ಯಾಸವಾದರೆ ತಲುಪಬೇಕಾದ ಜಾಗಕ್ಕಿಂತ ಸುಮಾರು ಹದಿನೇಳು ಮೀಟರ್ ಬೇರೆಡೆ ಸುರಂಗ ಮುಟ್ಟುತ್ತದೆ. ನೆಲದೊಳಕ್ಕೆ ಜಿಪಿಎಸ್ ಕೆಲಸಮಾಡುವುದಿಲ್ಲ. ಸುರಂಗ ಸರಿಯಾದ ಮಾರ್ಗದಲ್ಲಿ ನಿರ್ಮಾಣವಾಗುತ್ತಿದೆಯೇ ಎಂದು ತಿಳಿಯಲು ಇದೆಲ್ಲವನ್ನೂ ಬಹಿರಂಗವಾಗಿ ಪರೀಕ್ಷಿಸುವಂತಿಲ್ಲ. ಏಕೆಂದರೆ, ಇದೆಲ್ಲವೂ 'ಕಳ್ಳವಂತಿಕೆಯ' ಕೆಲಸ! ಅಂತೆಯೇ ಇದೆಲ್ಲವನ್ನೂ ಮಾಡುವುದು 'ಎಲ್ ಆ್ಯಂಡ್ ಟಿ'ಯಂಥ ಯಾವುದೋ ಮಲ್ಟಿನ್ಯಾಷನಲ್ ಕಂಪನಿಯಲ್ಲ, ಈ ಕಸರತ್ತು ಮಾಡುವುದು ಕಳ್ಳಕಾರರು! ಅಂತೆಯೇ ಗೌಪ್ಯತೆಯೂ ಅಷ್ಟೇ ಮಹತ್ವದ್ದು. ಅದೆಲ್ಲದಕ್ಕಿಂತ ದೊಡ್ಡ ಕಷ್ಟವೆಂದರೆ ಅಷ್ಟು ತೋಡಿದ ಸುರಂಗದ ಮಣ್ಣನ್ನು ಕಾಣದಂತೆ ಎಲ್ಲಿ ಹಾಕುವುದು?

ಉತ್ತರ ಕೊರಿಯಾ ಎಂಥ ದೇಶ ಎಂಬುದರ ಅಂದಾಜು ನಿಮಗಿರಬಹುದು. ಕಿಮ್ ಜಾಂಗ್ ಉನ್ ಈ ದೇಶವನ್ನು ಜಗತ್ತಿನಿಂದ ಪ್ರತ್ಯೇಕಿಸಿಟ್ಟಿದ್ದಾನೆ. ಅಲ್ಲಿ ಇಂಟರ್ನೆಟ್, ವಾಕ್‌ಸ್ವಾತಂತ್ರ್ಯ ಎಲ್ಲವೂ ನಿರ್ಬಂಧಿತ. 70ರ ದಶಕದಲ್ಲಿ ಉತ್ತರ ಕೊರಿಯಾ ದೇಶವು ದಕ್ಷಿಣ ಕೊರಿಯಾದೊಳಕ್ಕೆ ನುಗ್ಗಲು, ದಾಳಿ ಮಾಡಲು ಸಾಕಷ್ಟು ಪ್ರಮಾಣದಲ್ಲಿ ಸುರಂಗಗಳನ್ನು ಕೊರೆದಿತ್ತು. ಅವುಗಳಲ್ಲಿ ಹೆಚ್ಚಿನವು ಇಂದು ಮುಚ್ಚಿವೆ. ಆದರೆ ಈ ಸುರಂಗ ಕೊರೆಯುವ ಉತ್ತರ ಕೊರಿಯಾದ ಚಾಳಿ ಮಾತ್ರ ಇಂದಿಗೂ ನಿಂತಿಲ್ಲ. ಕಿಮ್‌ಗೆ ಅಮೆರಿಕವನ್ನು ಕಂಡರಾಗುವುದಿಲ್ಲ. ಅಮೆರಿಕದ ಯಾವುದೇ ವಸ್ತು ಉತ್ತರ ಕೊರಿಯಾದಲ್ಲಿ ನಿಷಿದ್ಧ. ಆದರೆ ಉತ್ತರ ಕೊರಿಯಾದವರಿಗೆ ಅಮೆರಿಕನ್ ವಸ್ತುಗಳೆಂದರೆ ಎಲ್ಲಿಲ್ಲದ ಆಸೆ. ಅದರಲ್ಲಿಯೂ 'ಕೆಎಫ್‌ಸಿ'ಯ ಕರಿದ ಚಿಕನ್ ಎಂದರೆ ಕೇಳಲೇಬೇಡಿ! ಇಂದು ಉತ್ತರ ಕೊರಿಯಾದ ಸುರಂಗಗಳು ಬಳಸಲ್ಪಡುವುದು ಇಂಥ ಕೆಲವು ವಸ್ತುಗಳನ್ನು ಸ್ಮಗಲ್ ಮಾಡಲು. ಕೆಲವು ತಿಂಗಳ ಹಿಂದೆ ಒಂದು ವರದಿ ಬಂದಿತ್ತು, ಅದೇನೆಂದರೆ, ಉತ್ತರ ಕೊರಿಯಾದಲ್ಲಿ ಒಂದು ದಿನ ಮುಂಚೆ ಕೆಎಫ್‌ಸಿ ಚಿಕನ್ ಬೇಕೆಂದರೆ ಆರ್ಡರ್ ಮಾಡಬೇಕಂತೆ. ಮಾರನೆಯ ದಿನ ದಕ್ಷಿಣ ಕೊರಿಯಾದಿಂದ ಕರಿದ ಚಿಕನ್ ಸುರಂಗದ ಮೂಲಕ ಸರಬರಾಜಾಗುತ್ತದಂತೆ.

ಜಗತ್ತಿನ ಬಹುತೇಕ ಪುರಾಣಗಳಲ್ಲಿ ಹೇಗೆ ನೆಲದಾಳದ ಲೋಕದ ನಂಬಿಕೆಯಿದೆಯೋ ಅಲ್ಲೆಲ್ಲ ಮಾರ್ಗಗಳೆಂದರೆ ಸುರಂಗಗಳೇ ಅಲ್ಲವೇ? ನೆಲದೊಳಕ್ಕೆ ಸುರಂಗ ತೋಡುವುದು ಬಹುತೇಕ ನಾಗರಿಕತೆಗಳ ಭಾಗವೇ ಆಗಿದೆ. ನಗರ ನೈರ್ಮಲ್ಯಕ್ಕೆಂದು ಸುರಂಗಗಳು ಮೆಸಪಟೋಮಿಯಾ ಕಾಲದಲ್ಲಿಯೇ ಇತ್ತು. ನಮ್ಮಲ್ಲಿಯೂ ಕೋಟೆಗಳಲ್ಲಿ ಗುಪ್ತ ಸುರಂಗ ಮಾರ್ಗಗಳಿರುತ್ತಿದ್ದವು. ರೋಮನ್ನರು ಸುರಂಗ ನಿರ್ಮಾಣದಲ್ಲಿ ಪ್ರವೀಣರಾಗಿದ್ದರು. ರಕ್ಷಣೆಗೆ, ಸಾಗಾಣಿಕೆಗೆ ಅವನ್ನು ನಿರ್ಮಿಸಿಕೊಂಡಿದ್ದರು. ಚೀನಾದ ಮಹಾಗೋಡೆಯ ಕೆಳಗೆ ಇತ್ತಲಿಂದ ಅತ್ತಲಿಗೆ ಹಲವಾರು ಸುರಂಗಗಳನ್ನು ರಕ್ಷಣೆಗೆ-ಪ್ರತಿದಾಳಿಗೆ ಕೊರೆಯಲಾಗಿದೆ. ಅವು ಇಂದಿಗೂ ಇವೆ. ಲಂಡನ್ನಿನ ಥೇಮ್ಸ್ ನದಿಯ ಕೆಳಗೆ ಸುರಂಗವನ್ನು 1843ರಲ್ಲಿ ನಿರ್ಮಿಸಲಾಗಿತ್ತು. ಆದರೆ ಎಲ್ಲಿಲ್ಲದ ಪ್ರಮಾಣದಲ್ಲಿ ಸುರಂಗಗಳನ್ನು ತೋಡಿದ್ದು ವಿಶ್ವಯುದ್ಧದ ಸಮಯದಲ್ಲಿ. ಯುರೋಪಿನಲ್ಲಿ ಯುದ್ಧ ಸಮಯದಲ್ಲಿ ಏನಿಲ್ಲವೆಂದರೂ ಐದಾರು ಸಾವಿರ ಕಿಲೋಮೀಟರಿನಷ್ಟು ಸುರಂಗಗಳನ್ನು ಮಾಡಿಕೊಳ್ಳಲಾಗಿತ್ತು. ಭಾರತ-ಪಾಕಿಸ್ತಾನ ನಡುವೆಯೂ ಆಗೀಗ ಸುರಂಗಗಳು ಸಿಗುವುದಿದೆ.

ಸುರಂಗಗಳಲ್ಲಿಯೇ ಸಾಮ್ರಾಜ್ಯವನ್ನು ನಿರ್ಮಿಸಿಕೊಂಡವರು ಹಮಾಸ್ ಉಗ್ರರು. ಆರು ನೂರರಿಂದ ಒಂದು ಸಾವಿರ ಕಿಲೋಮೀಟರ್ ಉದ್ದದ, ಒಂದಕ್ಕೊಂದು ಸಂಧಿಸುವ ಅನನ್ಯ ಸುರಂಗ ವ್ಯವಸ್ಥೆ ಅವರದ್ದು. ಇಸ್ರೇಲ್ ದಾಳಿ ಆರಂಭವಾದಂದಿನಿಂದ ಪ್ರತಿದಿನ ಗಾಜಾದಲ್ಲಿ ಸುರಂಗಗಳು ಸಿಕ್ಕುತ್ತಲೇ ಇವೆ. ಹಮಾಸ್ ಸುರಂಗಗಳೆಂದರೆ ಕೇವಲ ಒಬ್ಬ ಮನುಷ್ಯ ಅಥವಾ ಇಬ್ಬರು ಜತೆಯಲ್ಲಿ ಸಾಗುವಷ್ಟು ಅಳತೆಯ, ಇಲಿ ಬಿಲದಂಥ ಸುರಂಗವೆಂಬ ಕಲ್ಪನೆ ಬೇಡ. ಹಿಂದಿನ ವಾರವಷ್ಟೇ ಗಾಜಾಪಟ್ಟಿಯಲ್ಲಿ ಸಿಕ್ಕ ಬೃಹತ್ ಸುರಂಗ ಮಾರ್ಗ ಅದೆಷ್ಟು ವ್ಯವಸ್ಥಿತವೆಂದರೆ ಒಳಕ್ಕೆ ನೂರು ಕಿಲೋಮೀಟರ್ ಉದ್ದದವರೆಗೆ ವಿದ್ಯುತ್ ಸಂಪರ್ಕ, ಬೆಳಕು ಮತ್ತು ಉಸಿರಾಟಕ್ಕೆ ಗಾಳಿಯ ಪೂರೈಕೆಯಿದೆ. ಅದೆಷ್ಟು ಅಗಲವೆಂದರೆ ಎರಡು ಲಾರಿಗಳು ಆಚೀಚೆ ಹಾಯಬಹುದು, ಹತ್ತು ಫೂಟ್ ಎತ್ತರ. ಅಲ್ಲಿ ಅವರು ಮಾಡಿಕೊಂಡಿರುವುದು ಸಾವಿರ ಕಿಲೋಮೀಟರ್ ಉದ್ದದ ಸುರಂಗ- ಆ ಗಾಜಾಪಟ್ಟಿ ಇರುವುದೇ ಗರಿಷ್ಠ ಹನ್ನೆರಡು ಕಿಲೋಮೀಟರ್ ಅಗಲ ಮತ್ತು 41 ಕಿಲೋಮೀಟರ್ ಉದ್ದ. ಈ ಸುರಂಗಗಳು ಲೆಬನಾನ್ ಮತ್ತು ಈಜಿಪ್ಟ್ ದೇಶಗಳಿಗೂ ಸಾಗಿದೆ. ಇಸ್ರೇಲಿನೊಳಕ್ಕೆ ಕೂಡ ಈ ವ್ಯವಸ್ಥೆ ಬಾಯಿತೆರೆದುಕೊಂಡದ್ದು ಸಿಕ್ಕಿದೆ. 365 ಚದರ ಕಿ.ಮೀ. ಜಾಗದಲ್ಲಿ ಸಾವಿರ ಕಿ.ಮೀ. ಸುರಂಗವೆಂದರೆ ಅದೆಂಥ ವ್ಯವಸ್ಥೆ ಅಂದಾಜಿಸಿಕೊಳ್ಳಿ.

ನೆಲದೊಳಕ್ಕೆ ಒಂದೋ ಎರಡೋ ಕಿಲೋಮೀಟರ್ ಸುರಂಗ ತೊಡುವುದೇ ದೊಡ್ಡ ವಿಷಯ. ಅದಕ್ಕೆ ಎಲ್ಲಿಲ್ಲದ ನಿಖರತೆ ಬೇಕು, ನೆಲದ ಗುಣಲಕ್ಷಣ ತಿಳಿದಿರಬೇಕು, ತೋಡಿದ ಸುರಂಗ ಕುಸಿದು ಬೀಳದಂತೆ ಅದಕ್ಕೆ ಆಲಂಬನ ಕೊಡಬೇಕು, ತೋಡುವಾಗ ಮತ್ತು ನಂತರ ಉಸಿರಾಡಲಿಕ್ಕೆ ಗಾಳಿ ಹಾಯುವ ವ್ಯವಸ್ಥೆ ಆಗಬೇಕು, ವಿದ್ಯುತ್, ಬೆಳಕು ಬೇಕು. ಅಲ್ಲಿಯೇ ವಾಸಿಸಲು ಯೋಗ್ಯವಾಗುವಂಥ ಕೋಣೆ, ಪಾಯಿಖಾನೆ, ಅಡುಗೆಮನೆ ಹೀಗೆ ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾರೆ. ಒಂದೆರಡಲ್ಲ- ನೂರಾರು. ಅಂಥ ಸುರಂಗವನ್ನು ಕಲ್ಲಿರಲಿ, ಮಣ್ಣಿರಲಿ- ಎಲ್ಲವನ್ನೂ ಕೈಗುದ್ದಲಿಯಿಂದಲೇ ಭೇದಿಸಬೇಕು. ಅಷ್ಟೇ ಅಲ್ಲ, ಇದೆಲ್ಲವೂ ಗೌಪ್ಯವಾಗಿ ಇಸ್ರೇಲಿಗೆ ತಿಳಿಯದಂತೆ ನಡೆಯಬೇಕು.

ಇಸ್ರೇಲಿನ ಬೇಹುಗಾರಿಕೆ ವ್ಯವಸ್ಥೆಗೆ ಜಗತ್ತಿನಲ್ಲಿಯೇ ಅತ್ಯುತ್ಕೃಷ್ಟ ಎಂಬ ಅಗ್ಗಳಿಕೆ ಇದೆ. ಹಾಗಿದ್ದಾಗಿಯೂ ಈ ಸುರಂಗ ವ್ಯವಸ್ಥೆಗಳು ಆಸ್ಪತ್ರೆಗಳ, ಶಾಲೆಗಳ, ಮಸೀದಿಗಳ ಕೆಳಗೆ ನಿಖರ ಜಗದಲ್ಲಿ ಬಾಯಿತೆರೆದುಕೊಳ್ಳುತ್ತವೆ. ಸಾವಿರ ಕಿಲೋಮೀಟರ್ ಉದ್ದದ ಸುರಂಗವನ್ನು ದೈಹಿಕ ಶ್ರಮದಿಂದಲೇ ಕೊರೆಯಬೇಕೆಂದರೆ ಅಷ್ಟು ಜನರಿಗೆ ವಿಷಯ ತಿಳಿದಂತಾಯಿತು. ಅಲ್ಲದೇ ಅಷ್ಟೊಂದು ಪ್ರಮಾಣದಲ್ಲಿ, ಬೃಹತ್ ಸುರಂಗಗಳನ್ನು ಕೊರೆಯುವಾಗ ಅಲ್ಲಿನ ಮಣ್ಣನ್ನು ಹೊರಹಾಕಬೇಕಾಯಿತು. ಇವ್ಯಾವುದೂ ಮೊಸಾದ್‌ನಂಥ ಇಸ್ರೇಲಿನ ಬೇಹುಗಾರಿಕೆ ವ್ಯವಸ್ಥೆಗೆ ತಿಳಿಯಲಿಲ್ಲ ಎಂಬುದನ್ನು ನಂಬಲಿಕ್ಕಾಗುವುದಿಲ್ಲ. ಹಮಾಸ್-ಗಾಜಾ ಮಂದಿಯ ಸುರಂಗ ತೊಡುವ ಚಾಳಿ ಇಂದು ನಿನ್ನೆಯದಲ್ಲ. ಈಜಿಪ್ಟ್-ಗಾಜಾ ನಡುವಿನ ಸುರಂಗಗಳು ಎಲ್ಲರಿಗೂ ಬಹುಕಾಲದಿಂದ ತಿಳಿದಿದ್ದ ವಿಷಯ. ಹಾಗಂತ ಇಸ್ರೇಲ್ ಇದನ್ನೆಲ್ಲ ನೋಡಿಕೊಂಡು ಸುಮ್ಮನೆ ಕೂರುವ ದೇಶವೇನಲ್ಲ. ಹಾಗಿದ್ದರೆ ಅದು ತಿಳಿದೂ ಕಡೆಗಣಿಸಿ ಸುಮ್ಮನಾಯಿತೇ? ಇದು ಬಗೆಹರಿಯುವುದಿಲ್ಲ. ಇಂಥ ಕಂಡು ಕೇಳರಿಯದ ಸುರಂಗ ವ್ಯವಸ್ಥೆಯಿಂದ, ಪಾತಾಳಗರಡಿಯನ್ನು ಬಳಸಿ ಮೇಲಕ್ಕೆತ್ತುವಂತೆ ಹಮಾಸ್ ಭಯೋತ್ಪಾದಕರನ್ನು ಇಸ್ರೇಲ್ ಮೇಲಕ್ಕೆತ್ತಿ ಸ್ವಚ್ಛತಾಕಾರ್ಯ ನಡೆಸುತ್ತಿದೆ ಎಂಬುದೇ ಸಮಾಧಾನ.

ಟ್ರುಡೊ ಅಧಿಕಾರದಾಸೆಗೆ ಕೆನಡಾ 'ಖಾಲಿ'ಸ್ತಾನ್?!



ವಿಶ್ಲೇಷಣೆ

ರವೀ ಸಜಂಗದ್ದೆ

vveditoped@gmail.com

ಜೂನ್ 18, 2023. ಕೆನಡಾದ ವ್ಯಾಂಕೋವರ್‌ನ ಉಪನಗರ ಸರ್‍ರೆಯಲ್ಲಿರುವ ಸಿಖ್ ಮಂದಿರದ (ಗುರುದ್ವಾರ) ಹೊರಗೆ, 45 ವರ್ಷ ವಯಸ್ಸಿನ ಹರ್‌ದೀಪ್ ಸಿಂಗ್ ನಿಜ್ಜರ್‌ನನ್ನು ಅಪರಿಚಿತರು ಗುಂಡಿಕ್ಕಿ ಹತ್ಯೆಗೈದರು. ಈತ ಸ್ವತಂತ್ರ ಸಿಖ್ ದೇಶದ ರಚನೆಗಾಗಿನ ಖಲಿಸ್ತಾನ್ ಚಳವಳಿ ಅಥವಾ ಹೋರಾಟದ ಮುಂಚೂಣಿಯಲ್ಲಿದ್ದವನು. ಸಿಖ್ ಸಂಘಟನೆಗಳು ನಿಜ್ಜರ್‌ನನ್ನು 'ಮಾನವ ಹಕ್ಕುಗಳ ಹೋರಾಟಗಾರ', 'ಸಿಖ್ ಸ್ವಾತಂತ್ರ್ಯದ ಹೋರಾಟದ ನಾಯಕ' ಎಂದೆಲ್ಲ ಬಿಂಬಿಸಿದರೆ, ಭಾರತ ಸರಕಾರವು ಆತನನ್ನು 'ಉಗ್ರಗಾಮಿ'ಯೆಂದೂ ಮತ್ತು 'ಖಲಿಸ್ತಾನ್ ಟೈಗರ್ ಫೋರ್ಸ್' ಎಂಬ ದೇಶವಿರೋಧಿ ಸಂಘಟನೆಯೊಂದಿಗೆ ನೇರ ಸಂಬಂಧ ಹೊಂದಿರುವ ಅಪರಾಧಿಯೆಂದೂ ಆರೋಪಿಸಿ, ಆತನ ಬಂಧನಕ್ಕೆ ಕೆನಡಾ ದೇಶದ ಮೇಲೆ ನಿರಂತರ ಒತ್ತಡ ಹೇರುತ್ತಿತ್ತು.

ಕಳೆದ ವರ್ಷ ಈತನ ಹತ್ಯೆಯಿಂದಾಗಿ ಹಳಸುವುದಕ್ಕೆ ಶುರುವಾದ ಭಾರತ-ಕೆನಡಾ ನಡುವಿನ ದ್ವಿಪಕ್ಷೀಯ ಸಂಬಂಧವು ಕಳೆದೊಂದು ವರ್ಷದಿಂದ ಬಿಗಡಾಯಿಸುತ್ತಾ ಬಂದು, ಇದೀಗ ಸಂಪೂರ್ಣ ಕಳಚಿಕೊಳ್ಳುವ ಹಂತಕ್ಕೆ ಬಂದು ನಿಂತಿದೆ. ಇದಕ್ಕೆ ನೇರಕಾರಣ, ಭಾರತದ ಮೇಲೆ ಕೆನಡಾ ಮಾಡುತ್ತಿರುವ ನಿರಾಧಾರ ಆರೋಪ ಹಾಗೂ ಭಾರತದ್ರೋಹಿ ಜನರಿಗೆ ಮತ್ತು ಸಂಘಟನೆಗಳಿಗೆ ಕೆನಡಾ ನೀಡುತ್ತಿರುವ ನೇರನೆರವು! ಇದೆಲ್ಲಾ ಯಾಕಾಯಿತು, ಹೇಗಾಯಿತು ಎಂಬುದನ್ನು ವಿವರವಾಗಿ ತಿಳಿಯೋಣ.

ನಿಜ್ಜರ್ ಹತ್ಯೆಯ ಬೆನ್ನಲ್ಲೇ, ಕೆನಡಾದ ಅನೇಕ ಕಡೆ ಮತ್ತು ಭಾರತದ ಪಂಜಾಬ್ ರಾಜ್ಯದಲ್ಲೂ ಒಂದಷ್ಟು ಪ್ರತಿಭಟನೆಗಳು, ಗಲಾಟೆಗಳು ನಡೆದವು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಂದಷ್ಟು ಮಾತುಕತೆಗಳು ಮತ್ತು ಪರ-ವಿರೋಧ ಚರ್ಚೆಗಳು ನಡೆದವು. ಆದರೆ, ಯಾವಾಗ ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ, ''ಭಾರತ ಸರಕಾರ ಮತ್ತು ಭಾರತದ ಗುಪ್ತಚರ ಸಂಸ್ಥೆಗಳು ನಿಜ್ಜರ್‌ನ ಹತ್ಯೆಯಲ್ಲಿ ನೇರವಾಗಿ ಭಾಗಿಯಾಗಿವೆ. ಭಾರತದ ಸಹಕಾರದಿಂದಲೇ ಈ ಬರ್ಬರ ಹತ್ಯೆ ಮಾಡಲಾಗಿದೆ. ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಮತ್ತು ತಕ್ಷಣದಿಂದ ಜಾರಿಗೆ ಬರುವಂತೆ ಭಾರತೀಯ ರಾಜತಾಂತ್ರಿಕರನ್ನು ಹೊರಹಾಕುತ್ತೇವೆ'' ಎಂದು ಆದೇಶ ಹೊರಡಿಸಿದರೋ, ಕೂಡಲೇ ಭಾರತವೂ ಈ ಹೇಳಿಕೆಯನ್ನು ನಿರಾಕರಿಸಿ, ಖಂಡನಾ ನಿರ್ಣಯ ಕೈಗೊಂಡು, ಪ್ರತೀಕಾರವಾಗಿ ಕೆನಡಾದ ಉನ್ನತ ರಾಜತಾಂತ್ರಿಕರನ್ನು ಈ ನೆಲದಿಂದ ಹೊರಹಾಕಿತು. ಅಲ್ಲಿಗೆ, ಭಾರತ-ಕೆನಡಾ ನಡುವಿನ ದ್ವಿಪಕ್ಷೀಯ ಸಂಬಂಧ ಹಳಸಲು ಆರಂಭವಾಯಿತು. 2023ರ ಸೆಪ್ಟೆಂಬರ್ 10ರಂದು ದೆಹಲಿಯಲ್ಲಿ ನಡೆದ ಜಿ-20 ಶೃಂಗಸಭೆಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿಯವರು, ಕೆನಡಾದಲ್ಲಿ ನಡೆಯುತ್ತಿರುವ ಸಿಖ್ ಪ್ರತ್ಯೇಕತಾವಾದಿ ಪ್ರತಿಭಟನೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ, ಟ್ರುಡೊ ಅವರು ಈ ವಿಚಾರದಲ್ಲಿ ಸ್ಪಷ್ಟ ನಿಲುವು ತಳೆಯಬೇಕು ಎಂದು ಆಗ್ರಹಿಸಿದರು. ಆದರೆ ಆರೋಪವನ್ನು ನಿರಾಕರಿಸಿದ ಕೆನಡಾ, ತನ್ನಲ್ಲಿದ್ದ ಭಾರತೀಯ ಉನ್ನತ ಗುಪ್ತಚರ ಅಧಿಕಾರಿಯನ್ನು ಭಾರತಕ್ಕೆ ವಾಪಸ್ ಕಳುಹಿಸಿತು, ಇದಕ್ಕೆ ಎದುರೇಟು ಎಂಬಂತೆ ಭಾರತವೂ ಅದನ್ನೇ ಮಾಡಿತು. 2023ರ ಅಕ್ಟೋಬರ್ 29ರಂದು, ನಿಜ್ಜರ್ ಹತ್ಯೆಯಾದ ಗುರುದ್ವಾರದ ಪರಿಸರದಲ್ಲಿ ಸಿಖ್ಖರು ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿ ಸ್ವತಂತ್ರ ಸಿಖ್ ದೇಶದ ಕುರಿತು ಜನಾಭಿಪ್ರಾಯ ಸಂಗ್ರಹಕ್ಕೆ ಮುಂದಾಗಿ ಮತ ಚಲಾಯಿಸಿದರು. ಈ ಘಟನೆಯನ್ನು ಭಾರತವು ಅಂತಾರಾಷ್ಟ್ರೀಯ ಮಟ್ಟದಲ್ಲಿ ತೀವ್ರವಾಗಿ ಖಂಡಿಸಿತು. ನಂತರದ ದಿನಗಳಲ್ಲಿ, ಇನ್ನೊಬ್ಬ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನುವನ್ನು ಅಮೆರಿಕದಲ್ಲಿ ಹತ್ಯೆ ಮಾಡುವ ಭಾರತದ ಪ್ರಯತ್ನವನ್ನು ಅಮೆರಿಕದ ಅಧಿಕಾರಿಗಳು ವಿಫಲಗೊಳಿಸಿದರು ಎಂದು ಕೆನಡಾ ಆರೋಪಿಸಿತು. ಈ ಬಗ್ಗೆ ಸಾಕ್ಷ್ಯ ನೀಡಲು ಹೇಳಿದ ಭಾರತವು ಇವೆಲ್ಲವೂ ಅನೂರ್ಜಿತ ಮತ್ತು ಆಧಾರರಹಿತ ಆರೋಪಗಳು ಎಂದು ನಿರಾಕರಿಸಿತು.

ಹೀಗೆ ಖಲಿಸ್ತಾನಿಗಳ ವಿಚಾರವಾಗಿ ಶುರುವಾದ 'ಕಿರಿಕ್' ಇದೀಗ ಉಲ್ಬಣಗೊಂಡು ದೊಡ್ಡ ಸದ್ದು ಮಾಡುತ್ತಿದೆ. ಭಾರತೀಯ ಹೈಕಮಿಷನರ್, ರಾಜತಾಂತ್ರಿಕರು ಮತ್ತು ವಿದೇಶಾಂಗ ಸಚಿವಾಲಯದ ಅಧಿಕಾರಿಗಳನ್ನು ಭಾರತವು ಕೆನಡಾದಿಂದ ವಾಪಸ್ ಕರೆಸಿಕೊಂಡಿದೆ. ಜತೆಗೆ ಭಾರತವನ್ನು ಬಿಟ್ಟು ತೊಲಗುವಂತೆ ಕೆನಡಾದ ರಾಜತಾಂತ್ರಿಕ ಅಧಿಕಾರಿಗಳಿಗೆ ಸೂಚನೆ ನೀಡಿದೆ. ಖಲಿಸ್ತಾನಿ ಉಗ್ರರ ಪರವಾಗಿ ಕೆನಡಾ ದೇಶದ ಸಹಾನುಭೂತಿ ಇರುವುದೇ ಭಾರತದ ಆಕ್ಷೇಪ ಮತ್ತು ಆಕ್ರೋಶಕ್ಕೆ ಕಾರಣ. ಇದೇ ಉಗ್ರಗಾಮಿಗಳ ಪಡೆಯು 1992ರಲ್ಲಿ ಏರ್ ಇಂಡಿಯಾದ 'ಕನಿಷ್ಕಾ' ವಿಮಾನವನ್ನು ಸ್ಫೋಟಿಸಿ 329 ಪ್ರಯಾಣಿಕರ ಸಾವಿಗೆ ಕಾರಣವಾಗಿತ್ತು. ಹೀಗೆ ಹತ್ಯೆಗೀಡಾದವರಲ್ಲಿ ಹೆಚ್ಚಿನವರು ಕೆನಡಾದ ಪ್ರಜೆಗಳಾದರೂ, ಈ ವಿಧ್ವಂಸಕಾರಿ ಕೃತ್ಯವನ್ನು ಜಸ್ಟಿನ್ ಟ್ರುಡೊ ಸಮರ್ಥಿಸಿಕೊಂಡಿದ್ದು ದುರಂತ. ಸ್ಪಷ್ಟವಾಗಿ ಹೇಳುವುದಾದರೆ, ಉಗ್ರವಾದದ ಮತ್ತು ಉಗ್ರಗಾಮಿಗಳ ಸಮರ್ಥನೆಯೇ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ತಿಕ್ಕಾಟಕ್ಕೆ ಮತ್ತು ಬಿಕ್ಕಟ್ಟಿಗೆ ಪ್ರಮುಖ ಕಾರಣವಾಗಿದೆ.

ಭಾರತದ ನಂತರ ಸಿಖ್ಖರು ಹೆಚ್ಚಿನ ಸಂಖ್ಯೆಯಲ್ಲಿರುವ ದೇಶ ಕೆನಡಾ. ಸುಮಾರು 4 ಕೋಟಿಯಷ್ಟಿರುವ ಅಲ್ಲಿನ ಒಟ್ಟು ಜನಸಂಖ್ಯೆಯಲ್ಲಿ 8 ಲಕ್ಷದಷ್ಟು ಸಿಖ್ ಸಮುದಾಯದವರು ಇದ್ದಾರೆ. ಈ ಗಮನಾರ್ಹ ಸಂಖ್ಯೆಯು ಕೆನಡಾದ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದಕ್ಕೆ ಇಂಬು ಕೊಡುವಂತೆ ಖಲಿಸ್ತಾನಿ ಪ್ರತ್ಯೇಕತಾ ಹೋರಾಟದಲ್ಲಿ ಭಾಗಿಯಾಗಿರುವ ಇನ್ನೊಬ್ಬ ಸಿಖ್ ಪ್ರತ್ಯೇಕತಾವಾದಿ ಜಗಮೀತ್ ಸಿಂಗ್ ನೇತೃತ್ವದ 'ನ್ಯೂ ಡೆಮೊಕ್ರಾಟಿಕ್ ಪಕ್ಷ'ವು (ಎನ್‌ಡಿಪಿ) ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಲಿಬರಲ್ ಪಕ್ಷಕ್ಕೆ ಬೆಂಬಲ ನೀಡುತ್ತಿದೆ. ಹೀಗಾಗಿ, ಅಲ್ಲಿನ ಸಿಖ್ಖರ ಸಹಾನುಭೂತಿ ಗಿಟ್ಟಿಸಲು ಅನಿವಾರ್ಯವಾಗಿ ಅವರನ್ನು ನಿರಂತರ ಬೆಂಬಲಿಸುವ, ಅವರ 'ಭಾರತ-ದ್ರೋಹಿ' ಕೆಲಸಗಳೆಲ್ಲವನ್ನೂ ಪೊರೆಯುವ ಕೆಲಸ ನಡೆದುಕೊಂಡೇ ಬಂದಿದೆ.

ಟ್ರುಡೊ ಅವರ ಅನಿಶ್ಚಿತ ರಾಜಕೀಯ ಸ್ಥಿತಿಯನ್ನು ಗಮನಿಸಿದಾಗ, ತೀವ್ರವಾಗುತ್ತಲೇ ಇರುವ ಅವರ ಸರಕಾರದ 'ಭಾರತ-ವಿರೋಧಿ' ನಿಲುವು, ಅಧಿಕಾರದ ಮೇಲಿನ ಹಿಡಿತವನ್ನು ಉಳಿಸಿಕೊಳ್ಳುವ ಸಲುವಾಗಿ ಎನ್‌ಡಿಪಿಯ ಬೆಂಬಲವನ್ನು ಕಾಪಿಟ್ಟುಕೊಳ್ಳುವ ಗುರಿ ಹೊಂದಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಕೆನಡಾದಲ್ಲಿ 2025ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಕನ್ಸರ್ವೇಟಿವ್ ಪಕ್ಷವು ಗೆದ್ದು ಅಧಿಕಾರ ಹಿಡಿಯುವ ಸಾಧ್ಯತೆಗಳು ಹೆಚ್ಚಾಗಿ ಗೋಚರಿಸುತ್ತಿವೆ. ಹೀಗಾಗಿ ಲಿಬರಲ್ ಪಕ್ಷದ ಟ್ರುಡೊ ಅವರು ತಮ್ಮ ರಾಜಕೀಯ ಸ್ಥಾನಮಾನಗಳನ್ನು ಗಟ್ಟಿಗೊಳಿಸಿಕೊಳ್ಳಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ, ಆ ನಿಟ್ಟಿನಲ್ಲಿ ತೀವ್ರ ಒತ್ತಡವನ್ನು ಎದುರಿಸುತ್ತಿದ್ದಾರೆ. ಶತಾಯಗತಾಯ ಮುಂದಿನ ಚುನಾವಣೆಯನ್ನು ಗೆಲ್ಲಲು ರಣತಂತ್ರವನ್ನು ರೂಪಿಸುತ್ತಿದ್ದಾರೆ. ತಮ್ಮ ಮನೆಯೊಳಗಿನ ಉಗ್ರರನ್ನು ಪೋಷಿಸುತ್ತಾ, ಭಾರತದ ಮೇಲೆ ವಿನಾಕಾರಣ ಆರೋಪ ಮಾಡುತ್ತಾ, ಅಂತಾರಾಷ್ಟ್ರೀಯ ವಿವಾದವನ್ನು ಹುಟ್ಟುಹಾಕಿ ಆ ಮೂಲಕ ದೇಶೀಯ ಬಿಕ್ಕಟ್ಟುಗಳನ್ನು ಮರೆಮಾಚಿ ತಮ್ಮ ಹುದ್ದೆಯನ್ನು ಉಳಿಸಿಕೊಳ್ಳಲು ಟ್ರುಡೊ ಮಾಡುತ್ತಿರುವ ಪ್ರಯತ್ನದ ಭಾಗವಿದು. ಇದೆಲ್ಲದರ ಪರಿಣಾಮವೇ ನಾವೀಗ ನೋಡುತ್ತಿರುವ ಬಿಕ್ಕಟ್ಟು.

ಭಾರತ ಮತ್ತು ಕೆನಡಾದ ನಡುವಿನ ಬಿಕ್ಕಟ್ಟಿನ ವಿಚಾರದಲ್ಲಿ ಸಾರ್ವಭೌಮತ್ವವು (sovereignty) ಕೇಂದ್ರಬಿಂದು ಎಂದೆನಿಸುತ್ತದೆ. ಏಕೆಂದರೆ, ಕಳೆದೊಂದು ದಶಕದಿಂದ ಭಾರತದಲ್ಲಿ ಅತ್ಯಂತ ಸ್ಥಿರ ರಾಜಕೀಯ ಸ್ಥಿತಿಯನ್ನು ನೋಡುತ್ತಿದ್ದೇವೆ. ಇದರ ಪರಿಣಾಮವಾಗಿ ಭಾರತವು ವಿಶ್ವವೇದಿಕೆಯಲ್ಲಿ ಅಗ್ರಗಣ್ಯನ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ವಿಶ್ವಗುರುವಾಗಿ, ತನ್ನನ್ನು ತಾನು ಎತ್ತರಕ್ಕೇರಿಸಿಕೊಳ್ಳುವ ಮಹತ್ವಾಕಾಂಕ್ಷೆ ಹೊಂದಿರುವ ಜಾಗತಿಕ ಶಕ್ತಿಯಾಗಿ ಭಾರತ ಮುನ್ನಡೆಯುತ್ತಿದೆ. ಹೀಗಿರುವಾಗ, ತನ್ನ ಆಂತರಿಕ ವ್ಯವಹಾರಗಳಲ್ಲಿ, ವಿಶೇಷವಾಗಿ ಖಲಿಸ್ತಾನ್ ಮುಂತಾದ ಪ್ರತ್ಯೇಕತೆಯ ಹೋರಾಟದ ವಿಷಯದಲ್ಲಿ ಯಾವುದೇ ದೇಶದ ಹಸ್ತಕ್ಷೇಪವನ್ನು ಕೇಂದ್ರ ಸರಕಾರ ಸಹಿಸಲಾರದು. ಅಂಥ ಪ್ರಯತ್ನವನ್ನು ಯಾರೇ ಮಾಡಿದರೂ ಮುಟ್ಟಿನೋಡಿಕೊಳ್ಳುವಂಥ ಹೊಡೆತವನ್ನು ಅವರಿಗೆ ನೀಡುವಷ್ಟು ಭಾರತವು ಸಶಕ್ತವಾಗಿದೆ, ಸದೃಢವಾಗಿದೆ. ಭಾರತದ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವವನ್ನು ದುರ್ಬಲಗೊಳಿಸಲು ಪ್ರಯತ್ನಿಸುವ ದೇಶ ಯಾವುದೇ ಇರಲಿ, ಅದೆಷ್ಟೇ ದೂರದಲ್ಲಿರಲಿ, ದೇಶದ್ರೋಹಿಗಳಿಗೆ ಆಶ್ರಯನೀಡುವ ಅಂಥ ದೇಶದೊಂದಿಗೆ ರಾಜಿಯಾಗುವ ಪ್ರಶ್ನೆಯೇ ಇಲ್ಲ ಎನ್ನುವ ಸ್ಪಷ್ಟ ಸಂದೇಶವನ್ನು ಭಾರತ ರವಾನಿಸಿದೆ.

ಭಾರತದೊಂದಿಗಿನ ಹದಗೆಡುತ್ತಿರುವ ಸಂಬಂಧವು ಕೆನಡಾದ ಮೇಲೆ ಗಮನಾರ್ಹವಾದ, ದೀರ್ಘಕಾಲೀನ ವ್ಯತಿರಿಕ್ತ ಪರಿಣಾಮಗಳನ್ನು ಬೀರುವುದರಲ್ಲಿ ಸಂಶಯವಿಲ್ಲ. ಒಂದು ದೇಶದ ವಿದೇಶಾಂಗ ನೀತಿಯನ್ನು ರೂಪಿಸುವಲ್ಲಿ ಅಲ್ಲಿನ ರಾಜಕೀಯ ಸ್ಥಿರತೆ ಮಹತ್ವದ ಪಾತ್ರವನ್ನು ವಹಿಸುತ್ತದೆ. ಟ್ರುಡೊ ಅವರ ಅಸಂಬದ್ಧ ಕ್ರಮಗಳು ತೀವ್ರ ರಾಜತಾಂತ್ರಿಕ ಬಿಕ್ಕಟ್ಟಿಗೆ ಕಾರಣವಾಗಿವೆ. ಭಾರತ ಮತ್ತು ಕೆನಡಾ ನಡುವಿನ ವ್ಯಾಪಾರಿ ಮಾತುಕತೆಗಳು, ವಾಣಿಜ್ಯ ವ್ಯವಹಾರಗಳು ಸ್ಥಗಿತಗೊಂಡಿವೆ. ಭವಿಷ್ಯದಲ್ಲಿ ಪರಸ್ಪರರ ಸಹಕಾರದ ಸಾಧ್ಯತೆಗಳು ಕಡಿಮೆ ಎಂದೇ ಹೇಳಬೇಕು. ಜಗತ್ತಿನ ದಕ್ಷಿಣ ಮತ್ತು ಇಂಡೋ-ಪೆಸಿಫಿಕ್ ಭಾಗದಲ್ಲಿ ಪ್ರಮುಖ ಪಾತ್ರ ವಹಿಸುವ ಭಾರತವನ್ನು ದ್ವೇಷಿಸುವ ಮೂಲಕ ಕೆನಡಾ ತಪ್ಪು ಲೆಕ್ಕಾಚಾರ ಹಾಕಿದೆ. ಕೆನಡಾದ ಮೇಲಾಗಿರುವ ಸರಿಪಡಿಸಲಾಗದ ಹಾನಿಗೆ ಇದು ಕಾರಣವಾಗಿದೆ. ಚೀನಾದೊಂದಿಗಿನ ಕೆನಡಾದ ಸಂಬಂಧ ಈಗಾಗಲೇ ಕಡಿತಗೊಂಡಿದೆ, ಹಾಗಾಗಿ ಅದು ಏಷ್ಯಾದಾದ್ಯಂತದ ವ್ಯವಹಾರ-ನಿಮಿತ್ತದ ಸಂಬಂಧವನ್ನು ಕಳೆದುಕೊಳ್ಳುವ ಭೀತಿಯನ್ನು ಎದುರಿಸುತ್ತಿದೆ.

ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆ ಹೊಂದಿರುವ ಮತ್ತು ಎರಡನೇ ಅತಿದೊಡ್ಡ ಮಿಲಿಟರಿ ವ್ಯವಸ್ಥೆ ಹೊಂದಿರುವ ದೇಶವಾಗಿರುವ ಭಾರತವು ಕೆನಡಾ ಸೇರಿದಂತೆ ಆ ಭಾಗದ ದೇಶಗಳ ವಾಣಿಜ್ಯ, ಆರ್ಥಿಕ ಮತ್ತಿತರ ವ್ಯವಹಾರಗಳಲ್ಲಿ ಬಲುದೊಡ್ಡ ಪಾಲುದಾರನಾಗಿದೆ. ಭಾರತ ಮತ್ತು ಕೆನಡಾ ನಡುವಿನ ಸಂಬಂಧಗಳನ್ನು ಬಲಪಡಿಸಲು, ಹಿಂದಿದ್ದಂತೆ ಉತ್ತಮ ಸಹಾಯ-ಸಹಕಾರದ ಪರಿಸ್ಥಿತಿ ನಿರ್ಮಾಣವಾಗಲು ಎರಡೂ ಸರಕಾರಗಳಿಂದ ಬದ್ಧತೆ ಮತ್ತು ಸಂಘಟಿತ ಪ್ರಯತ್ನದ ಅಗತ್ಯವಿದೆ. ಪರಸ್ಪರ ಪ್ರಯೋಜನಕಾರಿ ಅಂಶಗಳನ್ನು ಮತ್ತು ಅವಕಾಶಗಳನ್ನು ಅನುಸರಿಸುವ ಮೂಲಕ ಎರಡೂ ದೇಶಗಳು ಜಾಗತಿಕ ಸ್ಥಿರತೆ ಮತ್ತು ಸಮೃದ್ಧಿಗೆ ಕೊಡುಗೆ ನೀಡಬಹುದು. ಇದೆಲ್ಲ ಸಾಧ್ಯವಾಗಬೇಕು ಎಂದಾದರೆ, ಉಗ್ರರನ್ನು ಪೋಷಿಸುವ ಮತ್ತು ಉಗ್ರಗಾಮಿ ಸಂಘಟನೆಗಳಿಗೆ ಬೆಂಬಲ ನೀಡುವ ತನ್ನ ಚಾಳಿಯನ್ನು ಕೆನಡಾ ದೇಶವು ಸಂಪೂರ್ಣವಾಗಿ ಬಿಡಬೇಕಿದೆ. ಭಾರತವನ್ನು ವಿಘಟಿಸುವ ಸಂಘಟನೆ ಮತ್ತು ಸಮೂಹಕ್ಕೆ ಬೆಂಬಲ ನೀಡುವ ಮೂಲಕ ಜೇನುಗೂಡಿಗೆ ಕೈಹಾಕಿರುವ ಕೆನಡಾ, ಈಗಾಗಲೇ ಅದರ ಪರಿಣಾಮಗಳನ್ನು ಎದುರಿಸುತ್ತಿದೆ. ಮಾತ್ರವಲ್ಲ, ಈ ಪರಿಣಾಮವು ಮುಂದಿನ ದಿನಗಳಲ್ಲಿ ಇನ್ನೂ ತೀವ್ರವಾಗಿ ಮತ್ತು ಅನೇಕ ವಿಧಗಳಲ್ಲಿ ಕೆನಡಾವನ್ನು ಅಪ್ಪಳಿಸಲಿದೆ. ಈ ಸಂದಿಗ್ಧತೆಯಿಂದ ಭಾರತಕ್ಕೂ ಕೊಂಚ ಹಿನ್ನಡೆ ಆದೀತು. ಅದರ ಹಲವು ಪಟ್ಟು ಹಿನ್ನಡೆ ಮತ್ತು ತೊಂದರೆ ಕೆನಡಾಕ್ಕೆ ಆಗುವುದು ಖಂಡಿತ.

ಉಗ್ರವಾದದ ಮತ್ತು ಉಗ್ರವಾದಿಗಳ ವಿಚಾರದಲ್ಲಿ ಶೂನ್ಯ ಸಹಿಷ್ಣುತೆ ಹೊಂದಿರುವ ದೇಶ ಭಾರತ. ಹೀಗಿರುವಾಗ, ಕೆನಡಾ ದೇಶವು ತನ್ನ ಅಸಂಬದ್ಧ ನಿಲುವುಗಳನ್ನು ಕೊನೆಗಾಣಿಸಿ ಉಗ್ರವಾದವನ್ನು ನಿರ್ಮೂಲನೆ ಮಾಡಿದರೆ ಮಾತ್ರವೇ ಭಾರತ-ಕೆನಡಾ ನಡುವಿನ ದ್ವಿಪಕ್ಷೀಯ ಸಂಬಂಧದ ಗತವೈಭವ ಮರುಸ್ಥಾಪನೆಯಾಗಲು ಸಾಧ್ಯ. ಆದರೆ, ಅರೆಹುಚ್ಚನಂತೆ ವರ್ತಿಸುತ್ತಿರುವ ಕೆನಡಾದ ಪ್ರಧಾನಿ ಟ್ರುಡೊಗೆ ಮತ್ತು ಅವರ ಆಡಳಿತ ಪಕ್ಷಕ್ಕೆ ಇದನ್ನು ಮನನ ಮಾಡಿಸುವವರು ಯಾರು? ಮಲಗಿದವರನ್ನು ಎಬ್ಬಿಸಬಹುದು, ಆದರೆ ಮಲಗಿದಂತೆ ನಟಿಸುವವರನ್ನು ಎಬ್ಬಿಸುವುದು ಹೇಗೆ?! ಟ್ರುಡೊ ಶೀಘ್ರವಾಗಿ ಗುಣಮುಖರಾಗಲಿ!

(ಲೇಖಕರು ಸಾಫ್ಟ್‌ವೇರ್ ಉದ್ಯೋಗಿ)

ಭಟ್ಟರ್ ಸ್ಕಾಚ್

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಹೆಂಡತಿ ಮೇಲೆ ಪ್ರಬಂಧ ಬರೆಯುವ ಧೈರ್ಯ ಗಂಡನಿಗೆ ಇದೆಯಾ?
– **ಹೆಂಡತಿಯ ಕುರಿತು ಬರೆಯುವ ಧೈರ್ಯವೇ ಇಲ್ಲ, ಇನ್ನು ಅವಳ ಮೇಲೆ ಕುಳಿತು ಬರೆಯುವುದುಂಟಾ?!**

- **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ಬೆಂಗಳೂರಿನಲ್ಲಿ ಒಳ್ಳೆಯ ಪ್ರೇಕ್ಷಣೀಯ ತಾಣಗಳು ಇಲ್ಲವಾ?
– **ಬೆಂಗಳೂರಿನಲ್ಲಿ ಎಲ್ಲಿ ನೋಡಿದರೂ ಸೈಟ್ (ನಿವೇಶನ) ಸೀಯಿಂಗ್ ಜಾಗಗಳೇ ಕಾಣುತ್ತವಲ್ಲ?!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಮನೆ ಜಗಳವನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು ಅಂತಾರಲ್ಲ?
– **ಅದಕ್ಕಾಗಿಯೇ ಬಿಗ್ ಬಾಸ್ ಮನೆ ಜಗಳವನ್ನು ಗಂಭೀರವಾಗಿ ತೆಗೆದುಕೊಳ್ತಾ ಇರೋದು!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ರಾಜಕಾರಣದಲ್ಲಿ ನಾಟಕ ಆಡಬೇಕಾಗುತ್ತದಾ?
– **ಅದೊಂದನ್ನೇ ಆಡಿದರೂ ಸಾಕು!**

- **ರಾಮು ಮಲ್ಲಿಕಟ್ಟೆ, (ಇಮೇಲ್ ಮೂಲಕ)**
ಭಟ್ರೇ, ಒಂದು ಇಡೀ ದಿನ ಮಳೆಯಾದರೆ ಬೆಂಗಳೂರು ನರಕವಾಗುತ್ತದಲ್ಲ?
– **ಹಾಗಂತ ಮಳೆ ಆಗದಿದ್ದರೆ ಸ್ವರ್ಗ ಅಂತ ಭಾವಿಸಬೇಕಿಲ್ಲ!**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ಜಗತ್ತಿನಲ್ಲಿ ಯಾವುದೂ ಶಾಶ್ವತ ಅಲ್ಲ ಅಂತಾರಲ್ಲ?
– **ಅದಕ್ಕಾಗಿಯೇ ದುರಸ್ತಿ ಮಾಡಿದ ರಸ್ತೆ ವರ್ಷ ವರ್ಷ ಕಿತ್ತುಹೋಗೋದು!**

- **ಶಿವಲಿಂಗಪ್ಪ ಸಿಂಗಸೆಟ್ಟಿ, ಕಲಬುರ್ಗಿ**
ಭಟ್ರೇ, ಕೆಜಿಎಫ್-3 ಸಿನಿಮಾಕ್ಕೆ ನಿಮ್ಮ ಪ್ರಕಾರ ಯಾರನ್ನು ಹೀರೋ ಮಾಡಬಹುದು?
– **ಲಾಯರ್ ಜಗದೀಶ!**

- **ವಾಣಿ ಹುಗ್ಗಿ, (ಇಮೇಲ್ ಮೂಲಕ)**
ಭಟ್ರೇ, ಆಗಾಗ ಕಾಣುವ ಆಕಾಶಕಾಯಕ್ಕೆ ಏನೆನ್ನಬಹುದು?
– **ಜಯವೀರ ವಿಕ್ರಮ ಸಂಪತ್ ಗೌಡ!**

- **ವಿನಾಯಕ ಬನ್ನಿಕೊಪ್ಪ, ಹತ್ತಿಮತ್ತೂರು**
ಭಟ್ರೇ, ಯಡಿಯೂರಪ್ಪನವರು ಮೌನಕ್ಕೆ ಜಾರಿರುವುದೇಕೆ?
– **ಯತ್ನಾಳ್ ಮಾತಾಡಿದರೆ ಅವರು ಮೌನವಹಿಸುತ್ತಾರೆ!**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ಕನ್ನಡ ಸುದ್ದಿ ಚಾನೆಲ್ಲುಗಳಲ್ಲಿ ಅಬ್ಬರವೇ ಇಲ್ಲವಲ್ಲ?
– **ಸುಮ್ಮನಿರಪ್ಪ, ರಾಧಾ ಹಿರೇಗೌಡರ್‌ಗೆ ಗೊತ್ತಾದರೆ ಕಥೆ ಮುಗೀತ್!**

ಮುಳ್ಳು ಸೌತೆಯಲ್ಲಿ ಮುಳ್ಳು ಇರುತ್ತದಾ?

ಕದಿರು ಕಟ್ಟುವ ದಿನ ಪೂಜಿಸಿಕೊಳ್ಳುವ ಮುಳ್ಳು ಸೌತೆಕಾಯಿಯನ್ನು, ಪೂಜೆಯ ನಂತರ ಮನೆಯವರೆಲ್ಲರೂ ತಿನ್ನುವುದುಂಟು. ಅದನ್ನು ತಿಂದರೆ ಗಂಟಲು ಕಟ್ಟಬಹುದಾದ್ದರಿಂದ ಮೆಣಸಿನ ಪುಡಿ, ಉಪ್ಪನ್ನು ಸವರಿ ತಿನ್ನುವುದು ಕ್ಷೇಮ. ಎಳೆಯ ಮುಳ್ಳು ಸೌತೆಯನ್ನು ತರಕಾರಿಯ ರೀತಿಯಲ್ಲೂ ಬಳಸುವುದುಂಟು.

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ಎಳೆ ಸೌತೆ, ಬಣ್ಣದ ಸೌತೆ, ಮದರಾಸ್ ಸೌತೆ ಮೊದಲಾದ ಹೆಸರುಗಳು ಸಾಕಷ್ಟು ಪರಿಚಿತ. ಮುಳ್ಳು ಸೌತೆ ಎಂದರೆ ಅದಾವುದು ಎಂದು ಕೆಲವರಿಗಾದರೂ ಅಚ್ಚರಿಯಾಗಬಹುದು. ಕರ್ನಾಟಕದ ಕರಾವಳಿ ಮತ್ತು ಮಲೆನಾಡಿನ ಭಾಗದಲ್ಲಿ ವಾಸಿಸುವವರಿಗೆ 'ಮುಳ್ಳು ಸೌತೆ' ಚಿರಪರಿಚಿತ.

ಹೆಚ್ಚು ವಿಶೇಷವೇನಿಲ್ಲ, ಬಯಲುಸೀಮೆಯ ಎಳೆ ಸೌತೆಯನ್ನೇ ತದ್ವತ್ ಆಗಿ ಹೋಲುವ ಸೌತೆಯನ್ನು ಕರಾವಳಿಯ ಮುಳ್ಳು ಸೌತೆ ಎನ್ನಬಹುದು. ಈ ಸೌತೆಕಾಯಿಯ ಮೇಲೆ ಸಣ್ಣ ಸಣ್ಣ ಮುಳ್ಳುಗಳಿರುವುದರಿಂದ, 'ಮುಳ್ಳು ಸೌತೆ' ಎಂಬ ಅನ್ವರ್ಥ ನಾಮ. ಮುಳ್ಳು ಸೌತೆಕಾಯಿಯು ಒಂದು ಅಡಿಗಿಂತ ಚಿಕ್ಕ ಗಾತ್ರದಲ್ಲಿರುವಾಗ, ಅದನ್ನು ಉದ್ದಕ್ಕೆ ಸೀಳಿ, ತುಸು ಉಪ್ಪು, ಮೆಣಸಿನ ಪುಡಿ ಸವರಿ ತಿಂದರೆ ಬಹುರುಚಿ- ಇಂದು ಮಾಲ್‌ಗಳಲ್ಲಿ, ರಾಜ್ಯದಾದ್ಯಂತ ದೊರೆಯುತ್ತಿರುವ ಎಳೆ ಸೌತೆಗಿಂತಲೂ ಹೆಚ್ಚು ಸವಿ, ತುಸು ಸಿಹಿ.

ಮುಳ್ಳು ಸೌತೆಕಾಯಿಗೆ ನಮ್ಮೂರಿನಲ್ಲಿ ಇಷ್ಟುಮಾತ್ರವಲ್ಲದೆ, ಇನ್ನೊಂದು ವಿಶೇಷ ಸ್ಥಾನವೂ ಇದೆ. ಅದೇನೆಂದರೆ 'ಕದಿರು ಕಟ್ಟುವ' ದಿನದಂದು ಮತ್ತು 'ಹೊಸತು ಉಣ್ಣುವ' ದಿನದಂದು, ಮುಳ್ಳು ಸೌತೆಕಾಯಿ ಅಗತ್ಯವಾಗಿ ಬೇಕು- ಅದು ಅಂದಿನ 'ಪ್ರಕೃತಿ ಪೂಜೆ'ಗೆ ಅನಿವಾರ್ಯವಾಗಿ ಬೇಕಿರುವ ಪರಿಕರ. ಇಲ್ಲಿ 'ಪ್ರಕೃತಿ ಪೂಜೆ' ಎಂಬುದು ನಾನು ಬಳಸಿದ ವಿಶೇಷಣ; ಕೃಷಿಯ ಭಾಗವಾಗಿ, ಧಾನ್ಯಗಳನ್ನು ಮನೆಗೆ ತರುವ ಸಂಭ್ರಮದ ಅಂಗವಾಗಿ ಅಂದು ನಡೆಯುವ ಪೂಜೆಯು, ಪ್ರಕೃತಿಯನ್ನು, ಪ್ರಕೃತಿಯ ಶಿಶುಗಳನ್ನು ಪೂಜಿಸುವ ರೀತಿಯಲ್ಲಿರುತ್ತದೆ ಹೊರತು ವೈದಿಕ ಪದ್ಧತಿಯ ಹೆಚ್ಚು ಪ್ರಭಾವವಿಲ್ಲ. ಆದ್ದರಿಂದಲೇ, ಕದಿರು ಕಟ್ಟುವ ದಿನದ ಆಚರಣೆ, ಭೂಮಿ ಹುಣ್ಣಿಮೆ, ಸೀಗೆ ಹುಣ್ಣಿಮೆ ಇವೆಲ್ಲವನ್ನೂ ಪ್ರಕೃತಿ ಪೂಜೆ ಎಂದೇ ತಿಳಿಯಬಹುದು.

ನವರಾತ್ರಿಯ ಮೊದಲ ದಿನ ಅಥವಾ ನಂತರದ ಯಾವುದಾದರೊಂದು ದಿನ, ಗದ್ದೆಯಲ್ಲಿ ಬೆಳೆದ 'ಕದಿರನ್ನು' (ಬತ್ತದ ತೆನೆಗಳು) ಮನೆಯೊಳಗೆ ತರುವಾಗ ತೋರುವ ಆದರ, ಗೌರವ, ಭಕ್ತಿ ಎಲ್ಲವೂ 'ಕದಿರು ಕಟ್ಟುವ ಹಬ್ಬದ' ಆಚರಣೆಯ ಭಾಗ. ಬತ್ತದ ತೆನೆಗಳನ್ನು ಹರಿವಾಣದಲ್ಲಿಟ್ಟು, ಪೂಜಿಸಿ, ತಲೆಯ ಮೇಲೆ ಹೊತ್ತು ಮನೆಯೊಳಗೆ ತರುವ ಈ ಆಚರಣೆಯ ಹಿನ್ನೆಲೆಯನ್ನು ಹುಡುಕುತ್ತಾ ಹೊರಟರೆ, ಪುರಾತನ ಜೀವನಪದ್ಧತಿಯೊಂದರ ಪದರಗಳು ತೆರೆದುಕೊಳ್ಳುತ್ತಾ ಹೋಗುತ್ತವೆ. ನವರಾತ್ರಿಯ ಮೊದಲ ದಿನ ಕದಿರು ಕಟ್ಟಲು, ಬೇರೊಬ್ಬರ ಗದ್ದೆಯಿಂದ, ಅವರಿಗೆ ಗೊತ್ತಿಲ್ಲದೇ ಕಿತ್ತು ತಂದ ಬತ್ತದ ಗಿಡಗಳು ಬೇಕು! ಅಂದರೆ, ಬತ್ತದ ಗಿಡಗಳನ್ನು ಕದ್ದು ತರಬೇಕು. ಇನ್ನೂ ಬಿಡಿಸಿ ಹೇಳಬೇಕೆಂದರೆ, ಕದಿರು ಕಟ್ಟುವ ಹಬ್ಬದ ಹಿಂದಿನ ರಾತ್ರಿ, ಮನೆಯ ಯಜಮಾನನು ಕತ್ತಲೆಯಲ್ಲೇ ಮೆತ್ತಗೆ ಓಡಾಡುತ್ತಾ, ಬೇರೊಬ್ಬರ ಗದ್ದೆಯಲ್ಲಿ ಬೆಳೆದು ನಿಂತ ನಾಲ್ಕಾರು ಬತ್ತದ ಗಿಡಗಳನ್ನು ತೆನೆಸಹಿತ ಕಿತ್ತು ತರಬೇಕು. ಯಾರಿಗೂ ಗೊತ್ತಾಗದಂತೆ ತಂದ ಈ ಬತ್ತದ ಗಿಡಗಳನ್ನು, ಮನೆಯಂಗಳದ ಮೂಲೆಯಲ್ಲಿ ನಾಲ್ಕು ಕೋಲು ಕಟ್ಟಿದ ಕಿರು ಚಪ್ಪರಕ್ಕೆ ಆನಿಸಿಟ್ಟು, ಸೂರ್ಯೋದಯದ ಸಮಯದಲ್ಲಿ ಪೂಜೆ ಮಾಡಿ, ಬತ್ತದ ತೆನೆಗಳನ್ನು ಗೌರವದಿಂದ ಕತ್ತರಿಸಿ, ಹರಿವಾಣದಲ್ಲಿಟ್ಟು, ಗಂಟೆ ಬಡಿಯುತ್ತಾ ಮನೆಯೊಳಗೆ ತರಬೇಕು. ಆ ರೀತಿ ಗೌರವದಿಂದ ಬತ್ತದ ತೆನೆ ಹೊತ್ತ ಮನೆಯ ಯಜಮಾನನನ್ನು ಮನೆಯ ಹೆಂಗಸರು ಕಾಲು ತೊಳೆದು, ಪೂಜೆ ಮಾಡಿ, ಮನೆಯೊಳಗೆ ಬರಮಾಡಿಕೊಳ್ಳುತ್ತಾರೆ. ನಂತರ, ಬತ್ತದ ತೆನೆಯನ್ನು ಸಾಂತು (ತೆಂಗಿನ ಹೆಡೆಯನ್ನು ಸೀಳಿ ಮಾಡಿದ ದಾರ) ಎಂಬ ದಾರದಲ್ಲಿ ಕಟ್ಟಿ, ಮನೆಯ ಕಂಬಗಳು, ಮೇಟಿ ಕಂಬ, ಹಡಿ ಮಂಚ, ನೇಗಿಲು, ಹಟ್ಟಿ ಕಂಬ, ತಿರಿ, ಹಾರೆ, ಕಡಗೋಲು ಮೊದಲಾದವುಗಳಿಗೆ ಕಟ್ಟುವ ಕ್ರಮ. ಈ ರೀತಿ ಕಟ್ಟಿದ ಬತ್ತದ ತೆನೆಗಳು ಮುಂದಿನ ಮಳೆಗಾಲದ ತನಕವೂ ಇದ್ದು, ಗುಬ್ಬಚ್ಚಿಗಳಿಗೆ ಆಹಾರವೂ ಆಗುವುದುಂಟು!

ಇದೆಲ್ಲಾ ಸರಿ, ಇಲ್ಲಿ ಮುಳ್ಳು ಸೌತೆಕಾಯಿಯದೇನು ಕಾರುಬಾರು ಎಂದು ನೀವು ಕೇಳಬಹುದು. ಬತ್ತದ ತೆನೆಯನ್ನು ಕತ್ತರಿಸಿ ಹರಿವಾಣದಲ್ಲಿ ಇಟ್ಟು ಪೂಜಿಸುವ ಸಮಯದಲ್ಲೇ, ಒಂದು ಮುಳ್ಳು ಸೌತೆಕಾಯಿಯನ್ನು ಸಹ ಉದ್ದಕ್ಕೆ ಸೀಳಿ, ಎರಡು ಭಾಗ ಮಾಡಿ, ಅದೇ ಹರಿವಾಣದಲ್ಲಿಡುತ್ತಾರೆ; ಬತ್ತದ ತೆನೆಗಳ ಜತೆಯಲ್ಲೇ, ಎರಡು ಭಾಗಗಳಾಗಿ ಕತ್ತರಿಸಿದ ಆ ಪುಟ್ಟ ಮುಳ್ಳು ಸೌತೆಕಾಯಿಯೂ, ಹರಿವಾಣದಲ್ಲಿ ಪೂಜಿಸಿಕೊಂಡು, ಮನೆಯ ಯಜಮಾನನ ತಲೆಯ ಮೇಲೆ ಕುಳಿತು 'ಗೃಹಪ್ರವೇಶ' ಮಾಡುತ್ತದೆ! ಅದಕ್ಕೆಂದೇ, ಮುಳ್ಳು ಸೌತೆಕಾಯಿಗೆ ನಮ್ಮೂರಲ್ಲಿ ಸಾಕಷ್ಟು ಗೌರವ.

ಪುಟ್ಟ ಪುಟ್ಟ ಮುಳ್ಳುಗಳನ್ನು ಮೈಮೇಲೆ ಬೆಳೆಸಿಕೊಂಡಿರುವ ಇಂಥ ಪುಟಾಣಿ ಸೌತೆಕಾಯಿಗಳು ಆದಿನಕ್ಕೆ ಸರಿಯಾಗಿ ಸಿಗುವಂತೆ, ಮನೆಯವರು ನಾಲ್ಕೆಂಟು ವಾರಗಳ ಮುಂಚೆಯೇ, ಗಿಡ ಮಾಡಿ ನೆಡುತ್ತಾರೆ. ಹಿಂದಿನ ವರ್ಷ ಬೆಳೆದ ಸೌತೆಕಾಯಿಯ ಬೀಜವನ್ನು ಜೋಪಾನವಾಗಿ ಸಂಗ್ರಹಿಸಿಟ್ಟು, ಚೌತಿ ಹಬ್ಬದ ನಂತರ, ಅಂಗಳದ ಮೂಲೆಯಲ್ಲೋ, ಗದ್ದೆಯಂಚಿನ ಗೊಬ್ಬರದ ರಾಶಿಯಲ್ಲೋ ಊರಿ, ಮೊಳಕೆಯೊಡೆದು ಬೆಳೆಯುವ ಗಿಡಕ್ಕೆ ಮರದ ಕೋಲಿನ ಆಧಾರ ನೀಡಿ, ಬೆಳೆಸಿ, ಕಾಯಿಯಾಗುವಂತೆ ನೋಡಿಕೊಳ್ಳುತ್ತಾರೆ. ಕದಿರು ಕಟ್ಟುವ ದಿನಕ್ಕಿಂತ ಮುಂಚೆಯೇ ಕಾಯಿಗಳಾದರೆ, ಅದನ್ನು ಆ ದಿನದ ತನಕ ಕೊಯ್ಯುವುದಿಲ್ಲ; ಕದಿರು ಕಟ್ಟುವ ಹಬ್ಬಕ್ಕೆಂದೇ ಬೆಳೆಸಿ, ಆ ದಿನ ಮನೆಯವರಿಂದ ಪೂಜಿಸಿಕೊಂಡು, ಬರುವ ವಿಶೇಷ ಅತಿಥಿ, ಈ ಮುಳ್ಳು ಸೌತೆ.

ಆ ದಿನ, ಮುಳ್ಳು ಮುಳ್ಳು ಬಾಯಿ ಇರುವ ಕುಡುಗೋಲಿನಿಂದ ಮುಳ್ಳು ಸೌತೆಕಾಯಿಯನ್ನು ಉದ್ದಕ್ಕೆ ಸೀಳಬೇಕೆಂಬ ಇನ್ನೊಂದು ನಂಬಿಕೆಯೂ ನಮ್ಮೂರಿನಲ್ಲಿದೆ! ಅಂಥ ಕುಡುಗೋಲನ್ನು, ನಂತರ ನಡೆಯುವ ಬತ್ತದ ಕೊಯ್ಲು ಮಾಡಲು ಸಹ ಉಪಯೋಗಿಸಬೇಕು, ಉಪಯೋಗಿಸುತ್ತಾರೆ. ಈ ರೀತಿ, ಮುಳ್ಳು ಮುಳ್ಳು ಬಾಯಿ ಇರುವ ಕುಡುಗೋಲನ್ನು ನಮ್ಮ ಹಳ್ಳಿಯ ಕಮ್ಮಾರರು ತಯಾರಿಸಿಕೊಡುತ್ತಿದ್ದರು. ಕದಿರು ಹಬ್ಬದ ದಿನ ತೆನೆಗಳನ್ನು ಕತ್ತರಿಸಲು ಸಹ ಇಂಥದ್ದೇ ಕುಡುಗೋಲನ್ನು ಬಳಸುತ್ತಾರೆ. ಮುಳ್ಳು ಸೌತೆ, ಮುಳ್ಳು ಮುಳ್ಳು ಬಾಯಿ ಇರುವ ಕುಡುಗೋಲು, ಬತ್ತದ ತೆನೆ, ಬೇರೊಬ್ಬರ ಗದ್ದೆಯಿಂದ ರಾತ್ರಿ ಹೊತ್ತಿನಲ್ಲಿ ತೆನೆ ಸಹಿತ ಬತ್ತದ ಗಿಡಗಳನ್ನು ಕದ್ದು ತರುವ ಸಂಪ್ರದಾಯ ಇವೆಲ್ಲವೂ ಬಹು ಪುರಾತನ ಜನಪದ ಪದ್ಧತಿಯ ಪಳೆಯುಳಿಕೆಗಳು. ಇನ್ನೂ ಒಂದು ವಿಸ್ಮಯಕಾರಿ ಎನಿಸುವ, ಆದರೆ ಈಗ ಬಹುಪಾಲು ಬಳಕೆಯಲ್ಲಿಲ್ಲದ ಒಂದು ಸಂಪ್ರದಾಯವಿದೆ: ಹಿಂದಿನ ರಾತ್ರಿ ಬತ್ತದ ಗಿಡಗಳನ್ನು ಬೇರೊಬ್ಬರ ಗದ್ದೆಯಿಂದ ಕದ್ದು ತರುವಾಗ, ಮನೆಯ ಯಜಮಾನನು ಬಟ್ಟೆ ಧರಿಸಬಾರದಂತೆ! ಈ ಪದ್ಧತಿಯನ್ನು ಈಗ ಯಾರೂ ಅನುಸರಿಸುತ್ತಿಲ್ಲ, ಬಿಡಿ. ಇದೇ ರೀತಿ, ಆಷಾಢ ಮಾಸದ ಅಮಾವಾಸ್ಯೆ ದಿನ ಆಚರಣೆಯ ಭಾಗವಾಗಿ ಕುಡಿಯುವ ಹಾಲೆ ಕಷಾಯಕ್ಕಾಗಿ, ಹಾಲೆ ಮರದ ತೊಗಟೆ ಅಥವಾ ಕೆತ್ತೆಯನ್ನು ತರುವಾಗಲೂ, ರಾತ್ರಿ ಹೊತ್ತು ಬಟ್ಟೆ ಧರಿಸದೇ ಕಾಡಿಗೆ ಹೋಗಬೇಕೆಂಬ ನಂಬಿಕೆಯಿತ್ತು. ಇವೆಲ್ಲವೂ ಆದಿಮ ಸಂಸ್ಕೃತಿಯ, ಮನುಷ್ಯನು ಕೃಷಿ ಆರಂಭಿಸುವಾಗ ಬೆಳೆಸಿಕೊಂಡ ಪದ್ಧತಿಯ ನೆನಪಿನ ಭಾಗಗಳಾಗಿರಬಹುದು.

ನಮ್ಮೂರಿನಲ್ಲಿ ಕದಿರು ಕಟ್ಟುವ ದಿನ, ಪೂಜಿಸಿಕೊಳ್ಳುವ ಮುಳ್ಳು ಸೌತೆಕಾಯಿಯನ್ನು, ಪೂಜೆಯ ನಂತರ ಮನೆಯವರೆಲ್ಲರೂ ಚಪ್ಪರಿಸಿ ತಿನ್ನುವುದುಂಟು. ಅದನ್ನು ತಿಂದರೆ, ಶೀತವಾಗಿ, ಗಂಟಲು ಕಟ್ಟುವ ಸಾಧ್ಯತೆ ಇದೆ; ಆದ್ದರಿಂದ ಸ್ವಲ್ಪ ಮೆಣಸಿನ ಪುಡಿ, ಉಪ್ಪನ್ನು ಸವರಿ ತಿನ್ನುವುದು ಕ್ಷೇಮ. ಎಳೆಯದಾದ ಮುಳ್ಳು ಸೌತೆಯನ್ನು ಕತ್ತರಿಸಿದರೆ, ಅದರಿಂದ ನೀರು ವಸರುವ ರೀತಿಯೇ ವಿಶಿಷ್ಟ. ಒಂದು ತರಕಾರಿಯ ರೀತಿಯಲ್ಲೂ ಇದನ್ನು ಬಳಸುವುದುಂಟು. ಕದಿರು ಕಟ್ಟುವ ಹಬ್ಬದ ದಿನ ಅಥವಾ ನಂತರದ ಯಾವುದಾದರೂ ಒಂದು ದಿನ ಆಚರಿಸುವ 'ಹೊಸತು ಉಣ್ಣುವ' ಹಬ್ಬ ಅಥವಾ ಹೊಸ ಬೆಳೆಯನ್ನು ಊಟ ಮಾಡುವ ಹಬ್ಬದ ದಿನವೂ ಎಳೆ ಸೌತೆಕಾಯಿಯ ಬಳಕೆ ಇದೆ. ಹೊಸ ಊಟದ ಹಬ್ಬಕ್ಕೆ ಬಂಧು-ಮಿತ್ರರು ಅಗತ್ಯ ಬರಬೇಕು ಎಂಬ ನಂಬಿಕೆಯುಂಟು. ಮುಳ್ಳು ಸೌತೆಕಾಯಿ ಗಿಡದ ಬೀಜವನ್ನು ತಲೆತಲಾಂತರದಿಂದಲೂ ಮನೆಯಲ್ಲೇ ಪ್ರತಿವರ್ಷ ಸಂಗ್ರಹಿಸಿಡುತ್ತಾರೆ.

ವಿಶೇಷವೆಂದರೆ, ಎಳೆಯ ಮಿಡಿಯಾಗಿರುವ ಸಿಹಿಸಿಹಿ ರುಚಿಯ ಈ ಮುಳ್ಳು ಸೌತೆಕಾಯಿಯನ್ನು ಕೊಯ್ಯದೇ ಹಾಗೆಯೇ ಬಿಟ್ಟರೆ, ಅದು ಬಲಿಯತೊಡಗುತ್ತದೆ; ಒಂದರಿಂದ ಎರಡು ಅಡಿ ಉದ್ದ, ಅದಕ್ಕೆ ಸೂಕ್ತ ಎನಿಸುವಷ್ಟು ದಪ್ಪವಾಗಿ ಬೆಳೆಯುವ ಈ ಮುಳ್ಳು ಸೌತೆಕಾಯಿಯನ್ನು ಕಾಪಿಟ್ಟರೆ, ಒಂದೆರಡು ತಿಂಗಳುಗಳ ತನಕ ಕೆಡದೇ ಉಳಿಯುತ್ತದೆ. ಕರಾವಳಿಯ ಹಳ್ಳಿಗಳಲ್ಲಿ ಅದೂ ಒಂದು ತರಕಾರಿ: ಸಾಂಬಾರು, ಪಲ್ಯ, ಪಳದ್ಯ ತಯಾರಿಸಲು ಉಪಯೋಗ. ಆದರೆ, ಅದರ ಸಂಬಂಧಿಯಾದ ಬಣ್ಣದ ಸೌತೆಯ ರೀತಿ, ಹೆಚ್ಚು ಕಾಲ ಇಡುವಂತಿಲ್ಲ; ಜಾಸ್ತಿ ದಿನ ಇಟ್ಟರೆ ರುಚಿ ಕಳೆದುಕೊಂಡು, 'ಹೀಲಿ'ಯಾಗುತ್ತದೆ.

ಎಳೆಯ ಮುಳ್ಳುಸೌತೆಕಾಯಿಯನ್ನು ಕಚ್ಚಿ ತಿನ್ನುವುದೆಂದರೆ ಮಕ್ಕಳಿಗೆ ಬಹಳ ಇಷ್ಟ; ಜಾಸ್ತಿ ತಿಂದರೆ, ಅದೇ ದಿನ ಸಂಜೆ ಮೂಗು ಸೊರಸೊರ ವಾಗುವುದೂ ಖಚಿತ! ಇದೇ ಸೌತೆಕಾಯಿಯನ್ನು ಹಾಕಿ ತಯಾರಿಸಿದ ಅಕ್ಕಿಕಡುಬನ್ನು, ದೀಪಾವಳಿಯ ದಿನ, ಗೋಪೂಜೆಯ ದಿನ, ಎತ್ತು, ಹಸುಗಳಿಗೆ ತಿನ್ನಿಸುವ ಕ್ರಮವೂ ಇದೆ. ಇವನ್ನೆಲ್ಲಾ ಕಂಡರೆ, ನಮ್ಮೂರಿನವರು ಮುಳ್ಳು ಸೌತೆಗೆ ಎಷ್ಟೊಂದು ಗೌರವ, ಪ್ರಾಧಾನ್ಯ ನೀಡುತ್ತಿದ್ದರೆಂದು ತಿಳಿಯುತ್ತದೆ. ಆದರೆ, ಇದಕ್ಕೆ ಪ್ರತಿಯಾಗಿ, ಹಕ್ಕಲು ಸೌತೆ ಅಥವಾ ಬಣ್ಣದ ಸೌತೆಗೆ ಈ ರೀತಿಯ ಪೂಜ್ಯ ಭಾವನೆ ಇಲ್ಲ; ಆದರೆ, ಅಡುಗೆಮನೆಯಲ್ಲಿ ಅದರ ಉಪಯೋಗ ಜಾಸ್ತಿ. ನಮ್ಮ ಹಳ್ಳಿಯವರು ಹಕ್ಕಲು ಸೌತೆ ಎಂದು ಕರೆಯುವ ಸೌತೆಕಾಯಿಯನ್ನು ಬಯಲು ಸೀಮೆಯವರು 'ಬಣ್ಣದ ಸೌತೆ' ಎಂದು ಕರೆಯುತ್ತಾರೆಂದು ನಂತರ ತಿಳಿಯಿತು; ಅದನ್ನೇ 'ಮದರಾಸ್ ಸೌತೆ' ಎಂದು ಬೆಂಗಳೂರಿನ ಅಂಗಡಿಗಳಲ್ಲಿ ಮಾರುತ್ತಾರೆ: 1956ರ ತನಕ ಮದರಾಸ್ ರಾಜ್ಯಕ್ಕೆ ಸೇರಿದ್ದ ಕರಾವಳಿ ಪ್ರದೇಶದ ತರಕಾರಿಯಾಗಿದ್ದರಿಂದ, ಮದರಾಸ್ ಸೌತೆ ಎಂಬ ವಿಶೇಷ ಹೆಸರು! ಉತ್ತರ ಕನ್ನಡದವರು ಬಣ್ಣದ ಸೌತೆ ಮತ್ತು ಮಗೆ ಕಾಯಿ ಎಂಬ ಎರಡು ಪ್ರಭೇದದ ಸೌತೆಕಾಯಿಗಳನ್ನು ತರಕಾರಿಯಾಗಿ ಬಳಸುತ್ತಾರೆ.

ಮುಳ್ಳು ಸೌತೆಕಾಯಿಯು ಬಲಿತ ನಂತರ ಅದರಿಂದ ಸಾಂಬಾರು, ಪಳದ್ಯ, ಪಲ್ಯ ಮುಂತಾದವನ್ನು ತಯಾರಿಸುವ ಪದ್ಧತಿ ಇದ್ದರೂ, ಹಕ್ಕಲು ಸೌತೆ ಅಥವಾ ಬಣ್ಣದ ಸೌತೆಯಷ್ಟು ರುಚಿ ಅದಕ್ಕಿಲ್ಲ; ಈಚಿನ ದಶಕಗಳಲ್ಲಿ, ಎಲ್ಲಾ ಕಡೆ ಉಡುಪಿ ಹೋಟೇಲುಗಳ ಜನಪ್ರಿಯತೆಯಿಂದಾಗಿ, ಬಣ್ಣದ ಸೌತೆಯ ಸಾಂಬಾರು ಕರ್ನಾಟಕದ ಎಲ್ಲಾ ಭಾಗಗಳ ಜನರಿಗೂ ಪರಿಚಿತವಾಗಿದೆ. ಸ್ವಲ್ಪ ಬೆಲ್ಲ ಹಾಕಿ ತಯಾರಿಸುವ ಬಣ್ಣದ ಸೌತೆಯ ಸಾಂಬಾರು, ದಿನನಿತ್ಯದ ಅಡುಗೆಯ ಜತೆಯಲ್ಲೇ, ಮದುವೆ ಮೊದಲಾದ ವಿಶೇಷದ ಅಡುಗೆಯಲ್ಲೂ ಸಾರ್ವತ್ರಿಕ. ಇದರ ಸಾಂಬಾರಿಗೆ ಬೆಲ್ಲ ಹಾಕುವ ಪದ್ಧತಿ ಇರುವುದರಿಂದ, ಮಧುಮೇಹ ಇರುವವರು ಇದನ್ನು ಸೇವಿಸುವಾಗ ತುಸು ಯೋಚಿಸುವುದೊಳ್ಳೆಯದು!

ಹೊಟ್ಟೆಯ ಅಸಿಡಿಟಿ ಇರುವವರು, ಖಾಲಿ ಹೊಟ್ಟೆಯಲ್ಲಿ ಮುಳ್ಳು ಸೌತೆಯನ್ನು ತಿಂದರೆ, ಸಾಕಷ್ಟು ಉಪಯೋಗವುಂಟು ಎನ್ನುವರು. ಜತೆಗೆ, ಕ್ಯಾಲ್ಸಿಯಂ ಕೊರತೆ ಇರುವವರಿಗೂ ಇದು ಉತ್ತಮ ಎನ್ನುವುದುಂಟು. ಮುಳ್ಳು ಸೌತೆಕಾಯಿಯ ಮಹಿಮೆಯು ಕದಿರು ಕಟ್ಟುವ ಹಬ್ಬದಿಂದ ಆಹಾರ ಸಂಸ್ಕೃತಿಯ ತನಕವೂ ಹರಡಿರುವುದು ವಿಶೇಷ ಎನಿಸುತ್ತದೆ.

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್

- **ಜ್ಯೂಸ್ ಕುಡಿಸಿ ಚಿನ್ನ ದೋಚುತ್ತಿದ್ದ ಕಳ್ಳಿಯ ಸೆರೆ: ಸುದ್ದಿ**
– 'ಕುಡಿಯೋಣು ಬಾರಾ' ಎಂಬ ಮಾತಿಗೆ ಜನ ಒಗ್ಗೊತ್ತಾರೆ ಅಂತ ಗೊತ್ತಾಗ್ತಾ ಇದ್ದಹಾಗೆ ಕೆಲವರು ಹೇಗೆಲ್ಲಾ ದುರುಪಯೋಗ ಮಾಡ್ಕೋತಾರೆ ನೋಡಿ!

- **2026ರ ವೇಳೆಗೆ ಮಂಗನ ಕಾಯಿಲೆಗೆ ಲಸಿಕೆ ಲಭ್ಯ: ಸುದ್ದಿ**
– ಅಂದ್ರೆ, ಈ ಕಾಯಿಲೆ ಬಂದವರು ಅಲ್ಲೀವರೆಗೂ ಮರಹತ್ತಿ ಕೂತಿರಬೇಕಾ?

- **ದೀಪಾವಳಿಗೆ ಕೇಂದ್ರದ ನೌಕರರಿಗೆ 'ಸಿಹಿಸುದ್ದಿ'. ತುಟ್ಟಿಭತ್ಯ ಶೇ.3ರಷ್ಟು ಹೆಚ್ಚಳ: ಸುದ್ದಿ**
– 'ತುಟ್ಟಿಭತ್ಯ'ದಲ್ಲಿ ಹೆಚ್ಚಳವಾಗಿದ್ದಕ್ಕೆ 'ತುಟಿಭತ್ಯ' ಕೊಡೋಲ್ವಾ? ಎಂಬುದಾಗಿ ಪ್ರಿಯಕರನೊಬ್ಬ ಕೇಂದ್ರ ಸರಕಾರಿ ಉದ್ಯೋಗಸ್ಥೆಯಾದ ತನ್ನ ಪ್ರಿಯತಮೆಯನ್ನು ಸರಿಹೊತ್ತಲ್ಲೂ 'ಸಿಹಿಯಾಗಿ' ಕಾಡಿದನಂತೆ!!

- **ಚೆನ್ನೈನಲ್ಲಿ ಭಾರಿ ಮಳೆ, ಸೂಪರ್‌ಸ್ಟಾರ್ ರಜನಿಕಾಂತ್ ಅವರ ಐಷಾರಾಮಿ ಬಂಗಲೆ ಜಲಾವೃತ: ಸುದ್ದಿ**
– ಇನ್ ಸಚ್ ಎ ಸಿಚುಯೇಷನ್, ರಜನಿ'ಕಾಂಟ್' ಡೂ ಎನಿಥಿಂಗ್!

- **ಚನ್ನಪಟ್ಟಣ ಉಪಚುನಾವಣೆ. 'ಸಿಪಾಯಿ' ಕಾಟದಿಂದ ಸುಸ್ತಾದ ಶಿಸ್ತಿನ ಪಕ್ಷ. ಬಿಜೆಪಿಗೆ ನುಂಗಲಾರದ ತುತ್ತಾದ 'ಸೈನಿಕ' ಸಿ.ಪಿ.ಯೋಗೇಶ್ವರ್: ಸುದ್ದಿ**
– ''ಹಾಗಾದ್ರೆ 'ಶಿಸ್ತಿನ ಪಕ್ಷ'ವನ್ನು ಇನ್ನು ಮುಂದೆ 'ಸುಸ್ತಿನ ಪಕ್ಷ' ಅಂತ ಕರೆಯೋಣವಾ ಸರ್?'' ಅಂತ ಚುನಾವಣಾ ತಂತ್ರಗಾರ ಪ್ರಶಾಂತ್ ಕಿಶೋರ್ ಅವರು ಫೋನಿನಲ್ಲಿ ಯಾರನ್ನೋ ಕೇಳುತ್ತಿದ್ದರಂತೆ!!

- **ಮಳೆನಾಡಾದ ಬೆಂಗಳೂರು, ಮಾಲ್‌ಗಳಿಗೂ ನುಗ್ಗಿದ ನೀರು. ಕ್ರಿಕೆಟ್ ಪಂದ್ಯಕ್ಕೂ ವರುಣನ ಅಡ್ಡಿ: ಸುದ್ದಿ**
– ಈ ಸುದ್ದಿಗೆ ಪ್ರತಿಕ್ರಿಯೆಯಾಗಿ 'ಮಲಯಮಾರುತ' ರಾಗದ ಅಭಿಮಾನಿಯೊಬ್ಬರು ''ಮಳೆಯ ಮಾರುತಗಾನ, ಈ ನಗರ ಜೀವನಯಾನ'' ಎಂದು ಪಕ್ಕವಾದ್ಯದೊಂದಿಗೆ 'ಪನ್' ಮಾಡಿದರಂತೆ!

- **ಭಾರಿ ಮಳೆಯ ನಡುವೆ ನಗರದ ಬಿಬಿಎಂಪಿ ಪಾರ್ಕ್‌ನ ಗಂಧದ ಮರವನ್ನು ಕಳವು ಮಾಡಿದ ಕಿಲಾಡಿಕಳ್ಳರು: ಸುದ್ದಿ**
– ರೋಮ್ ನಗರ ಹೊತ್ತಿ ಉರಿಯುವಾಗ ದೊರೆ ನೀರೋ ಪಿಟೀಲು 'ಕುಯ್ದನಂತೆ'.... ಭರ್ಜರಿ ಮಳೆಗೆ ಬೆಂಗಳೂರು ತೊಯ್ಯುವಾಗ ಕಳ್ಳನು ಗಂಧದ ಮರವನ್ನು 'ಕೊಯ್ದನಂತೆ'..!

- **ಕಾವೇರಿ 5ನೇ ಹಂತದ ಯೋಜನೆ ಬಿಜೆಪಿಯದ್ದು.... ಆದರೆ ತಾವೇ ಮಾಡಿದ್ದು ಅಂತ ಕಾಂಗ್ರೆಸ್ ಜಂಭ ಕೊಚ್ಚಿಕೊಳ್ಳುತ್ತಿದೆ: ವಿಪಕ್ಷ ನಾಯಕ ಆರ್.ಅಶೋಕ ವಾಗ್ದಾಳಿ**
– 'ಕೇಶವಕೃಪಾ'ದ ಕಟ್ಟೆ ಮೇಲೆ ಕೂತು ಮದ್ದೂರು ವಡೆ ಮೆಲ್ಲುತ್ತಾ ಈ ಸುದ್ದಿಯನ್ನೂ ಮೆಲುಕುಹಾಕಿದ ಕೇಸರಿ ಪಾಳಯದ ಕಾರ್ಯಕರ್ತರೊಬ್ಬರು, ''ಮಾವಿನ ವೋಟೆಯನ್ನು ನೆಲದಲ್ಲಿ ಹುಗಿದಿದ್ದು ಯಾರೋ... ಅದು ಸಸಿಯಾಗಿ ಬೆಳೆದು ಹೆಮ್ಮರವಾಗಿ ಬಿಟ್ಟಂಥ ಹಣ್ಣುಗಳನ್ನು ತಿಂದಿದ್ದು ಮತ್ಯಾರೋ...!!'' ಎಂದು 'ಫಿಲಾಸಫಿಕಲ್' ದನಿಯಲ್ಲಿ ಬಿಕ್ಕುತ್ತಾ ಶಲ್ಯದಂಚಿನಲ್ಲಿ ಕಣ್ಣೊರೆಸಿಕೊಂಡರಂತೆ!!

ಆತ್ಮವಿಶ್ವಾಸವನ್ನು ಅನುದಿನವೂ ಬೆಳೆಸಿಕೊಳ್ಳುವುದು ಹೇಗೆ?

ನಿಜಕೌಶಲ
ಪ್ರೊ.ಆರ್.ಜಿ.ಹೆಗಡೆ
vveditoped@gmail.com

ಮೊದಲಿಗೆ, ಆತ್ಮವಿಶ್ವಾಸವೆಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಬೇಕು; ಜತೆಗೆ, ಹಾಗೆಂದರೆ ಏನು ಅಲ್ಲ ಎಂಬುದನ್ನೂ ಅರಿಯಬೇಕು. ಆತ್ಮವಿಶ್ವಾಸ ಅಂದರೆ ಅಹಂಕಾರವಲ್ಲ, 'ನಾನೇ ಸರ್ವಶ್ರೇಷ್ಠ, ಸರ್ವಸ್ವವೂ ನನಗೇ ಗೊತ್ತಿದೆ. ನಾನೇ ಇಂದ್ರ-ಚಂದ್ರ-ದೇವೇಂದ್ರ, ಉಳಿದವರೆಲ್ಲರೂ ಹುಲುಮಾನವರು' ಎಂಬಂತೆ ಬಿಂಬಿಸುವ ಮಾತು ಅಥವಾ ನಡವಳಿಕೆ ಆತ್ಮವಿಶ್ವಾಸ ಅಲ್ಲವೇ ಅಲ್ಲ. ಅದು ಧಿಮಾಕು, ಸೊಕ್ಕು ಅಥವಾ ಘಮಂಡಿ. ಕುತೂಹಲಕರ ಸಂಗತಿಯೆಂದರೆ ಇದು 'ಇನ್ಫೀರಿಯಾರಿಟಿ ಕಾಂಪ್ಲೆಕ್ಸ್' ಅಥವಾ 'ಕೀಳರಿಮೆ'ಯ ಇನ್ನೊಂದು ಮುಖವೇ! ಜನ ಇದನ್ನು 'ಸುಪೀರಿಯಾರಿಟಿ ಕಾಂಪ್ಲೆಕ್ಸ್' ಎಂದೇ ಭಾವಿಸುತ್ತಾರೆ. ಆದರೆ, 'ಸುಪೀರಿಯಾರಿಟಿ' ಎನ್ನುವ ಮಾನಸಿಕ ಸ್ಥಿತಿ ಇಲ್ಲವೇ ಇಲ್ಲ, ಧಿಮಾಕಿನ ನಡವಳಿಕೆಯು ಕೀಳರಿಮೆಯ ಇನ್ನೊಂದು ರೀತಿಯ ಅಭಿವ್ಯಕ್ತಿಯಷ್ಟೇ. ಆತ್ಮವಿಶ್ವಾಸ ಇಲ್ಲದವನು ದೊಡ್ಡವನಂತೆ ಕಾಣಿಸಿಕೊಳ್ಳಲು ಇಚ್ಛಿಸುತ್ತಾನೆ. ಆತನ ದೇಹಭಾಷೆಯು 'ಆಕ್ರಮಣಕಾರಿ' ಭಂಗಿಯಲ್ಲೇ ಇರುತ್ತದೆ. ಎಲ್ಲವನ್ನೂ, ಎಲ್ಲರನ್ನೂ ತಿರಸ್ಕರಿಸುತ್ತ ತಾನೇ ಶ್ರೇಷ್ಠ ಎನ್ನುವಂತೆ ಓಲಾಡುತ್ತಿರುತ್ತಾನೆ. ಜನರೊಂದಿಗೆ ಸಲೀಸಾಗಿ ಬೆರೆಯುವುದಿಲ್ಲ, ಆಕ್ರಮಣಕಾರಿ ವ್ಯಕ್ತಿತ್ವ ಹೊಂದಿರುತ್ತಾನೆ. ಪರರನ್ನು ಕೆಳಗೆ ತಳ್ಳಲು, ಅವಮಾನಿಸಲು ಕಾಯುತ್ತಲೇ ಇರುತ್ತಾನೆ. ಇವೆಲ್ಲ ಕೀಳರಿಮೆಯ ಮುಖಗಳಷ್ಟೇ.

ಕೀಳರಿಮೆಗೆ ಇನ್ನೊಂದು ಮುಖವಿದೆ. ಕೀಳರಿಮೆಯ ವ್ಯಕ್ತಿಯು ಅತಿರೇಕವೆಂಬಂತೆ ಎಲ್ಲರೊಂದಿಗೂ ತಗ್ಗಿ-ಬಗ್ಗಿ ನಡೆಯುತ್ತಾನೆ. 'ಇಲ್ಲ' ಎನ್ನಲು ಅವನಿಗೆ ಬರುವುದೇ ಇಲ್ಲ. ಸುಳ್ಳು ಹೇಳುತ್ತಾನೆ, ನಿಲ್ಲಲು-ಕೂರಲು ಮೂಲೆಗಳನ್ನು ಹುಡುಕುತ್ತಾನೆ, ತೊದಲುತ್ತಾನೆ, ಕಣ್ಣು ತಪ್ಪಿಸಿ ಮಾತನಾಡುತ್ತಾನೆ. ಶರೀರ ಮುಂದೆ ಬಾಗಿರುತ್ತದೆ, ಉಡುಪು ಅಸ್ತವ್ಯಸ್ತವಾಗಿರುತ್ತದೆ. ಶೀಘ್ರಕೋಪಿ ಮತ್ತು ಸೂಕ್ಷ್ಮ ಮನಸ್ಸಿನವನಾದ ಈತ ಜನರ ಎಲ್ಲ ಮಾತುಗಳೂ ತನ್ನ ಕುರಿತಾದ ವ್ಯಂಗ್ಯ ಅಥವಾ 'ಟಾಂಟ್' ಎಂದೇ ಭಾವಿಸುತ್ತಾನೆ, ಅವನ್ನು ವೈಯಕ್ತಿಕ ಮಟ್ಟದಲ್ಲಿಯೇ ಗ್ರಹಿಸುತ್ತಾನೆ.

ಆತ್ಮವಿಶ್ವಾಸವು ಒಂದು ಮಾನಸಿಕ ಸ್ಥಿತಿ. ವ್ಯಕ್ತಿಯೊಬ್ಬ ತನ್ನ ವ್ಯಕ್ತಿತ್ವ, ಶರೀರ, ಶಕ್ತಿ-ಸಾಮರ್ಥ್ಯ ಮತ್ತು ತನ್ನತನದ ಕುರಿತು ತಳೆಯುವ ನಂಬಿಕೆ, ಸಂತೃಪ್ತಿಯ ಭಾವನೆಯೇ ಆತ್ಮವಿಶ್ವಾಸ. ಕುತೂಹಲಕಾರಿ ಸಂಗತಿಯೆಂದರೆ, ಆತನ ಶರೀರ ಹೇಗೂ ಇರಬಹುದು (ವೈಕಲ್ಯವೂ ಇರಬಹುದು). ಆದರೆ ಆತ ತನ್ನ ಕುರಿತು ಸಂತೃಪ್ತಿಯ ಭಾವನೆ ಹೊಂದುವಲ್ಲಿ ಯಶಸ್ವಿಯಾದರೆ ಅವನಲ್ಲಿ ಆತ್ಮವಿಶ್ವಾಸ ರಾರಾಜಿಸುತ್ತದೆ. ಅಲ್ಲಿ ಶಾರೀರಿಕ ಸಮಸ್ಯೆಯ ಪ್ರಶ್ನೆ ಬರುವುದೇ ಇಲ್ಲ. ಎಲ್ಲವೂ ಚೆನ್ನಾಗಿರುವ ವ್ಯಕ್ತಿಗೂ ಕೀಳರಿಮೆ ಕಾಡಬಹುದು. ಹಾಗಾಗಿ ಇಲ್ಲಿ ನಂಬಿಕೆ, ವಿಶ್ವಾಸ, ಸಕಾರಾತ್ಮಕ ದೃಷ್ಟಿಕೋನ, ಆಳವಾದ ಶ್ರದ್ಧೆ, ಎಲ್ಲದರಲ್ಲೂ ಏನೋ ಒಂದು ಒಳ್ಳೆಯದನ್ನೇ ಕಾಣುವ ಮನಸ್ಥಿತಿ, ದೇವರು ಒಳ್ಳೆಯದನ್ನೇ ಮಾಡುತ್ತಾನೆಂಬ ದೃಢನಂಬಿಕೆ ಮುಖ್ಯ. ತನ್ನ ಶಕ್ತಿಯಲ್ಲಿ, ವ್ಯಕ್ತಿತ್ವದಲ್ಲಿ ಅನುಮಾನವಿರುವವನು ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಾನೆ. ಆದರೆ, ವಿಶ್ವಾಸವಿಡುತ್ತಾ ಹೋದಂತೆ ಅಂಥವನ ಶರೀರದಿಂದ ಸಕಾರಾತ್ಮಕ ಪ್ರಭೆ ಹೊರಹೊಮ್ಮುತ್ತದೆ.

ಆತ್ಮವಿಶ್ವಾಸವು ಒಂದೇ ಹಂತದ ಮಾನಸಿಕತೆಯಲ್ಲ, ಅದರಲ್ಲೂ ಹಲವು ಪದರಗಳಿರುತ್ತವೆ. ಬುದ್ಧ, ಸ್ವಾಮಿ ವಿವೇಕಾನಂದರಂಥ ಮಹಾತ್ಮರು ಅದರ ಶ್ರೇಷ್ಠತೆಯ ಪದರಗಳಲ್ಲಿ ಬರುವವರು. ಹಾಗಾಗಿಯೇ ಅವರ ಶಿರದ ಸುತ್ತ ಒಂದು ಬೆಳಕಿನ ವರ್ತುಲವನ್ನು ಬಿಂಬಿಸಲಾಗುತ್ತದೆ. ಸಾಮಾನ್ಯ ವ್ಯಕ್ತಿಯೊಬ್ಬನ ಸುತ್ತಲೂ ಹೀಗೊಂದು ಆಕರ್ಷಕ ಪ್ರಭೆ ಸೃಷ್ಟಿಯಾಗಬಲ್ಲದು. ಇದನ್ನೇ 'ಚರಿಷ್ಮಾ', 'ವರ್ಚಸ್ಸು', 'ಮೋಹಕತೆ' ಎಂದೆಲ್ಲಾ ಕರೆಯುವುದುಂಟು. ಅಂದರೆ ಒಂಥರಾ ಅಯಸ್ಕಾಂತೀಯ ಶಕ್ತಿ. ಇಂಥವರನ್ನು ನೋಡಲು ಜನ ಮುಗಿಬೀಳುತ್ತಾರೆ. 'ಆತ್ಮವಿಶ್ವಾಸಿ'ಗಳೆಲ್ಲರಲ್ಲೂ ಇದು (ವಿಭಿನ್ನ ಪ್ರಮಾಣಗಳಲ್ಲಿ) ಇರುತ್ತದೆ. ರಜನೀಶ್, ಅಟಲ್ ಬಿಹಾರಿ ವಾಜಪೇಯಿ, ರಾಮಕೃಷ್ಣ ಹೆಗಡೆ ಇದಕ್ಕೆ ಒಂದಷ್ಟು ಉದಾಹರಣೆಗಳು. ವ್ಯಕ್ತಿಯೊಬ್ಬ ತನ್ನ ಕೀಳರಿಮೆಯನ್ನು ಬಿಟ್ಟು ಅರಳಿಕೊಂಡು Assertive ಆಗಿ ಇರಲು ಕಲಿತಾಗ ಇದು ಸಾಧ್ಯವಾಗುತ್ತದೆ. ಕೆಲವರಿಗೆ ಇದು ಸಹಜವಾಗಿ ಬಂದರೆ, ಮತ್ತೆ ಕೆಲವರು ಇದನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಕೆಲವೊಮ್ಮೆ ಅರಿವಿಲ್ಲದೆ ಅಥವಾ ಪರಿಸ್ಥಿತಿಯ ಅನಿವಾರ್ಯತೆಯಿಂದಾಗಿ ಇದು ಅರಳುವುದುಂಟು. ಪ್ರಧಾನಿಯಾಗುವಾಗ ನಾಚಿಕೆಯ ಸ್ವಭಾವದವರಾಗಿದ್ದ, 'ಗುಂಗಿ ಗುಡಿಯಾ' ಎಂದು ಕರೆಸಿಕೊಳ್ಳುತ್ತಿದ್ದ ಇಂದಿರಾ ಗಾಂಧಿಯವರು ತರುವಾಯದಲ್ಲಿ ಅಪಾರ ವರ್ಚಸ್ಸನ್ನು ಬೆಳೆಸಿಕೊಂಡುಬಿಟ್ಟರು. ಡಾ.ರಾಜ್‌ಕುಮಾರ್, ರಜನಿಕಾಂತ್ ಅವರ ವ್ಯಕ್ತಿತ್ವಗಳಿಗಿರುವ ಆಕರ್ಷಣೆಯನ್ನು ಗಮನಿಸಿ. ವ್ಯಕ್ತಿಗಳ ಒಳಗಿನ ಆತ್ಮವಿಶ್ವಾಸ ಸಕಾರಾತ್ಮಕ ಕಿರಣವಾಗಿ ಹೊರಹೊಮ್ಮಿದಾಗ ಇಂಥ ವರ್ಚಸ್ಸು ರೂಪುಗೊಳ್ಳುತ್ತದೆ.

ರಾತ್ರಿ ಬೆಳಗಾಗುವ ತನಕ ಇಂಜೆಕ್ಷನ್ ಕೊಟ್ಟು ಜ್ವರವನ್ನು ತಗ್ಗಿಸಿದ ಹಾಗೆ ಆತ್ಮವಿಶ್ವಾಸವನ್ನು ಏಕಾಏಕಿ ವೃದ್ಧಿಸಲು ಸಾಧ್ಯವಾಗುವುದಿಲ್ಲ, ಏಕೆಂದರೆ ಅದು ಹಲವು ಹಂತಗಳಲ್ಲಿ ನಡೆವ ಒಂದು ಸಂಕೀರ್ಣ ಮಾನಸಿಕ ಪ್ರಕ್ರಿಯೆ. ಅದು ಬಾಲ್ಯದಿಂದಲೇ ಆರಂಭವಾಗಬೇಕಿರುವಂಥದ್ದು. ಮನೆಯ ವಾತಾವರಣ, ಸುತ್ತಲ ಪರಿಸರ, ಶಾಲೆಯ ಕಾರ್ಯವೈಖರಿ ಸರಿಯಾಗಿದ್ದು ಮಗುವಿನೊಳಗೆ ಸಂತಸ ಮತ್ತು ಆತ್ಮವಿಶ್ವಾಸವನ್ನು ತುಂಬುವಂತಿದ್ದರೆ, ಆ ಮಗುವಿಗೆ ವ್ಯಕ್ತಿತ್ವ ವಿಕಸನದ ಬೇರೆ ಪಾಠ ಕೇಳುವ ಅಗತ್ಯವೇ ಇರುವುದಿಲ್ಲ. ಒಂದೊಮ್ಮೆ ಅಲ್ಲೆಲ್ಲಾ ನಕಾರಾತ್ಮಕತೆ ತೂರಿಕೊಂಡುಬಿಟ್ಟರೆ ಮಗುವಿನ ಆತ್ಮವಿಶ್ವಾಸವೂ ಕುಗ್ಗಿಬಿಡುತ್ತದೆ. ಸಮಸ್ಯೆಯೆಂದರೆ, ನಮ್ಮ ಸಮಾಜದಲ್ಲಿ ದೇಹಸೌಂದರ್ಯ ಮತ್ತು ಬುದ್ಧಿವಂತಿಕೆಯ ಕುರಿತು ಒಂದಷ್ಟು ಸಿದ್ಧನಂಬಿಕೆಗಳಿವೆ- 'ಬಿಳಿ' ಎಂದರೆ ಚಂದ, 'ಕಪ್ಪು' ಅಂದರೆ ಕುರೂಪ; ಹೇಳಿಕೊಟ್ಟಂತೆ ಮಾಡುವವ ಬುದ್ಧಿವಂತ, ಏನೇನೋ ಮಾಡಿಬಿಡುವವ ದಡ್ಡ ಹೀಗೆ ('ಐನ್‌ಸ್ಟೀನ್ ದಡ್ಡ' ಎಂದು ಸ್ವತಃ ಆತನ ಟೀಚರ್ ಹೇಳಿದ್ದರಂತೆ!). ಹಾಗೆಯೇ, ಅಕಡೆಮಿಕ್ ಬುದ್ಧಿವಂತಿಕೆ ಮಾತ್ರ ಮಹತ್ವದ್ದು, 'ನಾಯಕತ್ವ' ಇತ್ಯಾದಿ ಅನ್ಯಗುಣಗಳು ಅಪ್ರಯೋಜಕ ಎಂಬ ಭಾವನೆ ನಮಗಿದೆ. ಇಂಥ ನಂಬಿಕೆಗಳನ್ನೇ ತಲೆಯಲ್ಲಿಟ್ಟುಕೊಂಡ ಕೆಲವು ಶಾಲೆಗಳು/ಶಿಕ್ಷಕರು ಮಕ್ಕಳ ಆತ್ಮವಿಶ್ವಾಸವನ್ನು ಹಾಳುಗೆಡವಿ, ಅವರ ಮನಸ್ಸನ್ನು ಬಂಧಿಸಿಬಿಡುತ್ತಾರೆ.

ಆತ್ಮವಿಶ್ವಾಸಿಯು ಶಾಂತನಾಗಿರುತ್ತಾನೆ. ಸಿಟ್ಟು, ಪರನಿಂದನೆ, ತನ್ನನ್ನು ಹೊಗಳಿಕೊಳ್ಳುವಿಕೆ, ಬೊಗಳೆ, ಸುಳ್ಳು ಹೇಳುವಿಕೆ ಇತ್ಯಾದಿ ಅವಗುಣಗಳು ಅವನಲ್ಲಿರುವುದಿಲ್ಲ ಅಥವಾ ನಗಣ್ಯ ಪ್ರಮಾಣದಲ್ಲಿರುತ್ತವೆ. ಗೆಲುವನ್ನು ಸಂಭ್ರಮಿಸುವುದರ ಜತೆಗೆ ಸೋಲನ್ನು ಕ್ರೀಡಾಮನೋಭಾವದಿಂದ ಸ್ವೀಕರಿಸುವುದೂ ಅವನಿಗೆ ಗೊತ್ತಿರುತ್ತದೆ. ಕರುಣೆ, ಸಹನೆ, ಸ್ಥಿರ ಮನಸ್ಸು ಅವನ ಆಸ್ತಿಗಳಾಗಿರುತ್ತವೆ. ಇಂಥ ವ್ಯಕ್ತಿತ್ವವು ಸಂವಹನ ಕಲೆಯ ಮೂಲವೂ ಹೌದು. ಹಾಗಾದರೆ ಇಂಥ ವೈಶಿಷ್ಟ್ಯವನ್ನು ಬೆಳೆಸಿಕೊಳ್ಳುವುದು ಹೇಗೆ? ಎಂಬುದಿಲ್ಲಿ ಪ್ರಶ್ನೆ. ಇಂಥ ವೈಶಿಷ್ಟ್ಯದ ಕೃಷಿ ಆರಂಭವಾಗುವುದೇ ವ್ಯಕ್ತಿಯು ತನ್ನ ಶರೀರವನ್ನು ಪ್ರೀತಿಸಲು ಮತ್ತು ಗೌರವಿಸಲು ಕಲಿಯುವುದರಿಂದ. ಆರೋಗ್ಯದಿಂದ ನಳನಳಿಸುವ ಸದೃಢ ಶರೀರದಲ್ಲಿ ಆತ್ಮವಿಶ್ವಾಸ ನೆಲೆಸುತ್ತದೆ. ದೇಹವನ್ನು ಹಾಗೂ ಧರಿಸುವ ಉಡುಪನ್ನು ಸ್ವಚ್ಛವಾಗಿಟ್ಟುಕೊಳ್ಳುವ ಪರಿಪಾಠವು ವ್ಯಕ್ತಿಯ ಮನಸ್ಸನ್ನು ಆಹ್ಲಾದಕರವಾಗಿಸುವುದರ ಜತೆಗೆ, ಸಕಾರಾತ್ಮಕ ತರಂಗಗಳನ್ನು ಅವನ ಸುತ್ತ ಹೊಮ್ಮಿಸುತ್ತದೆ. ಇದರಿಂದಾಗಿ ಆತ್ಮವಿಶ್ವಾಸ ಹೆಚ್ಚುತ್ತಾ ಹೋಗುತ್ತದೆ. ಆರೋಗ್ಯಕರ ಆಹಾರ, ನೀರು/ಹಣ್ಣಿನ ರಸವನ್ನು ಯಥೋಚಿತ ಪ್ರಮಾಣದಲ್ಲಿ ಸೇವಿಸುವುದರಿಂದ ಹಾಗೂ ನಿಯತ ವ್ಯಾಯಾಮದಿಂದ ಶರೀರಕ್ಕೆ ಸಹಜಕಾಂತಿ ದಕ್ಕುತ್ತದೆ.

ಹೊಸ ಅನುಭವಗಳಿಗೆ, ಸಾಧ್ಯತೆಗಳಿಗೆ ಒಡ್ಡಿಕೊಳ್ಳುತ್ತಾ ಹೋಗುವುದು ಆತ್ಮವಿಶ್ವಾಸದ ಆರ್ಜನೆಯ ಮತ್ತೊಂದು ಹಂತ. ಉದಾಹರಣೆಗೆ, ಇದುವರೆಗೂ ತಣ್ಣೀರಿನ ಸ್ನಾನ ಮಾಡಿಯೇ ಇಲ್ಲವೆಂದಾದರೆ ಒಮ್ಮೆ ಮಾಡಿನೋಡಿ, ಅದರ ಆನಂದವನ್ನು ಅನುಭವಿಸಿ. ವೇದಿಕೆಯೇರಿ ಭಾಷಣ ಮಾಡುವ ಅಭ್ಯಾಸವಿಲ್ಲದಿದ್ದರೆ ಒಮ್ಮೆ ಯತ್ನಿಸಿ ನೋಡಿ- ಮೊದಲಿಗೆ ಕಾಲು ನಡುಗಬಹುದು, ಆದರೆ ಕ್ರಮೇಣ ಧೈರ್ಯ ಬರುತ್ತದೆ. ಒಟ್ಟಾರೆಯಾಗಿ, 'ಕಂಫರ್ಟ್ ಝೋನ್'ನಿಂದ ಆಚೆ ಬಂದು ಅನುಭವದ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗಬೇಕು. ಹಾಗೆಯೇ, ವ್ಯಕ್ತಿಯು ಆದಷ್ಟು ಜನರೊಂದಿಗೆ ಸಂಪರ್ಕ ಇಟ್ಟುಕೊಂಡು ಸಹಾಯ-ಸಹಕಾರದಲ್ಲಿ ತೊಡಗಿರಬೇಕು. ಬಹುತೇಕರು ಚಿಕ್ಕ ಚಿಕ್ಕ ಮಾನಸಿಕ ಗೂಡುಗಳನ್ನು ಕಟ್ಟಿಕೊಂಡು ತಂತಮ್ಮ ಜಗತ್ತಿನಲ್ಲಿ ಬದುಕುವುದು ವಾಡಿಕೆ. ಮೇಲ್ನೋಟಕ್ಕೆ ಅದು ಸುಖವೆನಿಸುತ್ತದೆ. ಆದರೆ ನೈಜಸುಖ ಇರುವುದು ಗೂಡುಗಳ ಹೊರಗಿನ ನೀಲಾಕಾಶದಲ್ಲಿ. ಇಂಥ ಮಾನಸಿಕ ಗೂಡಿನಿಂದ ಹೊರಬಂದು ತೆರೆದುಕೊಳ್ಳುತ್ತಾ ಹೋದಂತೆ ಆತ್ಮವಿಶ್ವಾಸವೂ ವರ್ಧಿಸತೊಡಗುತ್ತದೆ. ಹೆಚ್ಚೆಚ್ಚು ತಿರುಗಿದವರು, ಅನುಭವಗಳಿಗೆ ಒಡ್ಡಿಕೊಂಡವರು ಹೆಚ್ಚು ಆತ್ಮವಿಶ್ವಾಸವನ್ನು ದಕ್ಕಿಸಿಕೊಳ್ಳುತ್ತಾರೆ.

ಎಲ್ಲವನ್ನೂ ಸಕಾರಾತ್ಮಕವಾಗಿ ನೋಡುವ, ಆದಷ್ಟು ಸಕಾರಾತ್ಮಕವಾಗಿ ಮಾತಾಡುವ ಪರಿಪಾಠ ಬಹಳ ಮುಖ್ಯ. ನಮ್ಮ ಸಂಪರ್ಕದಲ್ಲಿರುವ ಜನರ ಕುರಿತು ಆದಷ್ಟು ಒಳ್ಳೆಯ ಮಾತಾಡಬೇಕು, ಕೃತಜ್ಞತೆಗಳನ್ನು ಸಲ್ಲಿಸಬೇಕು. ಜಗತ್ತಿನ ಬಗ್ಗೆ, ಜನರ ಬಗ್ಗೆ ಕೆಟ್ಟದಾಗಿಯೇ ಯೋಚಿಸುವವರಿಂದ, ಮಾತಾಡುವವರಿಂದ, ಗಾಸಿಪ್‌ಗಳಿಂದ ದೂರವಿರಬೇಕು. 'ಜೀವನಕಲೆ' ಎಂದರೆ ಗೋಡೆಗೆ ರಬ್ಬರ್ ಚೆಂಡನ್ನು ಎಸೆದಂತೆ; ನಾವೆಷ್ಟು ಬಿರುಸಿನಲ್ಲಿ ಅದನ್ನು ಎಸೆಯುತ್ತೇವೋ, ಅಷ್ಟೇ ಬಿರುಸಿನಲ್ಲಿ ಅದು ನಮ್ಮೆಡೆಗೆ ಮರಳುತ್ತದೆ. ಅಂತೆಯೇ, ನಾವು ಎಂಥ ಮಾತಾಡುತ್ತೇವೆಯೋ ಅಂಥ ಮಾತುಗಳೇ ನಮ್ಮೆಡೆಗೆ ತಿರುಗಿ ಬರುತ್ತವೆ. ಮತ್ತೊಬ್ಬರೆಡೆಗೆ ಮೆಚ್ಚುಗೆಯ ಮಾತಾಡಿದರೆ, ನಿಮ್ಮೆಡೆಗೆ ಮರಳುವುದು ಅಂಥ ಮಾತುಗಳೇ. ಹಾಗಾದಾಗ ಖುಷಿಯಾಗುತ್ತದೆ, ಆತ್ಮವಿಶ್ವಾಸ ಬೆಳೆಯುತ್ತದೆ. ಹಾಂ! ಇವೆಲ್ಲವನ್ನೂ ಪ್ರಾಮಾಣಿಕವಾಗಿಯೇ ಮಾಡಬೇಕಾಗುತ್ತದೆ, ಇಲ್ಲವಾದಲ್ಲಿ 'ಈತ ಕಪಟಿ' ಎಂದು ಜನ ಭಾವಿಸುತ್ತಾರೆ.

ನಮ್ಮ ಮನಸ್ಸು ಸಾಗರದಂತೆ. ಅಲ್ಲಿ ಯೋಚನೆಗಳ, ವಿಚಾರಗಳ ಅಲೆಗಳು ನಿರಂತರವಾಗಿ ಬರುತ್ತಲೇ ಇರುತ್ತವೆ. ನಕಾರಾತ್ಮಕ ಮತ್ತು ಕೀಳರಿಮೆಯ ವಿಚಾರಗಳು ಮನಸ್ಸನ್ನು ಹೆಚ್ಚು ಮುತ್ತಿಕೊಂಡರೆ, ವ್ಯಕ್ತಿತ್ವದ ಮಟ್ಟವೂ ಕುಸಿಯುತ್ತದೆ. ಬದಲಿಗೆ, ಮನದಲ್ಲಿ ಸಕಾರಾತ್ಮಕ ವಿಚಾರಗಳನ್ನೇ ತುಂಬಿಕೊಂಡರೆ ಆತ್ಮವಿಶ್ವಾಸವು ವರ್ಧಿಸುತ್ತದೆ. ಆದರೆ ಮನದಲ್ಲಿ ಸಕಾರಾತ್ಮಕ ಸಂಗತಿಗಳಷ್ಟೇ ತುಂಬಿಕೊಳ್ಳುವಂತೆ ಮಾಡುವುದು ಹೇಗೆ ಎಂಬುದೇ ಸವಾಲಿನ ಬಾಬತ್ತು. ಹಾಗಂತ ಕೈಚೆಲ್ಲುವಂತಿಲ್ಲ, ಮನಸ್ಸು ದಾರಿ ತಪ್ಪುತ್ತಲೇ ಇರುತ್ತದೆ, ಆದರೂ ಅದನ್ನು ಸರಿದಾರಿಗೆ ಎಳೆತರಬೇಕು, ನಿಗ್ರಹಿಸಬೇಕು. ಇದಕ್ಕಿರುವ ಸುಲಭೋಪಾಯವೆಂದರೆ, ನಮ್ಮ ಮನಸ್ಸನ್ನು ಅದಕ್ಕೆ ಇಷ್ಟವಾದ ಕ್ರಿಯೆಯಲ್ಲಿ ತೊಡಗಿಸುವುದು (ಹಾಗಂತ ಚಟಗಳೆಡೆಗೆ ತಿರುಗಬಾರದು!). ಉದಾಹರಣೆಗೆ, ಸಂಗೀತ, ದೇವರ ನಾಮಸ್ಮರಣೆ, ಚಿತ್ರಕಲೆ, ಷೇರು ಮಾರುಕಟ್ಟೆಯ ಅಧ್ಯಯನ, ಹೊಸ ವಿಷಯಗಳ ಕಲಿಕೆ ಇತ್ಯಾದಿ. ಒಟ್ಟಾರೆ ಹೇಳುವುದಾದರೆ, ಇಂಥ ಯಾವುದೇ ಹವ್ಯಾಸವು ನಮ್ಮ ಮನಸ್ಸನ್ನು ಸಂಪೂರ್ಣ ಆವರಿಸುವಂತಾಗಬೇಕು. ಹೀಗಾದಾಗ ನಕಾರಾತ್ಮಕ ವಿಚಾರಗಳು ನಮ್ಮ ಬಳಿ ಸುಳಿದಾಡುವುದಿಲ್ಲ. ಆಗ ಮನಸ್ಸು ಕ್ರಮೇಣ ಸಕಾರಾತ್ಮಕತೆಯತ್ತ ಸಾಗುತ್ತದೆ, ಆತ್ಮವಿಶ್ವಾಸ ವರ್ಧಿಸುತ್ತದೆ.

(ಲೇಖಕರು ಮಾಜಿ ಪ್ರಾಂಶುಪಾಲರು ಮತ್ತು ಸಂವಹನಾ ಸಮಾಲೋಚಕರು)



ನಾರದ ಸಂಚಾರ

ಕಲಹಪ್ರಿಯ
naadigru@gmail.com

ಇವರು 'ಭೋಳೆ'ಶಂಕರ್ ಅಲ್ಲ ಕಣ್ರೀ!!

ಮಾಧ್ಯಮದವರೊಂದಿಗಿನ ಸಂದರ್ಶನ, ಸಭಿಕರೊಂದಿನ ಸಂವಾದ ಇಂಥ ಸಂದರ್ಭಗಳಲ್ಲಿ 'ಖಡಕ್' ಮಾತುಗಳನ್ನಾಡಿ ಸಂಬಂಧಪಟ್ಟವರಿಗೆ ಚುರುಕು ಮುಟ್ಟಿಸೋದ್ರಲ್ಲಿ ನಮ್ಮ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರದ್ದು ಎತ್ತಿದ ಕೈ. ಮೊನ್ನೆ ಅವರು ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಆಯೋಜಿಸಲಾಗಿದ್ದ ಸಭೆಯೊಂದರಲ್ಲಿ ಮಾತನಾಡುತ್ತಾ, ''ಗಡಿ ಪ್ರದೇಶದಲ್ಲಿ ತಲೆದೋರಿರುವ ಭಯೋತ್ಪಾದನೆಯು ಯಾವ ವ್ಯಾಪಾರಕ್ಕೂ ಉತ್ತೇಜನ ನೀಡಲಾರದು'' ಎನ್ನುವ ಮೂಲಕ 'ಮಗ್ಗುಲುಮುಳ್ಳು' ಪಾಕಿಸ್ತಾನಕ್ಕೆ ಸರಿಯಾಗೇ ಬಿಸಿ ಮುಟ್ಟಿಸಿದ್ದಾರೆ. ಕಾಲಾನುಕಾಲಕ್ಕೆ ಭಾರತವನ್ನು ಕಿತಾಪತಿ ಮಾಡುವುದನ್ನೇ ಉದ್ಯೋಗ ಮಾಡಿಕೊಂಡಿರುವ ಪಾಕಿಸ್ತಾನವು ಈ 'ಒಳೇಟಿನ' ಮಾತನ್ನು ಅರ್ಥಮಾಡಿಕೊಂಡರೆ ಕ್ಷೇಮ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು. ಎಸ್.ಜೈಶಂಕರ್ ಅವರ ಮಾತೆಂದರೆ ಹಾಗೆಯೇ, ಅದೊಂಥರಾ 'ರೇಷ್ಮೆ ಶಾಲಿನಲ್ಲಿ ಚಪ್ಪಲಿಯನ್ನು ಹುದುಗಿಸಿ' ಹೊಡೆದಂತೆ ಇರುತ್ತೆ ಅನ್ನೋದಕ್ಕೆ ಸಾಕಷ್ಟು ನಿದರ್ಶನಗಳಿವೆ. ಕಾಲೆಳೆಯುವ ಪ್ರಶ್ನೆಗಳಿಗೆ ಚುರುಕು ಉತ್ತರ ನೀಡಿ, ತಮ್ಮೆದುರು ಇರುವವರನ್ನು ತಬ್ಬಿಬ್ಬಾಗಿಸುವುದರಲ್ಲೂ ಜೈಶಂಕರ್ ನಿಷ್ಣಾತರು. ಇದು ಸರಿಸುಮಾರು ಒಂದು ವಾರದ ಹಿಂದಿನ ಕಥೆ. ಜೈಶಂಕರ್ ಅವರ ಸಂದರ್ಶನ ಮಾಡುತ್ತಿದ್ದವರೊಬ್ಬರು, ''ಉತ್ತರ ಕೊರಿಯಾದ ಪರಮೋಚ್ಚ ನಾಯಕ ಕಿಮ್ ಜಾಂಗ್ ಉನ್ ಮತ್ತು ಜಾರ್ಜ್ ಸೊರೋಸ್ ಅವರ ಜತೆಗಿನ ಭೋಜನಕೂಟದಲ್ಲಿ ಪಾಲ್ಗೊಳ್ಳುವಂತೆ ಒಂದೊಮ್ಮೆ ನಿಮಗೆ ಆಹ್ವಾನ ಬಂದರೆ, ಇವರಿಬ್ಬರ ಪೈಕಿ ಯಾರ ಜತೆಗೆ ನೀವು ಭೋಜನದಲ್ಲಿ ಪಾಲ್ಗೊಳ್ಳುವಿರಿ?'' ಎಂಬ ಪ್ರಶ್ನೆಯನ್ನು ಕೇಳಿದರು. ಈ ಸಂದರ್ಶನವನ್ನು ಪ್ರತ್ಯಕ್ಷವಾಗಿ ನೋಡುತ್ತಿದ್ದ ಸಭಿಕರೆಲ್ಲರೂ, ''ಸಿಕ್ಕಿಬಿದ್ರು ಜೈಶಂಕರ್'' ಎಂದೇ ಭಾವಿಸಿದ್ದರು! (ಪ್ರಾಯಶಃ ಆ ಸಂದರ್ಶಕರ ಗ್ರಹಿಕೆಯೂ ಅದೇ ಆಗಿತ್ತೇನೋ?!). ಆದರೆ ಸ್ವಲ್ಪವೂ ತಡಬಡಾಯಿಸದ ಜೈಶಂಕರ್, ''ಇದು ನವರಾತ್ರಿ ಹಬ್ಬದ ಸಂದರ್ಭವಾಗಿರೋದ್ರಿಂದ ನಾನು ಉಪವಾಸದ ಆಚರಣೆಯಲ್ಲಿರುವೆ....'' ಎಂದು ತಿರುಗೇಟು ನೀಡಿಬಿಟ್ಟರು! ಸಭಿಕರೆಲ್ಲಾ ಈ ಜಾಣ ಉತ್ತರಕ್ಕೆ ಚಪ್ಪಾಳೆ ತಟ್ಟಿ ಶ್ಲಾಘಿಸಿದರು ಎನ್ನಿ!

ವಿದೇಶಾಂಗ ವ್ಯವಹಾರಗಳ ಮಂತ್ರಿಯಾಗೋದು ಅಂದ್ರೆ ತಮಾಷಿನಾ..?!!

ಇಂಗ್ಲಿಷ್ ಲೇಪದ ಶೀರ್ಷಿಕೆ

ಕಸ್ತೂರಿ ನಿವಾಸ', 'ಬಂಗಾರದ ಮನುಷ್ಯ', 'ಮಯೂರ', 'ಆಲೆಮನೆ', 'ಪ್ರೇಮರಾಗ ಹಾಡು ಗೆಳತಿ', 'ಅನುರಾಗದ ಅಲೆಗಳು', 'ನಮ್ಮೂರ ಮಂದಾರ ಹೂವೇ' ಹೀಗೆ ಈ ಮಣ್ಣಿನ ವಾಸನೆಯ ಹೆಸರಿಟ್ಟುಕೊಂಡು ಕನ್ನಡ ಚಲನಚಿತ್ರಗಳು ನಿರ್ಮಾಣವಾಗುತ್ತಿದ್ದುದುಂಟು. ಆದರೆ ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ಕನ್ನಡ ಚಿತ್ರಗಳ ಹೆಸರುಗಳಿಗೆ 'ಇಂಗ್ಲಿಷ್ ಛಾಯೆ' ಮೆತ್ತುತ್ತಿರುವುದಕ್ಕೆ ಕೆಲವರು ಆಕ್ಷೇಪಿಸುತ್ತಿರುವುದು ನಿಮ್ಮ ಗಮನಕ್ಕೆ ಬಂದಿರಬಹುದು. 'ಟಾಕ್ಸಿಕ್', 'ಮಾರ್ಟಿನ್', 'ಮ್ಯಾಕ್ಸ್' ಎಂಬ ಶೀರ್ಷಿಕೆಗಳು ಅವರ ಈ ಆಕ್ಷೇಪಣೆಗೆ ಕಾರಣ. ಹಾಗೆ ನೋಡಿದರೆ, ಕನ್ನಡ ಚಲನಚಿತ್ರಗಳಿಗೆ 'ಇಂಗ್ಲಿಷ್ ಲೇಪ'ದ ಹೆಸರಿಡುವ ಪರಿಪಾಠ ಹಿಂದೆಯೂ ಇತ್ತು; ಆದರೆ ಅದು ಇಷ್ಟೊಂದು ತೀವ್ರವಾಗಿರಲಿಲ್ಲ ಎಂಬುದು ಒಪ್ಪುವಂಥ ವಿಷಯ. ಈಗ 'ಪ್ಯಾನ್ ಇಂಡಿಯಾ' ಸಿನಿಮಾಗಳ ಭರಾಟೆ ಇರುವುದರಿಂದ ಚಲನಚಿತ್ರ ನಿರ್ಮಾತೃಗಳಿಗೆ ಅಂಥದೊಂದು ಅನಿವಾರ್ಯತೆ ಈಗ ಕಾಡುತ್ತಿದ್ದಿರಬಹುದು ಎನ್ನಿ. 'ಪೋಸ್ಟ್ ಮಾಸ್ಟರ್', 'ಸ್ಕೂಲ್ ಮಾಸ್ಟರ್', 'ಲವ್ ಇನ್ ಬೆಂಗಳೂರ್', 'ಮಿಸ್ ಬೆಂಗಳೂರ್', 'ಆಪರೇಷನ್ ಡೈಮಂಡ್ ರ್‍ಯಾಕೆಟ್', 'ಡೈಮಂಡ್ ಸೀಕ್ರೆಟ್', 'ಮರಿಯಾ ಮೈ ಡಾರ್ಲಿಂಗ್', 'ಲವ್ ಲೆಟರ್', 'ಆ್ಯಕ್ಸಿಡೆಂಟ್', 'ಟೈಗರ್', 'ಕಾಲೇಜ್ ಹೀರೋ', 'ಮೈ ಆಟೋಗ್ರಾಫ್', 'ಪೊಲೀಸ್ ಫೈಲ್', 'ಪೊಲೀಸ್ ಲಾಕಪ್', 'ಎಕ್ಸ್‌ಕ್ಯೂಸ್ ಮಿ', 'ಕ್ಯಾಪ್ಟನ್', 'ಐ ಲವ್ ಯೂ', 'ವಾಂಟೆಡ್', 'ಟೈಂ ಬಾಂಬ್', 'ಎಮರ್ಜೆನ್ಸಿ', 'ಲೇಡಿ ಪೊಲೀಸ್', 'ಮದರ್ ಇಂಡಿಯಾ' ಸೇರಿದಂತೆ ಸಾಕಷ್ಟು ಚಲನಚಿತ್ರಗಳಿಗೆ ಹೀಗೆ ನಾಮಕರಣವಾಗಿದೆ ಎಂಬುದು ನಿಮ್ಮ ಗಮನಕ್ಕಷ್ಟೇ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 298

ಸಮಾಚಾರ ಸಣ್ಣದಲ್ಲ

ವಾಯು ಮಾಲಿನ್ಯ: ನಾಳೆ ಸಚಿವರ ಸಭೆ

ದೆಹಲಿ: ಆನಂದ ವಿಹಾರ್ ಪ್ರದೇಶದಲ್ಲಿ ವಾಯು ಮಾಲಿನ್ಯ ವಿಪರೀತ ಹದಗೆಡುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ದೆಹಲಿ ಪರಿಸರ ಸಚಿವ ಗೋಪಾಲ್ ರಾಯ್ ಅವರು ನಾಳೆ ತುರ್ತು ಸಭೆ ಕರೆದಿದ್ದಾರೆ. ರಾಷ್ಟ್ರ ರಾಜಧಾನಿಯ ಪ್ರಮುಖ 13 ಸೂಕ್ಷ್ಮ ಪ್ರದೇಶಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಚಿವರು ಸೂಚಿಸಿದ್ದಾರೆ ಎಂದು ಸಚಿವಾಲಯದ ಹೇಳಿಕೆ ಉಲ್ಲೇಖಿಸಿ ಎಎನ್ಐ ಟ್ವೀಟ್ ಮಾಡಿದೆ. ದೆಹಲಿ ಸಿಬ್ಬಂದಿ ಸಚಿವಾಲಯ ದಲ್ಲಿ ತುರ್ತು ಸಭೆ ನಡೆಯಲಿದ್ದು, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಹಾಜರಿರಬೇಕು ಎಂದು ಸೂಚಿಸಿದ್ದಾರೆ. ಗಾಳಿಯ ಗುಣಮಟ್ಟ ಹದಗೆಟ್ಟಿರುವ ಕಾರಣ ದೆಹಲಿ ಸರಕಾರವು ಎಲ್ಲ ಮಾದರಿಯ ಪಟಾ ಕಿಗಳ ತಯಾರಿಕೆ, ಸಂಗ್ರಹಣೆ, ಮಾರಾಟ ಮತ್ತು ಬಳಕೆ ಮೇಲೆ ನಿಷೇಧ ಹೇರಿದೆ. ಈ ಕ್ರಮವು 2025ರ ಜನವರಿ 1ರವರೆಗೆ ಜಾರಿಯಲ್ಲಿರಲಿದೆ ಎಂದು ತಿಳಿಸಿದೆ.

ಹಳಿತಪ್ಪಿದ ಅಗರ್ತಲ ಎಕ್ಸ್‌ಪ್ರೆಸ್ ರೈಲು

ಅಗರ್ತಲ: ತ್ರಿಪುರಾದ ಅಗರ್ತಲದಿಂದ ಮುಂಬೈಗೆ ತೆರಳುತ್ತಿದ್ದ ಎಕ್ಸ್‌ಪ್ರೆಸ್ ರೈಲಿನ ಇಂಜಿನ್ ಮತ್ತು 8 ಬೋಗಿಗಳು ಅಸ್ಸಾಂನ ದಿಬೋಲಾಂಗ್ ನಿಲ್ದಾಣದ ಬಳಿ ಹಳಿತಪ್ಪಿವೆ. ಆದರೆ ಯಾವುದೇ ಸಾವು ನೋವು ಸಂಭವಿಸಿಲ್ಲ. ಅಗರ್ತಲ-ಲೋಕಮಾನ್ಯ ತಿಲಕ್ ಟರ್ಮಿನಸ್ ಎಕ್ಸ್‌ಪ್ರೆಸ್ ಗುರುವಾರ ಬೆಳಗ್ಗೆ ಅಗರ್ತಲದಿಂದ ಹೊರಟು ಅಸ್ಸಾಂನ ಲುಮ್ಡಿಂಗ್-ಬದರ್‌ಪುರ್ ವಿಭಾಗದ ಬಳಿ ಬಂದಾಗ ಈ ಘಟನೆ ನಡೆದಿದೆ. ಅಸ್ಸಾಂ ಸಿಎಂ ಹಿಮಂತ ಬಿಸ್ವಾ ಶರ್ಮಾ ಎಲ್ಲಾ ಪ್ರಯಾಣಿಕರು ಸುರಕ್ಷಿತ ಎಂದು ತಿಳಿಸಿದ್ದಾರೆ.

ಬಾಂಬ್ ಬೆದರಿಕೆ: ಕಠಿಣ ಕ್ರಮಕ್ಕೆ ಚಿಂತನೆ

ದೆಹಲಿ: ವಿಮಾನಯಾನ ಸಂಸ್ಥೆಗಳಿಗೆ ಬಾಂಬ್ ಬೆದರಿಕೆ ಘಟನೆಗಳನ್ನು ತಡೆಯುವುದಕ್ಕಾಗಿ ಕಠಿಣ ಕ್ರಮಗಳನ್ನು ಕೈಗೊಳ್ಳಲು ನಾಗರಿಕ ವಿಮಾನಯಾನ ಸಚಿವಾಲಯ ಮುಂದಾಗಿದೆ. ಬೆದರಿಕೆ ಕರೆ ಪ್ರಕರಣದ ಅಪರಾಧಿಗಳನ್ನು ನೋ ಫ್ಲೈ ಪಟ್ಟಿಗೆ ಸೇರಿಸುವುದು ಸೇರಿದಂತೆ ವಿವಿಧ ಕಠಿಣ ಕ್ರಮ ಕೈಗೊಳ್ಳುವ ಚಿಂತನೆ ನಡೆದಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ. ವಿಮಾನಯಾನ ಸಂಸ್ಥೆಗಳಿಗೆ ಬಾಂಬ್ ಬೆದರಿಕೆ ಘಟನೆಗಳ ಕುರಿತು ಕಠಿಣ ಕ್ರಮ ಕೈಗೊಳ್ಳುವುದಕ್ಕಾಗಿ ನಿಯಮಗಳಿಗೆ ತಿದ್ದುಪಡಿ ತರುವ ಚಿಂತನೆ ಇದೆ ಎಂದು ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಹೇಳಿದ್ದಾರೆ. ಕಳೆದ ನಾಲ್ಕು ದಿನಗಳಲ್ಲಿ ವಿವಿಧ ಸಂಸ್ಥೆಗಳಿಗೆ ಸೇರಿದ ಕನಿಷ್ಠ 25 ವಿಮಾನಗಳಿಗೆ ಬಾಂಬ್ ಬೆದರಿಕೆ ಕರೆ ಬಂದಿವೆ. ಕೆಲ ವಿಮಾನಗಳ ಮಾರ್ಗ ಬದಲಾವಣೆ ಮಾಡಲಾಗಿದೆ.

ಭಾರತದ ಬಾಂಧವ್ಯಕ್ಕೆ ಕುತ್ತು ತಂದ ಟ್ರೂಡೋ

ದೆಹಲಿ: ಭಾರತ-ಕೆನಡಾ ನಡುವಣ ರಾಜತಾಂತ್ರಿಕ ಸಂಬಂಧಕ್ಕೆ ಆಗಿರುವ ಹಾನಿಯ ಹೊಣೆಗಾರಿಕೆಯು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಮೇಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ತಿಳಿಸಿದೆ. ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಏಜೆಂಟ್‌ಗಳ ಪಾತ್ರ ಇದೆ ಎಂದು ಆರೋಪಿಸಿದಾಗ ನನ್ನಲ್ಲಿ ಯಾವುದೇ ಬಲವಾದ ಪುರಾವೆಗಳು ಇರಲಿಲ್ಲ. ಗುಪ್ತಚರ ಮಾಹಿತಿ ಮಾತ್ರ ಇತ್ತು ಎಂದು ಟ್ರುಡೊ ಬುಧವಾರ ಹೇಳಿಕೆ ಕೊಟ್ಟಿದ್ದರು. ಚುನಾವಣಾ ಪ್ರಕ್ರಿಯೆಗಳಲ್ಲಿ ಹಾಗೂ ಪ್ರಜಾತಾಂತ್ರಿಕ ಸಂಸ್ಥೆಗಳಲ್ಲಿ ವಿದೇಶಿ ಶಕ್ತಿಗಳ ಹಸ್ತಕ್ಷೇಪ ಕುರಿತ ವಿಚಾರಣೆ ನಡೆಸುತ್ತಿರುವ ತನಿಖಾ ಆಯೋಗದ ಮುಂದೆ ಟ್ರುಡೊ ಅವರು ಒಟ್ಟಾವದಲ್ಲಿ ಹೇಳಿಕೆ ನೀಡಿದ ಬೆನ್ನಲ್ಲೇ ಗುರುವಾರ ಬೆಳಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಪ್ರಕಟಣೆ ಹೊರಡಿಸಿದೆ.

ವಲಸಿಗರಿಗೆ ಪೌರತ್ವ: ಸುಪ್ರೀಂ ಅಸ್ತು

ದೆಹಲಿ: ಜ.1, 1966 ಮತ್ತು ಮಾ.25, 1971ರ ನಡುವೆ ಅಸ್ಸಾಂಗೆ ಪ್ರವೇಶಿಸಿದ ವಲಸಿಗರಿಗೆ ಪೌರತ್ವವನ್ನು ನೀಡುವ ಪೌರತ್ವ ಕಾಯಿದೆ ಮತ್ತು 1955ರ ಸೆಕ್ಷನ್ 6ಎ ನ ಸಾಂವಿಧಾನಿಕ ಸಿಂಧುತ್ವವನ್ನು 4:1 ಬಹುಮತದಿಂದ ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಮುಖ್ಯ ನ್ಯಾ. ಡಿ.ವೈ. ಚಂದ್ರಚೂಡ್ ಮತ್ತು ಇತರ ಮೂವರು ನ್ಯಾಯಾಧೀಶರು ಈ ನಿಬಂಧನೆಯ ಸಿಂಧುತ್ವವನ್ನು ಎತ್ತಿಹಿಡಿದರು. ನ್ಯಾ. ಪಾರ್ದಿವಾಲಾ ಅವರು ಅಸಮ್ಮತಿ ವ್ಯಕ್ತಪಡಿಸಿದರು. ಬಾಂಗ್ಲಾದೇಶದ ರಚನೆಯ ನಂತರ ಅಕ್ರಮ ವಲಸೆ ಸಮಸ್ಯೆಗೆ ಅಸ್ಸಾಂ ಒಪ್ಪಂದವು ರಾಜಕೀಯ ಪರಿಹಾರವಾಗಿದೆ ಮತ್ತು ಸೆಕ್ಷನ್ 6ಎ ಶಾಸಕಾಂಗ ಪರಿಹಾರವಾಗಿದೆ. ಬಹುಮತದ ತೀರ್ಪು ಮಾ.25, 1971ರ ಕಟ್-ಆಫ್ ದಿನಾಂಕವು ತರ್ಕಬದ್ಧವಾಗಿದೆ. ಬಾಂಗ್ಲಾದೇಶ ವಿಮೋಚನಾ ಯುದ್ಧವು ಕೊನೆಗೊಂಡ ದಿನಾಂಕವಾಗಿದ್ದರಿಂದ ಇದು ಮಾನ್ಯವಾಗಿದೆ ಎಂದು ಸಿಜೆಐ ಚಂದ್ರಚೂಡ್ ಹೇಳಿದರು.

{ **ಶರದ್ ಪವಾರ್** } ಎನ್‌ಸಿಪಿ (ಎಸ್ಪಿ) ಅಧ್ಯಕ್ಷ

ಹರಿಯಾಣ ಚುನಾವಣೆಯ ಸೋಲಿನ ಕಾರಣಗಳ ಕುರಿತು ನಾವು ಅಧ್ಯಯನ ಮಾಡುತ್ತಿದ್ದೇವೆ. ಹರಿಯಾಣದ ಫಲಿತಾಂಶಗಳು ರಾಜ್ಯದ ಚುನಾವಣೆಯ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಜಮ್ಮು ಮತ್ತು ಕಾಶ್ಮೀರದ ಫಲಿತಾಂಶ ದೇಶಕ್ಕೆ ಹೆಚ್ಚು ಮುಖ್ಯವಾಗಿದೆ.

ಮೋದಿ, ಅಮಿತ್ ಶಾ ಸೇರಿ ಗಣ್ಯರ ಸಮ್ಮುಖ 2ನೇ ಬಾರಿಗೆ ನಯಾಬ್ ಸಿಂಗ್‌ಪ್ರಮಾಣ ವಚನ

ಹರಿಯಾಣದಲ್ಲಿ ಮತ್ತೊಮ್ಮೆ ಸೈನಿ ಶೈನ್

ಚಂಡೀಗಢ: ಹರಿಯಾಣದಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದು, ಇಂದು ಬಿಜೆಪಿ ನಾಯಕ ನಯಾಬ್ ಸಿಂಗ್ ಸೈನಿ ಅವರು ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಸೈನಿ ಅವರು ಹರಿಯಾಣ ವಿಧಾನ ಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಐತಿಹಾಸಿಕ ಮೂರನೇ ಸತತ ಗೆಲುವಿನತ್ತ ಮುನ್ನಡೆಸಿದ್ದು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಅನೇಕ ಬಿಜೆಪಿ ಮುಖಂಡರು ಪ್ರಮಾಣವಚನ ಕಾರ್ಯಕ್ರಮದಲ್ಲಿ ಭಾಗಿಯಾದರು.

ಪಂಚಕುಲದ ಪರೇಡ್ ಮೈದಾನದಲ್ಲಿ ಇಂದು ಮಧ್ಯಾಹ್ನ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆದಿದ್ದು, ಕಾರ್ಯಕ್ರಮದಲ್ಲಿ ಯೋಗಿ ಆದಿತ್ಯನಾಥ್, ಚಂದ್ರಬಾಬು ನಾಯ್ಡು, ಪವನ್ ಕಲ್ಯಾಣ್ ಸೇರಿದಂತೆ ವಿವಿಧ ಹಲವು ಗಣ್ಯರು ಉಪಸ್ಥಿತರಿದ್ದರು. ಸೈನಿಯವರಿಗೆ ರಾಜ್ಯಪಾಲ ಬಂಡಾರು ದತ್ತಾತ್ರೆಯ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ಇನ್ನು ಪ್ರಮಾಣವಚನಕ್ಕೂ ಮೊದಲು, ಸೈನಿ ಇಂದು ಮಹರ್ಷಿ ವಾಲ್ಮೀಕಿ ಜಯಂತಿಯ ಸಂದರ್ಭದಲ್ಲಿ ಪಂಚಕುಲದ ವಾಲ್ಮೀಕಿ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು. ಬುಧವಾರ, ಸೈನಿ ಅವರು ರಾಜ್ಯಪಾಲ ದತ್ತಾತ್ರೇಯ ಅವರನ್ನು ಭೇಟಿ ಮಾಡಿದರು ಮತ್ತು ಪಂಚಕುಲದಲ್ಲಿರುವ ಪಕ್ಷದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆಯಾದ ನಂತರ ಮುಂದಿನ ಸರಕಾರ ರಚಿಸಲು ಹಕ್ಕು ಮಂಡಿಸಿದರು.

ಆರತಿ ಸಿಂಗ್ ರಾವ್ ಅವರು ಸಂಪುಟ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಎರಡನೇ ಮಹಿಳಾ ಸಚಿವೆಯಾಗಿದ್ದಾರೆ. ಕೇಂದ್ರ ಸಚಿವ ರಾವ್ ಇಂದರ್ಜಿತ್ ಸಿಂಗ್ ಅವರ ಪುತ್ರಿ ಆರತಿ ರಾವತ್ ಮೊದಲ ಬಾರಿಗೆ ಅಟೆಲಿ ಕ್ಷೇತ್ರದಿಂದ ಶಾಸಕಿಯಾಗಿದ್ದಾರೆ. ಅರ್ಹಿ ಸಮುದಾಯದಿಂದ ಬಂದಿರುವ ಆರತಿ ರಾವ್ ಚೊಚ್ಚಲ ಬಾರಿಗೆ ಸಚಿವೆಯಾಗಿದ್ದಾರೆ.

ಮತ್ತೊಂದೆಡೆ 2009 ರಿಂದ 2014 ರವರೆಗೆ ಕಾಂಗ್ರೆಸ್ ಟಿಕೆಟ್‌ನಲ್ಲಿ ಭಿವಾನಿ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿದ್ದ ಶ್ರುತಿ ಚೌಧರಿ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅವರು ಹಿರಿಯ ನಾಯಕ ಕಿರಣ್ ಚೌಧರಿ ಅವರ ಪುತ್ರಿ ಮತ್ತು ಮಾಜಿ ಸಿಎಂ ಬನ್ಸಿಲಾಲ್ ಅವರ ಮೊಮ್ಮಗಳು. ಇಂದು ಇಂಗ್ಲಿಷ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಹರಿಯಾಣದ ಮೊದಲ ಸಚಿವೆ. ಅವರು ಜಾಟ್ ಸಮುದಾಯಕ್ಕೆ ಸೇರಿದ್ದಾರೆ.

ಇನ್ನು, ಕೃಷ್ಣಕುಮಾರ್ ಬೇಡಿ ಬಿಜೆಪಿಯ ಪ್ರಮುಖ ದಲಿತ ಮುಖ. ಮನೋಹರ್ ಲಾಲ್ ಖಟ್ಟರ್ ಅವರ ಮಾಜಿ ರಾಜಕೀಯ ಕಾರ್ಯ ದರ್ಶಿಯಾಗಿದ್ದ ಕೃಷ್ಣ ಕುಮಾರ್ ಬೇಡಿ ಅವರು 2014 ರಲ್ಲಿ ಮೊದಲ ಬಾರಿಗೆ ರಾಜ್ಯ ಸಚಿವರಾದರು.

ಜಿಂದ್ ಜಿಲ್ಲೆಯ ನರ್ವಾನಾ ಕ್ಷೇತ್ರದಿಂದ ಶಾಸಕರಾದ ಕೃಷ್ಣ ಕುರ್ಮಾ ಅವರು 2014 ರಲ್ಲಿ ಶಹಬಾದ್ ಕ್ಷೇತ್ರದಿಂದ ಚುನಾವಣೆಯಲ್ಲಿ ಅಲ್ಪ ಮತಗಳ ಅಂತರದಿಂದ ಗೆದ್ದಿದ್ದರು. 2019 ರಿಂದ ಮಾರ್ಚ್ 2024 ರವರೆಗೆ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದ ಜೆಜೆಪಿ ತೀರ ಮುಖ ಭಂಗ ಎದುರಿಸಿದ್ದು, ಮತ್ತೊಂದೆಡೆ ಎಎಪಿ ಕೂಡ ತನ್ನ ಖಾತೆಯನ್ನು ತೆರೆಯಲು ವಿಫಲವಾಗಿದೆ. ಇನ್ನು ಐಎನ್‌ಎಲ್‌ಡಿ ಕೇವಲ ಎರಡು ಸ್ಥಾನಗ ಳನ್ನು ಗೆಲ್ಲುವಲ್ಲಿ ಯಶಸ್ವಿಯಾಗಿದೆ. ಸಾವಿತ್ರಿ ಜಿಂದಾಲ್ ಸೇರಿದಂತೆ ಮೂವರು ಪಕ್ಷೇತರರೂ ಗೆದ್ದು ಬಿಜೆಪಿಗೆ ಬೆಂಬಲ ನೀಡಲು ನಿರ್ಧರಿಸಿದ್ದಾರೆ.

ಪ್ರಮಾಣವಚನ ಪಡೆದ ಸಚಿವರು

ನಯಾಬ್ ಸಿಂಗ್ ಸೈನಿ ಸಚಿವ ಸಂಪುಟವು ಜಾತಿ ಮತ್ತು ಪ್ರಾದೇಶಿಕ ಸಮೀಕರಣಗಳ ಆಧಾರದ ಮೇಲೆ ರಚಿಸಲಾಗಿದ್ದು, ಈ ಹಿನ್ನೆಲೆ ಯಲ್ಲಿ 2 ದಲಿತರು, 2 ಬ್ರಾಹ್ಮಣರು, 2 ಜಾಟ್‌ಗಳು, 4 ಒಬಿಸಿಗಳು, ಒಂದು ರಜ ಪೂತ ಮತ್ತು ಒಬ್ಬ ಪಂಜಾಬಿ ಮತ್ತು ಒಬ್ಬ ಬನಿಯಾ ಪಂಜಾಬಿ ಶಾಸಕರಿಗೆ ಸಚಿವ ಸ್ಥಾನ ವನ್ನು ನೀಡಲಾಗಿದೆ.

ಮತ್ತೆ 9 ವಿಮಾನಗಳಿಗೆ ಬೆದರಿಕೆ ಕರೆ

ಹುಸಿಬಾಂಬ್ ಕರೆ: ದಿಕ್ಕು ತಪ್ಪಿದ ವಿಮಾನಯಾನ

ಬೆಂಗಳೂರು: ಭಾರತದ ದೇಶಿಯ ಮತ್ತು ಅಂತಾರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳಿಗೆ ಸತತ ನಾಲ್ಕನೇ ದಿನವೂ ಹುಸಿ ಬಾಂಬ್ ಬೆದರಿಕೆ ಕರೆ ಮುಂದುವರಿದಿದೆ. ಮುಂಬೈನಿಂದ ಲಂಡನ್‌ಗೆ ತೆರಳುತ್ತಿದ್ದ ಏರ್ ಇಂಡಿಯಾ ವಿಮಾನವನ್ನು ಗುರುವಾರ ಬಾಂಬ್ ಬೆದರಿಕೆ ಬಂದ ಹಿನ್ನೆಲೆಯಲ್ಲಿ ತುರ್ತು ಭೂಸ್ಪರ್ಶ ಮಾಡಲಾಯಿತು. ಏರ್ ಇಂಡಿಯಾದ ಐದು ವಿಮಾನಗಳು, ಎರಡು ವಿಸ್ತಾರಾ ಮತ್ತು ಎರಡು ಇಂಡಿಗೊ ವಿಮಾನಗಳಿಗೆ ಗುರುವಾರ ಬಾಂಬ್ ಬೆದರಿಕೆಗಳು ಬಂದಿವೆ. ಏರ್ ಇಂಡಿಯಾ ನಿರ್ವಹಿಸುವ ಬೋಯಿಂಗ್ 777 ವಿಮಾನವು ಮುಂಬೈ ನಿಂದ ಬೆಳಿಗ್ಗೆ 7:05 ಕ್ಕೆ (ಭಾರತೀಯ ಕಾಲಮಾನ) ಹೊರಟು ಲಂಡನ್‌ನ ಹೀಥ್ರೂ ವಿಮಾನ ನಿಲ್ದಾಣದಲ್ಲಿ ಮಧ್ಯಾಹ್ನ 12:05 ಕ್ಕೆ (ಯುಕೆ ಸಮಯ) ಇಳಿಯಬೇಕಿತ್ತು. ಬಾಂಬ್ ಬೆದರಿಕೆ ಹಿನ್ನೆಲೆಯಲ್ಲಿ ಎಐ 129 ವಿಮಾನವು ಇಳಿಯುವ ಒಂದು ಗಂಟೆ ಮೊದಲು ತುರ್ತು ಪರಿಸ್ಥಿತಿ ಘೋಷಿಸಲಾಯಿತು. ಫ್ಲೈಟ್ ರಾಡಾರ್ ಮಾಹಿತಿಯ ಪ್ರಕಾರ, ವಿಮಾನವನ್ನು ತಡವಾಗಿ ಹೀಥ್ರೂ ವಿಮಾನ ನಿಲ್ದಾಣದಲ್ಲಿ ಇಳಿಸಲಾ ಯಿತು. ವಿಮಾನಯಾನ ಸಂಸ್ಥೆಗಳು ಬಾಂಬ್ ಬೆದರಿಕೆಗಳನ್ನು ಸ್ವೀಕರಿ ಸುವ ಸಮಸ್ಯೆ ಸತತ ನಾಲ್ಕನೇ ದಿನವೂ ಮುಂದುವರಿದಿದೆ. ನಾಲ್ಕು ದಿನಗಳಲ್ಲಿ ಕನಿಷ್ಠ 20 ವಿಮಾನಗಳಿಗೆ ಬೆದರಿಕೆಗಳು ಬಂದಿವೆ ಗುರುವಾರ ಐದು ಏರ್ ಇಂಡಿಯಾ ವಿಮಾನಗಳು, ಎರಡು ವಿಸ್ತಾರಾ ಮತ್ತು ಎರಡು ಇಂಡಿಗೊ ವಿಮಾನಗಳಿಗೆ ಬಾಂಬ್ ಬೆದರಿಕೆ ಬಂದಿವೆ. ಹುಸಿ ಕರೆ ಸಂಬಂಧ ಬುಧವಾರ ಛತ್ತೀಸ್‌ಗಢದ ಬಾಲಕನೊಬ್ಬನನ್ನು ವಶಕ್ಕೆ ಪಡೆದು ವಿಚಾರಣೆಗೆ ಗುರಿಪಡಿಸಲಾಗಿದೆ.

ವಿಸ್ತಾರಕ್ಕೂ ಬೆದರಿಕೆ: ಬೋಯಿಂಗ್ 787 ವಿಮಾನಕ್ಕೆ ಬಾಂಬ್ ಬೆದರಿಕೆ ಬಂದ ನಂತರ 147 ಪ್ರಯಾಣಿಕರೊಂದಿಗೆ ಮುಂಬೈಗೆ ತೆರಳು ತ್ತಿದ್ದ ವಿಸ್ತಾರಾ ವಿಮಾನವನ್ನು ಫ್ರಾಂಕ್‌ಪರ್ಟ್‌ನಿಂದ ಆಗಮಿಸಿದ ತಕ್ಷಣ ಭದ್ರತಾ ತಪಾಸಣೆ ಮಾಡಲಾಯಿತು. ಬುಧವಾರ ಫ್ರಾಂಕ್‌ಫರ್ಟ್ ನಿಂದ ಮುಂಬೈಗೆ ಹೊರಟ ವಿಸ್ತಾರಾ ವಿಮಾನ ಹಾರಾಟದಲ್ಲಿದ್ದಾಗಲೇ ಬಾಂಬ್ ಬೆದರಿಕಗೆ ಒಳಗಾಯಿತು. ಪ್ರೋಟೋಕಾಲ್ ಪ್ರಕಾರ ವಿಮಾನವು ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದ ತಕ್ಷಣ ಭದ್ರತಾ ತಪಾಸಣೆ ಮಾಡಲಾಯಿತು.

ಗಾಜಾದ ನಿರಾಶ್ರಿತರ ಆಶ್ರಯದ ಮೇಲೆ ಭಾರಿ ದಾಳಿ: 28ಕ್ಕೂ ಹೆಚ್ಚು ಜನರ ಬಲಿ

ಸಿರಿಯಾದ ಮೇಲೆ ಇಸ್ರೇಲ್ ದಾಳಿ

ಬೈರೂತ್: ಸುನ್ನಿ ಇಸ್ಲಾಮಿಕ್ ಶಸ್ತ್ರಾಸ್ತ್ರ ಪಡೆ ಹಯಾತ್ ತಹ್ರೀರ್-ಅಲ್ ಶಾಮ್ ಹಿಡಿತದಲ್ಲಿರುವ ವಾಯುವ್ಯ ಸಿರಿಯಾದ ಇದ್ಲಿಬ್ ನಗರದ ಮೇಲೆ ರಷ್ಯಾ ಪಡೆಗಳು ನಡೆಸಿದ ದಾಳಿಯಲ್ಲಿ ಕನಿಷ್ಠ 10 ಮಂದಿ ಅಸುನೀಗಿದ್ದಾರೆ. 30ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಕಣ್ಗಾವಲು ಸಂಸ್ಥೆ ತಿಳಿಸಿದೆ.

ಇದ್ಲಿಬ್‌ನಲ್ಲಿ ನಡೆದ ರಷ್ಯಾದ ವಾಯುದಾಳಿಯಲ್ಲಿ ಒಂದು ಮಗು ಸೇರಿ 10 ಮಂದಿ ನಾಗರಿಕರು ಸಾವಿಗೀಡಾಗಿದ್ದಾರೆ. ಗಾಯಗೊಂಡವರಲ್ಲಿ 14 ಮಂದಿ ಮಕ್ಕಳು ಸೇರಿದ್ದಾರೆ ಎಂದು ಸಿರಿಯಾದ ಮಾನವ ಹಕ್ಕುಗಳ ಕಣ್ಗಾವಲು ಸಂಸ್ಥೆ ತಿಳಿಸಿದೆ. ಇದ್ಲಿಬ್ ನಗರದ ಹೊರವಲಯ ದಲ್ಲಿರುವ ಒಂದು ಗರಗಸ, ಪೀಠೋಪಕರಣ ಹಾಗೂ ಆಲಿವ್ ಎಣ್ಣೆ ಕಾರ್ಖಾನೆಯನ್ನು ಗುರಿಯಾಗಿಸಿ ದಾಳಿ ನಡೆದಿದೆ. ದಾಳಿಯಿಂದಾಗಿ ಮೃತಪಟ್ಟವರ ದೇಹಗಳನ್ನು ಅವಶೇಷಗಳಡಿಯಿಂದ ಹೊರತೆಗೆಯಲಾಗಿದೆ ಎಂದು ಸಿರಿಯಾದ ನಾಗರಿಕ ರಕ್ಷಣಾ ಪಡೆ ವೈಟ್ ಹೆಲ್ಮೆಟ್ಸ್ ತಿಳಿಸಿದೆ.

ದಾಳಿಯ ವೇಳೆ ಕಾರ್ಮಿಕರೆಲ್ಲರೂ ಕೆಲಸನಿರತರಾಗಿದ್ದರು. ಘಟನೆಯಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ, 32 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ನಾಗರಿಕ ರಕ್ಷಣಾ ಪಡೆ ತಿಳಿಸಿದೆ.

ರಷ್ಯಾ ಹಾಗೂ ಸಿರಿಯಾ ನಡುವೆ ಉತ್ತಮ ರಾಜತಾಂತ್ರಿಕ ಬಾಂಧ್ಯವಿದ್ದು, ತಹ್ರೀರ್-ಅಲ್ ಶಾಮ್ ನಿಯಂತ್ರದಲ್ಲಿರುವ ಸ್ಥಳಗಳನ್ನು ಗುರಿಯಾಗಿಸಿಕೊಂಡು ಸಿರಿಯಾ ಹಾಗೂ ರಷ್ಯಾ ಜಂಟಿ ದಾಳಿ ನಡೆಸಿದೆ ಎಂದು ಸ್ಥಳೀಯ ಮಾಧ್ಯಮಗಳನ್ನು ಉಲ್ಲೇಖಿಸಿ ಹಲವು ಅರಬ್ ಮಾಧ್ಯಮಗಳು ವರದಿ ಮಾಡಿವೆ. ಇದ್ಲಿಬ್ ನಗರದ ಮೇಲಿನ ದಾಳಿಯ ಬಗ್ಗೆ ರಷ್ಯಾ ಅಥವಾ ಸಿರಿಯಾ ಅಧ್ಯಕ್ಷ ಬಷರ್ ಅಲ್-ಅಸ್ಸಾದ್ ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಗಾಜಾದಲ್ಲಿ ಶಾಲೆ ಮೇಲೆ ದಾಳಿ

ಗಾಜಾ: ಉತ್ತರ ಗಾಜಾಪಟ್ಟಿಯ ಶಾಲೆಯೊಂದರಲ್ಲಿ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಿದ್ದ ಶಾಲೆಯ ಮೇಲೆ ಇಸ್ರೇಲ್ ಸೇನೆ ಗುರುವಾರ ದಾಳಿ ನಡೆಸಿದೆ. ಈ ವೇಳೆ ಮಕ್ಕಳೂ ಸೇರಿದಂತೆ ಕನಿಷ್ಠ 28 ಮಂದಿ ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದಾರೆ ಎಂದು ಗಾಜಾ ಆರೋಗ್ಯ ಇಲಾಖೆ ತಿಳಿಸಿದೆ.ಇದಕ್ಕೆ ಪ್ರತಿಕ್ರಿಯಿಸಿರುವ ಇಸ್ರೇಲ್, ಉಗ್ರರನ್ನು ಗುರಿಯಾಗಿಸಿ ದಾಳಿ ನಡೆಸಿದ್ದಾಗಿ ಹೇಳಿಕೆ ಬಿಡುಗಡೆ ಮಾಡಿದೆ.

ದಾಳಿಯಲ್ಲಿ ಸಾಕಷ್ಟು ಮಂದಿ ಗಾಯಗೊಂಡಿದ್ದಾರೆ ಎಂದು ಗಾಜಾ ಆರೋಗ್ಯ ಇಲಾಖೆಯ ಅಧಿಕಾರಿ ಮೆದ್ವತ್ ಅಬ್ಬಾಸ್ ಎಂಬವರು ತಿಳಿಸಿದ್ದಾರೆ. 'ಬೆಂಕಿ ನಂದಿಸಲು ನೀರೂ ಇಲ್ಲ. ಏನೇನೂ ಉಳಿದಿಲ್ಲ. ಇದು ಕಗ್ಗೊಲೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ನಾಗರಿಕರು, ಮಕ್ಕಳು ಹತ್ಯೆಯಾಗಿದ್ದು, ಸುಟ್ಟು ಕರಕಲಾಗಿದ್ದಾರೆ' ಎಂದು ನೊಂದುಕೊಂಡಿದ್ದಾರೆ. ಇಸ್ರೇಲ್ ಸೇನೆ, 'ಜಬಲಿಯಾದಲ್ಲಿರುವ ಅಬು ಹುಸ್ಸೇನ್ ಶಾಲೆಯು ನಿರಾಶ್ರಿತರ ನೆಲೆಯಾಗಿತ್ತು. ಅಲ್ಲಿ ಹಮಾಸ್ ಹಾಗೂ ಇಸ್ಲಾಮಿಕ್ ಜಿಹಾದ್ ಸಂಘಟನೆಗಳ ಉಗ್ರರು ಸಕ್ರಿಯರಾಗಿದ್ದರು. ದಾಳಿ ನಡೆದ ಸಂದರ್ಭದಲ್ಲಿ ಶಾಲೆಯ ಆವರಣದಲ್ಲಿ ಸಾಕಷ್ಟು ಉಗ್ರರು ಇದ್ದರು' ಎಂದು ಹೇಳಿದೆ.

ಚೀನಾ ಉದ್ಯೋಗಿಗೆ ಅಕ್ರಮವಾಗಿ ವೀಸಾ ಮಾಡಿಸಿಕೊಟ್ಟ ಆರೋಪ

ಅಕ್ರಮ ವೀಸಾ: ಕಾರ್ತಿ ವಿರುದ್ಧ ಎಫ್‌ಐಆರ್

ದೆಹಲಿ: 2011ರಲ್ಲಿ ತಮ್ಮ ತಂದೆ ಪಿ. ಚಿದಂಬರಂ ಅವರು ಕೇಂದ್ರದ ಗೃಹ ಸಚಿವರಾಗಿದ್ದಾಗ ಚೀನಾ ನಾಗರಿಕರಿಗೆ ವಿದ್ಯುತ್ ಕಂಪನಿಯೊಂದರಲ್ಲಿ ಕೆಲಸ ಮಾಡಲು ಅಕ್ರಮ ವಾಗಿ ವೀಸಾ ಒದಗಿಸಿಕೊಟ್ಟ ಪ್ರಕರ ಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಮತ್ತು ಇತರರ ವಿರುದ್ಧ ಕೇಂದ್ರೀಯ ತನಿಖಾ ಸಂಸ್ಥೆ(ಸಿಬಿಐ) ಚಾರ್ಜ್ ಶೀಟ್ ಸಲ್ಲಿಸಿದೆ.



ಇಲ್ಲಿನ ವಿಶೇಷ ನ್ಯಾಯಾಲಯ ದಲ್ಲಿ ಸಲ್ಲಿಕೆಯಾಗಿರುವ ಚಾರ್ಜ್‌ಶೀಟ್‌ನಲ್ಲಿ ಸಿಬಿಐ, ಶಿವಗಂಗಾ ಕ್ಷೇತ್ರದ ಸಂಸದ ಕಾರ್ತಿ ಚಿದಂಬರಂ, ಅವರ ಆಪ್ತ ಎಸ್. ಭಾಸ್ಕರರಾಮನ್, ಲಂಚ ನೀಡಿರುವ ಆರೋಪ ಇರುವ ತಲವಂಡಿ ಸೊಬೊ ಪವರ್ ಲಿಮಿಟೆಡ್(ಟಿಎಸ್‌ಪಿಎಲ್) ಹೆಸರನ್ನು ಉಲ್ಲೇಖಿ ಸಲಾಗಿದೆ. ಕ್ರಿಮಿನಲ್ ಸಂಚು, ವಂಚನೆ ಮತ್ತು ಫೋರ್ಜರಿ ಆರೋಪದಡಿ ಭಾರತೀಯ ದಂಡ ಸಂಹಿತೆಯ ಭ್ರಷ್ಟಾಚಾರ ತಡೆ ಕಾಯ್ದೆ ಅಡಿಯ ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಲಾಗಿದೆ. ವಿರಾಲ್ ಮೆಹ್ತಾ, ಅನೂಪ್ ಅಗರ್ವಾಲ್, ಮನ್ಸೂರ್ ಸಿದ್ದೀಕಿ ಮತ್ತು ಚೇತನ್ ಶ್ರೀವಾಸ್ತವ ಚಾರ್ಜ್‌ಶೀಟ್ ನಲ್ಲಿರುವ ಇತರೆ ಹೆಸರುಗಳಾಗಿವೆ.

ಏನಿದು ಪ್ರಕರಣ?

ಪಂಜಾಬ್ ಮೂಲದ ಟಿಎಸ್‌ಪಿಎಲ್ ಕಂಪನಿ ಯು 1980 ಮೆಗಾವ್ಯಾಟ್ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗೆ ಚೀನಾದ ಶಾಂಡೋಂಗ್ ಎಲೆಕ್ಟ್ರಿಕ್ ಪವರ್ ಕನ್‌ಸ್ಟ್ರಕ್ಷನ್ ಕಾರ್ಪ್‌ಗೆ(ಎಸ್‌ಇಪಿಸಿಒ) ಹೊರಗುತ್ತಿಗೆ ನೀಡಿತ್ತು ಎಂದು ಸಿಬಿಐ ಚಾರ್ಜ್‌ಶೀಟ್ ಸಲ್ಲಿಸಿದೆ. ಕಾಲಮಿತಿಯೊಳಗೆ ಯೋಜನೆಯು ಪೂರ್ಣಗೊಳ್ಳದ ಕಾರಣ, ಕಂಪನಿಯು ದಂಡ ತೆರಬೇಕಾದ ಭೀತಿ ಎದುರಿಸುತ್ತಿತ್ತು. ವಿಳಂಬಕ್ಕಾಗಿ ದಂಡದ ಕ್ರಮಗಳನ್ನು ತಪ್ಪಿಸಲು ಟಿಎಸ್‌ಪಿಎಲ್ ಹೆಚ್ಚು ಹೆಚ್ಚು ಚೀನೀ ವ್ಯಕ್ತಿಗಳು ಮತ್ತು ವೃತ್ತಿಪರರನ್ನು ತಮ್ಮ ಕಂಪನಿಗೆ ಕರೆತರಬೇಕಿತ್ತು. ಹೀಗಾಗಿ, ಗೃಹ ಸಚಿವಾಲಯ ವಿಧಿಸಲಾಗಿದ್ದ ಗರಿಷ್ಠ ಮಿತಿಗಿಂತ ಅಧಿಕ ಸಂಖ್ಯೆಯ ಪ್ರಾಜೆಕ್ಟ್ ವೀಸಾಗಳ ಅಗತ್ಯವಿತ್ತು. ಇದಕ್ಕಾಗಿ, ಭಾಸ್ಕರರಾಮನ್ ಮೂಲಕ ಟಿಎಸ್‌ಪಿಎಲ್ ಅಧಿಕಾರಿಗಳು ಕಾರ್ತಿ ಚಿದಂಬರಂ ಅವರನ್ನು ಸಂಪರ್ಕಿಸಿ ಅಕ್ರಮ ಎಸಗಿದ್ದಾರೆ ಎಂದು ಸಿಬಿಐ ಆರೋಪಿಸಿದೆ. ಹಿಂದಿನ ಬಾಗಿಲ ಮೂಲಕ ಗರಿಷ್ಠ ವೀಸಾ ಮಿತಿ ಮೀರಿ 263 ಪ್ರಾಜೆಕ್ಟ್ ವೀಸಾಗಳನ್ನು ಮರುವಿತರಣೆ ಮಾಡಲಾಗಿದೆ ಎಂದೂ ಸಿಬಿಐ ಹೇಳಿದೆ.

ನ್ಯಾಯದೇವತೆ ಕಣ್ಣಿಗೆ ಕಪ್ಪು ವಸ್ತ್ರ ಕಟ್ಟುವಂತಿಲ್ಲ : ಮುಖ್ಯ ನ್ಯಾಯಮೂರ್ತಿ ಆದೇಶ

ಇನ್ಮುಂದೆ ನ್ಯಾಯದೇವತೆ ಕುರುಡಲ್ಲ!

ದೆಹಲಿ: ಇನ್ನು ಮುಂದೆ ನ್ಯಾಯದೇವತೆ ಕಣ್ಣಿಗೆ ಕಪ್ಪು ಪಟ್ಟಿ ಕಟ್ಟುವಂತಿಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯ ಮೂರ್ತಿ ಡಿ.ವೈ. ಚಂದ್ರಚೂಡ್ ಹೊಸ ಆದೇಶ ಹೊರಡಿಸಿದ್ದಾರೆ. ಹೀಗಾಗಿ ಭಾರತದ ಯಾವುದೇ ನ್ಯಾಯಾಲಯಗಳಲ್ಲಿ ಕಣ್ಣಿಮಗೆ ಕಪ್ಪು ಪಟ್ಟಿ ಕಟ್ಟಿರುವ ನ್ಯಾಯ ದೇವತೆ ಮೂರ್ತಿ ಕಾಣಲು ಸಿಗುವುದಿಲ್ಲ.

ಇಲ್ಲಿವರೆಗೆ ಇದ್ದ ನ್ಯಾಯದೇವತೆ ಮೂರ್ತಿಯ ಕಣ್ಣಿಗೆ ಪಟ್ಟಿ ಕಟ್ಟಲಾಗಿತ್ತು. ಒಂದು ಕೈಯಲ್ಲಿ ತಕ್ಕಡಿ ಮತ್ತೊಂದು ಕೈಯಲ್ಲಿ ಖತ್ತಿ ಹಿಡಿದ ಪ್ರತಿಮೆ ಪ್ರತಿ ಕೋರ್ಟ್‌ನಲ್ಲಿರುತ್ತಿದ್ದವು. ಇದೀಗ ಸಿಜೆಐ ಚಂದ್ರಚೂಡ್ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಗ್ರಂಥಾ ಲಯದಲ್ಲಿ ಹೊಸ ನ್ಯಾಯದೇವತೆಯ ಮೂರ್ತಿ ಅನಾವರಣ ಮಾಡಿದ್ದಾರೆ. ಇಂತಹದ್ದೇ ಮೂರ್ತಿಯನ್ನು ಪ್ರತಿ ಕೋರ್ಟ್‌ನಲ್ಲಿ ಪ್ರತಿಷ್ಠಾಪಿಸುವಂತೆ ಸೂಚನೆ ನೀಡಿದ್ದಾರೆ. ಮೂಲಗಳ ಪ್ರಕಾರ, ಸಿಜೆಐ ಚಂದ್ರಚೂಡ್ ವಸಾಹತುಶಾಹಿ ಪರಂಪರೆಯನ್ನು ಮೀರಿ ಮುನ್ನಡೆ ಯುವ ಸಲುವಾಗಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಕಾನೂನು ಕುರುಡಲ್ಲ; ಅದು ಎಲ್ಲರನ್ನು ಸಮಾನವಾಗಿ ನೋಡುತ್ತದೆ ಎಂದು ಅವರು ಹೇಳಿದ್ದಾರೆ.

ಹೊಸ ಮೂರ್ತಿ ವಿಶೇಷ ಏನು?

ಹೊಸ ಮೂರ್ತಿಯ ವಿಶೇಷತೆ ಏನೆಂಬುದನ್ನು ನೋಡೋದಾದರೆ, ನ್ಯಾಯದೇವತೆ ಹೊಸಮೂರ್ತಿಯ ಕಣ್ಣಿಗೆ ಬಟ್ಟೆ ಕಟ್ಟಿರುವುದಿಲ್ಲ. ಅದು ಮಾತ್ರವಲ್ಲ, ನ್ಯಾಯದೇವತೆಯ ಕೈಯಲ್ಲಿ ಖಡ್ಗದ ಬದಲು ಭಾರತದ ಸಂವಿಧಾನ ನೀಡಲು ಕೂಡ ಸಿಜೆಐ ಹೇಳಿದ್ದಾರೆ. ಸಿಜೆಐ ಆದೇಶದಂತೆ ಈಗಾಗಲೇ ಸುಪ್ರೀಂ ಕೋರ್ಟ್ ನ್ಯಾಯ ಮೂ ರ್ತಿಗಳ ಗ್ರಂಥಾಲ ಯದಲ್ಲಿ ಹೊಸ ನ್ಯಾಯ ದೇ ವತೆಯ ಮೂರ್ತಿ ಅನಾವರಣ ಮಾಡಲಾಗಿದೆ.

ನ್ಯಾಯದೇವತೆಯ ಇತಿಹಾಸ ಏನು?

ಸದ್ಯ ನಮ್ಮ ದೇಶದಲ್ಲಿ ಕಾಣುವ ನ್ಯಾಯದೇವತೆಯ ಮೂರ್ತಿ ಮೂಲತಃ ರೋಮ್ ಸಾಮ್ರಾಜ್ಯದ ಕಲ್ಪನೆ. ಇದು ಮೊದಲ ಬಾರಿ ಕಂಡು ಬಂದಿದ್ದು ರೋಮ್‌ನ ಆಗಸ್ಟಸ್ ಸಾಮ್ರಾಜ್ಯದಲ್ಲಿ ನ್ಯಾಯ ದೇವತೆ ಅಂದ್ರೆ ಲೇಡಿ ಆಫ್ ಜಸ್ಟಿಸ್ ರೋಮನ್ ಪುರಾಣಗಳಲ್ಲಿ ಬರುವ ಜಸ್ಟಿಟಿಯಾ ಎಂಬ ದೇವತೆ. ಅವಳು ನ್ಯಾಯಕ್ಕೆ ಅಧಿಪತಿ 16ನೇ ಶತಮಾನದಲ್ಲಿ ಮೊದಲ ಬಾರಿ ಈ ನ್ಯಾಯ ದೇವತೆಯ ಕಣ್ಣಿಗೆ ಬಟ್ಟೆಯನ್ನು ಕಟ್ಟಲಾಯ್ತು. ಯಾರಿಗೂ ಕೂಡ ಅನ್ಯಾಯವಾಗಬಾರದು ಎಂಬ ಉದ್ದೇಶದಿಂದ, ನ್ಯಾಯದೇವತೆಯೂ ಕೂಡ ಬಂದ ಆರೋಪಿಗಳಲ್ಲಿ ಬೇಧ ಭಾವ ಎಣಿಸದಿರಲಿ ಎಂಬ ಉದ್ದೇಶದಿಂದ ನ್ಯಾಯದೇವತೆಯ ಕಣ್ಣಿಗೆ ಪಟ್ಟಿಕಟ್ಟಲಾಯ್ತು. 16ನೇ ಶತಮಾನದಿಂದಲೂ ನ್ಯಾಯದೇವತೆ ಇದೇ ರೀತಿ ಕಣ್ಣಿಗೆ ಪಟ್ಟಿಕಟ್ಟಿಕೊಂಡು ಹಾಗೂ ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡ ರೂಪದಲ್ಲಿಯೇ ಇದ್ದಾಳೆ. ವಿಶ್ವದ ಅನೇಕ ರಾಷ್ಟ್ರಗಳ ಕೋರ್ಟ್‌ನಲ್ಲಿ ಇದೇ ನ್ಯಾಯದೇವತೆಯನ್ನು ಕೋರ್ಟ್‌ನಲ್ಲಿ ಇಡಲಾಗಿದೆ. ಮೊಟ್ಟ ಮೊದಲ ಬಾರಿ ಈ ನ್ಯಾಯದೇವತೆಯ ಎದುರು ಕೋರ್ಟ್ ವಿಚಾರಣೆ ನಡೆಸಿದ ನ್ಯಾಯಮೂರ್ತಿಳು ಹನ್ಸ್ ಗೈಂಗ್,1543ರಲ್ಲಿ ಬರ್ನ್‌ನಲ್ಲಿ ಈ ನ್ಯಾಯದೇವತೆಯ ಎದುರು ಮೊದಲ ವಿಚಾರಣೆ ನಡೆಸಲಾಗಿತ್ತು. ಆಗ ಬರ್ನ್ ರೋಮನ್ ಸಾಮ್ರಾಜ್ಯದ ಒಂದು ಭಾಗವಾಗಿತ್ತು.

ಕಳ್ಳಭಟ್ಟಿ : ಮೃತರ ಸಂಖ್ಯೆ 24ಕ್ಕೆ ಏರಿಕೆ

ಪಟನಾ: ಬಿಹಾರದ ಸಿವಾನ್ ಮತ್ತು ಸರನ್ ಜಿಲ್ಲೆಗಳಲ್ಲಿ ಕಳ್ಳಭಟ್ಟಿ ಮದ್ಯ ಸೇವನೆಯಿಂದ ಮೃತಪಟ್ಟವರ ಸಂಖ್ಯೆ ಗುರುವಾರ 24ಕ್ಕೇರಿದೆ. ಕನಿಷ್ಠ 20 ಜನರು ಸಿವಾನ್ ಜಿಲ್ಲೆಯಲ್ಲಿ ಮತ್ತು ನಾಲ್ವರು ನೆರೆಯ ಸರನ್ ಜಿಲ್ಲೆಯಲ್ಲಿ ಮೃತಪಟ್ಟಿದ್ದಾರೆ.

ಬಿಹಾರದಲ್ಲಿ 2016ರ ಎಪ್ರಿಲ್ ನಿಂದ ಮದ್ಯ ಮಾರಾಟ ಮತ್ತು ಸೇವನೆ ಯನ್ನು ನಿಷೇಧಿಸಲಾಗಿದೆ. ಆದರೂ ಕಳ್ಳಭಟ್ಟಿ ಮದ್ಯವನ್ನು ಸೇವಿಸಿ ಜನರು ಅಸ್ವಸ್ಥಗೊಳ್ಳುತ್ತಿರುವ ಮತ್ತು ಸಾಯುತ್ತಿರುವ ಘಟನೆಗಳು ರಾಜ್ಯದಲ್ಲಿ ಆಗಾಗ್ಗೆ ವರದಿಯಾಗುತ್ತಲೇ ಇವೆ. ಅಸ್ವಸ್ಥಗೊಂಡಿ ರುವ 38 ಜನರನ್ನು ಜಿಲ್ಲೆಯ ಆಸ್ಪತ್ರೆಗಳಲ್ಲಿ ದಾಖಲಿಸಲಾಗಿದೆ ಎಂದು ಸರನ್ ಜಿಲ್ಲಾಧಿಕಾರಿ ಮುಕುಲ್ ಕುಮಾರ್ ಗುಪ್ತಾ ಅವರು ತಿಳಿಸಿದ್ದಾರೆ.

ಘಟನೆ ಸಂಬಂಧ ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ಹೊರಡಿಸಲಾಗಿದೆ. ಎಂಟು ಜನರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು,ಈ ಪೈಕಿ ಮೂವರನ್ನು ಬಂಧಿಸಲಾಗಿದೆ ಎಂದು ಸರನ್ ಎಸ್ಪಿ ಕುಮಾರ್ ಆಶಿಷ್ ತಿಳಿಸಿದರು. ಘಟನೆಗೆ ಸಂಬಂಧಿಸಿ ಭಗವಾನಪುರ ಹಾತ್ ಠಾಣಾಧಿಕಾರಿಯನ್ನು ಅಮಾನತು ಮಾಡಲಾಗಿದೆ. ಅಧಿಕೃತ ಅಂಕಿ ಅಂಶಗಳನ್ನು ತಳ್ಳಿಹಾಕಿದ ಸಿವಾನ್ ಕೌನ್ಸಿಲರ್ ಸುಶೀಲ್ ಕುಮಾರ್ ಡಬ್ಲು ಅವರು, ವಿಷಪೂರಿತ ಮದ್ಯ ಸೇವಿಸಿ ಸುಮಾರು 50 ಜನರು ಸಾವನ್ನಪ್ಪಿದ್ದಾರೆ ಎಂದು ಹೇಳಿದ್ದಾರೆ.

ಪಾಕ್ ಪರ ಘೋಷಣೆಗೆ ರಾಷ್ಟ್ರಧ್ವಜಕ್ಕೆ ವಂದನೆ ಶಿಕ್ಷೆ

ಭೋಪಾಲ್: ಪಾಕಿಸ್ತಾನ ಪರ ಘೋಷಣೆ ಕೂಗಿದ ವ್ಯಕ್ತಿಗೆ ಮಧ್ಯಪ್ರದೇಶ ಹೈಕೋರ್ಟ್ ಭೋಪಾಲ್ ಪೊಲೀಸ್ ಠಾಣೆಯಲ್ಲಿ 21 ಬಾರಿ ಭಾರತದ ರಾಷ್ಟ್ರಧ್ವಜಕ್ಕೆ ವಂದನೆ ಸಲ್ಲಿಸಬೇಕು ಮತ್ತು ತಿಂಗಳಿಗೆ ಎರಡು ಬಾರಿ 'ಭಾರತ್ ಮಾತಾ ಕಿ ಜೈ' ಎಂದು ಘೋಷಣೆ ಕೂಗಬೇಕು ಎಂದು ಹೇಳಿ ಜಾಮೀನು ಮಂಜೂರು ಮಾಡಿದೆ.

ಫೈಝುಲ್ ಅಲಿಯಾಸ್ ಫೈಜಾನ್ ಎಂಬಾತ ಪಾಕಿಸ್ತಾನ ಪರ ಘೋಷಣೆ ಕೂಗಿದ್ದು, ಭಾರತೀಯ ದಂಡ ಸಂಹಿತೆಯ ಸೆಕ್ಷನ್ 153 ಬಿ ಅಡಿಯಲ್ಲಿ ಭೋಪಾಲ್‌ನ ಮಿಸ್ರೋಡ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಮಧ್ಯಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿ ಪಾಲಿವಾಲ್ ಅವರು 50,000 ರೂಪಾಯಿಗಳ ವೈಯಕ್ತಿಕ ಬಾಂಡ್ ಮತ್ತು ಅದೇ ಮೊತ್ತದ ಶೂರಿಟಿ ಸಲ್ಲಿಸುವಂತೆ ಹೇಳಿ ಫೈಜಾನ್‌ಗೆ ಜಾಮೀನು ನೀಡಿದ್ದಾರೆ. ಆದರೆ ಜಾಮೀನಿಗೆ ಷರತ್ತಾಗಿ ಪ್ರತಿ ತಿಂಗಳ ಮೊದಲ ಮತ್ತು ನಾಲ್ಕನೇ ಮಂಗಳವಾರ ಮಿಸ್ರೋಡ್ ಪೊಲೀಸ್ ಠಾಣೆಗೆ ಹಾಜರಾಗಿ 21 ಬಾರಿ ಪೊಲೀಸ್ ಠಾಣೆಯಲ್ಲಿ ಹಾರಿಸಿದ ರಾಷ್ಟ್ರಧ್ವಜಕ್ಕೆ ವಂದನೆ ಸಲ್ಲಿಸಬೇಕು. ಪ್ರತಿ ಸಲವೂ ಎರಡು ಬಾರಿ ಭಾರತ್ ಮಾತಾ ಕಿ ಜೈ ಎಂಬ ಘೋಷಣೆ ಕೂಗಬೇಕು ಎಂದು ನ್ಯಾಯಧೀಶರು ಹೇಳಿದ್ದಾರೆ. ತಾನು ಹುಟ್ಟಿ ಬೆಳೆದ ದೇಶದ ಬಗ್ಗೆ ಹೆಮ್ಮೆಯ ಭಾವನೆ ಮೂಡಿಸಲು ಈ ಷರತ್ತು ವಿಧಿಸಲಾಗಿದೆ ಎಂದು ಕೋರ್ಟ್ ಹೇಳಿದೆ.

ಬರಲಿದೆ ರತನ್ ಟಾಟಾ ಜೀವನಾಧಾರಿತ ಚಿತ್ರ

ಮುಂಬೈ: ದೇಶದ ಅಗ್ರಮಾನ್ಯ ಉದ್ಯಮಿ, ಕೊಡುಗೈದಾನಿ ದಿವಂಗತ ರತನ್ ಟಾಟಾ ಅವರ ಜೀವನ ಆಧರಿಸಿದ ಚಿತ್ರ ನಿರ್ಮಾಣ ಮಾಡುವ ಮೂಲಕ ಗೌರವ ನಮನ ಸಲ್ಲಿಸಲು ನಿರ್ಧರಿಸಲಾಗಿದೆ. ಟಾಟಾ ಗ್ರೂಪ್‌ನ ಮಾಜಿ ಅಧ್ಯಕ್ಷರಿಗೆ ಗೌರವ ಸಲ್ಲಿಸಲು ಜೀ-ಮೀಡಿಯಾ ಮುಂದಾಗಿದ್ದು ಇಬ್ಬರು ನಟರನ್ನು ಆಯ್ಕೆ ಮಾಡಿಕೊಂಡಿದ್ದು, ಅವರು ತೆರೆಯ ಮೇಲೆ ಯುವಕ ಮತ್ತು ಹಿರಿಯ ರತನ್ ಟಾಟಾ ಪಾತ್ರ ನಿರ್ವಹಿಸಲಿದ್ದಾರೆ ಎಂದು ಹೇಳಲಾಗಿದೆ.



ದಿವಂಗತ ಉದ್ಯಮಿ ರತನ್ ಟಾಟಾ ಅವರು ಇದೇ ತಿಂಗಳ 9 ರಂದು ನಿಧನರಾಗಿದ್ದರು. ಹೀಗಾಗಿ ಅವರ ಕೆಲ ಕಾರ್ಯಗಳನ್ನು ಸಿನಿಮಾ ಮೂಲಕ ತೆರೆಯ ಮೇಲೆ ಕಟ್ಟಿಕೊಡಲು ಉದ್ದೇಶಿಸಲಾಗಿದೆ. ಈ ನಡುವೆ ರತನ್ ಟಾಟಾ ಅವರ ಮಲ ಸಹೋದರ ನೋಯೆಲ್ ಟಾಟಾ ಅವರನ್ನು ಟಾಟಾ ಟ್ರಸ್ಟ್‌ನ ಹೊಸ ಅಧ್ಯಕ್ಷರಾಗಿ ನೇಮಿಸಲಾಗಿದೆ. ಇದಲ್ಲದೆ, ಟಾಟಾ ಗ್ರೂಪ್‌ನ ಮಾಜಿ ಅಧ್ಯಕ್ಷರಿಗೆ ಗೌರವ ಸಲ್ಲಿಸಲು, ಝೀ ಮೀಡಿಯಾ ಅವರ ಜೀವನ ಚರಿತ್ರೆ ಘೋಷಿಸಿದ್ದು ಎಲ್ಲ ತಯಾರಿ ಮಾಡಿಕೊಳ್ಳುತ್ತಿದೆ. ರತನ್ ಟಾಟಾ ಅವರ ಜೀವನಚರಿತ್ರೆಯಲ್ಲಿ ರತನ್ ಟಾಟಾ ಅವರ ಪಾತ್ರ ಯಾರು ನಿರ್ವಹಿಸುತ್ತಾರೆ ಅಥವಾ ಚಿತ್ರದ ತಾರಾ ಬಳಗ ದಲ್ಲಿ ಯಾರನ್ನು ಸೇರಿಸಲಾಗುತ್ತದೆ ಎಂಬುದರ ಕುರಿತು ಹೆಚ್ಚಿನ ಮಾಹಿತಿ ಇನ್ನೂ ಬಹಿರಂಗಗೊಂ ಡಿಲ್ಲ. ರತನ್ ಟಾಟಾ ಪಾತ್ರ ಮಾಡಲು ನಾಸಿರುದ್ದೀನ್ ಶಾ ಅಥವಾ ಬೊಮನ್ ಇರಾನಿ ಸೂಕ್ತ ಎಂದು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.

ನೈಜೀರಿಯಾ ಟ್ಯಾಂಕ್ ಸ್ಫೋಟ: 140 ಸಾವು

ಕಾನೊ (ನೈಜೀರಿಯಾ): ವಾಯವ್ಯ ನೈಜೀರಿಯಾದಲ್ಲಿ ಉರುಳಿಬಿದ್ದ ಟ್ಯಾಂಕರ್‌ನಿಂದ ಪೆಟ್ರೋಲ್ ಸಂಗ್ರಹಿಸಲು ಸ್ಥಳೀಯರು ಮುಗಿಬಿದ್ದಾಗ, ಅದು ಸ್ಫೋಟಗೊಂಡು 140 ಜನರು ಮೃತಪಟ್ಟಿದ್ದು, 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಜಿಗಾವಾ ರಾಜ್ಯದ ಟೌರಾ ಸರಕಾರಿ ಪ್ರದೇಶದ ಮಜಿಯಾ ಎಂಬ ಪಟ್ಟಣದಲ್ಲಿ ಮಂಗಳವಾರ ರಾತ್ರಿ ಸ್ಫೋಟ ಸಂಭವಿಸಿದೆ ಎಂದು ಅವರು ತಿಳಿಸಿದ್ದಾರೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಸಾವಿನ ಸಂಖ್ಯೆ ಏರಿಕೆಯಾಗುವ ಆತಂಕ ಕಾಡುತ್ತಿದೆ. ಟ್ರಕ್‌ಗೆ ಡಿಕ್ಕಿ ಯಾಗುವುದನ್ನು ತಪ್ಪಿಸುವ ವೇಳೆ ಟ್ಯಾಂಕರ್ ಪಲ್ಟಿಯಾಗಿದೆ. ಅಪಘಾತದ ನಂತರ ಚೆಲ್ಲಿದ ಇಂಧನ ಸಂಗ್ರಹಿಸಲು ಹೆಚ್ಚಿನ ಸಂಖ್ಯೆ ಯಲ್ಲಿ ಜನ ಸೇರಿದ್ದು ಸಾವಿನ ಸಂಖ್ಯೆ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಜಿಗಾವಾ ರಾಜ್ಯದ ಮಜಿಯಾ ಪಟ್ಟಣದಲ್ಲಿ ಮಧ್ಯರಾತ್ರಿ ದುರಂತ ಸಂಭವಿಸಿದ್ದು, ಹೆದ್ದಾರಿಯಲ್ಲಿ ಪಯಣಿಸುವಾಗ ಚಾಲಕನ ನಿಯಂತ್ರಣ ತಪ್ಪಿ ಉರುಳಿಬಿದ್ದ ಟ್ಯಾಂಕರ್ ಸ್ಫೋಟಗೊಂಡಿದೆ ಎಂದು ಪೊಲೀಸ್ ವಕ್ತಾರ ಲಾವನ್ ಆಡಮ್ ತಿಳಿಸಿದ್ದಾರೆ. ಸ್ಫೋಟದ ಸ್ಥಳದಲ್ಲೇ 97 ಜನರು ಸಜೀವ ದಹನವಾದರೆ, ಗಾಯಗೊಂಡಿದ್ದ 8 ಮಂದಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಜಿಗಾವಾ ರಾಜ್ಯದ ತುರ್ತು ನಿರ್ವಹಣಾ ಸಂಸ್ಥೆ ಮುಖ್ಯಸ್ಥ ಡಾ. ಹರುನಾ ಮೈರಿಗಾ ಮಾಹಿತಿ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಡೆಲ್ಲಿ ತಂಡಕ್ಕೆ ಬದಾನಿ ಕೋಚ್

ದೆಹಲಿ: ಭಾರತದ ಮಾಜಿ ಎಡಗೈ ಬ್ಯಾಟರ್ ಹೇಮಂಗ್ ಬದಾನಿ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ತಂಡ ಮುಂದಿನ ಆವೃತ್ತಿಯ ಐಪಿಎಲ್‌ಗೆ(2025) ಮುಖ್ಯ ಕೋಚ್ ಆಗಿ ನೇಮಕ ಮಾಡಿದೆ. ಕೆಲ ದಿನಗಳ ಹಿಂದೆಯೇ ಬದಾನಿ ಕೋಚ್ ಆಗಲಿದ್ದಾರೆ ಎಂದು ಹೇಳಲಾಗಿತ್ತು. ಇದೀಗ ಅಧಿಕೃತಗೊಂಡಿದೆ. ಗುರುವಾರ ಫ್ರಾಂಚೈಸಿ ಬದಾನಿ ಅವರನ್ನು ಕೋಚ್ ಮಾಡಿದ ಸಂಗತಿಯನ್ನು ಅಧಿಕೃತಗೊಳಿಸಿದೆ. ಭಾರತದ ಮಾಜಿ ಬ್ಯಾಟರ್ ವೇಣುಗೋಪಾಲ್ ರಾವ್ ಅವರನ್ನು ತಂಡದ ಹೊಸ ಕ್ರಿಕೆಟ್ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ. ಬದಾನಿ ಈ ಹಿಂದೆ ಸನ್ರೈಸರ್ಸ್ ಹೈದರಾಬಾದ್ ತಂಡದಲ್ಲಿ ಬ್ರಿಯಾನ್ ಲಾರಾರೊಂದಿಗೆ ಕೆಲಸ ಮಾಡಿದ್ದರು. ತಮಿಳುನಾಡಿನ ಮಾಜಿ ಬ್ಯಾಟರ್ ಬದಾನಿ 2001–2004ರ ನಡುವೆ 4 ಟೆಸ್ಟ್ ಹಾಗೂ 40 ಏಕದಿನ ಪಂದ್ಯವನ್ನಾಡಿದ್ದಾರೆ. ಕಳೆದ ಆವೃತ್ತಿ ತನಕ ಆಸೀಸ್ ತಂಡದ ಮಾಜಿ ದಿಗ್ಗಜ ರಿಕಿ ಪಾಂಟಿಂಗ್ ಡೆಲ್ಲಿ ತಂಡದ ಕೋಚ್ ಆಗಿದ್ದರು. ಇವರ ಮಾರ್ಗ ದರ್ಶನದಲ್ಲಿ ತಂಡ ನಿರೀಕ್ಷಿತ ಪ್ರದರ್ಶನ ತೋರುವಲ್ಲಿ ವಿಫಲವಾಗಿತ್ತು. ಇದೇ ಕಾರಣಕ್ಕೆ ಅವರನ್ನು ಕೋಚ್ ಹುದ್ದೆಯಿಂದ ಕೆಳಗಿಳಿಸಲಾಗಿತ್ತು.

ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್‌ಗೆ ಗಂಗೂಲಿ ನಿರ್ದೇಶಕ

ದೆಹಲಿ: ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಅವರನ್ನು ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್‌ನ ಕ್ರಿಕೆಟ್ ನಿರ್ದೇಶಕರಾಗಿ ಗುರುವಾರ ನೇಮಕ ಮಾಡಲಾಗಿದೆ.

ಐಪಿಎಲ್ ಮತ್ತು ಡಬ್ಲ್ಯುಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ಜೊತೆ ದಕ್ಷಿಣ ಆಫ್ರಿಕಾದ ಎಸ್‌ಎ20 ಫ್ರಾಂಚೈಸಿಯಾದ ಪ್ರಿಟೋರಿಯಾ ಕ್ಯಾಪಿಟಲ್ಸ್ ಫ್ರಾಂಚೈಸಿ ಈ ಜೆಎಸ್ ಡಬ್ಲ್ಯು ಸ್ಪೋರ್ಟ್ಸ್ ವ್ಯಾಪ್ತಿಯಲ್ಲಿದೆ. ಇವುಗಳ ಮೇಲ್ವಿಚಾರಣೆಯ ಪಾತ್ರವನ್ನು ಗಂಗೂಲಿ ವಹಿಸಲಿದ್ದಾರೆ. ಐಪಿಎಲ್ ಮತ್ತು ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿಯ ಮಾಲೀಕತ್ವನ್ನು ಜೆಎಸ್‌ಡಬ್ಲ್ಯು ಮತ್ತು ಜಿಎಂಆರ್ ಗ್ರೂಪ್ ಜಂಟಿಯಾಗಿ ವಹಿಸಿಕೊಂಡಿವೆ. ಆದರೆ ದಕ್ಷಿಣ ಆಫ್ರಿಕಾದ ಪ್ರಿಟೋರಿಯಾ ಕ್ಯಾಪಿಟಲ್ಸ್ ಮಾಲೀಕತ್ವವನ್ನು ಜೆಎಸ್‌ಡಬ್ಲ್ಯು ಮಾತ್ರ ಹೊಂದಿದೆ. ಗಂಗೂಲಿ 2019ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಸಲಹೆಗಾರರಾಗಿ ನೇಮಕಗೊಂಡಿದ್ದರು. ರಿಕಿ ಪಾಂಟಿಂಗ್ ಕೋಚ್ ಆಗಿದ್ದರು.

ನಿರ್ದೇಶಕ ದೀಪಕ್ ಅರಸ್ ನಿಧನ

ಬೆಂಗಳೂರು: ಸ್ಯಾಂಡಲ್‌ವುಡ್ ನಟಿ ಅಮೂಲ್ಯ ಅವರ ಸಹೋದರ ಮತ್ತು ನಿರ್ದೇಶಕರಾಗಿದ್ದ ದೀಪಕ್ ಅರಸ್

ಅವರು ಗುರುವಾರ ಸಂಜೆ ನಿಧನರಾದರು. ಚಿತ್ರರಂಗದಲ್ಲಿ ನಿರ್ದೇಶಕರಾಗಿಯು ಒಂದೆರಡು ಸಿನಿಮಾಗಳನ್ನು ನಿರ್ದೇಶಿಸಿದ್ದ ದೀಪಕ್ ಅರಸ್ ಅವರು ಕೆಲವು ವರ್ಷಗಳಿಂದ ಅನಾ.ರೋಗ್ಯದಿಂದ ನರಳುತ್ತಿದ್ದರು ಎಂದು ತಿಳಿದು ಬಂದಿದೆ. ಕೊನೆಗೆ ಚಿಕಿತ್ಸೆ ಫಲಿಕಾರಿಯಾಗದೇ ಅವರು ಆರ್.ಆರ್ ನಗರದ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ ಎಂದು ಕುಟುಂಬ ಮೂಲಗಳು ಮಾಹಿತಿ ನೀಡಿವೆ.

ಬೆಂಗಳೂರಿನಲ್ಲಿ ರೋಹಿತ್ ಪರೇಡ್ | ಕಿವೀಸ್ ಬೌಲರ್‌ಗಳ ದಾಳಿಗೆ ತತ್ತರಿಸಿದ ಬ್ಲೂಬಾಯ್ಸ್ | ಐದು ಬ್ಯಾಟರ್‌ಗಳ 'ಸೊನ್ನೆ' ಸಾಧನೆ

ಭಾರತ ತಂಡಕ್ಕೆ ಬರೀ 46 ರನ್!

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ಬೀಸಿದ ಬಲವಾದ ಚಂಡಮಾರುತಕ್ಕಿಂತಲೂ ವೇಗವಾಗಿ ಅಪ್ಪಳಿಸಿದ ನ್ಯೂಜಿಲ್ಯಾಂಡ್‌ನ ತ್ರಿವಳಿ ವೇಗಿಗಳ ಬಿಗು ಬೌಲಿಂಗ್ ದಾಳಿಗೆ ತತ್ತರಿಸಿರುವ ಟೀಮ್ ಇಂಡಿಯಾ, ಇಲ್ಲಿನ ಎಂ. ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಕೇವಲ 46 ರನ್‌ಗೆ ಸರ್ವಪತನ ಕಂಡಿದೆ. ಇದು ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಟೀಮ್ ಇಂಡಿಯಾ ದಾಖಲಿಸಿದ ಮೂರನೇ ಅತಿ ಕಡಿಮೆ ಮೊತ್ತದ ನಿರ್ದಶನ.

2020ರಲ್ಲಿ ಆಸ್ಟ್ರೇಲಿಯಾದ ಅಡಿಲೇಡ್ ಓವಲ್ ನಲ್ಲಿ ನಡೆದ ಡೇ–ನೈಟ್ ಟೆಸ್ಟ್ ಪಂದ್ಯದ ದ್ವಿತೀಯ ಇನಿಂಗ್ಸ್‌ನಲ್ಲಿ ಭಾರತ ತಂಡ ಕೇವಲ 36 ರನ್‌ಗಳಿಗೆ ಪತನವಾಗಿತ್ತು. ಇದು ಭಾರತದ ಕನಿಷ್ಠ ಮೊತ್ತವಾಗಿದೆ. ಇದಕ್ಕೂ ಮುನ್ನ 1974 ರಲ್ಲಿ ಭಾರತ ಲಾರ್ಡ್ಸ್‌ನಲ್ಲಿ ಕೇವಲ 42 ರನ್‌ಗೆ ಆಲೌಟ್ ಆಗಿತ್ತು.

ಬ್ಯಾಟಿಂಗ್ ಪರೇಡ್: ಮಳೆಯ ಕಾರಣ ಬುಧವಾರ ಆರಂಭವಾಗಬೇಕಿದ್ದ ಪಂದ್ಯ, ದ್ವಿತೀಯ ದಿನವಾದ ಗುರುವಾರ ಆರಂಭವಾಯಿತು ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಭಾರತ ನಾಟಕೀಯ ಕುಸಿತ ಕಂಡಿತು. ಕಿವೀಸ್‌ನ ಮೂವರು ವೇಗಿಗಳು ಸಂಘಟಿತ ಬೌಲಿಂಗ್ ದಾಳಿಯ ಮೂಲಕ ಭಾರತ ಎಲ್ಲ ಲೆಕ್ಕಾಚಾರವನ್ನು ತಲೆಕೆಳಗೆ ಮಾಡಿದರು. ಐದು ಮಂದಿ ಬ್ಯಾಟರ್‌ಗಳು ಶೂನ್ಯಕ್ಕೆ ವಿಕೆಟ್ ಕೈಚೆಲ್ಲಿದರು. ವಿರಾಟ್ ಕೊಹ್ಲಿ, ಕೆ.ಎಲ್ ರಾಹುಲ್, ರವೀಂದ್ರ ಜಡೇಜಾ, ಸರ್ಫರಾಜ್ ಖಾನ್ ಮತ್ತು ಆರ್.ಅಶ್ವಿನ್ ಭಾರತದ ಬ್ಯಾಟಿಂಗ್ ಸರದಿಯಲ್ಲಿ ಶೂನ್ಯ ಸಂಪಾದಿಸಿದ ಬ್ಯಾಟರ್‌ಗಳು. ಊಟದ ವಿರಾಮಕ್ಕೆ 34 ರನ್‌ಗೆ 6 ವಿಕೆಟ್ ಕಳೆದುಕೊಂಡಿದ್ದ ಭಾರತ ಊಟ ಮುಗಿಸಿ ಆಡಲಿಳಿದ 10 ನಿಮಿಷದಲ್ಲಿ ಆಲೌಟ್ ಆಯಿತು.

ಭಾರತದ ಅತಿ ಕಡಿಮೆ ರನ್‌ಗಳು

ವರ್ಷ	ದೇಶ	ಸ್ಥಳ	ರನ್
2020	ಆಸ್ಟ್ರೇಲಿಯಾ	ಅಡಿಲೇಡ್	36
1974	ಇಂಗ್ಲೆಂಡ್	ಲಾರ್ಡ್ಸ್	42
2024	ನ್ಯೂಜಿಲ್ಯಾಂಡ್	ಬೆಂಗಳೂರು	46
1947	ಆಸ್ಟ್ರೇಲಿಯಾ	ಬ್ರಿಸ್ಬೇನ್	58
1952	ಇಂಗ್ಲೆಂಡ್	ಮ್ಯಾಂಚೆಸ್ಟರ್	58

ಭಾರತ ಪರ ಗರಿಷ್ಠ ಮೊತ್ತ ದಾಖಲಿಸಿದ್ದು ಪಂತ್ ಮಾತ್ರ. 2 ಬೌಂಡರಿ ನೆರವಿನಿಂದ 20 ರನ್ ಬಾರಿಸಿದರು. ಇವರನ್ನು ಹೊರತುಪಡಿಸಿದರೆ ಜೈಸ್ವಾಲ್ 13 ರನ್ ಗಳಿಸಿದರು. ಜಿದ್ದಿಗೆ ಬಿದ್ದವರಂತೆ ಬೌಲಿಂಗ್ ದಾಳಿ ನಡೆಸಿದ ಮ್ಯಾಟ್ ಹೆನ್ರಿ 5 ವಿಕೆಟ್ ಕಿತ್ತರೆ ವಿಲಿಯಂ ಒರ್ಕ್ 4 ವಿಕೆಟ್ ಉಡಾಯಿಸಿದರು. 10 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು ಕೇವಲ 10 ರನ್ ಕಲೆಹಾಕುವ ಮೂಲಕ 18 ವರ್ಷಗಳ ಬಳಿಕ ತವರಿನಲ್ಲಿ ಅತ್ಯಂತ ಕಳಪೆ ಆರಂಭ ಪಡೆದ ಕೆಟ್ಟ ದಾಖಲೆ ಬರೆಯಿತು.

ರೋಹಿತ್ 2 ರನ್ ಗಳಿಸಿದರೆ, ವಿರಾಟ್ ಕೊಹ್ಲಿ ಮತ್ತು ರಾಹುಲ್ ಖಾತೆ ತೆರೆಯದೆ ಶೂನ್ಯ ಸುತ್ತಿದರು. ರಾಹುಲ್‌ಗೆ ತವರು ಮೈದಾನವಾಗಿದ್ದರೂ ಕೂಡ

ಇದರ ಲಾಭವೆತ್ತಲು ಸಾಧ್ಯವಾಗಲಿಲ್ಲ. ದೇಶೀಯ ಕ್ರಿಕೆಟ್ ಟೂರ್ನಿಯಲ್ಲಿ ರನ್ ಮಳೆಯನ್ನೇ ಸುರಿಸಿದ್ದ ಮುಂಬೈ ಬ್ಯಾಟರ್ ಸರ್ಫರಾಜ್ ಖಾನ್ ಕೂಡ ಖಾತೆ ತೆರೆಯದೆ ನಿರಾಸೆ ಮೂಡಿಸಿದರು. ಕುತ್ತಿಗೆ ನೋವಿಗೆ ತುತ್ತಾಗಿದ್ದ ಶುಭ್ಮನ್ ಗಿಲ್‌ಗೆ ಈ ಪಂದ್ಯಕ್ಕೆ ವಿಶ್ರಾಂತಿ ನೀಡಲಾಯಿತು. ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ಕೂಡ ತಂಡಕ್ಕೆ ನೆರವಾಗುವಲ್ಲಿ ವಿಫಲರಾದರು. 63 ಎಸೆತ ಎದುರಿಸಿ ನಿಂತರೂ ಗಳಿಸಿದ್ದು 13 ರನ್. ಜಡೇಜಾ ಕೂಡ ಶೂನ್ಯಕ್ಕೆ ವಿಕೆಟ್ ಕೈಚೆಲ್ಲಿದರು.

ಪಂತ್‌ಗೆ ಊತ: ಮೂರನೇ ದಿನದಾಟದಲ್ಲಿ ಭಾರತ ತಂಡದ ವಿಕೆಟ್ ಕೀಪರ್, ಬ್ಯಾಟರ್ ರಿಷಭ್ ಪಂತ್ ಮೊಣಕಾಲಿಗೆ ಚೆಂಡು ಬಡಿದು ಊತ ಕಾಣಿಸಿಕೊಂಡಿದೆ ಎಂದು ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

ನ್ಯೂಜಿಲೆಂಡ್‌ನ ಮೊದಲ ಇನ್ನಿಂಗ್ಸ್‌ನ 37ನೇ ಓವರ್‌ನಲ್ಲಿ ರವೀಂದ್ರ ಜಡೇಜ ಬೌಲ್ ಮಾಡಿದ ಚೆಂಡು ಸ್ಪಿನ್ ಆಗಿ ಪುಟಿದು ಬಂದಿತ್ತು. ಅದನ್ನು ಹಿಡಿಯುವಲ್ಲಿ ವಿಫಲವಾದ ಪಂತ್ ಅವರ ಮೊಣಕಾಲಿಗೆ ಚೆಂಡು ಬಡಿದಿದೆ. ಕೂಡಲೇ ಅವರು ಮೈದಾನದಿಂದ ಹೊರ ಹೋಗಿದ್ದು, ಧ್ರುವ್ ಜುರೇಲ್ ಅವರು ವಿಕೆಟ್ ಕೀಪಿಂಗ್ ಹೊಣೆ ಹೊತ್ತುಕೊಂಡರು. ಚೆಂಡು ಪಂತ್ ಅವರ ಎಡಗಾಲಿನ ಮೊಣಕಾಲಿನ ಚಿಪ್ಪಿಗೆ ಬಡಿದಿದೆ. ಈ ಹಿಂದೆ 2022ರಲ್ಲಿ ಕಾರು ಅಪಘಾತದಲ್ಲಿ ಗಾಯಗೊಂಡಿದ್ದ ಪಂತ್ ಅವರ ಎಡಗಾಲಿಗೆ ಹಲವು ಶಸ್ತ್ರಚಿಕಿತ್ಸೆಗಳು ಆಗಿದ್ದವು. ಅದೇ ಕಾಲಿನ ಮೊಣಕಾಲಿಗೆ ಈಗ ಪೆಟ್ಟಾಗಿರುವುದು ಆತಂಕ ಮೂಡಿಸಿದೆ.

ಬ್ಯಾಟಿಂಗ್ ಆಯ್ಕೆ ಕೆಟ್ಟ ನಿರ್ಧಾರ: ಶರ್ಮಾ

'ನನ್ನ ತಂಡವು ಕೇವಲ 46 ರನ್‌ಗಳ ಕನಿಷ್ಠ ಮೊತ್ತಕ್ಕೆ ಕುಸಿದಿದ್ದು ಅತೀವ ಬೇಸರ ತರಿಸಿದೆ. ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ನಿರ್ಧಾರ ನನ್ನದೇ ಆಗಿತ್ತು. ಒಂದು ವರ್ಷದಲ್ಲಿ ಕೆಲವೇ ಕೆಲವು ಕೆಟ್ಟ ನಿರ್ಧಾರಗಳು ಅರಿವಿಲ್ಲದೇ ಆಗಿಬಿಡುತ್ತವೆ' ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಹೇಳಿದರುವು. ಭಾರತ ತಂಡವು ಸ್ವದೇಶದಲ್ಲಿ ಅತ್ಯಂತ ಕಡಿಮೆ ಮೊತ್ತಕ್ಕೆ ಆಲೌಟ್ ಆಗಿದ್ದರ ಕುರಿತು ಬೇರೆ ಯಾವುದೇ ಕಾರಣಗಳನ್ನೂ ಅವರು ಕೊಡಲಿಲ್ಲ. ಎಲ್ಲ ಹೊಣೆಯನ್ನೂ ತಮ್ಮ ಮೇಲೆಳೆದುಕೊಂಡರು. ಪಿಚ್ ಅಂದಾಜು ಮಾಡುವಲ್ಲಿ ತಪ್ಪಾಯಿತು. ಅಂಕಣದಲ್ಲಿ ಹುಲ್ಲು ಗರಿಕೆಗಳು ಇಲ್ಲ ಅನಿಸಿದ್ದರಿಂದ ಮೊದಲ ಒಂದು ಅವಧಿಯಲ್ಲಿ ಬ್ಯಾಟಿಂಗ್ ಕಷ್ಟವಾಗಬಹುದು. ನಂತರ ಚೆಂಡು ತಿರುಗಲು ಆರಂಭಿಸುತ್ತದೆ ಎಂದು ಅಂದಾಜು ಮಾಡಿದ್ದೆವು. ಭಾರತದಲ್ಲಿ ಆಡುವಾಗ ಮೊದಲ ಅವಧಿಯಲ್ಲಿ ಯಾವಾಗಲೂ ಬ್ಯಾಟಿಂಗ್ ಮಾಡುವುದು ಕಷ್ಟವೇ. ಒಮ್ಮೆ ಪಿಚ್ ಹದಗೊಂಡಿತೆಂದರೆ ಸ್ಪಿನ್ನರ್‌ಗಳ ಆಟ ಶುರುವಾಗುತ್ತದೆ. ಆದ್ದರಿಂದ ಮೂವರು ಸ್ಪಿನ್ನರ್ (ಕುಲದೀಪ್ ಯಾದವ್ ಸೇರಿ) ಗಳೊಂದಿಗೆ ಕಣಕ್ಕಿಳಿದಿದ್ದೇವೆ ಎಂದರು.

ಮಹಿಳಾ ಕ್ರಿಕೆಟ್ ತಂಡದ ನಾಯಕಿಯಾಗಿ ಹರ್ಮನ್ ಪ್ರೀತ್ ಕೌರ್ ಮುಂದುವರಿಕೆ

ನ್ಯೂಜಿಲ್ಯಾಂಡ್ ವಿರುದ್ಧದ ಸರಣಿಗೆ ತಂಡ ಪ್ರಕಟ

ದೆಹಲಿ: ಮುಂಬರುವ ನ್ಯೂಜಿಲ್ಯಾಂಡ್ ವಿರುದ್ಧದ ಏಕದಿನ ಸರಣಿಗೆ ಹರ್ಮನ್ ಪ್ರೀತ್ ಕೌರ್ ಅವರನ್ನು ಭಾರತ ತಂಡದ ನಾಯಕಿಯಾಗಿ ಹೆಸರಿಸಲಾಗಿದೆ. ವಿಶ್ವಕಪ್‌ನಲ್ಲಿ ಅವರ ಬಳಗದ ಕಳಪೆ ಪ್ರದರ್ಶನದ ಬಳಿಕ ನಾಯಕತ್ವದ ಬಗ್ಗೆ ಅನುಮಾನ ಉಂಟಾಗಿತ್ತು. ಲೀಗ್ ಹಂತದಲ್ಲಿ ತಂಡ ಹೊರ ಬಿದ್ದ ಹೊರತಾಗಿಯೂ ಅವರು ಅಕ್ಟೋಬರ್ 17 ರ ಬಿಸಿಸಿಐ ಪ್ರಕಟಿಸಿದ ಮುಂಬರುವ ಸರಣಿಯ ತಂಡದಲ್ಲಿಅವರಿಗೆ ಸ್ಥಾನ ನೀಡಲಾಗಿದೆ. ಇದರಲ್ಲಿ ಪ್ರಿಯಾ ಮಿಶ್ರಾ, ಸಯಾಲಿ ಸತ್ಗರೆ, ಸೈಮಾ ಠಾಕೂರ್ ಮತ್ತು ತೇಜಲ್ ಹಸಬ್ನಿಸ್ ಹೊಸ ಮುಖಗಳಾಗಿವೆ.

ಯುಎಇಯಲ್ಲಿ ನಡೆದ ಮಹಿಳಾ ಟಿ 20 ವಿಶ್ವಕಪ್‌ನಲ್ಲಿ ಭಾರತ ಸೆಮಿಫೈನಲ್ ಪ್ರವೇಶಿಸಲು ವಿಫಲವಾದ ನಂತರ ಹರ್ಮನ್‌ಪ್ರೀತ್ ಟೀಕೆಗೆ ಗುರಿಯಾಗಿದ್ದರು. 35 ವರ್ಷದ ಬ್ಯಾಟರ್ ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ ವಿರುದ್ಧ ಅರ್ಧಶತಕಗಳನ್ನು ಗಳಿಸಿದ್ದರು. ಆದರೆ, ಭಾರತವು ಗುಂಪು ಹಂತಗಳಲ್ಲಿ ಸೋತಿತ್ತು.

ನ್ಯೂಜಿಲ್ಯಾಂಡ್ ಸರಣಿಗೆ ಭಾರತ ತಂಡ

ಹರ್ಮನ್ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ಡಿ ಹೇಮಲತಾ, ದೀಪ್ತಿ ಶರ್ಮಾ, ಜೆಮಿಮಾ ರೋಡ್ರಿಗೀಸ್, ಯಾಸ್ತಿಕಾ ಭಾಟಿಯಾ (ವಿಕೆಟ್ ಕೀಪರ್), ಉಮಾ ಚೆಟ್ರಿ (ವಿಕೆಟ್ ಕೀಪರ್), ಸಯಾಲಿ ಸತ್ಗರೆ, ಅರುಂಧತಿ ರೆಡ್ಡಿ, ರೇಣುಕಾ ಸಿಂಗ್ ಠಾಕೂರ್, ತೇಜಲ್ ಹಸಬ್ನಿಸ್, ಸೈಮಾ ಠಾಕೂರ್, ಪ್ರಿಯಾ ಮಿಶ್ರಾ, ರಾಧಾ ಯಾದವ್, ಶ್ರೇಯಂಕಾ ಪಾಟೀಲ್.

ಡೆನ್ಮಾರ್ಕ್ ಓಪನ್ 7ನೇ ಸ್ಥಾನಕ್ಕೆ ಸಿಂಧು

ಒಡೆನ್ಸ್: ಹಿನ್ನಡೆಯಿಂದ ಚೇತರಿಸಿಕೊಂಡ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು, ವಿಶ್ವದ ಏಳನೇ ಕ್ರಮಾಂಕದ ಆಟಗಾರ್ತಿ ಹಾನ್ ಹ್ಯು ಮೇಲೆ ಜಯಗಳಿಸಿ ಡೆನ್ಮಾರ್ಕ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು. ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ 18ನೇ ಕ್ರಮಾಂಕದ ಸಿಂಧು 18–21, 21–12, 21–16 ರಿಂದ ಮಾಜಿ ವಿಶ್ವ ಚಾಂಪಿಯನ್ ಹಾನ್ ಹ್ಯು ಅವರನ್ನು ಹಿಮ್ಮೆಟ್ಟಿಸಿದರು. ಪಂದ್ಯ 63 ನಿಮಿಷ ನಡೆಯಿತು. ಮೇ ತಿಂಗಳು ಮಲೇಷ್ಯಾ ಮಾಸ್ಟರ್ಸ್ ಟೂರ್ನಿಯಲ್ಲಿ ಇದೇ ಆಟಗಾರ್ತಿಯನ್ನು ಸೋಲಿಸಿದ ನಂತರ ಇದು ವಿಶ್ವದ ಅಗ್ರ 10ರಲ್ಲಿರುವ ಆಟಗಾರ್ತಿಯೊಬ್ಬರ ಮೇಲೆ ಸಿಂಧು ಸಾಧಿಸಿದ ಮೊದಲ ಗೆಲುವಾಗಿದೆ. ತನ್ಮೂಲಕ ಸಿಂಧು, ಹಾನ್ ವಿರುದ್ಧ ಎಂಟು ಮುಖಾಮುಖಿಯಲ್ಲಿ ಏಳನೇ ಬಾರಿ ಗೆದ್ದಂತಾಯಿತು. ಭಾರತದ ಆಟಗಾರ್ತಿ ಕ್ವಾರ್ಟರ್‌ಫೈನಲ್‌ನಲ್ಲಿ ಇಂಡೊನೇಷ್ಯಾದ ಜಾರ್ಜಿಯಾ ಮರಿಸ್ಕಾ ತುಂಜುಂಗ್ ಅಥವಾ ಡೆನ್ಮಾರ್ಕ್‌ನ ಮಿಯಾ ಬ್ಲಿಚ್ಫೆಲ್ಟ್ ಅವರನ್ನು ಎದುರಿಸಲಿದ್ದಾರೆ. ಮರಿಸ್ಕಾ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ತಮ್ಮದಾಗಿಸಿಕೊಂಡಿದ್ದರು. ಈ ಟೂರ್ನಿಯಲ್ಲಿ ಸಿಂಧು ಅವರನ್ನು ಬಿಟ್ಟರೆ ಸಿಂಗಲ್ಸ್, ಡಬಲ್ಸ್‌ನಲ್ಲಿ ಭಾರತದ ಉಳಿದ ಸ್ಪರ್ಧಿಗಳು ಹೊರಬಿದ್ದಿದ್ದಾರೆ.

ದೇಶಕ್ಕಾಗಿ ಪದಕ ಗೆದ್ದ ವಿವಾನ್ ಕಪೂರ್, ಅನಂತ್ ಜೀತ್ ಸಿಂಗ್

ಶೂಟಿಂಗ್ ವಿಶ್ವಕಪ್ ಭಾರತಕ್ಕೆ ಬೆಳ್ಳಿ, ಕಂಚು

ದೆಹಲಿ: ವಿವಾನ್ ಕಪೂರ್ ಅವರು ಐಎಸ್ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಫೈನಲ್‌ನ ಪುರುಷರ ಟ್ರ್ಯಾಪ್ ವಿಭಾಗದಲ್ಲಿ ಗುರುವಾರ ಬೆಳ್ಳಿಯ ಪದಕ ಗೆದ್ದುಕೊಂಡರೆ, ಸ್ಕೀಟ್ ಸ್ಪರ್ಧೆಯಲ್ಲಿ ಭಾರತದ ಇನ್ನೊಬ್ಬ ಸ್ಪರ್ಧಿ ಅನಂತ್ ಜೀತ್ ಸಿಂಗ್ ನರೂಕಾ ಅವರು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಫೈನಲ್‌ನಲ್ಲಿ 44ರ ಸ್ಕೋರ್‌ನೊಡನೆ ಅವರು ಎರಡನೇ ಸ್ಥಾನ ಪಡೆದರು. ಚೀನಾದ ಯಿಂಗ್ ಖಿ ಸ್ವರ್ಣ ಪದಕ ಪಡೆದರೆ, ಟರ್ಕಿಯ ತೊಲ್ಗಾ ಎನ್.ಟುನ್ಸರ್ (35) ಅವರು ಕಂಚಿನ ಪದಕ ಪಡೆದರು.

ಕ್ವಾಲಿಫಿಕೇಷನ್ ಸುತ್ತಿನಲ್ಲಿ ಭಾರತದ ಶೂಟರ್ 125ರಲ್ಲಿ 120 ಸ್ಕೋರ್‌ನೊಡನೆ ಆರು ಮಂದಿಯಿದ್ದ ಫೈನಲ್‌ಗೆ ಪ್ರವೇಶ ಪಡೆದಿದ್ದರು.

ಇದಕ್ಕೆ ಮೊದಲು, ರಾಜಸ್ಥಾನದ 26 ವರ್ಷ ವಯಸ್ಸಿನ ನರೂಕಾ ಅವರು ಆರು ಮಂದಿಯ ಫೈನಲ್ನಲ್ಲಿ 43ರ ಸ್ಕೋರ್‌ನೊಡನೆ ಕಂಚಿನ ಪದಕ ಗೆದ್ದುಕೊಂಡರು. ಇಟಲಿಯ ಟಾಮಾರೊ ಕಾಸಂಡ್ರೊ ಮತ್ತು ಗೇಬ್ರಿಯಲ್ ರೊಸೆಟ್ಟಿ ಅವರು ಕ್ರಮವಾಗಿ

57 ಮತ್ತು 56 ರ ಸ್ಕೋರ್‌ನೊಡನೆ ಚಿನ್ನ ಮತ್ತು ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ನರೂಕಾ ಅವರು ಕ್ವಾಲಿಫಿಕೇಷನ್ ಸುತ್ತಿನಲ್ಲಿ 125ರಲ್ಲಿ 121 ಅಂಕ ಕಲೆಹಾಕಿದ್ದರು. ಸೋನಮ್ ಮಸ್ಕರ್ ಅವರು ಮಂಗಳವಾರ ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರೆ, ಅಖಿಲ್ ಶಿಯೊರಾಣ್ ಅವರು ಬುಧವಾರ ನಡೆದ ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದರು.

ಜಲಮಂಡಳಿಯ ಕೇಂದ್ರ ಕಚೇರಿಯಲ್ಲಿ ಹೇಳಿಕೆ | ಬನಶಂಕರಿ, ಎಸ್‌ಎಂವಿ, ಗೊಟ್ಟಿಗೆರೆಗೆ ನೀರು ಸರಬರಾಜು

ಕಾವೇರಿ ಐದನೇ ಹಂತದ ನೀರು ಬೆಂಗಳೂರಿಗೆ ಪಂಪ್: ಡಾ.ರಾಮ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾವೇರಿ 5 ನೇ ಹಂತ ಕುಡಿಯುವ ನೀರಿನ ಯೋಜನೆ ಲೋಕಾರ್ಪಣೆಯಾದ ಬೆನ್ನಲ್ಲೇ ಟಿ.ಕೆಹಳ್ಳಿಯಿಂದ ನೀರು ಪಂಪಿಂಗ್ ಪ್ರಾರಂಭಿಸಲಾಗಿದ್ದು, ಸುಮಾರು 120 ಕಿ.ಮೀ ದೂರದಿಂದ ಬೃಹದಾಕಾರಾದ ಪೈಪ್‌ಲೈನ್ ಮೂಲಕ ಬೆಂಗಳೂರಿಗೆ ಕಾವೇರಿ ನೀರು ಬಂದು ತಲುಪಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಹೇಳಿದರು.

ಜಲಮಂಡಳಿಯ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಲೋಕಾರ್ಪಣೆಯ ನಂತರ ಪಂಪ್‌ಗಳನ್ನು ಪ್ರಾರಂಭಿಸಲಾಗಿತ್ತು. ಸುಮಾರು 120 ಕಿ.ಮೀ ದೂರದಿಂದ ಬೃಹದಾಕಾರಾದ ಪೈಪ್‌ಗಳ ಮೂಲಕ ಹಾರೋಹಳ್ಳಿ, ತಾತಗುಣಿ ಪಂಪಿಂಗ್ ಸ್ಟೇಷನ್‌ನಲ್ಲಿ ಪಂಪ್ ಮಾಡಿದ ನೀರು ಗುರುವಾರ ಸಂಜೆ ಬೆಂಗಳೂರಿಗೆ ತಲುಪಿದ್ದು, ಶುಕ್ರವಾರ ಬನಶಂಕರಿ 6 ನೇ ಹಂತ, ಎಸ್‌ಎಂವಿ 6 ನೇ ಹಂತ ಹಾಗೂ ಗೊಟ್ಟಿಗೆರೆ ಜಿಎಲ್‌ಆರ್‌ನಿಂದ ಹಂತ ಹಂತವಾಗಿ ಸರಬರಾಜು ಮಾಡಬೇಕಾದ ಪ್ರದೇಶಗಳಿಗೆ ಸರಬರಾಜು ಮಾಡಲಾಗುವುದು ಎಂದು ತಿಳಿಸಿದರು.

110 ಹಳ್ಳಿಗಳಿಗೆ ಕಾವೇರಿ ನೀರು ಹರಿಸಲು ಸಿದ್ಧತೆ ಕೈಗೊಳ್ಳಿ: ಈಗಾಗಲೇ 110 ಹಳ್ಳಿಗಳ ವ್ಯಾಪ್ತಿಯಲ್ಲಿ ಸುಮಾರು 55 ಸಾವಿರ ಸಂಪರ್ಕ ನೀಡಲಾಗಿದ್ದು, ಈ ಸಂಪರ್ಕಗಳಿಗೆ ಕಾವೇರಿ 4ನೇ ಹಂತದಲ್ಲಿ ಲಭ್ಯವಿದ್ದ ನೀರಿ ನಲ್ಲಿಯೇ ಆಗಾಗ್ಗೆ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ಹಲವು ಹಳ್ಳಿಗಳಲ್ಲಿ 10 ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿತ್ತು. ಈಗ ಕಾವೇರಿ 5 ನೇ ಹಂತ ಲೋಕಾರ್ಪಣೆಯಾದ ಹಿನ್ನೆಲೆ ಜಲಮಂಡ ಳಿಗೆ ಹೆಚ್ಚಿನ ನೀರು ಲಭ್ಯವಾಗುತ್ತಿದೆ. ಈ ನೀರನ್ನು ಈಗಾಗಲೇ ಸಂಪರ್ಕ ಹೊಂದಿರುವ ಜನರಿಗೆ ನೀರು ಹರಿಸಲು ಕ್ರಮ ಕೈಗೊಳ್ಳುವಂತೆ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ನಿರ್ದೇಶನ ನೀಡಿದ್ದಾರೆ. ಈ ಹಿನ್ನಲೆ ಸಮರ್ಪಕವಾಗಿ ಹಳ್ಳಿಗಳಿಗೆ ನೀರು ಸರಬರಾಜು ಪ್ರಕ್ರಿಯೆಯನ್ನು ಹಂತಹಂತ ವಾಗಿ ಪ್ರಾರಂಭಿಸಲು ಅಗತ್ಯ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ ಎಂದರು.

ಜಲಮಂಡಳಿಯ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಡಾ ರಾಮ್ ಪ್ರಸಾತ್ ಮನೋಹರ್ ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

53 ಹಳ್ಳಿಗಳಲ್ಲಿ 55 ಸಾವಿರ ಸಂಪರ್ಕ

110 ಹಳ್ಳಿಗಳ ವ್ಯಾಪ್ತಿಯಲ್ಲಿನ ಕೇವಲ 53 ಗ್ರಾಮಗಳಲ್ಲಿ ಸುಮಾರು 55 ಸಾವಿರ ನೀರಿನ ಸಂಪರ್ಕವನ್ನು ಪಡೆದುಕೊಂಡಿದ್ದಾರೆ. ಈ ಸಂಪರ್ಕಗಳಿಗೆ ನೀರು ಸರಬರಾಜಿನ ಷೆಡ್ಯೂಲ್ ಮಾಡಿ ರೊಟೇಷನ್ ಮೂಲಕ ನೀರು ಹರಿಸಬೇಕು. ಹಾಗೆಯೇ, ಇನ್ನುಳಿದ 57 ಗ್ರಾಮಗಳಲ್ಲಿ ನೀರಿನ ಸರಬರಾಜಿಗೆ ಜಲಮಂಡಳಿ ಎಲ್ಲಾ ಸಿದ್ದತೆಗಳನ್ನು ಮಾಡಿಕೊಂಡಿದೆ. ಜನರು ಕಾವೇರಿ ನೀರಿನ ಸಂಫರ್ಕ ಪಡೆದುಕೊಳ್ಳಲು ಅಧಿಕಾರಿಗಳು ಮನವೊಲಿಸಬೇಕು. ಜನರು ಕೂಡಾ ಉತ್ತಮ ಗುಣಮಟ್ಟದ ನೀರು ಸರಬರಾಜು ಪಡೆಯಲು ಅಗತ್ಯ ಸಂಪರ್ಕವನ್ನು ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಮೊದಲ ಹಂತದಲ್ಲಿ 150 ಎಂಎಲ್‌ಡಿ ನೀರು

ಕಾವೇರಿ 5 ನೇ ಹಂತದ ಲೋಕಾರ್ಪಣೆಯಿಂದ ಬೆಂಗಳೂರು ನಗರಕ್ಕೆ 775 ಎಂಎಲ್‌ಡಿಯಷ್ಟು ನೀರು ಲಭ್ಯವಿದೆ. ಇಷ್ಟು ಪ್ರಮಾಣದ ನೀರು ಸುಮಾರು 4 ಲಕ್ಷ ಸಂಪರ್ಕಗಳಿಗೆ ಹಾಗೂ 50 ಲಕ್ಷ ಜನರಿಗೆ ಅಗತ್ಯವಿರುವ ನೀರು. ಈಗ ಕೇವಲ 55 ಸಾವಿರ ಸಂಪರ್ಕಗಳಿದ್ದು ಇವುಗಳಿಗೆ 150 ಎಂಎಲ್‌ಡಿ ನೀರು ಸಾಕಾಗಲಿದೆ. ನೀರಿನ ಸದುಪಯೋಗ ಮಾಡುವ ನಿಟ್ಟಿನಲ್ಲಿ, ಹಾಗೆಯೇ ಜಲಮಂಡಳಿಗೆ ಆರ್ಥಿಕ ಹೊರೆ ಹೆಚ್ಚಾಗದೇ ಇರದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಅವಶ್ಯಕತೆ ಇರುವ 150 ಎಂಎಲ್‌ಡಿಯಷ್ಟು ನೀರನ್ನು ಮಾತ್ರ ಪಂಪ್ ಮಾಡಲಾಗುತ್ತಿದೆ.

ರಾಜ್ಯ ಸರಕಾರದ ಹಠಮಾರಿತನದಿಂದ ಕುದುರೆಮುಖ ಸಂಸ್ಥೆಯ ಕಾರ್ಮಿಕರು ಬೀದಿಗೆ | ಸರಕಾರದ ವಿರುದ್ಧ ಹರಿಹಾಯ್ದ ಸಚಿವ ಕುಮಾರಸ್ವಾಮಿ

ಕೆಐಒಸಿಎಲ್ ಬಗ್ಗೆ ಸರಕಾರದಿಂದ ಅಪಪ್ರಚಾರ: ಎಚ್‌ಡಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎಚ್‌ಎಂಟಿ ಹಾಗೂ ಕಬ್ಬಿಣ ಮತ್ತು ಅದಿರು ಸಂಸ್ಥೆ ವಿಷಯದಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ಹಸಿ ಸುಳ್ಳುಗಳನ್ನು ಹಬ್ಬಿಸುತ್ತಿದ್ದು, ಈ ಬಗ್ಗೆ ನಾನು ದಾಖಲೆಗಳ ಸಮೇತ ರಾಜ್ಯ ಸರಕಾರದೊಂದಿಗೆ ಚರ್ಚೆಗೆ ತಯಾರಿದ್ದೇನೆ ಎಂದು ಕೇಂದ್ರದ ಭಾರಿ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ಜೆಪಿ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಐಒಸಿಎಲ್ ಬಗ್ಗೆ ರಾಜ್ಯ ಸರಕಾರ ರಾಜಕಾರಣ ಮಾಡಬಾರದು. ಸಮಸ್ಯೆಯಿದ್ದರೆ ಕೂತು ಸರಿಪಡಿಸಿಕೊಳ್ಳಬೇಕು. ರಾಜ್ಯದಲ್ಲಿರುವ ಸಾರ್ವಜನಿಕ ಸ್ವಾಮ್ಯದ ಕೈಗಾರಿಕೆಗಳನ್ನು ಉಳಿಸುವ ಬಗ್ಗೆ ನಾನು ಕೆಲಸ ಮಾಡುತ್ತಿದ್ದೇನೆ. ಈ ಬಗ್ಗೆ ನಾನು ಮುಖ್ಯಮಂತ್ರಿಗಳು ಹಾಗೂ ಅರಣ್ಯ ಸಚಿವರಿಗೆ ಪತ್ರ ಬರೆಯುತ್ತೇನೆ. ಒಂದು ಸಭೆ ಮಾಡಲಿ. ಅಲ್ಲಿ ದಾಖಲೆಗಳ ಸಮೇತ ನಾನು ಮಾತನಾಡುತ್ತೇನೆ. ಒಂದು ವೇಳೆ ಕೆಐಒಸಿಎಲ್ ತಪ್ಪುಗಳಿದ್ದರೆ ಅದಕ್ಕೆ ಆ ಇಲಾಖೆಯ ಸಚಿವನಾಗಿ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ. ಅದರ ಹೊರತಾಗಿ ರಾಜ್ಯದ ಹಿತಾಸಕ್ತಿಯ ಬಗ್ಗೆ ರಾಜಕಾರಣ ಮಾಡುವುದು ಸರಿಯಲ್ಲ ಎಂದು ಟೀಕಿಸಿದರು.

ಅರಣ್ಯ ಸಚಿವರು ಈ ಎರಡೂ ಸಂಸ್ಥೆಗಳ ಬಗ್ಗೆ ಸತ್ಯಕ್ಕೆ ದೂರವಾದ ವಿಷಯಗಳನ್ನು ದಿನನಿತ್ಯವೂ ಮಾಧ್ಯಮಗಳಿಗೆ ಹೇಳುತ್ತಾ ಜನರ ದಿಕ್ಕು

ತಪ್ಪಿಸುತ್ತಿದ್ದಾರೆ. ಮೊದಲು ಸಚಿವರು ದಾಖಲೆಗಳನ್ನು ಓದಿ ಅರಿತುಕೊಳ್ಳಬೇಕು. ಆ ನಂತರ ಅವರು ಮಾತನಾಡಿದರೆ ಚೆನ್ನಾಗಿರುತ್ತದೆ. ಅದರ ಹೊರತಾಗಿ ರಾಜ್ಯ ಅಭಿವೃದ್ಧಿ ವಿಷಯದಲ್ಲಿ ಕ್ಷುಲ್ಲಕ ರಾಜಕಾರಣ ಮಾಡಿದರೆ ಅವರನ್ನು ಸಚಿವರು ಎಂದು ಕರೆಯಲಾಗುತ್ತದೆಯೇ? ಎಂದು ಕಿಡಿಕಾರಿದರು.

ಸರಕಾರದ ತಪ್ಪಿಂದ ಕಾರ್ಮಿಕರು ಬೀದಿಗೆ: ರಾಜ್ಯ ಸರಕಾರದ ಹಠಮಾರಿತನದಿಂದ ಕುದುರೆಮುಖ ಸಂಸ್ಥೆಯ ಸುಮಾರು 300–400 ಕಾರ್ಮಿಕರು ಬೀದಿಯಲ್ಲಿ ನಿಂತಿದ್ದಾರೆ. ಒಂದು ಕಡೆ ಸ್ಥಳೀಯರಿಗೆ ಉದ್ಯೋಗ ಕಲ್ಪಿಸಬೇಕು ಎನ್ನುವ ರಾಜ್ಯ ಸರಕಾರ ಮತ್ತೊಂದೆಡೆ ಅಸಹಕಾರ ನೀಡುತ್ತಿದೆ. ಪ್ರತಿಯೊಂದಕ್ಕೂ ಕೇಂದ್ರ ಸರಕಾರವನ್ನು ನಿಂದಿಸಿದರೆ ಉಪಯೋಗವಿಲ್ಲ. ಸಮಸ್ಯೆ ಬಗ್ಗೆ ಸಿಎಂ ಸಭೆ ಕರೆಯಲಿ. ಏನು ಸಮಸ್ಯೆಯಿದೆಎಂದು ಚರ್ಚೆ ಮಾಡೋಣ. ಸಮಸ್ಯೆ ಇದ್ದರೆ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎಂದರು.

ಚಿಲ್ಲರೆ ರಾಜಕಾರಣ ಬಿಡಬೇಕು. ಟೊಯೊಟಾ ಸೇರಿದಂತೆ ಅನೇಕ ಕೈಗಾರಿಕೆಗಳು ರಾಜ್ಯ ಬಿಟ್ಟು ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಿವೆ. ಶಾಸಕ ರಾಜುಕಾಗೆ ಅಭಿವೃದ್ಧಿ ಅನುದಾನ ಬಗ್ಗೆ ಏನು ಹೇಳಿದ್ದಾರೆ. ಅರಣ್ಯ ಸಚಿವರ ಬಳಿ ಇರುವ ದಾಖಲೆಗಳನ್ನು ತೆಗೆದುಕೊಂಡು ಬರಲಿ. ನಾನು ಕುಳಿತುಕೊಳ್ಳುತ್ತೇನೆ. ಅವರೂ ಬರಲಿ, ಸಭೆಯಲ್ಲಿ ಎಲ್ಲಾ ಚರ್ಚೆಯಾಗಲಿ. ಸಭೆ ಯಾಕೆ ಕರೆಯಲಾಗುತ್ತಿಲ್ಲ. ಈಶ್ವರ್ ಖಂಡ್ರೆ ಬೋಗಸ್ ಹೇಳಿಕೆ ನೀಡುತ್ತಿದ್ದಾರೆ.

–ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ವಿಶಾಖಪಟ್ಟಣದ ರಾಷ್ಟ್ರೀಯ ಉಕ್ಕು ಕಾರ್ಖಾನೆ ಸಂಕಷ್ಟದಲ್ಲಿತ್ತು. ನಿರ್ವಹಣಾ ಬಂಡವಾಳವಿಲ್ಲದೆ ಸೊರಗಿತ್ತು. ಏಕಾಏಕಿ 4500 ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು. ಆದರೆ, ಕೇಂದ್ರ ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್ ಹಾಗೂ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಒತ್ತಾಸೆಯ ಮೇರೆಗೆ ಕೇವಲ 48 ಗಂಟೆಯೊಳಗೆ ಅಷ್ಟೂ ಕಾರ್ಮಿಕರನ್ನು ಮರು ನೇಮಕ ಮಾಡಿಕೊಳ್ಳಲಾಯಿತು. ನೆರೆ ರಾಜ್ಯದಲ್ಲಿ ನಮಗೆ ಇಂತಹ ಉತ್ತಮ ಸಹಕಾರ ಸಿಗುತ್ತಿದೆ. ಆದರೆ, ನಮ್ಮದೇ ರಾಜ್ಯ ಕರ್ನಾಟಕದಲ್ಲಿ ಸಹಕಾರ ಸಿಗುತ್ತಿಲ್ಲ. ಒಬ್ಬ ಕೇಂದ್ರ ಮಂತ್ರಿಯನ್ನು ನಡೆಸಿಕೊಳ್ಳುವ ರೀತಿಯೇ ಇದು ಎಂದು ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದ ಅಭಿವೃದ್ಧಿ ಬಗ್ಗೆ ಚರ್ಚೆಸಿಲ್ಲ

ಹಾದಿಬೀದಿಯಲ್ಲಿ ಹೇಳಿಕೆ ನೀಡುತ್ತಾ ಹೋದರೆ ರಾಜ್ಯದ ಅಭಿವೃದ್ಧಿ ಆಗುತ್ತದೆಯೇ? ರಾಜ್ಯ ಸರಕಾರ ಚಿಲ್ಲರೆ ರಾಜಕಾರಣ ಮಾಡುವುದನ್ನು ಬಿಡಬೇಕು. ಇಲ್ಲಿ ರಾಜಕಾರಣ ಮುಖ್ಯವಲ್ಲ. ಅದೇನಿದ್ದರೂ ಚುನಾವಣೆಗೆ ಸೀಮಿತ. ಅಭಿವೃದ್ಧಿ ವಿಷಯದಲ್ಲಿ ರಾಜಕಾರಣ ಏಕೆ ಬೇಕು? ಇಲ್ಲಿಯವರೆಗೂ ಒಬ್ಬರೂ ನನ್ನ ಬಳಿ ಬಂದು ರಾಜ್ಯದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಿಲ್ಲ. ಎಂ.ಬಿ.ಪಾಟೀಲ್ ಒಬ್ಬರು ದೆಹಲಿಯ ನನ್ನ ಸಚಿವಾಲಯಕ್ಕೆ ಬಂದು ಕೈಗಾರಿಕೆ ಅಭಿವೃದ್ಧಿಯ ಬಗ್ಗೆ ಚರ್ಚೆ ನಡೆಸಿದ್ದು ಬಿಟ್ಟರೆ ಯಾರೊಬ್ಬರೂ ನನ್ನೊಂದಿಗೆ ರಾಜ್ಯದ ಬಗ್ಗೆ ಚರ್ಚೆ ಮಾಡಿಲ್ಲ. ಕುಮಾರಸ್ವಾಮಿ ಅವರು ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಲಿ ಎಂದು ಬೀದಿಯಲ್ಲಿ ಜಾಗಟೆ ಹೊಡೆಯುತ್ತಿದ್ದಾರೆ. ಹೀಗೆ ಮಾಡಿದರೆ ಮೇಕೆದಾಟುಗೆ ಅನುಮತಿ ದೊರೆಯುತ್ತದೆಯೇ? ಎಂದು ಖಾರವಾಗಿ ಪ್ರಶ್ನಿಸಿದರು.

ಭಾರತದ ವಾಸ್ತವ ಚಿತ್ರಣ ಕಟ್ಟಿಕೊಟ್ಟವರು ತಳಸಮುದಾಯದಿಂದ ಬಂದವರೇ: ಬಂಜಗೆರೆ ಜಯಪ್ರಕಾಶ್

ಜಯಂತಿಗಳ ಮೂಲಕ ಕೊಡುಗೆ ಸ್ಮರಿಸಬೇಕು; ಬಂಜಗೆರೆ

ಬೆಂಗಳೂರು: ತಳಸಮುದಾಯದಿಂದ ಬಂದವರೆ ಭಾರತದ ವಾಸ್ತವ ಚಿತ್ರಣ ಕಟ್ಟಿಕೊಟ್ಟವರು. ವಾಲ್ಮೀಕಿ, ವ್ಯಾಸ, ಕಾಳಿದಾಸರೆಲ್ಲರೂ ತಳಸಮು ದಾಯದಿಂದ ಬಂದವರು. ತಮ್ಮ ಲೋಕಾನುಭವ ಮತ್ತು ತತ್ವದರ್ಶನದಿಂದ ಭಾರತದ ವಾಸ್ತವ ದರ್ಶನ ಪರಿಚಯಿಸಿದರು ಎಂದು ಪ್ರಗತಿಪರ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರು ವಿವಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕದ ವತಿಯಿಂದ ಆಯೋಜಿಸಿದ್ದ ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ತಳಸ ಮುದಾಯದಿಂದ ಮೂಡಿಬಂದ ಮಹಾಚೇತ ನಗಳ ಜನ್ಮದಿನಾಚರಣೆ ಆಚರಿಸ ಬೇಕಾಗಿದೆ. ಮಹಾವ್ಯಕ್ತಿಗಳ ಜಯಂತಿಗಳು ಜಾತಿ, ಧರ್ಮ, ಭಾಷೆ, ಗಡಿಗಳನ್ನು ಮೀರಿ ಬೆಳೆದಿದೆ. ಈ ಜಯಂತಿಗಳ ಮೂಲಕ ಭಾರತದ ಬೇರೆ ಬೇರೆ ಸಮುದಾಯಗಳ ಬೌದ್ಧಿಕ, ಸಾಂಸ್ಕೃತಿಕ, ಸಾಹಿತ್ಯಕ ಕೊಡುಗೆ ಏನಿದೆ ಎಂಬುದನ್ನು ಮತ್ತೊಮ್ಮೆ ನೆನೆಯುವ ಕಾರ್ಯ ವಾಗುತ್ತದೆ. ಯಾವುದೇ ದೇಶದ ಚರಿತ್ರೆ ಏಕಮಯವಾದುದಲ್ಲ, ಅದರಲ್ಲೂ ವೈವಿಧ್ಯ ಮಯ ದೇಶವಾಗಿರುವ ಭಾರತ ರೂಪುಗೊಳ್ಳಲು ಬಹುಸಂಖ್ಯಾತರ ಕೊಡುಗೆ ಸ್ಮರಿಸಬೇಕು. ಬಹುತ್ವದ ಸಾಂಸ್ಕೃತಿಕ ಕೊಡುಗೆ ಅರಿತರೆ ಸಮಾನ ಮನೋಭಾವ ಸೃಷ್ಟಿಯಾಗುತ್ತದೆ ಎಂದರು.

ಕುಲಪತಿ ಡಾ.ಜಯಕರ ಎಸ್.ಎಂ ಮಾತನಾಡಿ ರಾಮಾಯಣ, ಮಹಾಭಾರತಗಳು ಹಿಂದೆ ಶಿಕ್ಷಣದ ಭಾಗವಾಗಿದ್ದವು. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ರಾಮಾಯಣ, ಮಹಾಭಾರತಗಳ ಪರಿಚಯ ವಿದ್ಯಾರ್ಥಿಗಳಿಗಿಲ್ಲ. ವಿಶ್ವವಿದ್ಯಾಲಯ ದಲ್ಲಿ ಮಹಾಪುರುಷರ ಜಯಂತಿ ಆಚರಿಸುವ ಮೂಲಕ ಅವರ ಕಾರ್ಯ ಸಾಧನೆ ನೆನೆಯುವ ಕೆಲಸವಾಗುತ್ತಿದೆ. ವಿಶ್ವವಿದ್ಯಾಲಯದಲ್ಲಿ ವಾಲ್ಮೀಕಿ ಅಧ್ಯಯನ ಕೇಂದ್ರ ಸ್ಥಾಪಿಸುವ ಬಗ್ಗೆ ಚಿಂತಿಸಲಾಗುವುದು. ಈ ಮೂಲಕ ವಾಲ್ಮೀಕಿಯವರ ತತ್ವ, ಆದರ್ಶಗಳು ವಿದ್ಯಾರ್ಥಿಗಳಿಗೆ ತಲುಪಬೇಕು. ಆ ಕುರಿತು ಮತ್ತಷ್ಟು ಸಂಶೋಧನೆ ನಡೆಯಬೇಕು ಎಂದರು.

ವಿಶ್ವವಾಣಿ ಆರಾಮ
@vishwavaninews
ಬೆಂಗಳೂರು ಶುಕ್ರವಾರ 18 | 10 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಕೆಲಸದಲ್ಲಿ ಇರಲಿ ಕಾಳಜಿ

ಇಂದು ಯಾಂತ್ರಿಕತೆ ಹೆಚ್ಚು. ಶಿಸ್ತು, ಬದ್ಧತೆಯ ನೆಪದಲ್ಲಿ ನಮಗೆ ವಹಿಸಿದ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿಬಿಟ್ಟರೆ ನನ್ನ ಪಾಲಿನ ಜವಾಬ್ದಾರಿ ಮುಗಿಯಿತು ಎಂದು ಭಾವಿಸುತ್ತೇವೆ. ಇದು ನಿಜವಾದರೂ, ಆ ಕ್ಷಣಕ್ಕೆ ಒಂದಷ್ಟು ಸಂತಸವನ್ನು ತಂದಿಟ್ಟರೂ ಅದು ಬಹುಬೇಗ ಮರೆಯಾಗಿ ಬಿಡುತ್ತದೆ. ಇದರಾಚೆಗೂ ಕೆಲವರಲ್ಲಿ ತಮ್ಮ ಕೆಲಸದಲ್ಲಿನ ಬದ್ಧತೆ, ಪ್ರಾಮಾಣಿಕತೆ, ಶಿಸ್ತಿನ ಜೊತೆಗೆ ಒಂಚೂರು ಕಾಳಜಿಯನ್ನು ವ್ಯಕ್ತಪಡಿಸುವ ಗುಣ ಗಮನಿಸುತ್ತಲಿರುತ್ತೇವೆ. ಇಂತಹ ಗುಣ ಹೊಂದಿರುವ ವ್ಯಕ್ತಿಗಳು ಎಲ್ಲರಿಗೂ ತುಂಬ ಬಹುಬೇಗ ಆಪ್ತವಾಗಿಬಿಡುತ್ತಾರೆ.

ಅಪರಿಚಿತ ಊರಿನಲ್ಲಿಯ ಆಟೋಡ್ರೈವರ್ ನಾವು ಕೇಳಿದ ಸ್ಥಳಕ್ಕೆ ಇಳಿಸಿ ನಾವು ಕೊಟ್ಟ ಹಣ ಪಡೆದು ತನ್ನ ಪಾಡಿಗೆ ತಾನು ಹೋಗುವುದರ ಬದಲಾಗಿ, ನಮ್ಮ ಮುಖದ ಭಾವ ಗಮನಿಸಿ 'ಎಡಕ್ಕೆ ತಿರುಗಿ ಒಂದಷ್ಟು ದೂರ ಚಲಿಸಿ, ನಂತರ ಬಲಕ್ಕೆ ತಿರುಗಿ ಹತ್ತು ಹೆಜ್ಜೆ ಹಾಕಿದರೆ ನೀವು ತಲುಪಬೇಕಾದ ಸ್ಥಳ ಸಿಗುತ್ತದೆ' ಎಂದು ಆಪ್ತವಾಗಿ ಹೇಳಿದರೆ ನಿಜಕ್ಕೂ ಅವನ ಕುರಿತು ಕೃತಜ್ಞತಾ ಭಾವ ಮೂಡುತ್ತದೆ ಅಲ್ಲವೆ? ಕಾರಿನ ಟಯರ್‌ಗೆ ಗಾಳಿ ತುಂಬುವ ಹುಡುಗ ನಾವು ಹೇಳಿದಷ್ಟೆ ಗಾಳಿ ತುಂಬಿ ಸುಮ್ಮನಾಗುವ ಬದಲು 'ಸರ್, ನೀವು ಹೇಳಿದಷ್ಟು ಗಾಳಿ ತುಂಬಿದರೆ ನಿಮಗೆ ತೊಂದರೆಯಾಗಬಹುದು. ಇಷ್ಟು ಗಾಳಿ ಇದ್ದರೆ ಚೆನ್ನ' ಎಂದು ಅನುಭವದ ಆಧಾರದಲ್ಲಿ ಹೇಳಿದರೆ ಅವನನ್ನು ನೆನಪಿನಲ್ಲಿಡದೇ ಇರಲು ಸಾಧ್ಯವೇ? ಇಂತಹ ಅನುಭವಗಳು ನಮಗೆ ನಿತ್ಯವೂ ಆಗುತ್ತಿದ್ದರೂ ನಾವು ಮಾತ್ರ ನಮ್ಮ ಕೆಲಸದಲ್ಲಿ ರಾಜಗಾಂಭಿರ್ಯ ತೋರುತ್ತಲೇ ಇರುತ್ತೇವೆ. ಅನಗತ್ಯವಾದ ನಮ್ಮ ಬಿಗುಮಾನದಿಂದ ಒಂಚೂರು ಹೊರಬಂದು ನಮ್ಮ ಕೆಲಸದಲ್ಲಿ ಶಿಸ್ತು, ಬದ್ಧತೆ, ಪ್ರಾಮಾಣಿಕತೆಯ ಜೊತೆಗೆ ಕೆಲಸಕ್ಕೆ ಒಂದಷ್ಟು ಕಾಳಜಿಯನ್ನು ಲೇಪಿಸುವುದನ್ನು ನಮ್ಮ ಆದ್ಯತೆಯಾಗಿಸಿಕೊಳ್ಳಬೇಕು.

ಇಂತಹ ನಮ್ಮ ಸಣ್ಣ ಸಣ್ಣ ಕೆಲಸಗಳಿಂದ ನಮ್ಮ ಸುತ್ತಲಿನ ಪ್ರಪಂಚವನ್ನು ಖಂಡಿತವಾಗಿಯೂ ಸುಂದರಗೊಳಿಸಬಹುದು. ಇಂತಹ ನಮ್ಮದೊಂದು ವಿನಯದ ವರ್ತನೆ, ಇತರರ ಕುರಿತಾಗಿ ಕಾಳಜಿ ಇದ್ದಲ್ಲಿ ಇತರರ ದೃಷ್ಟಿಯಲ್ಲಿ ನಮ್ಮನ್ನು ಖಂಡಿತವಾಗಿಯೂ ಎತ್ತರಕ್ಕೇರಿಸುತ್ತದೆ;ಬದುಕಿಗೆ ಘನತೆಯನ್ನು ತಂದುಕೊಡುತ್ತವೆ.

• ಮಹಾದೇವ ಬಸರಕೋಡ

ತೋಟದಲ್ಲೂ ಪೂಜೆ

ಆಶ್ವಿಜ ಮಾಸದ ಶುಕ್ಲಪಕ್ಷದ ಹುಣ್ಣಿಮೆಯಂದು ಆಚರಿಸುವ ಭೂಮಿ ಹುಣ್ಣಿಮೆ, ಮಲೆನಾಡಿನ ವಿಶಿಷ್ಟ ಹಬ್ಬ. ಪ್ರಕೃತಿಯ ಪೂಜೆಯ ಸುಂದರ ಆಚರಣೆ ಈ ಹಬ್ಬ. ಭತ್ತದ ಗದ್ದೆ ಮತ್ತು ಅಡಿಕೆ ತೋಟಗಳಲ್ಲಿ ಈ ಹಬ್ಬದ ಸಂಭ್ರಮ. ಅಂದಿನ ದಿನ ಅನ್ನವನ್ನು, ಶಾಕಲ ಸೊಪ್ಪಿನ ಜೊತೆ ಸೇರಿಸಿ ಅದನ್ನು ಗದ್ದೆ ಮತ್ತು ತೋಟದಲ್ಲಿ ಬೀರಲಾಗುತ್ತದೆ. ಭೂಮಿ ಪೂಜೆಯ ಕಲ್ಪನೆ ಒಂದೆಡೆಯಾದರೆ, ಪಕ್ಷಿಗಳಿಗೂ,ಕ್ರಿಮಿ ಕೀಟಗಳಿಗೆ ಆಹಾರ ನೀಡುವ ಮಾನವೀಯ ನಡೆ ಈ ಹಬ್ಬಕ್ಕೆ

ಮೆರುಗು ನೀಡುತ್ತದೆ. ಬಣ್ಣ ಹಚ್ಚಿದ ಮೊರ ಮತ್ತು ಬುಟ್ಟಿಗಳಲ್ಲಿ ಅನ್ನವನ್ನು ಮಹಿಳೆಯರು ಹಾಡು ಹೇಳುತ್ತ ಕೊಂಡೊಯ್ಯುತ್ತಾರೆ. ಈ ಎಡೆಯನ್ನು ನಂತರ ನೈವೇದ್ಯ ಮಾಡುತ್ತಾರೆ. ಅನ್ನದ ಜೊತೆ ಕೋಸಂಬರಿ, ಎರೆಯಪ್ಪ ಈ ಹಬ್ಬದಲ್ಲಿ ಕಡ್ಡಾಯವಾಗಿ ತಯಾರಿಸಲೇ ಬೇಕಾದ ಬಗೆಗಳು. ಭೂಮಿ ಹುಣ್ಣಿಮೆಯ ದಿನಕ್ಕಾಗಿಯೇ ವಿಶೇಷ ಹಾಡುಗಳನ್ನು ಮಹಿಳೆಯರು ಹಾಡುತ್ತಾರೆ.

ಸಿದ್ಧಿವಿನಾಯಕ ಸಿದ್ಧಿಯನು ಮಾಡಯ್ಯ
ಸಿಬ್ಬಾಲುಂಡಲಿಗೆ ನಿಮಗೀವೆ
ನಿಮಗೀವೆ ಗಣಪತಿ
ಶೀಘ್ರದಲಿ ಮತಿಯ ಕರುಣಿಸು
ಗಂಧ ಅಕ್ಷತೆ ತನ್ನಿ
ಚಂಬಿಲ ಉದಕವ ತನ್ನಿ
ತೆಂಗಿನಕಾಯ ತೆಗತನ್ನಿ
ನಮ್ಮನೆಯ ಭೂಮಿಯ ಪೂಜೆ
ಕಳಿಸಲು'

ತೋಟದಲ್ಲಿ ಅಡಿಕೆ ಮರದ ಹತ್ತಿರ ಒಂದು ಮಂಟಪ ಮಾಡಿ ಪೂಜೆ ಸಲ್ಲಿಸುತ್ತಾರೆ. ಪೂಜೆ ನಂತರ ಅನ್ನವನ್ನು ಬೀರುವ ಕಾಯಕ. ತೋಟ ಅಥವಾ ಗದ್ದೆಯಲ್ಲಿ ಊಟ ಮಾಡುವ ಸಂಪ್ರದಾಯವೂ ಇದೆ. ಇಡೀ ದಿನ ಒಂದು ಪ್ರವಾಸದಂತೆ ಭಾಸವಾಗುತ್ತದೆ. ಗದ್ದೆ ಮತ್ತು ತೋಟಗಳ ಸಹವಾಸ ಮನಸ್ಸಿಗೆ ಮುದ ನೀಡುತ್ತದೆ. ಕೃಷಿ ಕಡಿಮೆಯಾಗುತ್ತಿರುವ ಇಂದಿನ ದಿನಗಳಲ್ಲಿ ಇಂತಹ ಆಚರಣೆಗಳೂ ಕಡಿಮೆಯಾಗುತ್ತಿವೆ.

• ವಿದ್ಯಾ ಶಂಕರ ಶರ್ಮ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ನಮಿಪೆ ನಿನಗೆ ಭೂಮಿ ತಾಯಿ

ನಮಗೆ ಆಹಾರ ನೀಡುವ ಭೂಮಿತಾಯಿಯನ್ನು ಸ್ಮರಿಸಿ, ಪೂಜಿಸಿ, ಗೌರವಿಸುವ ದಿನವೇ ಶೀಗೆ ಹುಣ್ಣಿಮೆ ಅಥವಾ ಭೂಮಿ ಹುಣ್ಣಿಮೆ.

• ಲೀಲಾವತಿ ವಿಜಯಕುಮಾರ

ಶರದೃತುವಿನ ಆಶ್ವಯುಜ ಮಾಸದ ವಿಜಯದಶಮಿಯ ನಂತರ, 5 ದಿನಕ್ಕೆ ಬರುವ ಶೀಗೆ ಹುಣ್ಣಿಮೆಯು ಬು ವಿಶೇಷ. ಇದು ಶೀಗೆ ಗೌರಿ, ಶೀಗವ್ವ, ಸಣ್ಣಗೌರಿ ಎಂದೇ ಜನಜನಿತ. ಭೂಮಿ ಹುಣ್ಣಿಮೆ, ಕೋಜಾಗರ ಹುಣ್ಣಿಮೆ ಎಂದು ಸಹ ಕರೆವ ಈ ಶೀಗೆಹುಣ್ಣಿಮೆ ಪಾಂಡವರ ಪೂಜೆ, ಭೂಮಿ ಪೂಜೆಗೆ, ಬೆಳೆದು ನಿಂತ ಬೆಳೆಗಳಿಗೆ ಮಾಡುವ ಸೀಮಂತವೇ. ಭೂಮಿ ಹುಣ್ಣಿಮೆ ಅಥವಾ ಶೀಗೆ ಹುಣ್ಣಿಮೆಯನ್ನು ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ, ಮಲೆನಾಡಿನ ಸಾಗರ, ಸೊರಬ, ಹೊಸನಗರ ಭಾಗದಲ್ಲಿ ಆಚರಿಸುವರು. ನಮಗೆ ಆಹಾರ ನೀಡಿ ಸಲಹುವ ಭೂಮಿಗೆ ಸಲ್ಲಿಸುವ ಗೌರವ ನೀಡುವ ದಿನವಿದು.

ಮೊದಲು ಐದು ದಿನ, ಚಿಕ್ಕ ಹುಡುಗಿಯರಿಂದ ಆರತಿ ಬೆಳಗುವ ಶೀಗೆಹುಣ್ಣಿಮೆ ಎಂದರೆ, ಬಾಲ್ಯವ ನೆನಪಿಸುವ ನೆನಪಿನ ಮೆರವಣಿಗೆ. ದಸರಾ ಮುಗಿದ ಮರುದಿನ, ದೈವದ ವತಿಯಿಂದ ಊರಿನ ದೇವಸ್ಥಾನದಲ್ಲಿ ಚಿಕ್ಕ ಚಿಕ್ಕ ಮಣ್ಣಿನ ಪ್ರತಿಮೆಗಳನ್ನು ಗೌರಿರೂಪದಲ್ಲಿ ಪ್ರತಿಷ್ಠಾಪಿಸುವರು. ಹುಣ್ಣಿಮೆ ಬರುವವರೆಗೂ, ಚಿಕ್ಕ ಹೆಣ್ಣು ಮಕ್ಕಳೆಲ್ಲಾ ಗುಂಪಾಗಿ ದಿನಾಲೂ ತಟ್ಟೆಯಲ್ಲಿ ಮನೆಯ ಹತ್ತಿರ ಅರಳುವ ಹೊನ್ನರಿಕೆ, ಕನಕಾಂಬರಿ, ಪತ್ರೆ, ಶಂಖಪೂ, ದಾಸವಾಳ ಹೂಗಳು, ಅರಿಷಿಣ - ಕುಂಕುಮ, ಊದುಬತ್ತಿಯ ಜೊತೆಗೆ, ದಿನಕ್ಕೆ ಒಂದರಂತೆ ತರಕಾರಿ ಆರತಿ ಮಾಡಿ ಅಂದರೆ ಬಾಳೆಕಾಯಿ, ಸೌತೆಕಾಯಿ, ಜವಳಿಕಾಯಿ, ಹಿಟ್ಟಿನ ಆರತಿ ಹೀಗೆ ತರಕಾರಿ ಕತ್ತರಿಸಿ ಅದರ ಮೇಲೆ ತುಪ್ಪದ ದೀಪ ಹಚ್ಚಿ, ಗೌರಮ್ಮನ ಕೂರಿಸುತ್ತಾರೆ. ನಂತರ ದೇವಸ್ಥಾನದವರೆಗೂ, ಗೌರಿ ಹಾಡುಗಳನ್ನಾ ಹಾಡುತ್ತಾ ಹೋಗುವುದುಂಟು.

ಹುಣ್ಣಿಮೆವರೆಗೂ ನಡೆಯುವ ಈ ಮಕ್ಕಳ ಸಣ್ಣಗೌರಿಗೆ ನಂತರ, ಶೀಗೆ ಹುಣ್ಣಿಮೆಯ ದಿನ ಸಕ್ಕರೆ ಅಚ್ಚುಗಳಿಂದ ಆರತಿ ಬೆಳಗುವ ಸಂಭ್ರಮ. ಆ ದಿನ ಹೋಳಿಗೆ, ಸಜ್ಜೆ ಕಡುಬು, ಬುತ್ತಿ, ಕೋಸಂಬರಿ, ಪಲ್ಯ, ಅನ್ನ, ಹೋಳಿಗೆ ಸಾರು, ಕರಿಗಡುಬು ಹೀಗೆ ಹಲವು ಖಾದ್ಯಗಳು ಭೂಮಿ ಪೂಜೆಗೆ ಅಣಿಗೊಳ್ಳುತ್ತವೆ. ಅದನ್ನೆಲ್ಲಾ ಒಂದು ಬುಟ್ಟಿಯಲ್ಲಿ ತೋಟಗಳಿಗೆ ತೆಗೆದುಕೊಂಡು ಹೋಗಿ, ಐದು ಕಲ್ಲುಗಳಿಗೆ ಸುಣ್ಣ ಬಳಿದು ಪಾಂಡವರನ್ನು ಮಾಡಿ ಪೂಜಿಸುವ ಪದ್ಧತಿ. ಜೊತೆಗೆ ಆ ಹೊಲದಲ್ಲಿ ಬೆಳೆ ಏನಿದೆಯೋ ಅದನ್ನೇ ಮಂಟಪವನ್ನಾಗಿ ಮಾಡಿ, ಬಾಳೆ-ಕಬ್ಬು ಇಟ್ಟು ಹೂ, ಸೀರೆ ಉಡಿಸಿ ಭೂಮ್ತಾಯಿಗೆ, ಬೆಳೆಗೆ, ಅಲ್ಲಿರುವ ಬೋರುಗಳಿಗೆ ಪೂಜೆ ಸಲ್ಲಿಸುವ ಸದಾಚಾರ.

ಚರಗದ ತಿನಿಸು ನಂತರ ಎಲ್ಲಾ ಅಡುಗೆ ಸೇರಿಸಿ ಚರಗ ಚೆಲ್ಲುವುದು ವಾಡಿಕೆ. ಭೂಮಿಗೆ ಮಾಡಿದ ನೈವೇದ್ಯವನ್ನು ಮಣ್ಣಿನಲ್ಲಿ ಮಣಿಸುವರು. ನಂತರ ಬೆಳೆ ತೆಗೆಯುವಾಗ ಸಿಕ್ಕರೆ ತುಂಬಾ ಒಳ್ಳೆಯದೆಂಬ ನಂಬಿಕೆ ಇದೆ. ಸಾಯಂಕಾಲ ನಂದಿ ವಾಹನದಲ್ಲಿ ತನ್ನ ಪತಿಯೊಂದಿಗಿರುವ ಗೌರಮ್ಮನಿಗೆ, ಗೋಪುರ ಮಾದರಿ, ಹಂಸ, ಪಕ್ಷಿ, ಬಾತುಕೋಳಿ, ಈಶ್ವರಲಿಂಗ, ಬಗೆ ಬಗೆ ಹೂಗಳ ಆಕಾರದಲ್ಲಿ ಸಕ್ಕರೆ ಅಚ್ಚುಗಳೊಂದಿಗೆ, ಆರತಿ ಬೆಳಗುವ ಸಂಭ್ರಮ.

ಕುಂಕುಮ ಗೌರಿ ಅರಿಷಿಣ ಗೌರಿ
ಹೋಗಿ ಬಾ ಗೌರವ್ವಾ ಸಾಗಿ ಬಾ ಗೌರವ್ವಾ

ಈ ರೀತಿ ಹಾಡು ಹೇಳುತ್ತಾ ಸಕ್ಕರೆ ಅಚ್ಚು, ತುಪ್ಪದ ಆರತಿ ಬೆಳಗಿ ಮನೆಯ ಹೊಸ್ತಿಲು, ರಂಗೋಲಿ, ಒಳಕಲ್ಲು, ಬೀಸೋಕಲ್ಲಿಗೆ ಗೌರಿ ಬೆಳಗಿ, ಅಣ್ಣ- ತಮ್ಮಂದಿರಿಗೆ, ಪತಿಗೆ ಆರತಿ ಬೆಳಗಿ, ದಕ್ಷಿಣೆ ಪಡೆವ ಖುಷಿ. ಕೆಲವೆಡೆ, ಚಂದದ ಹಸೆ ಬರೆದು ತಯಾರಾಗುವ ಎರಡು 'ಭೂಮುಣ್ಣಿಮೆ ಬುಟ್ಟಿ'ಯಲ್ಲಿ ಎಲ್ಲಾ ಅಡುಗೆ, ಪೂಜೆ ಸಾಮಾಗ್ರಿಗಳನ್ನು ತೆಗೆದುಕೊಂಡು, ಭೂಮ್ತಾಯಿಗೆ ಪೂಜೆ ಸಲ್ಲಿಸಿ, ಚರಗ ಚೆಲ್ಲುವ ಸಂಪ್ರದಾಯವಿದೆ.

ಚಂದ್ರನಿಗೂ ಪೂಜೆ

ನಮ್ಮೂರಿನಲ್ಲಿ ಬಹು ವರ್ಷಗಳಿಂದ ವಾಸ್ತವ್ಯ ಇರುವ ಆಂಧ್ರಪ್ರದೇಶದ ಜನರು, ಶರದ್ ಪೂರ್ಣಿಮಾ ಎಂದು ಕರೆಯಲ್ಪಟ್ಟ ಈ ಹುಣ್ಣಿಮೆ ದಿನ, ಹೆಣ್ಣುಮಕ್ಕಳು ಉಪವಾಸವಿದ್ದು, ಸಾಮೂಹಿಕವಾಗಿ ತುಳಸಿಕಟ್ಟೆಗೆ ಪೂಜೆ ಸಲ್ಲಿಸಿ, ಪತಿಯಿಂದ ಆಶೀರ್ವಾದ ಪಡೆದು, ಚಂದ್ರನಿಗೆ ಸಾಮೂಹಿಕವಾಗಿ ಪೂಜೆ ಸಲ್ಲಿಸಿ ಅರ್ಘ್ಯ ನೀಡುವರು. ಇಡೀ ರಾತ್ರಿ ಬೆಳದಿಂಗಳಲ್ಲಿ ಹಾಲು ಸಕ್ಕರೆಯನ್ನಿಟ್ಟು ಮರುದಿನ ಸೇವಿಸುವುದು ವಾಡಿಕೆ.

ಗೌರಿ ಮತ್ತು ಶೀಗೆ ಹುಣ್ಣಿಮೆಗಳಲ್ಲಿ ಹೆಣ್ಣುಮಕ್ಕಳೆಲ್ಲಾ ಗೌರಿ ಮಕ್ಕಳು. ಸ್ನಾನದ ನಂತರ ಮಕ್ಕಳು ಕಸಬರಿಗೆ, ಪಾತ್ರೆ ಪಗಡೆ ಮುಟ್ಟುವಂತಿಲ್ಲ ಎನ್ನುವ ನಂಬಿಕೆ. ಕಾರ್ತಿಕ ಮಾಸದ ದೊಡ್ಡ ಗೌರಿ ಹುಣ್ಣಿಮೆಯು ಕಿರು ದೀಪಾವಳಿ ಎಂದೇ ಹೆಸರು. ಅಂದು ಹಲವು ಮನೆಗಳಲ್ಲಿ ಆಕಳ ಸಗಣಿಯಿಂದ ಮಾಡುವ ಹಟ್ಟೆಮ್ಮ, ಕೊಂತೆಮ್ಮ ಹಾಕುವರು. ಇದಕ್ಕೆ ಉತ್ತರಾಣಿ ಕಡ್ಡಿ, ಮಂಡಾಳು ಕಡ್ಡಿ, ಖಾಚಿಕಡ್ಡಿ, ಗರಿಕೆ, ಹೊನ್ನರಿಕೆ ಹೂ, ಲೆಕ್ಕಿ ಪತ್ರೆ, ಕೊಲಾಣಿ ಹೂ, ಜೋಳದ ಕಡ್ಡಿ ಇಟ್ಟು, ನೂಲು ಹಾಕಿ ಹಾಲು ತುಪ್ಪ ಹಾಕಿ, ಪೂಜೆ ಮಾಡಿ ಮನೆಯ ಬಾಗಿಲುಗಳು, ಒಲೆಗಳಿಗೆ, ರಂಗೋಲಿ, ಹೀಗೆ ಎಲ್ಲಾ ಕಡೆ ಕೊಂತೆಮ್ಮ ಇಡುವರು. ಮನೆ ತುಂಬಾ ಹೊನ್ನರಿಕೆ ಹೂ ಚೆಲ್ಲಿ, ಎಲ್ಲಾ ಕಡೆ ದೀಪ ಹಚ್ಚಿ ದೀಪ ಬೆಳಗಿವುದು ಇದೆ.

ಹೀಗೆ ಶೀಗೆ ಗೌರಿ ಮತ್ತು ಗೌರಿ ಹುಣ್ಣಿಮೆಯ ಪದ್ಧತಿಗಳು ಪ್ರಕೃತಿಗೆ ಸಂಬಂಧಿಸಿದ್ದೇ ಆಗಿವೆ. ಊರಿಂದ ಊರಿಗೆ ಪೂಜಾ ಪದ್ಧತಿಗಳು ಬೇರೆ ಇದ್ದರೂ, ಉದ್ದೇಶ ಮಾತ್ರ ಒಂದೇ; ಪ್ರಕೃತಿಯೊಂದಿಗಿನ ಮನುಜನ ಒಡನಾಟ, ಪ್ರಕೃತಿ ಆರಾಧನೆ. ಭೂತಾಯಿಗೆ ಸಲ್ಲಿಸುವ ಗೌರವ, ಕೃತಜ್ಞತೆ.

ಇಂದಿನ ಮಕ್ಕಳು ಅತಿಯಾಗಿ ಮೊಬೈಲ್ ನೋಡುತ್ತಾ, ತಮ್ಮ ಮಾನಸಿಕ ವಿಕಸನಕ್ಕೆ ತಡೆ ತಂದುಕೊಳ್ಳುತ್ತಿದ್ದಾರೆ ಎನ್ನುತ್ತಿವೆ ಕೆಲವು ಸಮೀಕ್ಷೆಗಳು.

ಅಪಾಯಕಾರಿ ಮೊಬೈಲ್ ಚಟ

• ಹೊಸ್ಮನೆ ಮುತ್ತು

ಇಂದು ಮಕ್ಕಳು, ಯುವ ಪೀಳಿಗೆಯ ಮೇಲೆ ತಂತ್ರಜ್ಞಾನದ ವ್ಯಾಪಕ ಪ್ರಭಾವ ಕಂಡು ಬರುತ್ತದೆ. ಸಾಮಾಜಿಕ ಮಾಧ್ಯಮದ ಬಳಕೆದಾರರಲ್ಲಿ ಇವರು ಮೊದಲಿಗರು. ಚಿಕ್ಕ ವಯಸ್ಸಿನಿಂದಲೇ ಡಿಜಿಟಲ್ ಪರಿಸರದಲ್ಲಿ ಬೆಳೆಯುತ್ತಿರುವ ಈ ಮಕ್ಕಳಲ್ಲಿ ದಿನಗಳೆದಂತೆ ಸ್ಮಾರ್ಟ್‌ಫೋನ್ ನೋಡುವುದು ಗೀಳಾಗಿ ಪರಿಣಮಿಸುತ್ತಿದೆ.

ಇಂದಿನ ದಿನಗಳಲ್ಲಿ ಬಹುತೇಕ ಎಲ್ಲರ ಜೀವನವೂ ಈ ಜಾಲತಾಣಗಳ ನಿಯಂತ್ರಣದಲ್ಲಿರುವಂತೆ ಅನ್ನಿಸುತ್ತಿದೆ. ಮೊಬೈಲ್‌ನಲ್ಲಿ ಬರುವ ವಿಡಿಯೋಗಳು ಮಕ್ಕಳ ಮೆದುಳಿನ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆ. ಪ್ರಸ್ತುತ ಸಂದರ್ಭದಲ್ಲಿ ಪೋಷಕರು ಮಕ್ಕಳಿಗೆ ತಿನ್ನಿಸುವಾಗ, ಆಟವಾಡಿಸುವಾಗ ಮೊಬೈಲ್ ಫೋನ್‌ನಲ್ಲಿ ಯಾವುದಾದರೂ ಚಿತ್ರ, ವಿಡಿಯೊ ತೋರಿಸುವುದು ಸಾಮಾನ್ಯವಾಗಿದೆ. ಇದು ಒಂದು ರೀತಿಯಲ್ಲಿ ಚಟವಾಗಿ ಮಾರ್ಪಾಡುತ್ತದೆ.

ಹದಿಹರಯದವರು ಪ್ರತಿದಿನ ಮೂರು ಗಂಟೆಗಿಂತ ಹೆಚ್ಚು ಬಳಸಿದರೆ ದುಪ್ಪಟ್ಟು ಆತಂಕ, ಖಿನ್ನತೆಗೆ ಒಳಗಾಗುತ್ತಾರೆ ಎಂದಿದ್ದಾರೆ ತಜ್ಞರು. ಶೇ.50ಕ್ಕೂ ಹೆಚ್ಚಿನ ಜನರು ತಡರಾತ್ರಿಯವರೆಗೂ ಮೊಬೈಲ್ ಬಳಕೆ ಮಾಡುತ್ತಿದ್ದು, ಇದರಿಂದ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿರುವುದು ಕೆಲವು ಸಮೀಕ್ಷೆಗಳಿಂದ ತಿಳಿದು ಬಂದಿದೆ. ಮಿತಿಮೀರಿದ ತಂತ್ರಜ್ಞಾನದ ಬಳಕೆಯ ಸಂಭವನೀಯ ಅಪಾಯಗಳ ಬಗ್ಗೆ ಇದು ಎಚ್ಚರಿಕೆಯ ಘಂಟೆಯಾಗಿದೆ.

ಆನ್‌ಲೈನ್ ಶಿಕ್ಷಣವು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದೆ. ಆದರೆ ಈ ನೆಪದಲ್ಲಿ ಹೆಚ್ಚಿನ ಮಕ್ಕಳ ಕೈಗೆ ಮೊಬೈಲ್ ಬಂತು; ತಾಂತ್ರಿಕ ಪಾರಮ್ಯದ ಇಂದಿನ ದಿನಗಳಲ್ಲಿ ಕಲಿಕೆ ಮತ್ತು ಸಂವಹನದ ಸಾಂಪ್ರದಾಯಿಕ ರೂಪಗಳು ಬದಲಾಗಿವೆ. ಅತಿಯಾದ ತಂತ್ರಜ್ಞಾನದ ಬಳಕೆಯ ಸಂಭವನೀಯ ಅಪಾಯಗಳು ಹಾಗೂ ಅತಿಯಾದ ಪರದೆಯ ಸಮಯದ ಋಣಾತ್ಮಕ ಪರಿಣಾಮಗಳಿಂದ ಮಕ್ಕಳು, ಯುವ ಪೀಳಿಗೆಯನ್ನು ರಕ್ಷಿಸುವುದರ ಜೊತೆಗೆ ಪುಸ್ತಕದ ಮೂಲಕ ಸಾಂಪ್ರದಾಯಿಕ ಜ್ಞಾನ ಮತ್ತು ಶಿಕ್ಷಣವನ್ನು ಮಸ್ತಕಕ್ಕೇರಿಸುವ ಪ್ರಯತ್ನ ಮಾಡಬೇಕು. ವಿಮರ್ಶಾತ್ಮಕ ಚಿಂತನೆ, ಬೌದ್ಧಿಕ ಬೆಳವಣಿಗೆ ಹಾಗೂ ತಂತ್ರಜ್ಞಾನ ಮತ್ತು ಮಾನವ ಸಂಪರ್ಕದ ನಡುವಿನ ಆರೋಗ್ಯಕರ ಸಮತೋಲನದ ಪ್ರಾಮುಖ್ಯತೆಯನ್ನು ಮಕ್ಕಳಿಗೆ ಮನಗಾಣಿಸಬೇಕಿದೆ.

ಮೊಬೈಲ್ ತತ್ರಾಂಶದ ಮೇಲೆ ಹೆಚ್ಚು ಅವಲಂಬಿತರಾದಾಗ ಮಕ್ಕಳ ಶಾರೀರಿಕ ಚಟುವಟಿಕೆ, ಶೈಕ್ಷಣಿಕ ಸಾಧನೆಗೆ ಅಡ್ಡಿಯಾಗುತ್ತದೆ. ಮಗುವಿನ ಮೊದಲ ಐದು ವರ್ಷಗಳು ಅತ್ಯಂತ ಪ್ರಮುಖವಾದುದು. ಆಗ ಪಂಚೇಂದ್ರಿಯಗಳಿಗೆ ಸರಿಯಾದ ಪ್ರಚೋದನೆ ಸಿಕ್ಕರೆ ಭವಿಷ್ಯದಲ್ಲಿ ಇಡೀ ದೇಹದ ಒಟ್ಟಾರೆ ಬೆಳವಣಿಗೆ ಸಾಧ್ಯವಾಗುತ್ತದಂತೆ. ಮಕ್ಕಳ ಮೊದಲ ಕಲಿಕೆ ಪೋಷಕರು ತಮ್ಮ ಮಕ್ಕಳೊಂದಿಗೆ ನಡೆಸುವ ಸಂವಹನವನ್ನು ಅವಲಂಬಿಸಿರುತ್ತದೆ.

ಪೋಷಕರು ಮಕ್ಕಳೊಂದಿಗೆ ಹೆಚ್ಚೆಚ್ಚು ಸಂವಹನ ಹಾಗೂ ಸಂವಾದ ನಡೆಸುತ್ತಿರಬೇಕು. ಮಾತು ಕಲಿಯುವ ಸಮಯದಲ್ಲಿ ಮಕ್ಕಳ ಮೊಬೈಲ್ ವೀಕ್ಷಿಸುವ ಸಮಯ ಹೆಚ್ಚಾದಲ್ಲಿ ಮಕ್ಕಳ ಕಲಿಕೆಗೆ ಹಿನ್ನಡೆಯಾಗುತ್ತದೆ. ಇಂದಿನ ದಿನಗಳಲ್ಲಿ ಮಕ್ಕಳ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಹೆಚ್ಚಿನ ಸಮಯ ಮೊಬೈಲ್‌ಗಳಲ್ಲಿ ಕಳೆಯದಿರುವಂತೆ ಪೋಷಕರು ಮುಂಜಾಗ್ರತೆ ವಹಿಸಬೇಕೆಂದು ತಜ್ಞರು ಸಲಹೆ ನೀಡಿದ್ದಾರೆ.

ಇಂದಿನ ಮಕ್ಕಳು ತಂತ್ರಜ್ಞಾನ, ಇಂಟರ್‌ನೆಟ್ ಮತ್ತು ಮೊಬೈಲ್‌ಗಳ ದಾಸರಾಗದಂತೆ ನೋಡಿಕೊಳ್ಳುವುದು ಹಿರಿಯರ ಕರ್ತವ್ಯ. ಮಕ್ಕಳು ಮೊಬೈಲ್ ನೋಡುವುದನ್ನು ಗೀಳನ್ನಾಗಿಸಿಕೊಳ್ಳಬಾರದು, ಅಲ್ಲವೆ!

ಎತ್ತರೆತ್ತರಕೆ ಬಾನ ಹತ್ತಿರಕೆ...

ಮೇಲೇರುತ್ತಾ ಸಾಗಿದಂತೆ ಬಾನು ಇನ್ನೇನು ಕೈಗೆ ಎಟಕಿದ ಅನುಭವ; ಓಹ್, ಇಲ್ಲವಲ್ಲ, ಎಲ್ಲಿ ಮರೆಯಾಯಿತು ಸುತ್ತಲಿನ ನಿಸರ್ಗ.. ಗಾಳಿಯ ಜತೆ ಸಾಗಿ ಬಂದ ಮೋಡದ ಆಟದಿಂದ ಎಲ್ಲವೂ ಅಂತರ್ಧಾನವೂ ಆದೀತು!

• ಕವಿತಾ ಭಟ್, ಕುಮಟಾ

ರಸ್ತೆಯ ಇಕ್ಕೆಲಗಳಲ್ಲಿ ಕಾಫಿ ಗಿಡಗಳ ಹಸಿರೇ ಹಸಿರು, ಆಕಾಶಕ್ಕೆ ಮೈತೋರಿ ನಿಂತಿರುವ ಎತ್ತರದ ಮರಗಳು. ಅರೆ ಕ್ಷಣ ರೆಪ್ಪೆ ಮುಚ್ಚಿದರೂ ಪ್ರಕೃತಿಯ ಯಾವ ಚಿತ್ರ ಕಣ್ತಪ್ಪಿ ಹೋಗುತ್ತಗೋ ಎಂಬ ದಿಗಿಲು. ಅಲ್ಲಲ್ಲಿ ಎದುರುಗೊಳ್ಳುವ ಕಡಿದಾದ ಕಂದಕಗಳತ್ತ ದೃಷ್ಟಿ ಹಾಯಿಸಿದರೆ ಸಾಕು ಆಳದಲ್ಲಿ ಬಾಯ್ತೆರೆದು ಕೂತ ಕಡುಗತ್ತಲ ಪ್ರಪಾತಗಳು ಬೆನ್ನಹುರಿಯಲ್ಲಿ ಚಳಿ ಮೂಡಿಸದೇ ಇರವು. ಹಸಿರಿನ ಮಧ್ಯೆ ನಿಡುಸುಯ್ದು ಮಲಗಿದ ಎಳೆ ನಾಗರದಂತಹ ರಸ್ತೆ. ಇನ್ನು ಬೇಕು ಎನ್ನಿಸೆನ್ನಿಸುವಾಗಲೇ ಹಾದಿ ಮುಗಿದೇ ಹೋಗುವ ಪಯಣಗಳು ತುಂಬಾ ಅಪರೂಪ. ಹಾಗೇ ನಲವತ್ತೈದು ನಿಮಿಷಗಳ ಆ ರುದ್ರರಮಣೀಯ ಹಸಿರ ಓಕುಳಿಯ ಪಯಣ ಮುಗಿಸಿ ಇಳಿದ ಕೂಡಲೇ ಮೊದಲು ಮೈಸೋಕಿದ್ದು ಕುಳಿರ್ಗಾಳಿ. ಕಾಣ್ಕೆಗೆ ಸಿಕ್ಕಿದ್ದು ಮುಗಿಲಲ್ಲಿ ತಲೆ ಮರೆಸಿಕೊಂಡು ನಿಂತಿರುವ ಮುಳ್ಳಯ್ಯನಗಿರಿ!

ಅದರ ಸೊಬಗು ಕಂಡು ತೆರೆದ ಬಾಯಿ ತೆರೆದಂತೇ ನಿಂತು ಬಿಟ್ಟಿದ್ದೆ. ಆ ಘಳಿಗೆಯಲ್ಲಿ ಸುಯ್ಯುವ ಚಳಿಗಾಳಿ ಮೈಕೊರೆಯಲಿಲ್ಲ. ಈಗ ಬಂದೇನು ಎನ್ನುವಂತೆ ಮುಸುಕಿದ ಮಳೆ ಮೋಡದ ಭಯ ಕಾಡಲಿಲ್ಲ. ಅಷ್ಟೇ ಯಾಕೆ, ಸೊಂಟದ ಮೇಲೆ ಅವಚಿಕೂತ ಮೂರು ವರ್ಷದ ಮಗ ಚಳಿಗೆ ಮತ್ತಷ್ಟು ಆತುಕೊಂಡಿದ್ದು ಗಮನಕ್ಕೆ ಬರಲಿಲ್ಲ. ಬದುಕಿನಲ್ಲಿ ಮೊಟ್ಟ ಮೊದಲ ಬಾರಿಗೆ ಏನೋ ಮಹತ್ತಾದದ್ದನ್ನು ನೋಡಿದ ಬೆರಗು ಅದು, ಮೈಮರೆವು ಅದು. ಇಂತಹ ಮೈಮರೆವಾದರೂ ಮೊದಲ ಬಾರಿ ಅನುಭವಕ್ಕೆ ದಕ್ಕಿದ್ದರಿಂದ ವರ್ಣಿಸಲೂ ಅಸಾಧ್ಯ. ಇದುವರೆಗೂ ಹಂಪಿಯ ಆಸುಪಾಸಿನ ಅದೆಷ್ಟು ಎತ್ತರದ ಬೆಟ್ಟಗಳನ್ನು ಏರಿದ್ದೇನೋ... ಅಲ್ಲಿನ ಕಲ್ಲು ಬೆಟ್ಟಗಳ ಗಂಭೀರತೆಗಿಂತ, ನೀರವತೆಗಿಂತ ಇಲ್ಲಿನ ನವಿರತೆ ಇನ್ನೊಂದೇ ತರದ್ದು. ಆಹ್ಲಾದಕರವಾದದ್ದು.

ದೃಶ್ಯ ಕಾವ್ಯದ ನೆನಪು

ನಾನು ಚಿಕ್ಕಮಗಳೂರು ತಲುಪಿದ್ದೇ ವರ್ಷ ವರ್ಷಗಳ ಕಾಲ ಕನಸಿನಂತೆ ಕಾಡಿದ ಬೇಲೂರು, ಹಳೇಬೀಡನ್ನು ನೋಡುವುದಕ್ಕೆ. ಹೋಗುವ ಎರಡ್ಮೂರು ದಿನಗಳವರೆಗೂ ಮುಳ್ಳಯ್ಯನಗಿರಿಯ ನೆನಪೂ ಕಾಡಿರಲಿಲ್ಲ. ಹೋಗುವುದೇ ಹೌದಾದ ಮೇಲೆ ಅದನ್ನೂ ನೋಡಿ ಬರುವ ಎನ್ನುವ ಇರಾದೆ ಇತ್ತಷ್ಟೇ. ಆದರೆ ನೋಡದೇ ಇದ್ದಿದ್ದರೆ ಮಾತ್ರ ಎಂಥಹ ಅದ್ಭುತ ದೃಶ್ಯ ಕಾವ್ಯ ಕೈತಪ್ಪಿ ಹೋಗುತ್ತಿತ್ತು

ಎನ್ನುವುದನ್ನು ನೆನೆದರೇ ಕಳವಳವಾಗುತ್ತದೆ.

ಮುಳ್ಳಯ್ಯನಗಿರಿ ಚಿಕ್ಕಮಗಳೂರು ಜಿಲ್ಲಾ ಕೇಂದ್ರದಿಂದ ಇಪ್ಪತ್ತೆಂಟು ಕಿಮೀ ದೂರದಲ್ಲಿದೆ. ಹೇಳುವುದಕ್ಕೆ ವಿಶೇಷವೇನಿದೆ, ಎಲ್ಲರಿಗೂ ಗೊತ್ತಿರುವಂತೇ ಮುಳ್ಳಯ್ಯನಗಿರಿ ಕರ್ನಾಟಕದ ಅತೀ ಎತ್ತರದ ಶಿಖರ. ಸಮುದ್ರ ಮಟ್ಟದಿಂದ ಸುಮಾರು 1923 ಮೀಟರ್ ಎತ್ತರಕ್ಕೆ ಅಲೆಅಲೆಯಾಗಿ ಹಾಸಿಕೊಂಡು ನಿಂತಿರುವ ಚಂದ್ರದ್ರೋಣ ಮಲೆ ಸಾಲುಗಳ ಪೈಕಿ ಅತ್ಯಂತ ಎತ್ತರದ್ದು. ನೆತ್ತಿಯ ಮೇಲೆ ಮುಳ್ಳಯ್ಯ ಸ್ವಾಮಿಯ ಪುಟ್ಟ ಮಂದಿರವಿದೆ. ಹತ್ತಿದವರು ದೇವರಿಗೆ ಕೈಮುಗಿಯದೇ ವಾಪಾಸಾಗುವುದಿಲ್ಲ ನಿಜ, ಆದರೆ ಹತ್ತುವುದೇ ಎತ್ತರವನ್ನು ಅನುಭವಿಸುವುದಕ್ಕೆ. ಶಿಖರದಿಂದ ಕೆಳಗಿನ ಗೌಣವನ್ನು ನಿರುಕಿಸುವುದಕ್ಕೆ.

ಹತ್ತುವುದಾದರೂ ಇಡೀ ಬೆಟ್ಟವನ್ನೇ ಕಾಲ್ನಡಿಗೆಯಲ್ಲಿ ಏರಬೇಕು ಎನ್ನುವ ಪ್ರಯಾಸವೇನಿಲ್ಲ. ಬೆಟ್ಟದ ಕಟಿಯನ್ನೇ ಕೊರೆದು ಹಾದಿ ಸುಗಮಗೊಳಿಸಿದ್ದಾರೆ. ಗಿರಿಯ ಭುಜವರೆಗೂ ಖಾಸಗಿ ವಾಹನಗಳ ಸರಾಗ ಪಯಣ ಸಾಗುತ್ತಿರುತ್ತದೆ. ಭುಜದಿಂದ ನೆತ್ತಿ ಹತ್ತಬೇಕಷ್ಟೆ.. ಇನ್ನೂರು ಚಿಲ್ಲರೆ ಕಡಿದಾದ ಮೆಟ್ಟಿಲುಗಳನ್ನು ಅಂಕುಡೊಂಕಾಗಿ ಕಡೆದಿದ್ದಾರೆ. ಅಷ್ಟು ಹತ್ತಿದರಾಯ್ತು. ಆದರೆ ಅಷ್ಟು ಹತ್ತವುದೂ ಸುಲಭವೇನಲ್ಲ. ಮಕ್ಕಳು ಮರಿಗಳನ್ನು ಹೊತ್ತು ನಡೆಯುವವರಿಗಂತೂ ಉಬ್ಬಸ ಉಮ್ಮಳಿಸಿ ಬರುತ್ತದೆ. ಮೊಣಕಾಲು, ಮೀನಖಂಡ ಮಾತಾಡೋಕೆ ಶುರು ಮಾಡುತ್ತದೆ. ಕಷ್ಟವೆನ್ನಿಸಿದರೂ ಒಮ್ಮೆ ಹತ್ತಿ ಮುಗಿದ ಮೇಲೆ ಕಾಣುವ ದೃಶ್ಯಗಳಿವೆಯಲ್ಲ, ವ್ಹಾ... ಸ್ವರ್ಗದ ತುಣುಕೊಂದು ಭೂಮಿಗೆ ತೂಗು ಬಿದ್ದಂತೆ ಕಾಣುತ್ತದೆ. ಕಣ್ಣು ಹಾಯಿಸಿದಲೆಲ್ಲ ಹಸಿರಿನ ನಾನಾ ಪ್ರಕಾರದ ಮಲೆಗಳ ಸಾಲುಗಳು ಅದರಾಚೆಯೂ ಹಾಸಿನಿಂತು ನೀಲ ಕಡುನೀಲವಾಗಿ ದಿಗಂತದಂಚಿನಲ್ಲಿ ಮುಗಿಯುತ್ತವೆ.

ಬಿಮ್ಮನೆ ಮಲಗಿದ ಊರು

ಕೆಳಗೆ ಬಿಮ್ಮಗೆ ಮಲಗಿದ ಊರು, ಕೆರೆಗಳು ನಾವೆಷ್ಟು ತೃಣ ಎನ್ನುವುದನ್ನು ನೆನಪಿಸುತ್ತವೆ.

ಬೆಟ್ಟದ ನೆತ್ತಿಯ ಮೇಲೆ ನಾವು ಒಬ್ಬರಿಗೊಬ್ಬರು ಆತುಕೊಂಡು, ಒತ್ತಿಕೊಂಡು ಸುಮ್ಮನೆ ಕೂತು ಕೆಳಗೆ ಕೊರೆಯುವ ಹಿಮದಂತಹ ಕಲ್ಲು ಹಾಸನ್ನೂ, ಕಿವಿಯಲ್ಲಿ ಗುಂಯ್ಗುಡುವ ತಂಪಾದ ಗಾಳಿಯನ್ನು, ಹಾರಾಡುವ ಕೂದಲುಗಳನ್ನು, ಬೆಟ್ಟದ ಮೆಟ್ಟಿಲನ್ನು ಹತ್ತುತ್ತಿರುವ ಇಳಿಯುತ್ತಿರುವ ಬಣ್ಣ ಬಣ್ಣದ ಚಿಟ್ಟೆಯಂತಹ ಮನುಷ್ಯಾಕೃತಿಗಳನ್ನು, ಅಸೀಮವಾಗಿ ಕಾಣುವ ಬೆಟ್ಟದ ಸಾಲುಗಳನ್ನು ಮತ್ತೆಂದೂ ನೋಡೆವೇನೋ ಎಂಬಂತೆ

ನೋಡಿಯೇ ನೋಡಿದೆವು. ಅದರ ಚೆಲುವನ್ನು ಮೈತಣಿಯೇ ಉಂಡೆವು.

ಚಿಕ್ಕಮಗಳೂರಿನಿಂದ ಊಟಕ್ಕೆ ಬುತ್ತಿ ಸಹ ಮಾಡಿಕೊಂಡು ಮನೆಯಿಂದ ಹೊರಟಿದ್ದೇ ಮಧ್ಯಾಹ್ನ ಹನ್ನೆರಡು ಗಂಟೆಯ ಮೇಲೆ. ಜಿಲ್ಲಾ ಕೇಂದ್ರದಲ್ಲಂತೂ ಅಷ್ಟಷ್ಟು ಬಿಸಿಲಿತ್ತಷ್ಟೇ. ನನಗೇನೋ ಒಳಗೊಳಗೇ ಕಸಿವಿಸಿ. ಈ ನಡು ಮಧ್ಯಾಹ್ನ ಶಿಖರ ಸಾಲಿನಲ್ಲಿ ಸುಡುವ ಬಿಸಿಲಿರಬಹುದು. ನೋಡುವುದಕ್ಕೆ ರಮ್ಯವೆನ್ನಿಸುವ ಒಂದಷ್ಟು ಮಂಜುಮುಸುಕು ಇರದಿದ್ದರೆ: ನಿರಾಸೆಯ ಯೋಚನೆಗಳು ಬಂದರೂ ತೆಪ್ಪಗೆ ಕೂತಿದ್ದೆ. ಕೈಮರ ದಾಟಿದ ಮೇಲೆ ಉದ್ದಾನುದ್ದ ಮೋಡ ಮುಸುಕಿ ಮನಸ್ಸು ಸಮಾಧಾನ. ತಲುಪಿದ್ದಾದರೂ ಒಂದು ಗಂಟೆಯ ಸುಮಾರಿಗೆ. ಅಲ್ಲಿಯ ವಾತಾವರಣದ ಅನಿಶ್ಚಿತತೆ ಯಾವ ಮಟ್ಟಿನದ್ದು ಎನ್ನುವ ಅಂದಾಜೇ ನನಗಿರಲಿಲ್ಲ.

ಮೋಡ ಮಂಜು ಗಾಳಿ ಚಳಿ

ಕೆಲವೊಮ್ಮೆ ಮಂಜು ಮುಸುಕಿ ಸೂರ್ಯೋದಯವೇ ಆಗಿರದಂತೆಯೂ, ಕೆಲವೊಮ್ಮೆ ಮಳೆ ಮೋಡಗಳು ದಟ್ಟೈಸಿ ಕತ್ತಲಾದಂತೆಯೂ, ಮರುಗಳಿಗೆ ಸೂರ್ಯ ನಡು ನೆತ್ತಿಯ ಮೇಲೇ ಪ್ರಕರಿಸಿ ಅಚ್ಚರಿ ಮೂಡಿಸಿಯೂ ಮರುಕ್ಷಣ ದಟ್ಟ ಶ್ವೇತ ತೆರೆ ಎಳೆದು ಎದುರಿಗಿರುವವರೂ ಕಾಣದಂತಾಗಿ ದಿಕ್ಕು ದೆಸೆ ಕಳೆದಂತಾಗಿ ಎತ್ತಲಿದ್ದೇವೆ ಎನ್ನುವುದೇ ಮರೆತು ಹೋಗಿ.. ಒಟ್ಟು ಕ್ಷಣ ಕ್ಷಣಕ್ಕೂ ಬದಲಾಗುವ ಚಂಚಲ ಹವಾಮಾನ. ಬದಲಾದಷ್ಟೂ ದಕ್ಕುವ ಹೊಸ ಹೊಸ ನೋಟಗಳು.

ಆಗಲೇ ಗೊತ್ತಾಗಿದ್ದು, ನಾವೇನಾದರೂ ಬೆಳಗಿನ ಜಾವವೇ ಹೋಗಿದ್ದರೆ, ಮಂಜಿನ ಹೊರತು ಏನೆಂದರೆ ಏನೂ ಕಾಣಸಿಗುತ್ತಿರಲಿಲ್ಲ. ಅಷ್ಟೇ ಯಾಕೆ ಮುಳ್ಳಯ್ಯನಗಿರಿಯ ಒಟ್ಟಾರೆ ಹೊರಗಿನ ನೋಟವೂ ಎಟುಕುತ್ತಿರಲಿಲ್ಲ. ನೆತ್ತಿಯ ಮೇಲಿನ ಮಂಜು ಮತ್ತು ಬಿಸಿಲಿನ ತೆರೆಮರೆಯಾಟ ನೋಡುವಾಗಲೆಲ್ಲಾ ಎಂಥಹ ಸರಿಯಾದ ಸಮಯಕ್ಕೆ ಕರೆತಂದಿದ್ದಾರೆ ಎನ್ನುವ ಕೃತಜ್ಞತೆ ಮೂಡುತ್ತಿತ್ತು.

ಮುಳ್ಳಯ್ಯನಗಿರಿ ನೋಡುವುದಕ್ಕೆ ಇನ್ನೇನು ಮಳೆಗಾಲ ಮುಗಿಯುತ್ತೆ ಎನ್ನುವ ಸಮಯವಾಗಬೇಕು.

ಇಲ್ಲಿಯ ಪುಟ್ಟ ರಸ್ತೆಗೆ ಕಾರು, ಬೈಕ್ ನಂತಹ ಖಾಸಗೀ ವಾಹನಗಳೇ ದಿಕ್ಕು. ನೆತ್ತಿಯ ಮೇಲೆ ಕುಳಿರ್ಗಾಳಿ ಜೋರಾಗಿಯೇ ಬೀಸುವುದರಿಂದ ಸ್ವೆಟ್ಟರ್, ಶಾಲುಗಳು, ಟೊಪ್ಪಿ, ಸಾಕ್ಸ್‌ಗಳು ಜೊತೆಗಿದ್ದರೆ ಕೊಂಚ ಬೆಚ್ಚಗಿರಬಹುದು.

ಸೀತಾಳಯ್ಯನ ಗಿರಿ

ಮುಳ್ಳಯ್ಯನಗಿರಿ ಹತ್ತುವ ಮೊದಲೇ ಸೀತಾಳಯ್ಯನಗಿರಿ ಸಿಗುತ್ತದೆ. ಅಲ್ಲಿಂದ ಮುಳ್ಳಯ್ಯನಗಿರಿಗೆ ಚಾರಣ ಮಾಡುವವರು ಸಾಕಷ್ಟು ಜನರಿದ್ದಾರೆ. ಚಾರಣಕ್ಕೆಂದೇ ಬೇರೆ ಕಾಲು ದಾರಿ ಇದ್ದು, ಕಾರಿನಲ್ಲಿ ಪ್ರಯಾಣಿಸುವಾಗ ದೂರದಿಂದ ಕಾಣುವ ಹಸಿರ ಸಸ್ಯರಾಶಿ ಇಲ್ಲಿ ಕಾಲಿಗೇ ಸೋಕಿ, ಝರಿಗಳೆಲ್ಲ ತೊಟ್ಟಿಕ್ಕಿ ಮತ್ತೊಂದೇ ಸ್ವರ್ಗೀಯ ಅನುಭವ ಕೊಡುತ್ತದೆ. ಮುಳ್ಳಯ್ಯನಗಿರಿಯಿಂದ ದತ್ತ ಪೀಠಕ್ಕೆ ತುಂಬಾ ದೂರವೇನಲ್ಲ, ಒಂದಿಡೀ ದಿನದ ಸಮಯ ಇದ್ದರೆ, ಮುಳ್ಳಯ್ಯನಗಿರಿ, ದತ್ತ ಪೀಠ, ಮಾಣಿಕ್ಯಧಾರ, ಮಹಾತ್ಮ ಗಾಂಧಿ ಪಾರ್ಕ್, ಹೊನ್ನಮ್ಮನ ಹಳ್ಳ ಇವಿಷ್ಟನ್ನು ಕಾಣಬಹುದು. ಇವುಗಳನ್ನು ಬಿಟ್ಟೂ ಸಹ ಹತ್ತಿರಕ್ಕೆ ಕೆಮ್ಮಣ್ಣುಗುಂಡಿ, ಕಲ್ಲತ್ತಗಿರಿ, ಹೆಬ್ಬೆ ಜಲಪಾತ, ಭದ್ರಾ ಟೈಗರ್ ರಿಸರ್ವ್... ಸಾಕಷ್ಟು ಪ್ರವಾಸಿ ತಾಣಗಳಿವೆ.

ಏನೇ ಇರಲಿ, ಪ್ರಕೃತಿಗೆ ನಮ್ಮ ಕರುನಾಡಿನ ಮೇಲೆ ತುಸು ಹೆಚ್ಚೇ ಪ್ರೀತಿ ಎನ್ನಿಸುತ್ತದೆ. ಅಷ್ಟಿಲ್ಲದೇ ಸ್ವರ್ಗದಂತಿರುವ ಇಂತಹ ಹಸಿರಸಿರ ಶಿಖರಗಳನ್ನು ಇಲ್ಲಿಯೇ ಮೂಡಿಸುವುದೆಂದರೇನು? ಜಲಪಾತಗಳು ಧುಮ್ಮುಕ್ಕುವುದೆಂದರೇನು

ವಿಶ್ವವಾಣಿ

18.10.2024 ಶುಕ್ರವಾರ

vishwavani.news

ದಿನ ದರ್ಶಿಕೆ

ಅಶ್ವಿನ ಮಾಸ, ಕೃಷ್ಣ ಪಕ್ಷ, ಪ್ರತಿಪದ ತಿಥಿ, ಅಶ್ವಿನಿ ನಕ್ಷತ್ರ, ವಜ್ರ ಯೋಗ, ಕೌಲವ ಕರಣ, ಶರದ್ ಋತು, ದಕ್ಷಿಣಾಯನ.

ಮನೆಮದ್ದು

ಹುಣಸೆ ಹಣ್ಣಿನಲ್ಲಿ ಆ್ಯಂಟಿ ಆಕ್ಸಿಡೆಂಟ್ಸ್ ಮತ್ತು ನಾರು ಹೆಚ್ಚಿನ ಪ್ರಮಾಣದಲ್ಲಿವೆ. ಇದರ ಸೇವನೆಯಿಂದ ದೇಹದಲ್ಲಿ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗುತ್ತದೆ ಹಾಗೂ ಹೃದಯ ಸಂಬಂಧಿ ತೊಂದರೆಗಳನ್ನು ಕಡಿಮೆ ಮಾಡುತ್ತದೆ. ಹುಣಸೆ ಹುಳಿಯಲ್ಲಿ ಹೈಡ್ರೊಸಿಟ್ರಿಕ್ ಆಮ್ಲ ಎಂಬ ಮುಖ್ಯವಾದ ಪೋಷಕಾಂಶವಿದ್ದು, ಇದು ದೇಹದಲ್ಲಿ ಕೊಬ್ಬಿನ ಸಂಗ್ರಹವನ್ನು ತಡೆಯುತ್ತದೆ. ಈ ಮೂಲಕ ದೇಹದಲ್ಲಿರುವ ಹೆಚ್ಚುವರಿ ತೂಕ ಕಡಿಮೆಯಾಗುತ್ತದೆ.

ಸೌಂದರ್ಯ ಸೂತ್ರ

ಒಡೆದ ಪಾದ ಮತ್ತು ಕೈಗಳಿಗೆ ಪ್ರತಿನಿತ್ಯ ತೆಂಗಿನೆಣ್ಣೆಯನ್ನು ರಾತ್ರಿ ಮುನ್ನ ಹಚ್ಚಿದರೆ ಒಡಕು ಮುಚ್ಚಿಕೊಂಡು ಕೈಗಳು ಸುಕೋಮಲಕರವಾಗುತ್ತದೆ. ತೆಂಗಿನೆಣ್ಣೆಯನ್ನು ಕಾಲು, ಕೈ ಮತ್ತು ಮುಖಕ್ಕೆ ಹಚ್ಚುವುದರಿಂದ ಕಾಂತಿಯೂ ಹೆಚ್ಚಾಗಿ ಹೊಳಪು ನೀಡುತ್ತದೆ.

ದಿನ ಭವಿಷ್ಯ

ಮೇಷ: ದೇಹದ ನೋವು ಮತ್ತು ಒತ್ತಡ ಸಂಬಂಧಿತ ಸಮಸ್ಯೆಗಳನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಹಣಕ್ಕೆ ಸಂಬಂಧಿಸಿದ ವಿಚಾರದಲ್ಲಿ ವಿಜಯ.

ವೃಷಭ: ಜೀವನದೆಡೆಗೆ ಉದಾರವಾದ ಮನೋಭಾವ ಹೊಂದಿ. ಬಿಡುವಿರದ ಕೆಲಸದಿಂದ ಸ್ವಲ್ಪ ಸಮಯ ತೆಗೆದುಕೊಳ್ಳಿ, ಕುಟುಂಬದ ಜತೆ ಮಾತನಾಡಿ.

ಮಿಥುನ: ಕೆಲಸದಲ್ಲಿ, ಮನೆಯಲ್ಲಿ ಒತ್ತಡ ಸಹನೆಯನ್ನು ಪರೀಕ್ಷಿಸಬಹುದು. ಇಂದು ಯಾವುದೇ ಕ್ಷಣಗಳಲ್ಲಿ ಹೊಸ ಕೆಲಸವನ್ನು ಯೋಚಿಸುವಿರಿ.

ಕಟಕ: ಚಿಂತೆ ಮತ್ತು ಒತ್ತಡ ಆರೋಗ್ಯವನ್ನು ನಾಶ ಮಾಡಬಹುದು. ಮಾನಸಿಕ ಸ್ಪಷ್ಟತೆ ಕಾಯ್ದುಕೊಳ್ಳಲು ಗೊಂದಲ ಮತ್ತು ಹತಾಶೆ ತಡೆಗಟ್ಟಿ.

ಸಿಂಹ: ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ. ವಿದ್ಯಾರ್ಥಿಗಳಿಂದ ಪೋಷಕರಿಗೆ ಸಿಟ್ಟು.

ಕನ್ಯಾ: ವಿಶ್ರಾಂತಿಯ ಸಲುವಾಗಿ ನಿಕಟ ಸ್ನೇಹಿತರೊಂದಿಗೆ ಸ್ವಲ್ಪ ಸಮಯ ಕಳೆಯಿರಿ. ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕ.

ತುಲಾ: ವಿಶ್ವಾಸ, ನಮ್ರತೆಯನ್ನು ಹೆಚ್ಚಿಸುತ್ತದಾದರೂ ಅದೇ ಸಮಯದಲ್ಲಿ ಭಯ, ದ್ವೇಷ, ಅಸೂಯೆ, ಸೇಡಿನಂಥ ನಕಾರಾತ್ಮಕ ಭಾವನೆ ಹಿಂದೆ ಬಿಡಿ.

ವೃಶ್ಚಿಕ: ವಿದೇಶಿ ಸಂಪರ್ಕಗಳನ್ನು ಹೊಂದಿರುವ ವ್ಯಾಪಾರಿಗಳಿಗೆ ಇಂದು ಹಣದ ನಷ್ಟ ಸಾಧ್ಯತೆ. ಯೋಚಿಸಿ ಅರ್ಥಮಾಡಿಕೊಂಡು ನಡೆಯಿರಿ.

ಧನು: ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಜೀವನ ಸಂಗಾತಿಯೊಂದಿಗೆ ಹಣದ ಬಗ್ಗೆ ಜಗಳವಾಗಬಹುದು.

ಮಕರ: ಬೆಂಬಲ ನೀಡುವ ಸ್ನೇಹಿತರು ಸಂತೋಷವಾಗಿರಿಸುತ್ತಾರೆ. ವಿಳಂಬಿತ ಪಾವತಿ ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ.

ಕುಂಭ: ಶೀಘ್ರ ಕ್ರಮ ಸುದಿರ್ಘ ಸಮಸ್ಯೆ ಪರಿಹರಿಸುತ್ತದೆ. ಇಂದು ಸ್ನೇಹಿತರೊಂದಿಗೆ ಪಾರ್ಟಿಯಲ್ಲಿ ಹಣ ಖರ್ಚು ಸಾಧ್ಯತೆ

ಮೀನ: ಭಾವನಾತ್ಮಕವಾಗಿ ತುಂಬ ಸ್ಥಿರವಾಗಿರುವುದಿಲ್ಲ - ಆದ್ದರಿಂದ ಇತರರ ಮುಂದೆ ಹೇಗೆ ವರ್ತಿಸುತ್ತೀರಿ, ಏನು ಹೇಳುತ್ತೀರಿ ಎನ್ನುವ ಬಗ್ಗೆ ಎಚ್ಚರ.

• ಕೆ.ಬಿ.ಸಂತೋಷ್ ಗುರೂಜಿ

ಪರ್ವತಾರೋಹಿ ಸ್ವಿಸ್ ಅಲ್ಪ್ಸ್‌ನಲ್ಲಿರುವ ಟಾಶ್ಹೋರ್ನ್‌ನ ತುತ್ತ ತುದಿಯಲ್ಲಿ ನಿಂತ ಸಮಯ!

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ಭಾರತದ ಅತಿ ದೊಡ್ಡ ಚಾಪರ್ ಪ್ಲಾಂಟ್ ಯಾವ ರಾಜ್ಯದಲ್ಲಿ ಉದ್ಘಾಟನೆಗೊಂಡಿದೆ?

- ಎ. ಕರ್ನಾಟಕ.
- ಬಿ. ಕೇರಳ.
- ಸಿ. ಮಧ್ಯ ಪ್ರದೇಶ.
- ಡಿ. ಪಂಜಾಬ್.

ಉತ್ತರ: ಎ. ಕರ್ನಾಟಕ

ಮಾಹಿತಿ

ಪ್ರಧಾನಿ ನರೇಂದ್ರ ಮೋದಿ ಅವರು ಕರ್ನಾಟಕದಲ್ಲಿ ಭಾರತದ ಅತಿದೊಡ್ಡ ಚಾಪರ್ ಪ್ಲಾಂಟ್ ಅನ್ನು ಉದ್ಘಾಟಿಸಿದ್ದಾರೆ. ಇದಕ್ಕೆ 2016ರಲ್ಲಿ ಅಡಿಪಾಯ ಹಾಕಲಾಗಿತ್ತು. ಈ ಪ್ಲಾಂಟ್ ಗ್ರೀನ್-ಫೀಲ್ಡ್ ಹೆಲಿಕಾಪ್ಟರ್ ಉತ್ಪಾದನಾ ಸೌಲಭ್ಯವಾಗಿದ್ದು, ಇದು ಸಶಸ್ತ್ರ ಪಡೆಗಳಿಗೆ ಚಾಪರ್‌ಗಳನ್ನು ಪೂರೈಸುತ್ತದೆ ಮತ್ತು ಭವಿಷ್ಯದ ರಫ್ತುಗಳನ್ನು ಪೂರೈಸುತ್ತದೆ. ಕರ್ನಾಟಕದ ತುಮಕೂರಿನ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಕಾರ್ಖಾನೆಯು ಆರಂಭದಲ್ಲಿ ಸಶಸ್ತ್ರ ಪಡೆಗಳ ಆದೇಶದ ಮೇರೆಗೆ ಲೈಟ್ ಯುಟಿಲಿಟಿ ಹೆಲಿಕಾಪ್ಟರ್‌ಗಳನ್ನು (ಎಲ್ಯುಎಚ್) ಉತ್ಪಾದಿಸುತ್ತದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

'ಕಾವೇರಿ' ಉಗಮದ ಕಥೆ

ಹಿಂದೆ ಬ್ರಹ್ಮಗಿರಿ ಬೆಟ್ಟ ಪ್ರದೇಶದಲ್ಲಿ ರಾಜರ್ಷಿ 'ಕವೇರ' ಎಂಬ ರಾಜನಿದ್ದನು. ಮಕ್ಕಳಿಲ್ಲದ ಈತ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದನು. ತಪಸ್ಸಿಗೆ ಮೆಚ್ಚಿದ ಬ್ರಹ್ಮ ತನ್ನ ಸಾಕು ಮಗಳಾದ ಲೋಪಾಮುದ್ರೆಯನ್ನೇ ಮಗಳಾಗಿ ಕೊಟ್ಟನು . 'ಕವೇರ' ರಾಜನ ಮಗಳಾಗಿ 'ಕಾವೇರಿ' ಎಂಬ ಹೆಸರಿನಿಂದ ಬೆಳೆದಳು. ಅದೇ ಸಮಯದಲ್ಲಿ ಅಗಸ್ತ್ಯ ಮುನಿಗಳು ಉತ್ತರ ಭಾಗದಿಂದ ಸಂಚರಿಸುತ್ತಾ, ದಕ್ಷಿಣ ರಾಜ್ಯಕ್ಕೆ ಬಂದರು. ತಪಸ್ಸಿನಿಂದ ಮುನಿಯಾಗಿದ್ದ 'ಕವೇರ'ರಾಜನ ಆಶ್ರಮಕ್ಕೆ ಆಗಮಿಸಿದರು. ಅಲ್ಲಿ ಕಾವೇರನ ಮಗಳು ಕಾವೇರಿಯನ್ನು ನೋಡಿ ವಿವಾಹವಾಗಲು ಬಯಸಿದರು. ಆಗ ಕಾವೇರಿ ಹೇಳಿದಳು. 'ನಿಮ್ಮನ್ನು ವಿವಾಹ ಆಗುತ್ತೇನೆ ಆದರೆ ನೀವು ನನ್ನನ್ನು ಒಂದು ಕ್ಷಣವೂ ಬಿಟ್ಟಿರಬಾರದು ಹಾಗೆ ಬಿಟ್ಟ ಕ್ಷಣವೇ ನಾನು ನದಿಯಾಗಿ ಹರಿದು ಹೋಗುವೆ' ಎಂಬ ಷರತ್ತನ್ನು ಹಾಕಿ ಅಗಸ್ತ್ಯರನ್ನು ವಿವಾಹವಾದಳು.

ಕವೇರ ರಾಜ ತನ್ನ ಮಗಳನ್ನು ಅಗಸ್ತ್ಯ ಕೊಟ್ಟು ವಿವಾಹ ಮಾಡಿದ ನಂತರ ತಪಸ್ಸಿನಲ್ಲಿ ನಿರತನಾಗಿ ಮುಕ್ತಿಯನ್ನು ಪಡೆದನು. ಅಗಸ್ತ್ಯ ಪತ್ನಿಯಾದ ಕಾವೇರಿ ಪತಿಯೊಂದಿಗೆ ಆಶ್ರಮದಲ್ಲಿದ್ದಳು. ಒಂದು ಬೆಳಗಿನ ಜಾವವೇ ಎದ್ದ ಅಗಸ್ತ್ಯ ತಮ್ಮ ಪತ್ನಿ ಕಾವೇರಿ ಏಳುವುದರೊಳಗೆ, ಭೃಗಂಡ ಮಹರ್ಷಿಗಳ ಆಶ್ರಮದಲ್ಲಿರುವ ತೀರ್ಥದಲ್ಲಿ ಸ್ನಾನ ಮಾಡಿ ಬರಲು ಅವರ ಆಶ್ರಮದತ್ತ ಹೋದರು. ಅಗಸ್ತ್ಯ ಹೋದ ಸ್ವಲ್ಪ ಹೊತ್ತಿಗೆ, ಕಾವೇರಿಗೆ ಎಚ್ಚರವಾಯಿತು. ಹತ್ತಿರದಲ್ಲಿ ಪತಿ ಅಗಸ್ತ್ಯ ಇಲ್ಲದಿರುವುದನ್ನು ಕಂಡು ತಾನು ತಿಳಿಸಿದ ಷರತ್ತಿನಂತೆ ಆಶ್ರಮದಿಂದ ಹೊರಗೆ ಬಂದು ಒಂದು ಹೊಂಡಕ್ಕೆ ಜಿಗಿದು ನೀರಿನ ಸೆಲೆಯಾಗಿ ಹರಿಯುತ್ತಾ ಮುಂದೆ ರಭಸದಿಂದ ನದಿಯಾಗಿ ಹರಿದಳು. ಆ ಹೊಂಡವನ್ನು 'ತೀರ್ಥ ಕುಂಡಿಕೆ' ಎಂದು ಕರೆಯುತ್ತಾರೆ. ಅಗಸ್ತ್ಯನಿಂದ ಸ್ವತಂತ್ರಳಾದ ಕಾವೇರಿ ನದಿಯಾಗಿ ರಭಸದಿಂದ ಹರಿಯುವಾಗ ಆಕೆಯ ಸೀರೆಯ ನೆರಿಗೆ ಹಿಂದೆ ಮುಂದೆ ಆಗುತ್ತದೆ. ಕಾವೇರಿ ಉಟ್ಟಿದ್ದ ಸೀರೆಯ ನೆರಿಗೆ ಹಿಂದೆ ಹೋಗಿ ಮುಂದೆ ಪಂಚೆ ಸುತ್ತಿದಂತೆ ನದಿಯಾಗಿ ಹರಿದ ನೆನಪಿನ ಸಂಭ್ರಮಕ್ಕೆ, ಕೊಡಗಿನ ಮಹಿಳೆಯರು ಸೀರೆಯ ನೆರಿಗೆಯನ್ನು ಹಿಂದೆ ಸಿಗಿಸಿ, ಸೆರಗು ಮುಂದೆ ಬರುವಂತೆ ಉಡುವ ಸಂಪ್ರದಾಯ ಬೆಳೆದು ಬಂದಿತು. ಅಂದಿನಿಂದ 'ಕೊಡವರ ಸೀರೆ ಉಡುವ ಶೈಲಿ' ಎಂಬ ಹೆಸರು ಖ್ಯಾತಿ ಪಡೆಯಿತು.

ಕೊಡವರ ವಿವಾಹ ಸಮಯದಲ್ಲಿ ಮದುಮಗಳಿಗೆ ಕೊಡಗಿನ ಶೈಲಿಯಲ್ಲಿ ಸೀರೆ ಉಡಿಸುತ್ತಾರೆ. ಹೀಗೆ ಕವೇರ ರಾಜನ ಮಗಳು ಕಾವೇರಿ, ಅಗಸ್ತ್ಯನ ಪತ್ನಿಯಾಗಿ, ನದಿಯಾಗಿ ಹರಿದ ಸ್ಥಳವೇ 'ತಲಕಾವೇರಿ' ಎಂದು ಪ್ರಸಿದ್ಧಿ ಪಡೆದಿದೆ. ಪ್ರತಿ ವರ್ಷ ತುಲಾಮಾಸದ ಸಂಕ್ರಮಣ ದಿಂದ ವೃಶ್ಚಿಕ ಮಾಸದ ಸಂಕ್ರಮಣದವರೆಗೆ ಇಲ್ಲಿ 'ಕಾವೇರಿ ಜಾತ್ರೆ' ನಡೆಯುತ್ತದೆ. ರಾಜ್ಯ ಹಾಗೂ ಹೊರ ರಾಜ್ಯದ ದಿಂದ ಜನರು ಬರುತ್ತಾರೆ. ನಿಗ ದಿತ ಸಮಯದಲ್ಲಿ 'ಕಾವೇರಿ ಕುಂಡಿಕೆಯಲ್ಲಿ' 'ತೀರ್ಥ ಉದ್ಭವವಾಗಿ' ಕಾವೇರಿ ತಾಯಿ ದರ್ಶನ ಕೊಡುತ್ತಾಳೆ. ಕೊಡಗಿನ ತಲಕಾವೇರಿ ಪೌರಾಣಿಕ ಪ್ರಸಿದ್ಧ ಸ್ಥಳವಾಗಿದ್ದು ಜೀವನದಿ ಹುಟ್ಟುವ ಪುಣ್ಯಕ್ಷೇತ್ರವಾಗಿದೆ. ಇಲ್ಲಿ ಅಗಸ್ತ್ಯ ಪ್ರತಿಷ್ಠಾಪಿಸಿದ ಅಗಸ್ತ್ಯ ಮತ್ತು ಗಣಪತಿ ದೇವಸ್ಥಾನವಿದೆ. ದಕ್ಷಿಣ ಗಂಗೆ ಎಂದೇ ಪ್ರಸಿದ್ಧವಾದ ಕರ್ನಾಟಕದವರ ಜೀವನದಿ.

ನಮ್ಮ ಭಾರತ ಭೂಮಿಯ ಮಣ್ಣು, ನದಿ, ಬೆಟ್ಟ ಗುಡ್ಡ ಪ್ರತಿ ಕಲ್ಲಿಗೂ ಒಂದು ಇಲ್ಲಿನ ಪಾರಂಪರಿಕ ಇತಿಹಾಸ ನಮಗೆ ನಮ್ಮ ಸನಾತನ ಬೇರುಗಳನ್ನ ಗಟ್ಟಿಯಾಗಿ ಕಟ್ಟಿಕೊಟ್ಟಿದೆ. ಪ್ರಕೃತಿಯನ್ನು ದೇವರಿಗೆ ಹೋಲಿಸಿ, ಮಣ್ಣು , ನೀರು, ಆಕಾಶ ಭೂಮಿ, ಗಾಳಿ ಎಲ್ಲವನ್ನು ನಾವಿಲ್ಲಿ ಪೂಜ್ಯ ಭಾವದಿಂದ ನೋಡುತ್ತೇವೆ. ಸಾವಿರಾರು ವರ್ಷಗಳ ಇತಿಹಾಸ ನಮ್ಮದು. ಇಂದಿಗೂ ನಮ್ಮ ಸನಾತನ ಧರ್ಮ ನಾವು ಒಳ್ಳೆಯ ಮೌಲ್ಯಗಳಿಂದ ಜೀವನವನ್ನು ನಡೆಸುವಂತೆ ನಮ್ಮನ್ನು ಪ್ರೇರೇಪಿಸುತ್ತಿದೆ. ಇಂತಹ ಒಂದು ಸಂಸ್ಕೃತಿಯನ್ನ ಹಾಕಿಕೊಟ್ಟ ನಮ್ಮ ಧರ್ಮ ಮತ್ತು ಭೂಮಿಗೆ ನಾವು ಸದಾ ಕೃತಜ್ಞರಾಗಿರಬೇಕು.

ಅಗೋಚರ ದೈವ ಸಹಾಯದ ಪರಿ

• ವಿದ್ಯಾ ಶಂಕರ್ ಶರ್ಮ

ಮನುಷ್ಯನ ಪ್ರಯತ್ನಗಳು ನಿರಂತರ. ತನ್ನ ಸುಖವೃದ್ಧಿಗಾಗಿ, ಏಳಿಗೆಗಾಗಿ, ಕೀರ್ತಿಗಾಗಿ ಸತತವಾಗಿ ಶ್ರಮ ಪಡುತ್ತಾನೆ. ಎಲ್ಲ ಮನುಜರ ಕತೆಯೂ ಇದೇ ಆಗಿದೆ. ಆದರೆ ಪ್ರಯತ್ನಕ್ಕೆ ತಕ್ಕ ಫಲ ಎಲ್ಲರಿಗೂ ದೊರೆಯದು ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಇದಕ್ಕೆ ಕಾರಣ ಕೂಡ ತಿಳಿಯುವುದಿಲ್ಲ. ಆದರೆ ನಮ್ಮ ಪ್ರಯತ್ನಕ್ಕೆ ದೈವ ಸಹಾಯವು ಇಲ್ಲದಿದ್ದರೆ ನಾವು ಏನೇ ಹೆಣಗಿದರೂ ನೀರೀಕ್ಷೆಯಂತೆ ಕಾರ್ಯ ಸಿದ್ಧಿ ಆಗದು. ಆದರೆ ಅದರ ಅರಿವು ಕೆಲವೇ ಕೆಲವರು ಮಾತ್ರ ಬಲ್ಲರು. ಇದೇ ಕಾರಣದಿಂದ ನಾವು ಹತಾಶರಾಗುವ ಅವಕಾಶಗಳು ಹೆಚ್ಚು. ಆದರೆ ನಮ್ಮೆಲ್ಲರ ಎಣಿಕೆಗೆ ಮೀರಿದ ಶಕ್ತಿಯು ಎಲ್ಲವನ್ನೂ ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡು ನಮ್ಮ ಕರ್ಮಾನುಸಾರ ಫಲಿತಾಂಶವನ್ನು ಕೊಡುತ್ತಿರುತ್ತದೆ.

'ಸೋಮದೇವನ ಕಥಾಸರಿತ್ಸಾಗರ'ದ ಒಂದು ಸುಂದರ ದೃಷ್ಟಾಂತವು ದೈವ ಕೃಪೆಯ ಅನೂಹ್ಯ ಪರಿಯನ್ನು ನಮ್ಮೆದುರು ತೆರೆದಿಡುತ್ತದೆ. ಒಂದು ಊರಿನಲ್ಲಿ ಹರಿಶರ್ಮ ಎಂಬ ವ್ಯಕ್ತಿಯು ಇದ್ದನು. ಅವನು ಬಹಳ ಬಡವನಾಗಿದ್ದು, ಸಂಸಾರ ನಿರ್ವಹಣೆಗೆ ಶ್ರೀಮಂತನ ಮನೆಯಲ್ಲಿ ಕೆಲಸ ಮಾಡುತ್ತಿದ್ದನು. ಅವನ ಹೆಂಡತಿ ಮತ್ತು ಮಕ್ಕಳು ಕೂಡಾ ಅಲ್ಲಿಯೇ ಕೆಲಸ ಮಾಡುತ್ತಿದ್ದರು. ಹೀಗಿರುವಾಗ ಆ ಶ್ರೀಮಂತನ ಮಗಳ ಮದುವೆ ನಡೆಯುತ್ತದೆ. ಹರಿಶರ್ಮನು ಮದುವೆ ಸಂದರ್ಭದಲ್ಲಿ ತನ್ನ ಕುಟುಂಬಕ್ಕೆ ಒಳ್ಳೆಯ ಭೋಜನ ಸಿಗುವುದೆಂಬ ಆಸೆಯಲ್ಲಿ ಇದ್ದನು. ಆದರೆ ಯಾರೂ ಅವನನ್ನು ಗಮನಿಸುವುದೇ ಇಲ್ಲ. ಇದರಿಂದ ನೊಂದ ಅವನು ತಾನು ಜ್ಞಾನಿಯು, ಜ್ಯೋತಿಷ್ಯವನ್ನು ಚೆನ್ನಾಗಿ ಹೇಳಬಲ್ಲೆ ಎಂಬಂತೆ ತೋರಿಸಿಕೊಳ್ಳಲು ಯೋಚಿಸುತ್ತಾನೆ. ಅದರಂತೆ ತನ್ನ ಪತ್ನಿಗೆ, ತನ್ನ ಬಗ್ಗೆ ಪ್ರಚಾರ ಮಾಡುವಂತೆ ಹೇಳುತ್ತಾನೆ. ಅಂದು ರಾತ್ರಿ ದಿಬ್ಬಣದವರು ಮಲಗಿದಾಗ, ಹರಿಶರ್ಮನು ಮದುವಣಿಗನ ಕುದುರೆಯನ್ನು ಕದ್ದು ದೂರದಲ್ಲಿ ಬಚ್ಚಿಟ್ಟನು. ಬೆಳಿಗ್ಗೆ ಎಲ್ಲರೂ ಕುದುರೆಯನ್ನು ಹುಡುಕುವಾಗ, ಅವನ ಪತ್ನಿಯು ಶ್ರೀಮಂತನ ಬಳಿ ತನ್ನ ಪತಿಯು ಜ್ಯೋತಿಷ್ಯ ಬಲ್ಲವನು ಎಂದು ಹೇಳುತ್ತಾಳೆ. ಆಗ ಶ್ರೀಮಂತನು ಹರಿ ಶರ್ಮನನ್ನು ಕರೆಸಿ ಕೇಳಿದಾಗ, ದಕ್ಷಿಣ ದಿಕ್ಕಿನಲ್ಲಿ ಕುದುರೆ ಇದೆ ಎಂದು ಹೇಳುತ್ತಾನೆ. ಅವನೇ ಬಚ್ಚಿಟ್ಟಿರುವುದರಿಂದ ಅದು ಸರಿಯಾಗೇ ಇರುತ್ತದೆ. ಇದರಿಂದ ಅವನಿಗೆ ಗೌರವ ಸಿಗುತ್ತದೆ. ಮುಂದೆ ಆ ರಾಜ್ಯದ ರಾಜನ ಅರಮನೆಯಲ್ಲಿ ಬಂಗಾರವು ಕಾಣೆಯಾಗುತ್ತದೆ. ಹರಿ ಶರ್ಮನ ಪ್ರಸಿದ್ಧಿಯನ್ನು ಕೇಳಿದ್ದ ರಾಜನು ಅವನನ್ನು ಕರೆಸಿ ಬಂಗಾರ ಎಲ್ಲಿರಬಹುದೆಂದು ಕಂಡು ಹಿಡಿಯಲು ಕೇಳುತ್ತಾನೆ.

ಹರಿ ಶರ್ಮನು ಸಮಯ ಕೇಳುತ್ತಾನೆ, ಆದರೆ ರಾಜನು ಅವನನ್ನು ಅರಮನೆಯಲ್ಲಿಯೇ ಇರಿಸಿಕೊಳ್ಳುತ್ತಾನೆ. ಆ ರಾತ್ರಿ ದಿಕ್ಕು ತೋಚದ ಹರಿ ಶರ್ಮನು ತನ್ನ ನಾಲಿಗೆಯನ್ನು ಹಳಿದುಕೊಂಡು 'ಅಯ್ಯೋ ಜಿಹ್ವೆ(ನಾಲಿಗೆ), ಹಣದ ಆಸೆಗೆ ಏನು ಮಾಡಿಬಿಟ್ಟೆ' ಎಂದು ಗೊಣಗುತ್ತಾ ಇರುತ್ತಾನೆ. ಕಾಕತಾಳೀಯ ಎಂಬಂತೆ ಆ ಬಂಗಾರವನ್ನು ಅರಮನೆಯ ಜಿಹ್ವೆ ಎಂಬ ದಾಸಿಯು ಕದ್ದಿರುತ್ತಾಳೆ. ಹರಿ ಶರ್ಮನಿಗೆ ಹೆದರಿ ಅವನು ಇರುವ ಅರಮನೆಯ ಕೊಠಡಿಯ ಬಳಿಯೇ ಇರುತ್ತಾಳೆ. ಹರಿ ಶರ್ಮನ ಮಾತು ಕೇಳಿ, ತನ್ನ ಹೆಸರು ಅವನಿಗೆ ತಿಳಿದಿದೆ ಎಂದುಕೊಂಡು ತಾನು ಬಂಗಾರ ಇಟ್ಟಿರುವ ಜಾಗವನ್ನು ಅವನಿಗೆ ಹೇಳುತ್ತಾಳೆ. ಮರುದಿನ ಬೆಳಿಗ್ಗೆ ಹರಿ ಶರ್ಮನು ಆಭರಣವು ಎಲ್ಲಿ ಇರುವುದು ಎಂದು ಹೇಳಿ ಸನ್ಮಾನ ಪಡೆಯುತ್ತಾನೆ. ಅವನಿಗೆ ಇನ್ನೂ ಹೆಚ್ಚಿನ ಗೌರವ ಕೊಡಬೇಕೆಂದು ಯೋಚಿಸುತ್ತಿರುವಾಗ, ಅವನ ಮಂತ್ರಿಯು ಹರಿ ಶರ್ಮನನ್ನು ಇನ್ನೂ ಹೆಚ್ಚಿನ ಪರೀಕ್ಷೆ ಮಾಡೋಣ ಎಂದು ಸಲಹೆ ನೀಡುತ್ತಾನೆ.

ಅದರಂತೆ ರಾಜನು ಒಂದು ಗಡಿಗೆಯಲ್ಲಿ ಕಪ್ಪೆಯನ್ನು ಹಾಕಿ ಮುಚ್ಚಿ, ಹರಿ ಶರ್ಮನಿಗೆ ಅದರಲ್ಲಿ ಏನಿದೆ ಎಂದು ಕೇಳುತ್ತಾನೆ. ಆಗ ಗಲಿಬಿಲಿಗೊಂಡ ಅವನು, 'ಅಯ್ಯೋ ಮಂಡೂಕ(ಕಪ್ಪೆ), ಈ ಗಡಿಗೆ ನಿನ್ನ ವಿನಾಶಕ್ಕೆ ಬಂದಿದೆ' ಎನ್ನುತ್ತಾನೆ. ಅವನ ತಂದೆಯು ಹಾಸ್ಯಕ್ಕೆ ಅವನನ್ನು ಮಂಡೂಕ ಎಂದು ಕರೆಯುತ್ತಿದ್ದನು. ಕಷ್ಟದಲ್ಲಿ ಅದನ್ನು ಹರಿ ಶರ್ಮನು ಅದನ್ನು ನೆನಪಿಸಿಕೊಂಡು ಪರಿತಪಿಸುತ್ತಿದ್ದನು. ಆದರೆ ರಾಜ ಮತ್ತು ಜನರು ಅವನು ಮಂಡೂಕ ಎಂದು ಹೇಳಿ ಜ್ಞಾನವನ್ನು ಮೆರೆದಿದ್ದಾನೆ ಎಂದುಕೊಂಡು ಅವನಿಗೆ ರಾಜಾತಿತ್ಯ ನೀಡಿ, ಅವನಿಗೆ ಗ್ರಾಮ ಮತ್ತು ಧನ ಕನಕಗಳನ್ನು ಕೊಟ್ಟು ಸಾಮಂತ ರಾಜನನ್ನಾಗಿ ಮಾಡಿದನು!

ಹೇಗಿದೆ ನೋಡಿ ಕಾಣದ ಶಕ್ತಿಯ ಕೈವಾಡ! ಹರಿ ಶರ್ಮನ ಪುಣ್ಯ ಫಲ ಮತ್ತು ದೈವ ಸಹಾಯ ಅವನನ್ನು ಎಲ್ಲ ಸಂಕಟದಿಂದ ಪಾರುಮಾಡಿತು. ಇದಕ್ಕೆಲ್ಲ ನಮ್ಮ ಯಾವ ವಿಮರ್ಶೆ ಮತ್ತು ತರ್ಕವೂ ಉತ್ತರ ನೀಡಲಾರದು. ಆದರೆ ನಮ್ಮ ಪ್ರತಿ ಹೆಜ್ಜೆಯಲ್ಲೂ, ಸ್ವ ಪ್ರಯತ್ನದ ಜೊತೆಗೆ ಜಗದನಿಯಾಮಕನ ಒತ್ತಾಸೆ ಇದ್ದರೆ ಮಾತ್ರ ಕಾರ್ಯ ಸಾಧನೆ ಸಾಧ್ಯ ಎಂಬ ಸತ್ಯವನ್ನು ಮನಸ್ಸಿಗೆ ಹೇಳುತ್ತಿರುಬೇಕು. ಹಾಗಾದಾಗ ನಿರಾಸೆ ಹತಾಶೆಗಳು ಗಣನೀಯವಾಗಿ ಕಡಿಮೆಯಾಗುತ್ತವೆ.

ಪದಬಂಧ



ಎಡದಿಂದ ಬಲಕ್ಕೆ

1. ಹಾಡಿನ ಆರಂಭದಲ್ಲಿರುವ ಪುನರಾವರ್ತನೆಗೊಳ್ಳುವ ಭಾಗ (3)
3. ಒಳ್ಳೆಯ ವಿಷಯದಲ್ಲಿನ ಆಸಕ್ತಿಯನ್ನು ಹೀಗೆನ್ನಬಹುದು (3)
5. ಪತ್ರಗಳ ಕೊನೆಯಲ್ಲಿ ಸೇರಿಸುವ ವಿಶೇಷಾಂಕ (2)
6. ಸೀತೆಯನ್ನು ಅಪಹರಿಸಿದ ಲಂಕಾ ದೇಶದ ಅಧಿಪತಿ (3)
7. ವಿದೇಶಕ್ಕೆ ವಸ್ತುಗಳನ್ನು ರವಾನಿಸುವುದು (2)
8. ಲಕ್ಷ್ಯವಿಲ್ಲಿ ಅಸ್ತವ್ಯಸ್ತವಾಗಿ ಬಂದಿದೆ (3)
10. ನಿಂದಿಸುವುದು (3)
14. ವಾಯುಪುತ್ರ, ಹನುಮ (4)
15. ಕದಂಬರ ರಾಜಧಾನಿ (4)
16. ಮುಖವನ್ನು ಮರೆಮಾಚಿದ ಬಟ್ಟೆ (3)
18. ಹೊಸದಾಗಿ ಕಂಡ ಮನುಷ್ಯ (3)
20. ತುಂಬಾ ತಿಳಿದವನು (2)
21. ರೋಗದ ಜೋಡಿಯಾಗಿ ಬರುವ ಪದ (3)
22. ಹಗ್ಗದ ಪರ್ಯಾಯ ಪದ (2)
23. ಮಾರೀಚನ ಸಹೋದರನಿವನು (3)
24. ಏಳು ದಿನಗಳ ಅವಧಿ (3)

ಎಡದಿಂದ ಬಲಕ್ಕೆ

1. ಹೂವಿನ ಧೂಳಿ (3)
2. ರಾಮನಿಗೂ ಬೇಕು ಬಿಡುವು (3)
3. ದೀಪ ಹಚ್ಚಿಡುವ ಸಣ್ಣ ಬಟ್ಟಲು (3)
4. ಕಬ್ಬಿಣದ ಸಲಾಕೆ (3)
9. ಕಾಂತಿಯುಕ್ತವಾಗು ಎಂದು ಹೀಗೆ ಹೇಳಬಹುದು (5)
11. ಆಕಾಶಮಾರ್ಗದಲ್ಲಿ ಕೈಗೊಂಡ ಪ್ರಯಾಣ (5)
12. ಹೆದರಿಕೆಯಿಂದಾಯಿತೇ ನಡುಕ (3)
13. ಒಗ್ಗರಣೆ ಹಾಕುವಾಗ ಸಿಡಿದ ವಸ್ತು (3)
16. ಋಷಿಗೂ ಕೋಪವೇ (3)
17. ಚಿನ್ಹೆ ಅಥವಾ ಗುರುತು (3)
18. ಸರೋವರವೊಂದರ ಹೆಸರು (3)
19. ಚಿನ್ನದ ನಾಣ್ಯ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಬವಣೆ 4. ಭಾಜನ 6. ಆದರ 8. ಅಂತರಂಗ 9. ಸಮಂಜಸ 10. ಸದನ 12. ದಮನ 14. ಸಂತಸ 16. ಅಂಕಣ 18. ಅಂಕುಡೊಂಕು 19. ಮಮಕಾರ 21. ಶಬರ 23. ಪ್ರಗತಿ 24. ಕೆಣಕು

ಮೇಲಿನಿಂದ ಕೆಳಕ್ಕೆ: 2. ವಸಂತ 3. ಸ್ವಾದ 5. ಜನಜನಿತ 6. ಆಗಸ 7. ರಸನ 8. ಅಂಗದ 11. ದಶಕ 13. ಮರಕುಟಿಗ 15. ಸದರ 16. ಅಂಕುಶ 17. ಣಮರ 20. ಕಾಜಾಣ 22. ಬಣ್ಣ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಬೇಸಿಗೆಯ ಟವರ್

ನಾವೆಲ್ಲರೂ ಐಫೆಲ್ ಟವರ್ ಅನ್ನು ನೋಡಿದ್ದೇವೆ. ಹತ್ತಿರದಿಂದ ನೋಡದಿದ್ದರೂ, ಫೋಟೋದಲ್ಲಾದರೂ ಅದನ್ನು ಕಂಡಿದ್ದೇವೆ. ನಿಮಗೆ ಗೊತ್ತಾ? ಅದು ಬೇಸಿಗೆಯಲ್ಲಿ ಬೆಳೆಯುತ್ತದೆ ಅಂತ? ಎಲ್ಲ ಪ್ರಾಣಿಗಳ ಬೆಳವಣಿಗೆಗೂ

ಕೆಲ ವರ್ಷಗಳ ಮಿತಿ ಇದೆ. 18 ವರ್ಷಕ್ಕೆ ಮನುಷ್ಯನ ಬೆಳವಣಿಗೆ ನಿಲ್ಲುತ್ತದೆ. ಆದರೆ, ಲೋಹದಿಂದ ಮಾಡಲಾದ ಈ ಐಫೆಲ್ ಟವರ್ ಬೆಸಗೆಯಲ್ಲಿ ಸೂರ್ಯನ ತಾಪಮಾನಕ್ಕೆ 5.56 ಇಂಚುಗಳಷ್ಟು ಎತ್ತರವನ್ನು ಪಡೆದಿರುತ್ತದೆ. ಆದರೆ, ಇಂತಹ ವಿದ್ಯಮಾನಗಳು ನಡೆಯುವುದು ಅನಿಲಗಳಲ್ಲಿ, ಆದರೆ, ಕೆಲವೊಂದಿಷ್ಟು ಕಡೆ ದ್ರವ ಹಾಗೂ ಘನ ವಸ್ತುಗಳ ಮೇಲೆಯೂ ಈ ರೀತಿ ಆಗುತ್ತದೆ ಎಂಬುದು ವಿಜ್ಞಾನಿಗಳ ಮಾತು. ಅದರ ಜತೆಗೆ ಈ ರೀತಿ ಉದ್ದವಾದಾಗ ಐಫೆಲ್ ಟವರ್ ಏನೂ ಆಗಬಾರದು ಎಂದು ವಿಸ್ತರಣಾ ಕೀಲು (ಎಕ್ಸ್‌ಪಾನ್‌ಸನ್ ಜಾಯಿಂಟ್ಸ್)ಗಳನ್ನು ಅಳವಡಿಸಿದ್ದಾರೆ.

ಪುಸ್ತಕ ಲೋಕ

ಒಡಲ ಕಡಲು

ಈ ಕೃತಿ ಡಿ.ಎಸ್.ವೀರಯ್ಯ ಅವರ ಸಾಹಿತ್ಯ ಅವಲೋಕನ. ಈ ಕೃತಿಯನ್ನು ಪ್ರೊ.ಕೆ. ಶಾರದಾ ಅವರು ಸಂಪಾದಿಸಿದ್ದಾರೆ. ಕೃತಿಗೆ ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ಅವರ ಬೆನ್ನುಡಿ ಬರಹವಿದ್ದು, ಕೃತಿಯ ಕುರಿತು ಬರೆಯುತ್ತಾ ಡಿ.ಎಸ್. ವೀರಯ್ಯ ಅವರು ರಾಷ್ಟ್ರಮುಖದ ನೆಲೆಯಿಂದ ರಾಜಕೀಯ, ಸಾಮಾಜಿಕ, ಸಾಹಿತ್ಯ ಮುಖಗಳನ್ನು ನೋಡಬಲ್ಲರು. ವ್ಯಕ್ತಿಪಚ್ಚೆಯು ಸಮುದಾಯ ಪಚೆಯಲ್ಲಿ ಲೀನಗೊಂಡಾಗ ಮಾತ್ರ ವ್ಯಕ್ತಿತ್ವಕ್ಕೊಂದು ಬೆಲೆ ಬರುತ್ತದೆ. ಸನ್ಮಾನ್ಯ ಡಿ.ಎಸ್. ವೀರಯ್ಯ ಅವರು ತಮ್ಮ ಅರ್ಧಶತಮಾನದ ಹೋರಾಟ, ಸಾಧನೆಗಳಲ್ಲಿ ಸಮಗ್ರ ರಾಷ್ಟ್ರಪ್ರಜ್ಞೆ



ತೀವ್ರವಾಗಿಯೇ ಕೆಲಸ ಮಾಡಿದೆ. ಇದು ಅವರು ನಡೆಸಿರುವ ಹೋರಾಟದ ಕುರುಹುಗಳಲ್ಲಿಯೂ ಸಾಕ್ಷೀಕರಿಸಿದ ಬರಹಗಳಲ್ಲಿಯೂ ಎದ್ದು ಕಾಣುತ್ತದೆ. ಡಿ.ಎಸ್. ವೀರಯ್ಯನವರ ಬರಹಗಳನ್ನು ನಿರ್ದೇಶಿಸಿದ್ದು ಅವರು ನಂಬಿದ ಅಂಬೇಡ್ಕರ್ ಎಂಬ ದಲಿತ ಸೈದ್ಧಾಂತಿಕ ರೂಪಕ. ಹಾಗಾಗಿ ವ್ಯಕ್ತಿ ನೆಲೆಯಲ್ಲಿಯೂ ಅಂಬೇಡ್ಕರ್, ತಾತ್ವಿಕ ನೆಲೆಯಲ್ಲಿಯೂ ಅಂಬೇಡ್ಕರ್ ತತ್ವಗಳು ಇವರನ್ನು ಆಡಿಸಿವೆ. ಓಲಾಡಿಸಿವೆ. ಇವೇ ಇವರ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಸಾಹಿತ್ಯಕ ಬದುಕನ್ನು ಜೊತೆಜೊತೆಗೆ ಹೋರಾಟದ ಬದುಕನ್ನೂ ರೂಪಿಸಿವೆ. ಈ ಹಿನ್ನೆಲೆಯಲ್ಲಿ ವರ್ತಮಾನ ಕರ್ನಾಟಕದ ರಾಜಕೀಯ, ಸಾಮಾಜಿಕ, ಸಾಹಿತ್ಯಕ ಮಾನದಂಡಗಳನ್ನು, ಕರ್ನಾಟಕದ ದಲಿತ ಚಳವಳಿಗಳ ಇತಿಹಾಸವನ್ನು ಕಟ್ಟಿಕೊಳ್ಳುವಲ್ಲಿ ಇವರ ಸೃಜನ-ಸೃಜನೇತರ ಬರಹಗಳು ಅತಿ ಮಹತ್ವಪೂರ್ಣ ದಾಖಲೆಗಳಾಗಬಲ್ಲವು. ಇಂತಹ ದಾಖಲೆಗಳ ವಿಮರ್ಶೆ, ಪರಾಮರ್ಶೆ, ಪುನರ್ ವಿಮರ್ಶೆಗಳನ್ನು ಚಿಂತನ-ಮಂಥನಕ್ಕೊಳಪಡಿಸಿದ 'ಒಡಲ ಕಡಲು' ಕೃತಿಯ ಲೇಖನಗಳು ಡಿಎಸ್ವಿಯವರ ಪ್ರಖರ ವೈಚಾರಿಕತೆಗೆ ಹಿಡಿದ ದೀವಟಿಗೆಗಳು...!

ಸಿಬ್ಬಂದಿಯೇ ಇಲ್ಲದ ತರಕಾರಿ ಅಂಗಡಿ

• ಡಾ. ಉಮಾಮಹೇಶ್ವರಿ ಎನ್

ಅಕ್ಟೋಬರ್ ತಿಂಗಳಲ್ಲಿ ಅಮೆರಿಕವಿಡೀ ಹಾಲ್ಲೋವೀನ್ ಹಬ್ಬದ ತಯಾರಿಯಲ್ಲಿರುತ್ತದೆ. ಮೆಸ್ಸಚುಸೆಟ್ಸ್‌ನ ವಿಲಿಯಮ್ಸ್ ಕಾಲೇಜಿನ ಪರಿಸರದಲ್ಲಿ ಕೆಲವು ದಿನ ಕಳೆಯಬೇಕಾಗಿ ಬಂದಾಗ ಮೌಂಟ್ ಗ್ರೇ ಲಾಕ್‌ಗೆ ಹೊರಟೆವು. ದಾರಿಯಲ್ಲಿ ಒಂದೆಡೆ ಪುಟ್ಟ ಅಂಗಡಿಯೊಂದು ಕಾಣಿಸಿತು. ಯಾವುದೋ ಕೃಷಿಕನ ಹೊಲದ ಬೆಳೆಗಳನ್ನು ಮಾರುವ ಅಂಗಡಿ ಅದಾಗಿತ್ತು. ಚೆನೈಲ್ಸ್ ಫಾರ್ಮ್ ಸ್ಟಾಂಡ್ ಎಂಬ ಫಲಕ ಎದ್ದು ಕಾಣಿಸುತ್ತಿತ್ತು. ಅಲ್ಲಿ ಇಳಿದಾಗ ಯಾರೂ ಸಿಬ್ಬಂದಿ ಕಾಣಿಸಲಿಲ್ಲ. ಸೇಬು ಹಣ್ಣುಗಳು, ವಿವಿಧ ನಮೂನೆಗಳ ಟೊಮೇಟೊ ಹಾಗೂ ದೊಣ್ಣೆ ಮೆಣಸುಗಳು ಅಂಗಡಿಯೊಳಗಿನ ಬುಟ್ಟಿಗಳಲ್ಲಿ ಕುಳಿತಿದ್ದವು. ಅಂಗಡಿಯ ಎದುರಿನ ಖಾಲಿ ಜಾಗದಲ್ಲಿ ಕೇಸರಿ ಬಣ್ಣದ ಕುಂಬಳಕಾಯಿಗಳನ್ನು ಸುಂದರವಾಗಿ ಜೋಡಿಸಿ ಇಡಲಾಗಿತ್ತು. ಇವುಗಳು ಹಾಲ್ಲೋವೀನ್ ಹಬ್ಬದಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತವೆ. ಇನ್ನೊಂದೆಡೆ ರಟ್ಟಿನ ಡಬ್ಬಗಳೊಳಗೆ ವಿವಿಧ ನಮೂನೆಗಳ ಸ್ಥಳೀಯ ಕುಂಬಳಕಾಯಿಗಳಿದ್ದವು ಬರುತ್ತಿದ್ದ ಗಿರಾಕಿಗಳೂ ಹಲವರಿದ್ದರು. ಬೇಕಾದ ತರಕಾರಿಗಳನ್ನು ತೆಗೆದುಕೊಂಡು, ಅಲ್ಲೇ ಇರುವ ತೂಕದ ಯಂತ್ರದಲ್ಲಿ ತೂಕ ಮಾಡಿಕೊಳ್ಳಬೇಕು. ಅಂಗಡಿಯಲ್ಲಿ ಇರುವ ದರಪಟ್ಟಿಯನ್ನು ನೋಡಿಕೊಂಡು ನಮ್ಮ ಖರೀದಿಗೆ ಆಗುವ ದರವನ್ನು ಅಲ್ಲೇ ಇರುವ ಗಲ್ಲಾ ಪೆಟ್ಟಿಗೆಯಲ್ಲಿ ಹಾಕಿದರೆ ನಮ್ಮ ವ್ಯಾಪಾರ ಮುಗಿಯಿತು. ಸರಿಯಾದ ಚಿಲ್ಲರೆ ಹಣ ಕೈಯಲ್ಲಿ ಇಲ್ಲದಿದ್ದರೆ, ಅದೇ ಪೆಟ್ಟಿಗೆಯಿಂದ ಬಾಕಿ ಚಿಲ್ಲರೆಯನ್ನು ತೆಗೆದುಕೊಳ್ಳಬಹುದು.

ನಾವೂ ಸಾಕಷ್ಟು ತರಕಾರಿಗಳನ್ನು ಕೊಂಡು ಸಂತೃಪ್ತಿಯಿಂದ ಮರಳಿದೆವು.

ಈ ದಿನ ಇತಿಹಾಸ

- 1922: ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಷನ್ (ಬಿಬಿಸಿ) ಶುರುವಾಯಿತು
- 1867: ಅಲಾಸ್ಕ ಯುನೈಟೆಡ್ ಸ್ಟೇಟ್ಸ್‌ಗೆ ಸೇರಿಕೊಂಡಿತು.
- 1878: ಥಾಮಸ್ ಅಲ್ವಾ ಎಡಿಸನ್ ವಿದ್ಯುಚ್ಛಕ್ತಿಯನ್ನು ಮನೆ ಬಳಕೆಗೆ ಲಭ್ಯ ಮಾಡಿದರು.

ಚಿತ್ರಸ್ಫೂರ್ತಿ



ವಿಶ್ವವಾಣಿ ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್
18.10.2024
ಬೆಂಗಳೂರು, ಶುಕ್ರವಾರ

ವೀರಾಜ್ ಕರೆತಂದ ಸಿಂಪಲ್ ಸುನಿ

ಪ್ರಶಾಂತ್ ಟಿ.ಆರ್

ನಿರ್ದೇಶಕ ಸಿಂಪಲ್ ಸುನಿ, ಹೊಸ ಪ್ರತಿಭೆಗಳನ್ನು ಚಿತ್ರರಂಗಕ್ಕೆ ಪರಿಚಯಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ. ಸಿಂಪಲ್ ಆಗಿ ಒಂದ್ ಲವ್ ಸ್ಟೋರಿ ಹೇಳಿ ರಕ್ಷಿತ್ ಶೆಟ್ಟಿ ಅವರಿಗೆ ಬಿಗ್ ಬ್ರೇಕ್ ನೀಡಿದ ಸುನಿ, ಬಜಾರ್ ನಿಂದ ಧನ್ವೀರ್ ಅವರನ್ನು ಚಿತ್ರರಂಗಕ್ಕೆ ಕರೆತಂದರು. ಅಂತೆಯೇ ಈಗ ದೇವರು ರುಜು ಮಾಡಿದನು ಚಿತ್ರದ ಮೂಲಕ ನವ ಪ್ರತಿಭೆ ವೀರಾಜ್ ಅವರನ್ನು ಚಂದನವನಕ್ಕೆ ಪರಿಚಯಿಸುತ್ತಿದ್ದಾರೆ. ಸದ್ಯ ಚಿತ್ರದ ಫಸ್ಟ್‌ಲುಕ್ ರಿಲೀಸ್ ಆಗಿದ್ದು ನಾಯಕನನ್ನು ಪರಿಚಯಿಸಲಾಗಿದೆ. ರಕ್ತ ಸಿಕ್ತವಾದ ನಾಯಕ ಗಿಟಾರ್ ಹಿಡಿದು ಅಬ್ಬರಿಸುತ್ತಿರುವ ಲುಕ್ ಗಮನಸೆಳೆದಿದೆ. ಸಿಂಪಲ್ ಸುನಿ ಸಿನಿಮಾಗಳು ಎಂದರೆ ಎಲ್ಲಿಯೂ ಬ್ಲಡ್ ಶೇಡ್ ಕಾಣುತ್ತಿರಲಿಲ್ಲ, ಆದರೆ ಇಲ್ಲಿ ಬ್ಲಡ್ ಶೇಡ್ ಇದೆ ಹಾಗಾಗಿ ಚಿತ್ರದ ಕಥೆ ಸ್ಪೆಷಲ್ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ.

ವಿ.ಸಿನಿಮಾಸ್ :ಈ ಚಿತ್ರದ ಶೀರ್ಷಿಕೆಯೇ ವಿಭಿನ್ನವಾಗಿದೆಯಲ್ಲ ?

ಸಿಂಪಲ್ ಸುನಿ : ಕಥೆಗೆ ತಕ್ಕಂತೆ ಶೀರ್ಷಿಕೆ ಇಡಲಾಗಿದೆ. ದೇವರು ರುಜು ಮಾಡಿದನು ಎನ್ನುವುದನ್ನು ಯಾಕೆ ಆಯ್ಕೆ ಮಾಡಿಕೊಂಡಿದ್ದೇವೆ ಎಂಬುದು ಸಿನಿಮಾ ನೋಡಿದ ಮೇಲೆ ತಿಳಿಯುತ್ತದೆ. ಇದೊಂದು ನವಿರಾದ ಪ್ರೇಮಕಥೆಯ ಚಿತ್ರ, ಇದೇ 20 ರಂದು ಚಿತ್ರ ಸೆಟ್ಟೇರಲಿದೆ. ಅಂದು ಟೀಸರ್ ಕೂಡ ಬಿಡುಗಡೆಯಾಗಲಿದ್ದು, ಚಿತ್ರೀಕರಣವೂ ಆರಂಭವಾಗಲಿದೆ.

ವಿ.ಸಿ : ನಿಮ್ಮ ಚಿತ್ರದಲ್ಲಿ ಇದೇ ಮೊದಲ ಬಾರಿಗೆ ಬ್ಲಡ್ ಶೆಡ್ ಕಾಣುತ್ತಿದೆಯಲ್ಲ ?

ಸುನಿ : ಇದು ಲವ್ ಸ್ಟೋರಿಯ ಜತೆಗೆ ರೌಡಿಸಂ ಕಥೆಯನ್ನು ಒಳಗೊಂಡಿದೆ. ನಾಯಕ ಆ್ಯಂಗ್ರಿ ಯಂಗ್ ಮ್ಯಾನ್, ಪ್ರೀತಿಯಲ್ಲಿ ಬಿದ್ದ ಮೇಲೆ ಆತ ಹೇಗೆ ರೌಡಿಸಂನಿಂದ ಹೊರ ಬರುತ್ತಾನೆ. ನಾಯಕನ ಜೀವನ ಹೇಗೆ ಬದಲಾಗುತ್ತದೆ ಎಂಬುದೇ ಚಿತ್ರದ ಸಸ್ಪೆನ್ಸ್. ಇದರ ಜತೆಗೆ ಮ್ಯೂಸಿಕಲ್ ಜರ್ನಿಯೂ ಬೆರೆತಿದೆ. ಅದನ್ನು ಇಂದಿನ ಟ್ರೆಂಡ್‌ಗೆ ಹೊಂದುವಂತೆ ಎಲ್ಲರಿಗೂ ಮೆಚ್ಚುಗೆಯಾಗುವಂತೆ ಕಟ್ಟಿಕೊಡಲಾಗುತ್ತದೆ.

ವಿ.ಸಿ : ವೀರಾಜ್‌ಗಾಗಿಯೇ ಈ ಕಥೆ ಹೆಣೆದರೆ?

ಸುನಿ : ಈ ಹಿಂದೆಯೇ ಕಥೆ ಬರೆದಿದ್ದೆ. ವೀರಾಜ್ ಅವರಿಗಾಗಿ ಕಥೆಯಲ್ಲಿ ಒಂದಷ್ಟು ಬದಲಾಯಿಸಿಕೊಂಡೆ. ವೀರಾಜ್ ರಂಗಭೂಮಿಯಲ್ಲಿ ಸಕ್ರೀಯರಾಗಿದ್ದರು, ನಟನೆಯಲ್ಲಿ ಪಳಗಿದ್ದಾರೆ ಹಾಗಾಗಿ ಈ ಸ್ಟೋರಿ ಅವರಿಗೆ ಹೇಳಿ ಮಾಡಿಸಿದಂತೆ ಹೊಂದುತ್ತದೆ. ವೀರಾಜ್ ಕೂಡ ಸಿನಿಮಾಗೆ ಅಗತ್ಯ ತಯಾರಿ ಮಾಡಿಕೊಂಡು ಕ್ಯಾಮೆರಾ ಮುಂದೆ ನಿಲ್ಲಲು ಸಿದ್ಧವಾಗಿದ್ದಾರೆ.

> ಇದೇ 20 ರಂದು ಸಿನಿಮಾ ಸೆಟ್ಟೇರಲಿದೆ. ಗೋವಾ, ಮಂಗಳೂರು, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಂಡಿದ್ದೇವೆ. ಸುಮಾರು ಅರವತ್ತು ದಿನಗಳ ಕಾಲ ಶೂಟಿಂಗ್ ನಡೆಸಲಿದ್ದೇವೆ.

> ದೇವರು ರುಜು ಮಾಡಿದನು ನನ್ನ ಸಿನಿ ಜರ್ನಿಯ ಸ್ಪೆಷಲ್ ಸಿನಿಮಾ ಎನ್ನಬಹುದು, ಎಲ್ಲರಿಗೂ ಇಷ್ಟವಾಗುಂತೆ ತೆರೆಯಲ್ಲಿ ಕಟ್ಟಿಕೊಡಬೇಕು ಎಂಬ ಹಂಬಲವಿದೆ.

ರಗಡ್ ಲುಕ್‌ನಲ್ಲಿ ಯುವ

ದೊಡ್ಮನೆ ಮೊಮ್ಮಗ ಯುವ ರಾಜ್‌ಕುಮಾರ್, ಯುವ ಚಿತ್ರದ ಮೂಲಕ ಎಲ್ಲರ ಮನಗೆದ್ದಿದ್ದಾರೆ. ಡ್ಯಾನ್ಸ್, ಫೈಟ್ ನಲ್ಲಿಯೇ ಭರವಸೆ ಮೂಡಿಸಿದ್ದಾರೆ. ಯುವ ಬಳಿಕ ಯುವ 2ನಲ್ಲಿ ಯುವ ರಾಜ್‌ಕುಮಾರ್ ಅಬ್ಬರಿಸುವುದು ಖಚಿತವಾಗಿದೆ. ಹಾಗಾಗಿ ಯುವ 2 ಸೆಟ್ಟೇರುವ ಮೊದಲೇ ಕುತೂಹಲ ಮೂಡಿಸಿದೆ. ಚಿತ್ರದ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿದ್ದು ಕುತೂಹಲ ಮೂಡಿಸಿದೆ. ರಕ್ತ ಸಿಕ್ತ ಕೈಯಲ್ಲಿ ಹಿಡಿದಿರುವ ಮಚ್ಚು, ಇದನ್ನು ನೋಡಿದರೆ ಯುವ 2 ಪಕ್ಕಾ ಆ್ಯಕ್ಷನ್ ಜತೆಗೆ ರಾ ಸ್ಟೈಲ್‌ನಲ್ಲಿ ಮೂಡಿಬರಲಿದೆ ಎಂಬುದು ತಿಳಿಯುತ್ತದೆ. ಇದರಿಂದ ಯುವ ಈ ಹಿಂದಿನ ಸಿನಿಮಾಗಳಿಗಿಂತ ರಗಡ್ ಆಗಿ ಕಾಣಿಸಿಕೊಳ್ಳಲಿದ್ದಾರೆ ಎಂಬುದಂತು ಖಚಿತ. ಹಾಗಂತ ಈ ಸಿನಿಮಾ ಅಷ್ಟಕ್ಕೆ ಸೀಮಿತವಾಗಿಲ್ಲ ಇಲ್ಲಿಯೂ ಕೌಟಿಂಬಿಕ ಕಥೆಯ ಜತೆಗೆ ಲವ್ ಸ್ಟೋರಿಯೂ ಇದೆ ಎಂಬುದು ತಿಳಿಯುತ್ತದೆ. ಈ ಚಿತ್ರದಲ್ಲಿಯೂ ಯುವ ರಾಜ್‌ಗೆ ಜತೆಯಾಗಿ ಸಪ್ತಮಿ ನಟಿಸುತ್ತಾರಾ, ಇಲ್ಲ ಹೊಸ ನಟಿ ಚಿತ್ರತಂಡ ಸೇರುತ್ತಾರಾ ಎಂಬ ಕುತೂಹಲವೂ ಇದೆ, ಸಿನಿಮಾ ಸೆಟ್ಟೇರಿದ ಮೇಲೆ ಅದಕ್ಕೆ ಉತ್ತರ ಸಿಗಲಿದೆ.

ಯುವ ಚಿತ್ರವನ್ನು ಸಂತೋಷ್ ಆನಂದ್ ರಾಮ್ ನಿರ್ದೇಶಿಸಿದ್ದರು. ಈಗ ಯುವ 2 ಸಿನಿಮಾಗೆ ರೋಹಿತ್ ಪದಕಿ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಯುವ ಮೊದಲ ಭಾಗಕ್ಕಿಂತಲೂ ಹೈವೋಲ್ಟೇಜ್ ಆ್ಯಕ್ಷನ್ ಸನ್ನಿವೇಶಗಳು ಈ ಚಿತ್ರದಲ್ಲಿರಲಿವೆ ಎನ್ನಲಾಗುತ್ತಿದೆ. ನವೆಂಬರ್ 1ರ ಕನ್ನಡ ರಾಜ್ಯೋತ್ಸವದ ದಿನದಂದೆ ಯುವ 2 ಸೆಟ್ಟೇರಲಿದ್ದು, ಚಿತ್ರೀಕರಣ ಆರಂಭಿಸಲಿದೆ. ಇನ್ನು ವಿಶೇಷ ಎಂದರೆ ಪಿಆರ್‌ಕೆ ಪ್ರೊಡಕ್ಷನ್‌ನಲ್ಲಿ ಚಿತ್ರ ನಿರ್ಮಾಣವಾಗಲಿದೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಯುವ ರಾಜ್‌ಕುಮಾರ್ ಈ ಹಿಂದೆಯೇ ಐತಿಹಾಸಿಕ ಕಥೆಯ ಚಿತ್ರದಲ್ಲಿ ಅದ್ದೂರಿಯಾಗಿ ತೆರೆಗೆ ಬರಬೇಕಿತ್ತು. ಆದರೆ ಕಾರಣಾಂತರಗಳಿಂದ ಆ ಸಿನಿಮಾ ನಿಂತಿತು. ಈಗ ಯುವ 2 ಮುಗಿದ ಬಳಿಕ ಯುವ ರಾಜ್‌ಕುಮಾರ್ ಐತಿಹಾಸಿಕ ಕಥೆಯ ಚಿತ್ರದಲ್ಲಿ ಮಿಂಚಲಿದ್ದಾರೆ.

ಸದ್ಯ ಯುವ 2 ಚಿತ್ರಕ್ಕಾಗಿ ಯುವರಾಜ್ ಭರ್ಜರಿ ತಯಾರಿ ನಡೆಸಿದ್ದಾರೆ.

ಯಲಾಕುನ್ನಿ ಎಂದ ಕೋಮಲ್

ನಟ ಕೋಮಲ್ ಇತ್ತೀಚಿನ ದಿನಗಳಲ್ಲಿ ವಿಭಿನ್ನ ಪಾತ್ರಗಳತ್ತ ಹೊರಳಿದ್ದಾರೆ. ಸದ್ಯ ಯಲಾಕುನ್ನಿ ಎಂದು ಅಬ್ಬರಿಸುತ್ತಿದ್ದಾರೆ. ಹೌದು, ಕೋಮಲ್ ಯಲಾಕುನ್ನಿ ಚಿತ್ರದಲ್ಲಿ ನಟಿಸಿದ್ದು ವಿಭಿನ್ನ ಗೆಟಪ್‌ನಲ್ಲಿ ತೆರೆಗೆ ಬರಲು ಸಿದ್ಧವಾಗಿದ್ದಾರೆ. ಯಲಾಕುನ್ನಿ, ಮೇರ ನಾಮ್ ವಜ್ರಮುನಿ ಎಂಬ ಅಡಿಬರಹವಿದ್ದು, ಇದು ಖ್ಯಾತ ನಟ ವಜ್ರಮುನಿ ಅವರ ಪಾತ್ರದ ಕುರಿತ ಸಿನಿಮಾ ಎನಿಸುತ್ತದೆ. ಪ್ರದೀಪ್ ಕಥೆ, ಚಿತ್ರಕಥೆ, ಸಾಹಿತ್ಯ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ.

ಕಂಟೆಂಟ್ ಜತೆಗೆ ಕಾಮಿಡಿ ಬೆರೆಸಿ ಎಲ್ಲರಿಗೂ ಇಷ್ಟವಾಗುವಂತೆ ಚಿತ್ರವನ್ನು ಕಟ್ಟಿಕೊಡಲಾಗಿದೆ. ಕೋಮಲ್ ಎರಡು ವಿಭಿನ್ನ ಶೇಡ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ನಿಸರ್ಗಾ ಅಪ್ಪಣ್ಣ ನಾಯಕಿಯಾಗಿ ಬಣ್ಣಹಚ್ಚಿದ್ದು, ವಜ್ರಮುನಿ ಅವರ ಮೊಮ್ಮಗ ಆಕರ್ಷ್, ಜಗ್ಗೇಶ್ ಅವರ ಪುತ್ರ ಯತಿರಾಜ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಜಯಸಿಂಹ ಮುಸುರಿ, ಮಯೂರ್ ಪಟೇಲ್, ಸಾಧು ಕೋಕಿಲ, ದತ್ತಣ್ಣ, ಮಿತ್ರ, ತಬಲಾ ನಾಣಿ, ಶಿವರಾಜ್ ಕೆ.ಆರ್ ಪೇಟೆ, ಮಾನಸಿ ಸುಧೀರ್, ಸುಮನ್ ನಗರಕರ್ ಮುಂತಾದವರು ನಮ್ಮ ಚಿತ್ರದ ತಾರಾಬಳಗದಲ್ಲಿದ್ದಾರೆ. ಧರ್ಮವಿಶ್ ಅವರ ಸಂಗೀತ ಸಂಯೋಜಿಸಿರುವ ಈ ಚಿತ್ರದ ಹಾಡುಗಳು ಈಗಾಗಲೇ ಎಲ್ಲರ ಮನ ಗೆದ್ದಿವೆ. ಹಾಲೇಶ್ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ಮುರಳಿ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.

ಕೋಮಲ್ ಕುಮಾರ್ ಅವರ ವಜ್ರಮುನಿ ಲುಕ್‌ಗೆ ಅಭಿಮಾನಿಗಳು ಫಿದಾ ಆಗಿದ್ದಾರೆ. ಕಲಾವಿದರು ಹಾಗೂ ತಂತ್ರಜ್ಞರು ಸಹಕಾರದಿಂದ ಚಿತ್ರ ಉತ್ತಮವಾಗಿ ಮೂಡಿ ಬಂದಿದೆ ಎಂದು ನಿರ್ದೇಶಕ ಎನ್.ಆರ್.ಪ್ರದೀಪ್ ತಿಳಿಸಿದರು. ಸೌಂದರ್ಯ ಸಿನಿ ಕಂಬೈನ್ಸ್ ಹಾಗೂ ನರಸಿಂಹ ಸಿನಿಮಾಸ್ ಲಾಂಛನದಲ್ಲಿ ಅನುಸೂಯಾ ಕೋಮಲ್ ಕುಮಾರ್, ಸಹನ ಮೂರ್ತಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಇದೇ 25ರಂದು ಯಲಾಕುನ್ನಿ ರಾಜ್ಯಾದ್ಯಂತ ತೆರೆಗೆ ಬರಲಿದೆ.

> ನಿರ್ದೇಶಕರು ಈ ಚಿತ್ರದ ಕಥೆ ಹೇಳಿದಾಗ ಈ ಪಾತ್ರ ಮಾಡಲು ಕಷ್ಟ ಅಂತ ಹೇಳಿದ್ದೆ. ಆದರೆ ಅವರು ಬಿಡದೆ ನೀವು ಮಾಡುತ್ತೀರಾ ಅಂತ ಒಪ್ಪಿಸಿ ಈ ಪಾತ್ರ ಮಾಡಿಸಿದ್ದಾರೆ. ನಾನು ಮೊದಲ ಬಾರಿಗೆ ವಜ್ರಮುನಿ ಅವರ ಗೆಟಪ್ ಹಾಕಿಕೊಂಡು ಕನ್ನಡಿ ಮುಂದೆ ಬಂದು ನಿಂತಾಗ ನನಗೆ ನಾನು ಕಾಣಲಿಲ್ಲ. ವಜ್ರಮುನಿ ಅವರೆ ಕಂಡರು. ಅವರ ಆಶೀರ್ವಾದದಿಂದ ಈ ಪಾತ್ರ ಮಾಡಲು ಸಾಧ್ಯವಾಯಿತು.
> -ಕೋಮಲ್ ನಟ

ಬಘೀರನಿಗೆ ಉಫೇ.. ಉಫೇ..

ಹೊಂಬಾಳೆ ಫಿಲಂಸ್‌ನಲ್ಲಿ ನಿರ್ಮಾಣವಾಗಿರುವ ಬಹುನಿರೀಕ್ಷಿತ ಬಘೀರ ಚಿತ್ರ ತೆರೆಗೆ ಸಿದ್ಧವಾಗಿದ್ದು, ಇದೇ 31ರಂದು ಅದ್ದೂರಿಯಾಗಿ ರಿಲೀಸ್ ಆಗಲಿದೆ. ಸದ್ಯ ಬಘೀರ ಹಾಡಿನಲ್ಲೇ ಸದ್ದು ಮಾಡುತ್ತಿದ್ದಾನೆ, ಉಫೇ ಉಫೇ.. ರುಧಿರ ಧಾರ... ಎಂಬ ಹಾಡು ಬಿಡುಗಡೆಯಾಗಿದ್ದು, ಕುತೂಹಲ ಮೂಡಿಸಿದೆ. ರುಧಿರ ಧಾರ...ಬಘೀರನಿಗೆ ಉಫೆ ಉಫೆ... ಎಂದಿದೆ. ರೋರಿಂಗ್ ಸ್ಟಾರ್ ಶ್ರೀಮುರಳಿ ನಾಯಕನಾಗಿ ನಟಿಸಿದ್ದು, ಪೊಲೀಸ್ ಅಧಿಕಾರಿಯಾಗಿ ಮಿಂಚಿದ್ದಾರೆ. ಚಿತ್ರದುದ್ದಕ್ಕೂ ಆ್ಯಕ್ಷನ್‌ನಲ್ಲಿ ಕಂಗೊಳಿಸಿದ್ದಾರೆ. ಡಾ. ಸೂರಿ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಹಾಡಿಗೆ ವೀಕ್ಷಕರಿಂದಲೂ ಮೆಚ್ಚುಗೆ ವ್ಯಕ್ತವಾಗಿದೆ. ರುಧಿರ ಧಾರ... ಶೀರ್ಷಿಕೆ ಗೀತೆಗೆ ಅನಿರುದ್ಧ ಶಾಸ್ತ್ರಿ ಸಾಹಿತ್ಯ ಬರೆಯುವುದರ ಜತೆಗೆ ಹಾಡಿಗೂ ದನಿಯಾಗಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ ಮಾಡಿದ್ದು, ಹಾಡಿಗೆ ಹೊಸತನ ತಂದಿದ್ದಾರೆ. ಪ್ರಶಾಂತ್ ನೀಲ್ ಕಥೆ ಬರೆದಿದ್ದು, ಡಾ. ಸೂರಿ ನಿರ್ದೇಶನದಲ್ಲಿ ಚಿತ್ರ ಸಿದ್ಧವಾಗಿದೆ. ನವೀನ್ ಕುಮಾರ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ಹೊಂಬಾಳೆ ಫಿಲಂಸ್‌ನಲ್ಲಿ ವಿಜಯ್ ಕಿರಗಂದೂರು ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದು, ಇದೇ ಅಕ್ಟೋಬರ್ 31 ರಂದು ಬಘೀರ ವಿಶ್ವಾದ್ಯಂತ ತೆರೆಗೆ ಬರಲಿದೆ.

ರಾಜು ಈಗ ಜೇಮ್ಸ್ ಬಾಂಡ್

ಫಸ್ಟ್ ರ‍್ಯಾಂಕ್ ರಾಜು ಚಿತ್ರದಲ್ಲಿ ನಗುವಿನ ಕಚಗುಳಿಯಿಟ್ಟ ಗುರುನಂದನ್, ಈಗ ಜೇಮ್ಸ್ ಬಾಂಡ್ ಅವತಾರ ತಾಳಿದ್ದಾರೆ. ಹೌದು, ಗುರುನಂದನ್ ಬಹು ದಿನಗಳ ಬಳಿಕ ಮತ್ತೆ ನಗಿಸಲು ಬರುತ್ತಿದ್ದಾರೆ. ದೀಪಕ್ ಮಧುವನಹಳ್ಳಿ ನಿರ್ದೇಶನದಲ್ಲಿ ರಾಜು ಜೇಮ್ಸ್‌ಬಾಂಡ್ ಸಿದ್ಧವಾಗಿದ್ದು, ಕಾಮಿಡಿಯೇ ಪ್ರಧಾನವಾಗಿರುವ ಈ ಚಿತ್ರದಲ್ಲಿ ಮನರಂಜನೆಯೇ ಮುಖ್ಯವಾಗಿದೆ. ಗುರುನಂದನ್ ನಾಯಕನಾಯಕನಾಗಿ ನಟಿಸಿದ್ದು, ಮೃದುಲಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಸಾಧು ಕೋಕಿಲ, ಅಚ್ಯುತ್ ಕುಮಾರ್, ಚಿಕ್ಕಣ್ಣ, ರವಿಶಂಕರ್, ಜೈ ಜಗದೀಶ್ ಮುಂತಾದವರು ತಾರಾಗಣದಲ್ಲಿದ್ದಾರೆ. ಲಂಡನ್ ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಈಗಾಗಲೇ ಸಿನಿಮಾದ ಸೆನ್ಸಾರ್ ಮುಗಿದಿದ್ದು ಯು/ಎ ಪ್ರಮಾಣ ಪತ್ರ ನೀಡಲಾಗಿದೆ. ಮಂಜುನಾಥ್ ವಿಶ್ವಕರ್ಮ ಹಾಗೂ ಕಿರಣ್ ಬರ್ತೂರ್ ಜಂಟಿಯಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ರಾಜು ಜೇಮ್ಸ್ ಬಾಂಡ್ ಮುಂದಿನ ತಿಂಗಳು ತೆರೆಗೆ ಬರುವ ಸಾಧ್ಯತೆ ಇದೆ.

> ಈಗಾಗಲೇ ನಾನು ಸಿನಿಮಾ ನೋಡಿದ್ದೇನೆ. ಸಿನಿಮಾ ಎಲ್ಲಿಯೂ ಬೋರ್ ಹೊಡೆಸುವುದಿಲ್ಲ. ಚಿತ್ರ ನಗುವಿನ ಕಚಗಳಿ ಇಡುವ ಜತೆಗೆ ಸೀಟಿನ ತುದಿಯಲ್ಲಿ ಹಿಡಿದು ಕೂರಿಸುತ್ತದೆ. ಅಂತಹ ಮನರಂಜನೆ ಸಿನಿಮಾದಲ್ಲಿದೆ. ಪ್ರೇಕ್ಷಕರಿಗೂ ಕೂಡ ರಾಜು ಜೇಮ್ಸ್ ಬಾಂಡ್ ಇದೇ ಅನುಭವ ನೀಡುತ್ತದೆ ಎಂಬ ನಂಬಿಕೆ ನನಗಿದೆ.
> -ಮಂಜುನಾಥ್ ವಿಶ್ವಕರ್ಮ ನಿರ್ಮಾಪಕ

> ಯಾವುದೇ ಸಿನಿಮಾದ ಮೊಟ್ಟ ಮೊದಲ ಆದ್ಯತೆ ಪ್ರೇಕ್ಷಕನ ಮನರಂಜನೆ ಆಗಿರಬೇಕೆಂಬುದು ನನ್ನ ಅಭಿಪ್ರಾಯ. ಹಾಗಾಗಿ ಅದನ್ನು ಮುಖ್ಯವಾಗಿ ಪರಿಗಣಿಸಿ ನಮ್ಮ ರಾಜು ಜೇಮ್ಸ್ ಬಾಂಡ್ ಸಿನಿಮಾವನ್ನು ಸಿದ್ಧ ಪಡಿಸಲಾಗಿದೆ. ಚಿತ್ರದುದ್ದಕ್ಕೂ ಪ್ರೇಕ್ಷಕರು ನಕ್ಕು ನಲಿಯುತ್ತಾರೆ. ಜತೆಗೆ ನಾಲ್ಕು ಹಾಡುಗಳಿದ್ದು ಮನದಲ್ಲಿ ರಿಂಗಣಿಸುತ್ತವೆ. ಲಂಡನ್‌ನಲ್ಲಿ ಚಿತ್ರೀಕರಣ ನಡೆಸಿದ್ದು ಚಿತ್ರದ ಪ್ರತಿ ದೃಶ್ಯವೂ ಮನಸೂರೆಗೊಳ್ಳುತ್ತದೆ.
> -ದೀಪಕ್ ಮಧುವನಹಳ್ಳಿ ನಿರ್ದೇಶಕ

ತೆರೆಗೆ ಸಿದ್ಧವಾದ ಜೈ ಕಿಸಾನ್

> ನಾನು ಒಬ್ಬ ರೈತನ ಮಗ. ರೈತನ ಕಷ್ಟಗಳನ್ನು ಹತ್ತಿರದಿಂದ ಕಂಡಿದ್ದೇನೆ. ರೈತ ಹಾಗೂ ಆತನ ಕುಟುಂಬ ಯಾರಿಗೂ ಕಡಿಮೆ ಇಲ್ಲದಂತೆ ಬೆಳೆಯಬೇಕು. ಬದುಕಬೇಕು. ರೈತ ಎಂದರೆ ಹೆಣ್ಣು ಕೊಡುವುದಿಲ್ಲ ಎಂಬ ಮಾತಿದೆ, ಹಾಗಾಗಬಾರದು. ತಾವೇ ಹುಡುಕಿಕೊಂಡು ಬಂದು ರೈತನಿಗೆ ಹೆಣ್ಣು ಕೊಡಬೇಕು. ಓದಿರುವವರು ಕೃಷಿ ಮಾಡಲು ಹಿಂಜರಿಯಬಾರದು. ಆಧುನಿಕ ಕೃಷಿಯ ಮೂಲಕ ಸಾಕಷ್ಟು ಸಂಪಾದನೆ ಮಾಡುಬಹುದು ಅದನ್ನೇ ಚಿತ್ರದ ಕಥೆಯಲ್ಲೂ ಹೇಳಲಾಗಿದೆ.
> -ರವಿ ನಾಗಪುರೆ ನಿರ್ಮಾಪಕ

ರೈತನ ಬದುಕಿನ ಕುರಿತಾದ ಕಥಾಹಂದರ ಹೊಂದಿರುವ ಜೈ ಕಿಸಾನ್ ಈಗಾಗಲೇ ಮರಾಠಿಯಲ್ಲಿ ಬಿಡುಗಡೆಯಾಗಿದ್ದು, ಈಗ ಕನ್ನಡದಲ್ಲಿಯೂ ತೆರೆಗೆ ಬರಲು ಸಿದ್ಧವಾಗಿದೆ. ನವೆಂಬರ್ 7 ಜೈ ಕಿಸಾನ್ ರಾಜ್ಯಾದ್ಯಂತ ರಿಲೀಸ್ ಆಗಲಿದೆ. ಮಹಾರಾಷ್ಟ್ರ ಮೂಲದ ರವಿ ನಾಗಪುರೆ ಕಥೆ ಬರೆದು ನಿರ್ಮಿಸಿರುವ ಜೈ ಕಿಸಾನ್ ಸಿನಿಮಾವನ್ನು ವಿಕಾಸ್ ವಿಲಾಸ್ ಮಿಸಾಲ್ ನಿರ್ದೇಶಿಸಿದ್ದಾರೆ. ಚಿತ್ರದ ನಾಯಕ ವಿದ್ಯಾವಂತ, ಅಪ್ಪನಿಗೆ ತನ್ನ ಮಗ ದೊಡ್ಡ ಕೆಲಸಕ್ಕೆ ಸೇರಬೇಕು ಎಂಬ ಆಸೆಯಿರುತ್ತದೆ, ಆದರೆ ಸನ್ನಿವೇಶ ಆತನನ್ನು ರೈತನನ್ನಾಗಿ ಮಾಡುತ್ತದೆ. ಅದು ಯಾಕೆ, ನಾಯಕ ಕೃಷಿಯಲ್ಲಿ ಹೇಗೆ ಸಾಧನೆ ಮಾಡುತ್ತಾನೆ ಎಂಬುದನ್ನು ಮನಮುಟ್ಟುವಂತೆ ತೆರೆಯಲ್ಲಿ ಕಟ್ಟಿಕೊಡಲಾಗಿದೆ. ಜೈ ಕಿಸಾನ್ ಇಡೀ ಕುಟುಂಬ ಸಮೇತ ನೋಡಬಹುದಾದ ಚಿತ್ರವಾಗಿದೆ. ಜನುಮೇಜಯ್ ತೆಲಂಗ್ ನಾಯಕನಾಗಿ ನಟಿಸಿದ್ದು, ತನ್ವಿ ಸಾವಂತ್ ನಾಯಕಿಯಾಗಿ ಅಭಿನಯಿಸಿದ್ದಾರೆ. ವಿದ್ಯಾವಂತನಾದ ನಾನು ಅಣ್ಣನ ಆಸೆಯನ್ನು ಪೂರ್ಣ ಮಾಡಲು ರೈತಾನಾಗುತ್ತೇನೆ. ಆಧುನಿಕ ಕೃಷಿಯ ಮೂಲಕ ಬೇರೆಯವರಿಗೂ ಆದರ್ಶವಾಗುವ ಪಾತ್ರ ನನ್ನದು ಎನ್ನುತ್ತಾರೆ ನಾಯಕ ನಟ ಜನುಮೇಜಯ್.